UNIVERSAL
LIBRARY
OU_200275
UNIVERSAL
LIBRARY

ಮನೋಹರ ಗ್ರಂಥಮಾಲೆಯ ೫೫ನೆಯ ಕುಸುಮ

# ಪಚ್ಚೇ ಉಂಗುರ

ಮತ್ತು

# ಆತ್ಮಾಹುತಿ

ಬರೆದವರು:

ಎಂ. ಜಿ. ವೆಂಕಟೇಶಯ್ಯ

—ಎಂ. ಎ.

ಮನೋಹರ ಗ್ರಂಥ ಪ್ರಕಾಶನ ಸಮಿತಿ

ಧಾರವಾಡ

ಆಗಸ್ಟ ೧೯೪೨

ಬೆಲೆ: ೧ ರೂಪಾಯಿ

ಸಾಹಿತ್ಯ ವಿಷಯದಲ್ಲಿ ಸಲಹೆಗಾರರು:

ಶ್ರೀ. ದ. ರಾ. ಬೇಂದ್ರೆ, ಎಂ. ಎ.

ಶ್ರೀ. ರಂ. ಶ್ರೀ. ಮುಗಳಿ, ಎಂ. ಎ. ಬಿ ಟಿ.

ಶ್ರೀ. ವಿ. ಕೃ. ಗೋಕಾಕ, ಬಿ. ಎ (ಆಕ್ಸ್‌ಫರ್ಡ)

ಸಂಪಾದಕ:

ಜಿ. ಬಿ. ಜೋಶಿ

ಪ್ರಕಾಶಕರು:

ಜಿ. ಬಿ. ಜೋಶಿ

ಮನೋಹರ ಗ್ರಂಥಮಾಲಾ

ಧಾರವಾಡ

ಮುದ್ರಕರು:

ಕೆ. ಜಿ. ರಾಯದುರ್ಗ

ಮೋಹನ ಮುದ್ರಣಾಲಯ

ಧಾರವಾಡ

# ಎರಡು ಮಾತು

●

'ಆತ್ಮಾಹುತಿ'ಯಲ್ಲಿ ಅನುರಾಗ, ಪ್ರೇಮ, ಸಂತಾಪ, ರೋಷ್ಯ, ಇವೆಲ್ಲ ಹುದುಗಿಕೊಂಡಿವೆ. ನೆಲೆ ತಪ್ಪಿದ ಹೆಣ್ಣಿಗೆ ಸೀರಿನ ತಳವೆ ತೌರುಮನೆಯಾಗಿ ಪರಿಣಮಿಸುವುದು. 'ನಾನು ಹೇಗೆ ಬದುಕಲಿ?' ಎಂದು ಆಧಾರವಿಲ್ಲದ ಹೆಣ್ಣು ಕೇಳಿದ ಪ್ರಶ್ನೆಗೆ 'ಆತ್ಮಾಹುತಿ—ಸಾವು' ಎಂದು ಸಮಾಜದ ಕಟ್ಟಿಗೆ ಸಿಕ್ಕಿಬಿದ್ದ ಗಂಡಿನ ಉತ್ತರ. ಏನು ಬಂದರೂ ತುತ್ತುವೆನೆಂದು ಸಂತಪ್ತಹೃದಯ ಎದ್ದುನಿಲ್ಲುವ ವರೆಗೆ ಇದು ಹೀಗೇ ಗಂಡಿನ ಕಣ್ಣಲ್ಲಿ ಹರಟೆಯಾಗಿ, ವಿಡಂಬನೆಯಾಗಿ, ಅಣಕವಾಗಿ ಸಾಗತಕ್ಕದ್ದೆ.

ಈ ಕಥೆಯಲ್ಲಿ ಕಾಣಬರುವ ವ್ಯಕ್ತಿಗಳೆಲ್ಲಾ ಕೇವಲ ಊಹಾಪ್ರಪಂಚಕ್ಕೆ ಸೇರಿದವುಗಳೇ. ಯಾರನ್ನೂ ಉದ್ದೇಶಿಸಿ ಬರೆದುದಲ್ಲ; ಯಾರಿಗೂ ಯಾವ ವಿಧವಾದ ನೋವನ್ನೂ ಉಂಟುಮಾಡಬೇಕೆಂಬುದು ಇದರ ಉದ್ದೇಶವಲ್ಲ. ನಮ್ಮ ಈ ಪ್ರಪಂಚದಲ್ಲಿ ಆಗಾಗ ನಡೆಯುವುದನ್ನು ನನ್ನ ಒಂದು ವೈಯಕ್ತಿಕ ಹಾಸ್ಯದೃಷ್ಟಿಯಿಂದ ಕಂಡು ಈ ಕಥೆಯನ್ನು ಬರೆಯಲಾಗಿದೆ.

ಇದನ್ನು ಕೇಳಿ ನನಗೆ ಪ್ರೋತ್ಸಾಹವನ್ನಿತ್ತ ನನ್ನ ಮಾನ್ಯ ಸ್ನೇಹಿತರಿಗೂ, ಪ್ರಕಟಿಸಿರುವ ಧಾರವಾಡದ **ಮನೋಹರ ಗ್ರಂಥಮಾಲೆ**ಯವರಿಗೂ ನಾನು ಚಿರಋಣಿಯಾಗಿರುವೆನು.

ಎಂ. ಜಿ ವೆಂಕಟೇಶಯ್ಯ

—

ಶ್ರೀಮಾನ್ ಎಂ. ಜಿ. ವೆಂಕಟೇಶಯ್ಯನವರು ತಮ್ಮ ರಸವತ್ತಾದ ಈ ಕತೆಗಳೆರಡನ್ನು ನಮ್ಮ ಮಾಲೆಯಲ್ಲಿ ಪ್ರಕಟಿಸಲು ಕೊಟ್ಟದ್ದಕ್ಕಾಗಿ ಅವರಿಗೆ ನಾವು ಅತ್ಯಂತ ಕೃತಜ್ಞರಾಗಿದ್ದೇವೆ.

**—ಸಂಪಾದಕ**

# ಮುಂದೆ ಬರಲಿರುವ ಕುಸುಮಗಳು

**ಮೆಡೇಮ್ ಕ್ಯೂರಿ**
—ಕೆ. ವ್ಹಿ. ರತ್ನಮ್ಮ

**ನನ್ನ ಕನಸುಗಳು**
—ಜಡಭರತ

**ಹೂವಿನ ಹಾಸಿಗೆ**
—ಹೊಯಿಸಳ

**ನಕ್ಕಳಾ ತಾಯಿ**
—ಜಿ. ಪಿ. ರಾಜರತ್ನಂ

**ಕೆನ್ಸಿಂಗಟನ್ ಪಾರ್ಕ**
ಕೆ. ಗೋಪಾಲಕೃಷ್ಣರಾಯರು

**ಸಮುದ್ರಯಾನ**
—ವಿ. ಕೃ. ಗೋಕಾಕ

**ತೆನ್ನಾಲರಾಮಕೃಷ್ಣ**
—ಸಿ. ಕೆ. ವೆಂಕಟರಾಮಯ್ಯ

**ಮೂಕಬಲಿ**
—ಜಡಭರತ

**ಮೊದಲ ಹೂ**
—ವಿಹಾರಿ

**ನಾನು-ನನ್ನದು**
—ಜಡಭರತ

೧

'ಯಾರೊಡನೆ ಮಾತನಾಡುತ್ತಿರುವಿ ಗೊತ್ತಿದೆಯೋ !'

'ಸತ್ಯಕ್ಕೆ ಮನ್ನಣೆ ಯಾರು ಕೊಡುತ್ತಾರೋ ಅವರೊಡನೆ.'

'ಸತ್ಯಕ್ಕೆ ಮನ್ನಣೆ ಕೊಡದ ಪಕ್ಷದಲ್ಲಿ?'

'ಕೊಂಡುಕೊಳ್ಳುವವರು ಸರಿಯಾಗಿ ಬೆಲೆಯನ್ನು ಕಟ್ಟದಿದ್ದರೆ ಅದರಿಂದ ರತ್ನಗಳಿಗೆ ಕೊರತೆಯೋ ?..ಎಲ್ಲಾದರುಂಟೆ !'

'ಅಧಿಕಾರಿಗಳಿಗೆ ಕೋಪ ಬಂದಲ್ಲಿ ಕೊಡಬಹುದಾದ ಶಿಕ್ಷೆ ಗೊತ್ತಿದೆಯೋ ?'

'ಮಹಾಸ್ವಾಮಿ, ಬ್ರಹ್ಮನಿಗೆ ಕೋಪ ಬಂದಲ್ಲಿ ಹಂಸಗಳನ್ನು ಮಾನಸ ಸರೋವರದಿಂದಾಚೆ ಅಟ್ಟಬಹುದು. ಆದರೆ ಹಾಲನ್ನೂ ನೀರನ್ನೂ ಬೇರೆ ಮಾಡುವ ಅದರ ಕೀರ್ತಿಯನ್ನು ಹೋಗಲಾಡಿಸಬಲ್ಲನೇ ?'

'ಮುದುಕನಾಗಿರುವುದರಿಂದ ಈ ರೀತಿಯಲ್ಲಿ ಮಾತನಾಡಿದರೂ ಭಯವಿಲ್ಲವೆಂದು ಮಾತನಾಡುತ್ತಿರುವಿ....ಯುವಕನಾಗಿದ್ದಲ್ಲಿ ಇದಕ್ಕೆ ಧೈರ್ಯವಿರುತ್ತಿರಲಿಲ್ಲ.'

'ಮಹಾಸ್ವಾಮಿ, ಯುವಕನಾಗಿದ್ದಲ್ಲಿ ನಿಮ್ಮವರೆಗೂ ಹೀಗೆ ಬರುತ್ತಿರಲಿಲ್ಲ. ನನ್ನ ರಕ್ತವನ್ನೆಲ್ಲಾ ನಮ್ಮವರನ್ನು ಕಾಯಲು ಚೆಲ್ಲುತ್ತಿದ್ದೆ. ನಮ್ಮ ದೇಶದಲ್ಲಿ ಎಲ್ಲಿಯ ವರೆಗೂ ಹೆಂಗಸರು ಪತಿಪರಾಯಣರಾಗಿರುತ್ತಾರೋ ಅಲ್ಲಿಯ ವರೆಗೂ ನಮಗೆ ಯಾವ ಭಯವೂ ಇಲ್ಲ. ಆದರೆ ಅವರ ಪಾತಿವ್ರತ್ಯ ಭಂಗವನ್ನು ಮಾಡಲೆತ್ನಿಸಿದ ಮೇಲೆ, ಆಳುವವರಿಗೂ ನಮಗೂ ಎಲ್ಲರಿಗೂ ಕೇಡೇ. ಮಹಾಸ್ವಾಮಿ, ಕೋಪಿಸಬೇಡಿ, ಕ್ಷಮಿಸಬೇಕು. ನೀವಿನ್ನೂ ಚಿಕ್ಕವರು. ನಿಮಗಿನ್ನೂ ಯಾವುದೂ ತಿಳಿದಿಲ್ಲ. ನಿಮ್ಮ ಸೋದರಮಾವಂದಿರು ಮಾಡುತ್ತಿರುವುದು ದೇಶಕ್ಕೆ ಕ್ಷೇಮಕರವಲ್ಲ.'

ಮುದುಕನ ಕಣ್ಣುಗಳಲ್ಲಿ ನೀರು ಸುರಿಯಲಾರಂಭಿಸಿತು. ಮೈ ಕೈ ನಡುಕ ಹುಟ್ಟಿತು. ಊರಿಕೊಂಡಿದ್ದ ಕೋಲು ಜಮಗಲಾರಂಭಿಸಿತು. ಇನ್ನು

ತಾನಲ್ಲಿ ನಿಲ್ಲುವುದು ಪ್ರಯೋಜನಕರವಲ್ಲವೆಂದು ತಿಳಿದು ಆ ಮುದುಕನು ಬಾಗಿಲಕಡೆ ತಿರುಗಿದನು. ಯಶವಂತನಿಗೆ ದಿಕ್ಕುತೋಚದಂತಾಯಿತು. ಮುದುಕನ ಮಾತುಗಳು ಶೂಲಗಳಂತಿದ್ದಾಗ್ಯೂ ಆ ಮಾತುಗಳೆಲ್ಲವೂ ನಿಜವೆಂಬುದು ಮಾತ್ರ ಅವನಿಗೆ ತೋರಿಬಂತು. ತನ್ನ ಪ್ರಜೆಗಳ ವಿಚಾರ ತನಗೆ ಅಷ್ಟಾಗಿ ತಿಳಿಯದೆಂಬುದು ಮನಸ್ಸಿಗೆ ಹೊಳೆಯಿತು.

ಕೂಡಲೆ ಯಶವಂತನು ಮೇಲಕ್ಕೆದ್ದು ಬಂದು, ಮುದುಕನ ಕೈಹಿಡಿದುಕೊಂಡು 'ನೀನು ಹೇಳಿದ್ದು ನಿಜ. ತಿಳಿಯದೆ ಮಾತನಾಡಿದೆ, ಕ್ಷಮಿಸು. ಹೀಗೆ ಬಾ, ಕುಳಿತುಕೋ' ಎನ್ನುತ್ತ ತಾನು ಕೂತಿದ್ದ ಸುಪ್ಪತ್ತಿಗೆಯ ಮೇಲೆ ಅವನನ್ನು ಕುಳ್ಳಿರಿಸಿ 'ನಡೆದಿದ್ದನ್ನೆಲ್ಲಾ ಹೇಳು.' ಎಂದು, ತಾನೂ ಅವನ ಪಕ್ಕದಲ್ಲಿ ಕುಳಿತುಕೊಂಡನು. ಇಷ್ಟು ಆದರವನ್ನೂ ಸಹನೆಯನ್ನೂ ತನಗೆ ಯಶವಂತನು ತೋರುತ್ತಾನೆಂದು ಕನಸಿನಲ್ಲಿಯೂ ಭಾವಿಸದ ಆ ಮುದುಕನು, ಕೂತೊಡನೆಯೇ ನಿಟ್ಟುಸಿರನ್ನು ಬಿಡುತ್ತಾ, ತಾನು ಹೊದ್ದಿದ್ದ ಪಂಚೆಯ ಶೆರಗಿನಿಂದ ತನ್ನ ಮುಖದಲ್ಲಿ ಹರಿಯುತ್ತಿದ್ದ ಬೆವರನ್ನು ಒರಸಿಕೊಳ್ಳುತ್ತಾ, ಎಲ್ಲಿಂದ ಮೊದಲುಮಾಡಬೇಕೆಂಬುದನ್ನು ತಿಳಿಯದವನಾಗಿ ದಿಗ್ಭ್ರಾಂತನಾಗಿ ಕುಳಿತನು. ಇದೆಲ್ಲವನ್ನೂ ಗ್ರಹಿಸಿದ ಯಶವಂತನು ತಾನು ಬಹಳ ಕಾತುರನಾಗಿದ್ದರೂ, ಮುದುಕನಿಗೆ ತೊಂದರೆ ಕೊಡುವುದರಿಂದ ಪ್ರಯೋಜನವಿಲ್ಲವೆಂಬುದನ್ನರಿತು, ಆ ಮುದುಕನ ಮುಖವನ್ನೇ ನೋಡುತ್ತಾ ಪಕ್ಕದಲ್ಲಿ ಕುಳಿತಿದ್ದನು. ಸ್ವಲ್ಪ ಹೊತ್ತಿನಲ್ಲಿಯೇ ಮುದುಕನು ಹೇಳಲಾರಂಭಿಸಿದನು.

—

## ೨

ಮುದುಕ ಹೇಳಿದ್ದು ಹೀಗೆ:

'ಎಲ್ಲಿಂದ ಮೊದಲುಮಾಡಬೇಕೋ ತಿಳಿಯದು ಮಹಾಸ್ವಾಮಿ. ಈ ಊರಾಚೆ ಒಂದು ದೇವಸ್ಥಾನವಿದೆ. ಅದು ಹನುಮಂತರಾಯನ ಗುಡಿ. ಅಲ್ಲಿಗೆ ಹೋಗಿ ನಲವತ್ತು ದಿನಗಳು ಸೇವೆ ಮಾಡಿದರೆ, ಅವರವರ ಇಷ್ಟಾರ್ಥ

ಗಳು ನೆರವೇರುವವೆಂದು ಹೇಳುತ್ತಾರೆ. ಅಲ್ಲಿಗೆ ನಮ್ಮ ಸೀತಮ್ಮ ಹೋಗಿ ಬರುತ್ತಿದ್ದಳು.

'ಯಾರದು ?' ಯಶವಂತ ನಡುವೆಯೆ ಕೇಳಿದ.

'ನಮ್ಮ ಮಂತ್ರಿಯ ಮಗಳು, ಮಹಾಸ್ವಾಮಿ.'

'ನಿನಗೂ ಅವರಿಗೂ ಏನು ಸಂಬಂಧ ?'

'ನಾನು ಅವರ ಮನೆಯಲ್ಲಿನ ಆಪ್ತ ಸೇವಕ. ಮೂವತ್ತು ವರ್ಷಗಳಿಂದಲೂ ನಾನು ಅವರಲ್ಲಿಯೇ ಕೆಲಸ ಮಾಡಿಕೊಂಡಿದ್ದೇನೆ, ಮಹಾಸ್ವಾಮಿ.'

'ಆಮೇಲೆ ?'

'ಮೂವತ್ತೆಂಟು ದಿನಗಳು ಸೇವೆ ಸರಿಯಾಗಿ ನಡೆಯಿತು. ಎಂದಿನಂತೆ ಮೂವತ್ತೊಂಬತ್ತನೆಯ ದಿನವೂ ಕೂಡ ಸೀತಮ್ಮ ದೇವಸ್ಥಾನಕ್ಕೆ ಹೋಗಿ ಬಂದಳು. ಯಾವಾಗಲೂ ಆಕೆಯೊಡನೆ ಹೋಗುತ್ತಿದ್ದ ನಾನು ಆ ದಿನ ಹೋಗಲಿಲ್ಲ. ಮನೆಗೆ ಬಂದ ಕೂಡಲೇ ತನ್ನ ಚಿಕ್ಕಮನೆಯೊಳಕ್ಕೆ ಹೋಗಿ ಸೀತಮ್ಮ ಬಾಗಿಲು ಹಾಕಿಕೊಂಡಳು. 'ನನಗೆ ಮೈ ಚೆನ್ನಾಗಿಲ್ಲ. ರಂಗನು ಬಂದೊಡನೆಯೇ ನನ್ನಲ್ಲಿಗೆ ಕಳಿಸು' ಎಂದು ಹೇಳಿದಳಂತೆ. ಅದರಂತೆಯೇ ನಾನು ಬಂದೊಡನೆಯೇ ಒಳಕ್ಕೆ ಹೋಗಿ ಆಕೆಯನ್ನು ನೋಡಿದೆ. ಸೀತಮ್ಮ ಮಂಚದ ಮೇಲೆ ಬಿದ್ದಿದ್ದಳು. ಮುಖ ಬಾಡಿ ಬೆಂಡಾಗಿತ್ತು. ಮೈ ಕೈ ಆದುರುತ್ತಿದ್ದಂತೆ ತೋರಿತು. ತಲೆಯ ಕೂದಲು ಹರಡಿಕೊಂಡಿತ್ತು. ಮುಖದಲ್ಲಿ ಕುಂಕುಮವಿಲ್ಲ. ಕಣ್ಣುಗಳು ತೆರೆದಿದ್ದರೂ ನನ್ನನ್ನು ನೋಡುತ್ತಿದ್ದಂತೆಯೇ ನನಗೆ ಕಂಡುಬರಲಿಲ್ಲ. 'ತಾಯೀ !' ಎಂದೆ. ಆಕೆಯು 'ಅಪ್ಪಾ' ಎಂದಳು. ನಾನು 'ಬಂದಿದ್ದೇನೆ ತಾಯಿ' ಎಂದೆ. 'ಇನ್ನು ನಾನು ಬದುಕಿರಬಾರದಪ್ಪ....' ನನಗೆ ಎದೆಯೊಡೆದು ಹೋಯಿತು. ನಾನು 'ಇದೇನು ತಾಯಿ !' ಎಂದೆ. ಆಕೆಯು 'ನಿನ್ನೊಡನೆ ಹೇಳಬೇಕೆಂದು ಕರೆಸಿದೆನಪ್ಪ' ಎಂದಳು. ಕಣ್ಣುಗಳು ವಿಕಾರವೃಷ್ಟಿಯನ್ನೊಳಗೊಂಡವು. ನನ್ನ ಎದೆಯಂತೂ ಡವಡವ ಎಂದು ಹೊಡೆದುಕೊಳ್ಳುತ್ತಿತ್ತು. ಆಕೆಯು 'ನನಗೆ ಹನುಮಂತ ಪ್ರತ್ಯಕ್ಷನಾದನಪ್ಪ !' ಎಂದೊಂದು ವಿಧವಾಗಿ ನಕ್ಕಳು. ನಾನು 'ಹಾಗಾದರೆ ಇನ್ನೇನು ತಾಯಿ !' ಎಂದೆ. ಸೀತಮ್ಮನಿಗೆ ನನ್ನ ಮಾತು ಕೇಳಿಸಿ

ದಂತೆಯೇ ತೋರಲಿಲ್ಲ. ಆಕೆಯು ಹೇಳಲುಪಕ್ರಮಿಸಿದಳು: ' ಪೂಜಾರಿಗೆ ಮೈಸರಿಯಾಗಿರಲಿಲ್ಲವಂತೆ. ಒಬ್ಬ ಬಾಲಕನನ್ನು ಪೂಜೆಗಾಗಿ ಕಳುಹಿಸಿದ್ದ. ಅವನು ಎಲ್ಲವನ್ನೂ ಮಾಡಿ, ಮಂಗಳಾರತಿಗೆ ಮುಂಚೆ ಆಚೆ ಹೋದ. ನಾನೊಬ್ಬಳೇ ಗುಡಿಯೊಳಗಿದ್ದೆ. ಈಗಲೋ ಆಗಲೋ ಬರುತ್ತಾನೆಂದು ಬಾಗಿಲ ಕಡೆಯೇ ನೋಡುತ್ತಾ ನಿಂತಿದ್ದೆ. ಹಟಾತ್ತಾಗಿ ಬಾಗಿಲು ಮುಚ್ಚಿ ಕೊಂಡಿತು. ವಿಗ್ರಹದ ಹಿಂದೆ ಒಂದು ವಿಕಾರವ್ಯಕ್ತಿಯು ನನಗೆ ಗೋಚರ ವಾಯಿತು. ಮೈ ಕೈ ಎಲ್ಲಾ ಹಸರುಬಣ್ಣ. ಅದರ ಮುಖವನ್ನು ನೋಡಿ ದೊಡನೆಯೇ ನನಗೆ ಕೈಕಾಲುಗಳು ಬಿದ್ದುಹೋದವು. ಕಿರಚಿಕೊಳ್ಳುವದು ಕೂಡ ಅಸಾಧ್ಯವಾಯಿತು. ಇನ್ನೇನು ಕೆಳಗೆ ಬಿದ್ದೆನೆಂಬುವುದರೊಳಗಾಗಿ ಆ ವ್ಯಕ್ತಿಯು ನನ್ನನ್ನೆತ್ತಿಕೊಂಡಿತು. ತಲೆಯು ಗಿರ್ರೆಂದಿತು....ಜ್ಞಾನ ತಪ್ಪಿತು....ಕಣ್ಣು ಬಿಟ್ಟಾಗ ಮುಖಮಲ್ಲಿನ ಹಾಸಿಗೆಯ ಮೇಲೆ ಮಲಗಿದ್ದ ಹಾಗೆ....ಎದುರಿನಲ್ಲಿ ಗೋಡೆಯ ಮೇಲೆ ಬಂಗಾರದ ಕತ್ತಿ....ಹಿಡಿಗೆ ಮೂರು ಪಚ್ಚೆ'....

' ಮೂರು ಪಚ್ಚೆ ! ಆಮೇಲೆ....? '

' ಪಕ್ಕದಲ್ಲಿ ಒಂದು ವ್ಯಕ್ತಿಯು ಮಲಗಿತ್ತು. ಮುಖವಾಡವಿತ್ತು; ಗುರ್ತಿಸಲಾಗಲಿಲ್ಲ. ತಕ್ಷಣವೇ ನನ್ನ ಅವಸ್ಥೆಯು ವೇದ್ಯವಾಯಿತು. ಮುಖವಾಡವನ್ನು ಕಿತ್ತುವುದರೊಳಗಾಗಿ, ನನ್ನ ತಲೆಯ ಮೇಲೆ ದೊಡ್ಡ ದೊಂದು ಭಾರವಾದ ಪದಾರ್ಥ ಬಿದ್ದಂತಾಯಿತು. ಕಣ್ಣುಗಳು ಮುಚ್ಚಿ ಕೊಂಡವು. ಎಷ್ಟು ಹೊತ್ತು ಈ ಅವಸ್ಥೆಯೊಳಗಿದ್ದನೋ ನನಗೆ ತಿಳಿಯದು. ಆಮೇಲೆ ಕಣ್ಣುಬಿಟ್ಟೆ....ದೇವಸ್ಥಾನದ ಗೋಡೆಗೆ ಒರಗಿಕೊಂಡಿದ್ದೆ.'

' ಏನು, ದೇವಸ್ಥಾನದ ಗೋಡೆಯೆ......? ಎಲ್ಲಾ ಕನಸಿನಂತೆ ಕಾಣುತ್ತೆ ! '

' ಮಹಾಸ್ವಾಮಿ, ಸೀತಮ್ಮನೂ ಸಹ ಹಾಗೇ ತಿಳಿದುಕೊಂಡಿದ್ದಳು. ಆದರೆ ಆಕೈಯ ಬೆರಳಿನಲ್ಲಿದ್ದ ಈ ಉಂಗುರವು ಇವೆಲ್ಲವನ್ನೂ ಸ್ಥಿರಪಡಿಸಿತು. ಆಕೆಯು ' ರಂಗ, ಈ ಉಂಗುರವನ್ನು ತೆಗೆದುಕೊಂಡು ಹೋಗಿ ಮಹಾ ರಾಜರಿಗೆ ಗೋಪ್ಯವಾಗಿ ಕೊಡು ' ಎಂದು ಹೇಳಿ, ಇದನ್ನು ನನ್ನ ಕೈಯಲ್ಲಿ ಕೊಟ್ಟಳು. '

'ಇದೆಲ್ಲಾ ಮಂತ್ರಿಯವರಿಗೆ ತಿಳಿದಿದೆಯೋ?' ಯಶವಂತ ಉಂಗುರವನ್ನು ಕೈಗೆ ತೆಗೆದುಕೊಂಡು ಕೇಳಿದ.

'ಇಲ್ಲ ಮಹಾಸ್ವಾಮಿ. ಸೀತಮ್ಮನು ಈ ವಿಚಾರವನ್ನು ಮತ್ತಾರೊಡನೆಯೂ ಹೇಳಲಿಲ್ಲ.'

'ಆ ಮೇಲೆ....?' ಯಶವಂತ ಕುತೂಹಲದಿಂದ ಮತ್ತೆ ಕೇಳಿದ.

'ಇದನ್ನು ನನ್ನ ಕೈಲಿ ಕೊಟ್ಟ ಮೇಲೆ ಆಕೆಯು ನನ್ನನ್ನು ಹೋಗೆಂದಳು. ನಾನು ಆ ಕೋಣೆಯಿಂದೀಚೆಗೆ ಬಂದೆ. ನಿಮ್ಮಲ್ಲಿಗೆ ಬರಲೋ ಬೇಡವೋ ಎಂದು ಯೋಚನೆ ಮಾಡುತ್ತ ನಿಂತಿರಲು ನನಗೆ ಅನಾಹುತ ತಿಳಿಯಿತು. ಸೀತಮ್ಮನು ವಿಷವನ್ನು ಕುಡಿದಳು.'

'ವಿಷ ಕುಡಿದ ಮೇಲೂ ತಿಳಿಯಲಿಲ್ಲವೆ?'

'ಮೈಯಲ್ಲಿ ಚೆನ್ನಾಗಿರಲಿಲ್ಲ. ಆಕೆಯು ಔಷಧಿಯನ್ನು ತೆಗೆದುಕೊಳ್ಳುತ್ತಿದ್ದಳು. ತಪ್ಪಿ, ಅಲ್ಲಿದ್ದ ವಿಷವನ್ನು ಕುಡಿದುಬಿಟ್ಟಳೆಂದು ಎಲ್ಲರೂ ತಿಳಿದುಕೊಂಡರು.'

'ಇದೇನು! ನನಗೆ ಈ ವರ್ತಮಾನವೇ ತಿಳಿಯಲಿಲ್ಲವಲ್ಲಾ?'

'ಮಹಾಸ್ವಾಮಿ. ರಾಜರಿಗೆ ಆಚೆ ನಡೆಯುವ ವಿಚಾರಗಳು ಸರಿಯಾಗಿ ತಿಳಿಯುವುದು ಕಷ್ಟ. ಹಾಗೊಂದು ವೇಳೆ ತಿಳಿದರೂ, ನಿಜಸ್ಥಿತಿ ತಿಳಿಯುವುದು ಬಹಳ ಅಪರೂಪ.'

'ಮಂತ್ರಿಯ ಮಗಳು ಗುಡಿಗೆ ಹೋಗಲು ಉದ್ದೇಶವೇನು?'

ರಂಗನು ಮಾತನಾಡಲಿಲ್ಲ; ಬಲಗಡೆಯಲ್ಲಿದ್ದ ಕೋಲನ್ನು ಎಡಗಡೆ ಇಟ್ಟುಕೊಂಡು ಮೇಲಕ್ಕೇಳಲು ಪ್ರಯತ್ನಪಟ್ಟನು. ಯಶವಂತನು ಅವನನ್ನು ಮೆಲ್ಲನೆ ಎಬ್ಬಿಸುತ್ತಾ 'ಸೀತೆಯೂ ನಾನೂ ಕೆಲವು ದಿನಗಳು ಜೊತೆಯಲ್ಲಿ ಆಡಿದ್ದೇವೆ. ನನ್ನೊಡನೆ ಮರೆಮಾಚಲೇಕೆ?' ಎಂದನು. ಅದಕ್ಕೆ ಮುದುಕನು ಮೆಲ್ಲನೆ ಪ್ರತ್ಯುತ್ತರವನ್ನಿತ್ತನು. 'ತಮ್ಮ..ಪಾದಸೇವೆ.... ಲಭಿಸಲೆಂದು.'

—

## ೩

ಮುದುಕನು ಸೀತೆಯ ವಿಚಾರವನ್ನು ತಿಳಿಸಿ ಹೊರಟು ಹೋದ ತರುವಾಯ ಯಶವಂತನಿಗೆ ದಿಕ್ಕುತೋಚದಂತಾಯಿತು. ಉಂಗುರವನ್ನೇ ಮೂಲವಾಗಿಟ್ಟುಕೊಂಡು, ಸೋದರಮಾವನನ್ನು ಆಕ್ಷೇಪಿಸಲು ಅದು ಸಾಕಾದಷ್ಟು ಕಾರಣವೆಂದು ತೋರಲಿಲ್ಲ. ಹೇಳಿದುದೆಲ್ಲಾ ಸುಳ್ಳೆ? ಹಾಗಾದರೆ ವಿಷವನ್ನು ತೆಗೆದುಕೊಂಡು ಪ್ರಾಣವನ್ನು ಬಿಡಲು ಸೀತೆಗೆ ಹುಚ್ಚೆ? ಉಂಗುರವು ಅಲ್ಲಿಗೆ ಬರಲು ಕಾರಣವೇನು? ಇದರ ಮೂಲವನ್ನು ತಿಳಿಯಲೇ ಬೇಕೆಂದು ಸಂಕಲ್ಪಿಸಿ, ಯಶವಂತನು ತನ್ನ ಆಪ್ತನಾದ ರಾಜಾರಾಮನೊಡನೆ ಹೊರಟು ಆ ಹನುಮಂತನ ದೇವಾಲಯವನ್ನು ಸೇರಿದನು.

'ರಾಜಾರಾಂ, ಆ ಗೋಡೆಯ ಹಿಂದೆ ಯಾರೋ ಮಾತನಾಡಿದ ಹಾಗಿದೆ! ಅಗೋ..'

'ಮಹಾರಾಜ··ನಾನು ನೋಡಿ ಬರುತ್ತೇನೆ.'

ಅಲ್ಲಿಂದ ಹೊರಟು ರಾಜಾರಾಮನು ಗೋಡೆಯ ಹಿಂದೆ ಬಂದನು. ಯಾರೂ ಕಂಡುಬರಲಿಲ್ಲ. ಪುನಃ ಮಾತು ಕೇಳಿಸಿತು. ಪೂರ್ವ ದಿಕ್ಕಿನಿಂದ ಶಬ್ದವು ಆವರಿಸಿದಂತೆ ತೋರಿತು. ಆ ದಿಕ್ಕಿನಲ್ಲಿ ಒಂದು ಕಾಲುದಾರಿ ಕಾಣಿಸಿತು. ಗೋಡೆಯಿಂದ ಸುಮಾರು ನೂರೈವತ್ತು ಗಜಗಳ ದೂರದಲ್ಲಿ ಒಂದು ದೊಡ್ಡ ಬೇಲಿ. ಕಾಲುದಾರಿ ಅದರ ಪಕ್ಕದಲ್ಲಿ ಹೋಗುತ್ತಲಿತ್ತು. ರಾಜಾರಾಮನು ಯಶವಂತನಿಗೆ 'ತೋಟದಲ್ಲಿರಬಹುದೆಂದು ಕಾಣುತ್ತೆ. ತಾವು ಮೆಲ್ಲನೆ ಬನ್ನಿ' ಎಂದು ಹೇಳಿ, ತಾನು ಮುಂದೆ ಹೊರಟನು.

ತೋಟವು ಹೆಸರಿಗೆ ತಕ್ಕಂತಿರಲಿಲ್ಲ. ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ರಮಣೀಯವಾಗಿದ್ದು, ತೋಟವೆಂದು ಹೆಸರನ್ನು ಹೊಂದಿರಬಹುದು! ಕಾಲನು ತನ್ನ ಗಮನವನ್ನು ಮಾನವರಿಗೆ ತೋರಿಸಲೋಸುಗ ಹೀಗೆ ಮಾಡಿತ್ತೋ ಏನೋ! ಇದೇನು ಅಷ್ಟು ವಿಚಿತ್ರವಲ್ಲ. ನಮ್ಮೊಡನಾಡಿಗಳಾಗಿದ್ದವರು ಕೆಲವು ವರ್ಷಗಳಲ್ಲಿಯೇ ರಮಣೀಯ ಸ್ತ್ರೀರತ್ನಗಳಾಗಿ ಮತ್ತೆ ಕೆಲವು ವರ್ಷಗಳಲ್ಲಿಯೇ ಮುದುಕರಾಗುವುದನ್ನು ನೋಡಿರುವಾಗ, ಫಲಪುಷ್ಪಭರಿತವಾಗಿಯೂ ಸುವಾಸನೆಯ ಗಣಿಯಾಗಿಯೂ ಇದ್ದ ತೋಟವು

ಈ ರೀತಿಯಾದುದೇನೂ ಅಂತಹ ಆಶ್ಚರ್ಯವಲ್ಲ. ವಸಂತನ ವಾಸಸ್ಥಾನವಾಗಿದ್ದಾಗ ಅಲ್ಲಿಗೆ ವಿಹಾರಾರ್ಥವಾಗಿ ಬರುತ್ತಿದ್ದ ಯುವಕರಿಗೂ, ಈಗ ರಾಜಾರಾಮನ ಕಣ್ಣಿಗೆ ಕಂಡ ಇಬ್ಬರಿಗೂ ಬಹಳ ತಾರತಮ್ಯವಿದ್ದಿತು. ಇವರಿಬ್ಬರನ್ನೂ ರಾಜಾರಾಮನು ಗುರ್ತಿಸಿದನು. ಇನ್ನು ಸರಿಯಾದ ಮಾರ್ಗದಲ್ಲಿ ಒಳಹೊಕ್ಕರೆ ಕೆಲಸ ಕೆಟ್ಟೀತೆಂದು ಮೆಲ್ಲನೆ ಹೊರಟು, ಅವರು ನಿಂತಿದ್ದ ಸ್ಥಳದ ಪಕ್ಕದಲ್ಲಿದ್ದ ಬೇಲಿಯಲ್ಲಿ ಅವಿತುಕೊಂಡನು.

'ಮತ್ತೆ ಹೇಳುತ್ತೇನೆ. . ಒಳ್ಳೆಯ ಮಾತಿನಿಂದ ಆ ಉಂಗುರವನ್ನೊಪ್ಪಿಸಿದರೆ ಸರಿ, ಇಲ್ಲವಾದರೆ. . . .' ಒಬ್ಬನೆಂದ.

'ನಾನೂ ಹೇಳುತ್ತೇನೆ. ಬಂದ ಹಣದಲ್ಲಿ ನನಗೂ ಅರ್ಧ ಬರಬೇಕು. ಅದನ್ನು ನುಂಗಲು ನೀನು ಹೀಗೆ ಮಾತನಾಡುತ್ತಿರುವೆ. ಖಂಡಿತವಾಗಿಯೂ ನಾನು ಆ ಉಂಗುರವನ್ನು ಕಾಣೆ. ನನಗೆ ಬರಬೇಕಾದ ಐನೂರು ವರಹಗಳನ್ನಿಲ್ಲಿಟ್ಟರೆ ಸರಿ. . . . ಇಲ್ಲವಾದರೆ ನಿನ್ನ ಗತಿ ಏನಾಗುತ್ತೋ ನೋಡು !' ಮತ್ತೊಬ್ಬ ಹೀಗೆಂದು ಪಕ್ಕದಲ್ಲಿ ಬೆಳದಿದ್ದ ಸುಮಾರು ಏಳಡಿ ಎತ್ತರವಿದ್ದ ಗಿಡವನ್ನು ಬುಡ ಸಹಿತ ಕಿತ್ತು, ತನ್ನೆದುರಿಗೆ ನಿಂತಿದ್ದವನನ್ನು ಅಪ್ಪಳಿಸಲು ಉದ್ಯುಕ್ತನಾದನು.

'ಕದರಿ, ನಾನು ಹಾಸ್ಯಕ್ಕೆ ಹೀಗೆಂದರೆ ಇಷ್ಟು ವಿಪರೀತವೆ ! ಉಂಗುರ ಇದ್ದರೆಷ್ಟು, ಹೋದರೆಷ್ಟು. ಇದ್ದಿದ್ದರೆ ಹತ್ತುಸಾವಿರ ಬೆಲೆ ಬಾಳುತ್ತಿತ್ತು.... ಅಷ್ಟೆ. ನೋಡಿದೆಯೋ ? ಮೊದಲನೆಯವನು ನಗುತ್ತ ರಮಿಸಲೆಳಸಿದನು.

'ಲಾಲರೆ, ಇದೇ ಕೊನೆಯ ಸಲ ನಿಮ್ಮಲ್ಲಿ ಕೆಲಸ ಮಾಡುವುದು. ಹಾಳು ಹೊಟ್ಟೆ; ಅದಕ್ಕೊಪ್ಪಿದೆ. ನನಗೆ ಬರತಕ್ಕ ಹಣವನ್ನು ಕೊಟ್ಟುಬಿಡಿ' ಕದರಿ ಕಟ್ಟುನಿಟ್ಟಾಗಿ ಕೇಳಿದ.

ಗರ್ಗಲಾಲನು ತನ್ನ ಕೈಚೀಲದಿಂದ ಹಣವನ್ನು ತಗೆದು, ತನ್ನ ತುಟಿಗಳನ್ನು ನಾಲಿಗೆಯಿಂದ ಸವರಿಕೊಳ್ಳುತ್ತಾ, ಆ ಹಣವನ್ನು ಕದರಿಯ ಕೈಲಿ ಇಟ್ಟನು. ಕದರಿಯು ಅದನ್ನು ಎಣಿಸಿಕೊಳ್ಳುತ್ತಿರಲು, ಲಾಲನು ಹಿಂದಿನಿಂದ ಬಂದು, ತನ್ನ ಸೊಂಟದಲ್ಲಿದ್ದ ಕಠಾರಿಯನ್ನು ಕದರಿಯ ಕುತ್ತಿಗೆಗೆ ಹಿಡಿದನು.

'ಎಲ್ಲಿಟ್ಟಿದ್ದೀಯೋ ? ನಿನ್ನ ಹೊಟ್ಟೆಯೊಳಗೆ ಬಚ್ಚಿಟ್ಟುಕೊಂಡಿದ್ದರೂ ಸೀಳಿ ತೆಗೆದುಕೊಳ್ಳುತ್ತೇನೆ. ಒಳ್ಳೆಯ ಮಾತಿನಲ್ಲಿ ಉಂಗುರವನ್ನು ಕೊಡು.'

ಕದರಿಯು ಥಟ್ಟನೆ ತನ್ನ ಒಲಕೈಯಿಂದ ಲಾಲನ ಕೈಯನ್ನು ಬಿಗಿಯಾಗಿ ಹಿಡಿದನು. ಒಂದೆರಡನ್ನುವಷ್ಟರಲ್ಲಿಯೇ ಕಠಾರಿಯು ಲಾಲನ ಹಿಡಿಯಿಂದ ಸಡಲಿ ಕೆಳಕ್ಕೆ ಬಿದ್ದಿತು. 'ಪಿಶಾಚಿ!' ಎನ್ನುತ್ತಾ, ಕದರಿಯು ಲಾಲನ ಎರಡು ಕೈಗಳನ್ನೂ ಹಿಡಿದುಕೊಂಡು, ಅವನನ್ನು ಮೇಲಕ್ಕೆತ್ತಿ ಗರಗರನೆ ತಿರುಗಿಸಿ ಬಿಟ್ಟನು. ಗರ್ಗಾಲಾಲನು ಹತ್ತು ಗಜಗಳಷ್ಟು ದೂರ ಹೋಗಿ ಬಿದ್ದನು. ಕದರಿಯು ತಕ್ಷಣವೇ ಹಾರಿ ಲಾಲನ ಎದೆಯ ಮೇಲೆ ಕುಳಿತು ತನ್ನ ಮುಷ್ಟಿಯಿಂದ ಲಾಲನ ಪಕ್ಕೆಗೆ ಹೊಡೆಯಲು ಕೈಯೆತ್ತುವ ಸಮಯಕ್ಕೆ, ಹಿಂದಿನಿಂದ ಯಾರೋ ಬಲವಾಗಿ ಅವನ ಬೆನ್ನಿನ ಮೇಲೆ ಗುದ್ದಿದಂತಾಯಿತು. ಇಂತಹ ಏಟನ್ನು ಒಂದು ಸಲವಲ್ಲದೆ ಹಿಂದೆ ಯಾವಾಗಲೂ ತಿಂದಿರಲಿಲ್ಲ. ಏನೋ ಜ್ಞಾಪಕಕ್ಕೆ ಬಂತು. ಹಿಂತಿರುಗಿ 'ರಾ—' ಎನ್ನುವಷ್ಟರಲ್ಲೇ ರಾಜಾರಾಮನು ಅವನ ಬಾಯನ್ನು ಮುಚ್ಚಿ 'ಪ್ರಾಣ ಉಳಿಯಬೇಕಾದರೆ ಇಲ್ಲಿಂದ ಓಡು.' ಎಂದನು. ಗರ್ಗಾಲಾಲನು ಕಣ್ಣು ಮುಚ್ಚಿ ಕಣ್ಣು ತೆರೆಯುವುದರೊಳಗಾಗಿ ಕದರಿಯು ಮಾಯವಾದನು. ಎದುರಿಗೆ ನಿಂತಿದ್ದ ರಾಜಾರಾಮನನ್ನು ನೋಡಿ, ಗರ್ಗಾಲಾಲನು 'ಮಹಾರಾಯ, ನೀನು ನನಗೆ ಪ್ರಾಣದಾನವನ್ನು ಮಾಡಿದಂತಾಯಿತು. ಆ ಠಕ್ಕನು ಹಣದಾಸೆಗಾಗಿ ನನ್ನ ಪ್ರಾಣವನ್ನೇ ತೆಗೆದುಬಿಡುತ್ತಿದ್ದನು. ಅಯ್ಯಾ ನೀನು ಯಾರು?' ಎಂದನು.

'ನನ್ನ ಹೆಸರು ಕದಂಬ. ನನ್ನದು ಈ ದೇಶವಲ್ಲ. ನನಗೆ ಕೆಲಸವೇನಿಲ್ಲ. ಕೆಲಸವನ್ನು ಹುಡುಕಿಕೊಂಡು ಇಲ್ಲಿಗೆ ಬಂದೆ—'

'ಕಬಂಧ, ಕಬಂಧ. ಒಳ್ಳೇ ಹೆಸರಯ್ಯಾ. ನೀನೇ ಅಲ್ಲವೆ ರಾಮನಿಗೆ ಶಬರಿಯ ಸಮಾಚಾರವನ್ನು ತಿಳಿಸಿದ್ದು?'

'ಕಬಂಧನಲ್ಲ ಸ್ವಾಮಿ, ಕದಂಬ. ನನ್ನನ್ನು ಇಲ್ಲಿ ಯಾರಾದರೂ ಕೆಲಸಕ್ಕಿಟ್ಟುಕೊಳ್ಳುವರೇನೋ ಎಂದು ಈ ಊರಿಗೆ ಬಂದೆ.'

'ಅಲ್ಲ ಇಲ್ಲಿ ಏತಕ್ಕೆ ಕೆಲಸಮಾಡಬೇಕು? ನಾನು ಕೊಡುವುದರಲ್ಲೇ ತೃಪ್ತಿಹೊಂದುವಂತಿದ್ದರೆ ನನ್ನಲ್ಲೇ ಇರು.'

'ತಮ್ಮನ್ನು ನೋಡಿದರೆ ಸಾಮಾನ್ಯರಂತೆ ತೋರುವುದಿಲ್ಲ. ಆಗಲಿ ಸ್ವಾಮಿ, ತಮ್ಮಲ್ಲೇ ಇರುವೆನು.'

‘ ಸರಿ ಹಾಗಾದರೆ. ಈ ತಿಂಗಳು ನಿನ್ನ ಕೆಲಸವನ್ನು ನೋಡಿ ಅನಂತರ ಸಂಬಳವನ್ನು ಗೊತ್ತುಮಾಡುವೆನು. ನಾಳೆಯ ದಿನ ಬೆಳಿಗ್ಗೆ ಆರು ಗಂಟೆಗೆ ನಾನು ಈ ದೇವಸ್ಥಾನದಲ್ಲಿರುತ್ತೇನೆ, ಬಂದು ನೋಡು.

ಲಾಲನು ಅಲ್ಲಿಂದ ಹೊರಟುಹೋದ ಮೇಲೆ, ರಾಜಾರಾಮನು ಆ ತೋಟದಿಂದೀಚೆಗೆ ಬರುತ್ತಾ, ಒಂದು ಆಶ್ಚರ್ಯವನ್ನು ಕಂಡನು. ಕದರಿಯು ತೋಟದಿಂದೀಚೆಗೆ ಓಡಿಬರುತ್ತಿರಲು ದಾರಿಯಲ್ಲಿ ಯಶವಂತನನ್ನು ಸಂಧಿಸಿದನು. ಲಾಲನ ಕಡೆಯವನಾಗಿರಬಹುದೆಂದು ತಿಳಿದು ಕದರಿಯು ಯಶವಂತನನ್ನು ಹಿಡಿದುರುಳಿಸಿ, ಅವನ ಹೊಟ್ಟೆಯ ಮೇಲೆ ಕೂತು ಅವನನ್ನು ಅಮುಕುವುದರೊಳಗಿರಲು, ಯಶವಂತನು ತನ್ನ ಕಾಲುಗಳೆರಡನ್ನೂ ಕದರಿಯ ಪಕ್ಕೆಗೆ ಸೇರಿಸಿ ಅವನನ್ನು ಮೇಲಕ್ಕೆತ್ತಿ ಎಸೆದನು. ಕದರಿಯು ಏಳೆಂಟು ಗಜದ ದೂರದಲ್ಲಿ ಬಾರಲಾಗಿ ಬೀಳಲು, ಯಶವಂತನು ಹಾರಿ ಅವನ ಬೆನ್ನಿನ ಮೇಲೆ ಕೂತು ಕದರಿಯನ್ನಮುಕುತ್ತ ‘ ಮೇಲಕ್ಕೇಳು ’ ಎನ್ನುತ್ತಿದ್ದನು. ಕದರಿಯೇನೊ ಬಲಶಾಲಿಯೇ. ಆದಾಗ್ಯೂ ಈ ಸಮಯದಲ್ಲಿ ಅವನ ಬಲವೇನೂ ಕೆಲಸಕ್ಕೆ ಬರಲಿಲ್ಲ. ನಾಲ್ಕಾರು ಸಲ ಏಳಲು ಪ್ರಯತ್ನಪಟ್ಟು, ಕದರಿಯು ಬುಸುಗುಟ್ಟುತ್ತಾ ನೆಲವನ್ನು ಕಚ್ಚಿದನು. ರಾಜಾರಾಮನು ಇವರ ಹತ್ತಿರ ಬಂದೊಡನೆಯೇ ಯಶವಂತನು ಕದರಿಯನ್ನು ಬಿಟ್ಟು ಮೇಲಕ್ಕೆದ್ದನು. ಆಯಾಸದಿಂದ ಬುಸುಗುಟ್ಟುತ್ತಾ ಕದರಿಯು, ಮೆಲ್ಲನೆ ಎದ್ದು ಕುಳಿತು, ರಾಜಾರಾಮನ ಮುಖವನ್ನು ನೋಡಿದನು.

‘ ಕಾಲಿಗೆ ಬೀಳೋ ಮುಡ್ಡಿ ’ ರಾಜಾರಾಮನೆಂದ.

ಕದರಿಯು ಯಶವಂತನ ಮುಖವನ್ನು ನೋಡಿದನು. ಹಟಾತ್ತಾಗಿ ಗುರ್ತು ಸಿಕ್ಕಿತು. ‘ ಮಹಾಸ್ವಾಮಿ, ಕ್ಷಮಿಸಿ. . . . ಹೊಟ್ಟೆ ಕೆಟ್ಟದ್ದು ’ ಎನ್ನುತ್ತಾ ಅವನು ಯಶವಂತನ ಕಾಲಿಗೆರಗಿದನು. ಯಶವಂತನು ಅವನನ್ನು ಎಬ್ಬಿಸುತ್ತಾ ‘ ಇಂದಿನಿಂದ ನೀನು ನನ್ನ ಬಳಿಯಿರು ’ ಎನ್ನುತ್ತಾ ರಾಜಾರಾಮನೊಡನೆ ಆ ಸ್ಥಳವನ್ನು ಬಿಟ್ಟು ಹೊರಟನು.

—

‘ ಏನು, ನಮ್ಮ ಮಂತ್ರಿಗಳ ಸವಾರಿ ನೀರಿನ ಮೇಲೆ ಹೋಗೋ ಹಾಗಿದೆ ! ’

ಶ್ರೀನಿವಾಸಾಚಾರ್ಯರಿಗೆ ನೀರಿನ ಮೇಲೆ ಹೋಗುವುದೆಂದರೆ ಇಹ ಲೋಕವನ್ನು ಬಿಟ್ಟು ಹೋದುದಕ್ಕಿಂತ ಹೆಚ್ಚೇ. ರಾಮಸ್ವಾಮಿ ಶಾಸ್ತ್ರಿಗಳ ಮನೆಯಲ್ಲಿ ಭಾನುವಾರ ಮಧ್ಯಾಹ್ನ ಸಾಧಾರಣವಾಗಿ ನಾಲ್ಕಾರು ಜನ ಸೇರೋ ಪದ್ಧತಿ. ಏನೋ ಅದೂ ಇದೂ ಮಾತನಾಡುವುದೋ ಅಥವಾ ಒಟ್ಟಿಗೆಲ್ಲಿಗಾದರೂ ಹೋಗಿಬರುವುದೋ ಇಲ್ಲವೆ ಮತ್ಯಾವ ವಿಧದಲ್ಲಿ ಯಾಗಲಿ ಕಾಲಕಳೆಯುವುದೋ ಇದರ ಉದ್ದೇಶ. ಎಂದಿನ ಹಾಗೆ ಜನರು ಸೇರೋ ಹೊತ್ತಿಗೆ ಆಚಾರ್ಯರು ಮೊದಲುಮಾಡಿದರು. ಇವರಿಗೆ ಪ್ರತಿವಾದಿ ಗಳು ಮ. ರಾ. ಶೇಷಗಿರಿರಾಯರು. ಆಚಾರ್ಯರು ‘ ಓ ’ ಎಂದರೆ ಇವರು ‘ ರೋ ’ ಎನ್ನುವ ಪದ್ಧತಿ.

‘ ಓಹೋ ! ಹೋಗೋದರಲ್ಲಿ ಉಪಯೋಗವೇ ಇಲ್ಲ ಎನ್ನಿ. ಕಳಿಸಿ ಕೊಡುವವರಿಗೆ ಬುದ್ಧಿಯೇನಾದರೂ ಇದೆಯೇ!’ ಶೇಷಗಿರಿರಾಯರು ಪ್ರತಿ ಯಾಗಿ ಕೇಳಿದರು.

‘ ಅಲ್ಲ, ರಾಯರೇ, ಇದರಲ್ಲೇನಿದೆ ? ಒಂದು ಪುಣ್ಯದ ಕೆಲಸವೆ... ಒಂದು ತೀರ್ಥಯಾತ್ರೆಯೆ? ಏನೋ ಇಲ್ಲದ ವೆಚ್ಚ ’ ಆಚಾರ್ಯರೆಂದರು.

‘ ಆಚಾರ್ಯರೇ, ನೀವೇನೋ ಬುದ್ಧಿವಂತರು. ಆದರೆ ಎಲ್ಲರಿಗೂ ಇಷ್ಟು ಬುದ್ಧಿ ಎಲ್ಲಿಂದ ಬರಬೇಕು ? ಅಲ್ಲಿಗೆ ಹೋಗಿ ಬಂದರೆ, ಅಲ್ಲಿನ ವಿದ್ಯ ಮಾನಗಳಿಗೂ ಇಲ್ಲಿನ ವಿಚಾರಗಳಿಗೂ ವ್ಯತ್ಯಾಸ ತಿಳಿಯುತ್ತೆ. ನಮಗೆ ಯಾವ ಯಾವದು ಅನುಕೂಲ ಎಂಬದನ್ನು ನಾವು ತಿಳಿದುಕೊಳ್ಳಲು ಬಹಳ ಅನುಕೂಲ ಎಂಬುದು ನಮ್ಮ ಮತ. ತಾವು ಬುದ್ಧಿವಂತರು. ಇದು ನಿಮ ಗೇನು ಸರಿಬೀಳುತ್ತೋ ಇಲ್ಲವೋ ! ’

‘ ಅದೇನನುಕೂಲವೋ ಏನೋ.. ನಾ ಬೇರೆ ಕಾಣೆ. ಮುಂಚೆ ಓದು ಎಂದರೆ ಇದ್ದ ಹಾಗೆ ಇದೆಯೋ ? ಆ ಹಾಳು ಪರದೇಶಿ ಭಾಷೆಯನ್ನು ಕಲಿತು

ವೇದವನ್ನೆಲ್ಲಾ ಮೂಲೆಗೆ ಹಾಕಿ ಕೂತೆವು. ಇದರಿಂದ ಪುಣ್ಯವಿಲ್ಲ, ಪುರುಷಾರ್ಥವಿಲ್ಲ. '

ಅಷ್ಟುಹೊತ್ತಿಗೆ ಗಲ್ಲದಮೀಸೆ ಗಣಪತಿರಾಯರು ಒಳಗೆ ಬಂದರು. ಅವರಿಗೆ ತಿಳಿದವರೆಲ್ಲಾ ಅವರನ್ನು ಕಂಡರೆ ಸ್ವಲ್ಪ ದೂರವಾಗಿಯೇ ಇರುತ್ತಿದ್ದರು. ಏಕೆಂದರೆ ಅವರಿಗೆ ವಿಪರೀತ ತಾಳ್ಮೆ. ರಾಮಸ್ವಾಮಿ ಶಾಸ್ತ್ರಿಗಳೊಬ್ಬರು ಮಟ್ಟಿಗೆ ರಾಯರ ಎದುರಿಸಲ್ಲೇ ' ಇವನು ತುರುಕರಲ್ಲಿ ಹುಟ್ಟಬೇಕಾಗಿತ್ತು.' ಎಂದು ಹೇಳುತ್ತಿದ್ದರು. ಇನ್ನಾರಾದರೂ ಆ ಮಾತನ್ನು ಹೇಳಿದ್ದರೆ ಅವರ ಗತಿ ಏನಾಗುತ್ತಿತ್ತೋ ಏನೋ ! ಶಾಸ್ತ್ರಿಗಳು ರಾಯರಿಗೆ ಒಂದಾನೊಂದು ಕಾಲದಲ್ಲಿ ಉಪಾಧ್ಯಾಯರಾಗಿದ್ದರು. ಆದುದರಿಂದ ರಾಯರಿಗೆ ಅವರಲ್ಲಿ ಬಹಳ ಗೌರವ. ಗಣಪತಿರಾಯರು ಮೀಸೆ ಬಿಟ್ಟಿದುದಕ್ಕೆ ಒಬ್ಬೊಬ್ಬರು ಒಂದೊಂದು ಕಾರಣವನ್ನು ಹೇಳುತ್ತಿದ್ದರು.

' ಅವರು ಸೇನಾಧಿಪತಿಯ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅದಕ್ಕೆ ನೋಡೋದಕ್ಕೆ ಜೋರಾಗಿರಬೇಕು. . . ಅಂತ ' ಒಬ್ಬರೆಂದರು.

' ಮನೆಯಲ್ಲಿ ಹೆಂಡರು ಮಕ್ಕಳು ಹೆದರಿಕೊಂಡು ಕಾಸು ಕೇಳದೆ ಇರಲಿ ಎಂದು. ' ಇನ್ನೊಬ್ಬರೆಂದರು.

' ಗಲ್ಲವೆಲ್ಲಾ ಒಣಗಿ ಹೋದರೆ ಅದು ಕಾಣದಿರಲೆಂದು. ' ಮತ್ತೊಬ್ಬರ ಭಾಷ್ಯವಾಯಿತು.

' ಅವರ ತಾಳ್ಮೆಗೂ ನಿಧಾನಕ್ಕೂ ತಕ್ಕ ಆಯುಧ ಒಂದಿರಬೇಕಲ್ಲ. . ಅದಕ್ಕೆ ' ಮಗದೊಬ್ಬರ ಟೀಕೆಯಾಯಿತು.

ಅದು ಹೇಗಾದರೂ ಇರಲಿ, ಅವರನ್ನು ಎಲ್ಲರೂ ಗಲ್ಲದಮೀಸೆ ಗಣಪತಿರಾಯ ಎಂದು ಕರೆಯುತ್ತಿದ್ದರು: ಆದರೆ ಅವರೆದುರಿಗೆ ಮಾತ್ರ ಹಾಗೆ ಅವರನ್ನು ಕರೆಯುತ್ತಿರಲಿಲ್ಲ. ಯಾರಾದರೂ ಅವರ ವಿಚಾರವನ್ನು ಮಾತನಾಡುವಾಗಲಾಗಲಿ ಅಥವಾ ಅವರನ್ನು ಹುಡಿಕಿಕೊಂಡು ಯಾರಾದರೂ ಬಂದಾಗಲಾಗಲಿ ಗಣಪತಿರಾಯನೆಂದರೆ ಯಾರಿಗೂ ತಿಳಿಯುವಹಾಗಿರಲಿಲ್ಲ; ಆ ಗಲ್ಲದಮೀಸೆ ಬಂದರೇನೇ ಗೊತ್ತಾಗುತ್ತಿದ್ದುದು.

' ಬನ್ನಿ ರಾಯರೆ, ಸಮಾಚಾರ ತಿಳಿಯಿತೆ ? ' ಶೇಷಗಿರಿರಾಯರು ಸ್ವಾಗತಿಸಿದರು.

' ಏನದು ? ನೀವು ಕೇಳೋದು ನೋಡಿದರೆ, ಅರಂಧ್ಯತೀನ ತೋರಿಸಿದ ಹಾಗಿದೆ ! ' ಗಲ್ಲನಮೀಸೆ ಗಣಪತಿರಾಯರು ಪ್ರಶ್ನೆ ಹಾಕಿ ಆಜೂ-ಬಾಜೂ ' ಸ್ಥಳವಮಾಡಿಕೊಂಡು ಅಚ್ಚುಕಟ್ಟಾಗಿ ಕೂತರು.

' ನಮ್ಮ ಮಂತ್ರಿಗಳನ್ನ ಬೇರೆ ಬೇರೆ ದೇಶಗಳಿಗೆ ನೋಡಿಬರಲೆಂದು ಕಳಿಸಿಕೊಡುತ್ತಾರಂತೆ. ವಿದ್ಯಾಭ್ಯಾಸದ ಇಲಾಖೆಯನ್ನೂ, ನಿಮ್ಮ ಇಲಾಖೆಯನ್ನೂ ವೃದ್ಧಿಪಡಿಸುವುದೇ ಇದರ ಉದ್ದೇಶ ' ಶೇಷಗಿರಿ ಮುಂದರಿಸಿದ.

' ಸರಿ ಸರಿ, ಈಗ ತಿಳಿಯಿತು. ಅದೇ ನಾನು ಬರೋವಾಗ ಎಲ್ಲಾ ನಡೀತಾ ಇದ್ದದ್ದು. ' ಗಣಪತಿರಾಯರು ತಿಳಿದವರಂತೆ ನುಡಿದರು.

' ಏನು ಸ್ವಾಮಿ, ಸ್ವಲ್ಪ ವಿಶದಪಡಿಸಿ. ನಾವೂ ಕೇಳಿ ಸಂತೋಷಪಡುತ್ತೇವೆ ? ' ಶ್ರೀನಿವಾಸಾಚಾರ್ಯರು ಕೇಳಿದರು.

' ಏನು ! ಎಲ್ರೋ ಏಳನೇ ತಿಂಗಳಲ್ಲಿ ಹುಟ್ಟಿದ ಹಾಗೆ ಕೂಗಾಡುತ್ತಾ ಇದ್ದೀರಿ. ನಾನು ಹೇಳುವದಕ್ಕೆ ಮೊದಲುಮಾಡುವದಕ್ಕೆ ಮುಂಚೆಯೇ ನಿಮ್ಮ ಗಲಭೆ ವಿಪರೀತವಾಗಿದೆ. ' ಗಣಪತಿರಾಯರು ರಪ್ಪುಹಾಕಿದರು.

' ಹೀಗೆ ತಿರುಗೋ ಗಣಪತಿ. ಎಲ್ಲಿ, ಏನು ನಡಿಯುತ್ತಾ ಇತ್ತೋ ? ' ಶಾಸ್ತ್ರಿಗಳು ಕೆಣಕಿ ಕೇಳಿದರು.

' ನಾನು ಪೇಟೆಯಿಂದ ಬರುತ್ತಾ ಇದ್ದೆ. ಮಂತ್ರಿಗಳ ಮನೆಯ ಮುಂದೆ ಸೇವಕರು, ದಾದಿಯರು, ಎಲ್ಲಾ ಬಹಳ ಸಂಭ್ರಮದಿಂದ ಓಡಾಡುತ್ತಿದ್ದರು. ಏನೋ ಇರಬೇಕೆಂದಂದುಕೊಂಡು ಸ್ವಲ್ಪ ಹಾಗೇ ನಿಂತೆ. ಅಷ್ಟು ಹೊತ್ತಿಗೆ ಮೇಲುಗಡೆ ರಸ್ತೆಯಿಂದ ಒಂದು ಕುದುರೆ-ಗಾಡಿ ಬಂದು ನಿಂತಿತು. ಅದು ಯಾವದು ಎಂದಿದ್ದೀರಿ ? ' ಗಣಪತಿ ಉವಾಚ.

' ಶ್ರೀಕೃಷ್ಣ ಪರಮಾತ್ಮಂದು ! ಇದೊಂದು ಇಲ್ಲದ ಗಂಭೀರ. ' ಶ್ರೀನಿವಾಸಾಚಾರ್ಯರು ಉತ್ತರಿಸಿದರು.

' ಗಗಾರ್ಲಾಲಂದು . . ಅದು ಬಂದು ನಿಲ್ರೋ ಹೊತ್ತಿಗೂ ಮಂತ್ರಿಯ ಮನೆಯಿಂದ ಒಂದು ಗಾಡಿ ಹೊರಡೋ ಹೊತ್ತಿಗೂ ಸರಿಹೋಯಿತು. ಹೆಂಗಸು— ಗಗಾರ್ಲಾಲನ ಹೆಂಡತಿ ಇದ್ದ ಹಾಗಿತ್ತು, ಗಾಡಿಯಿಂದಿಳಿದು ಒಳಕ್ಕೆ ಹೋದಳು. ನಾನು ಬರುತ್ತಿದ್ದ ಗಾಡಿಯೊಳಗಡೆ ನೋಡಿದೆ. . . .

ಒಳಗಿದ್ದವರು ಯಾರು ಎಂದಿದ್ದೀರಿ!' ಗಣಪತಿಯ ನಾಲಿಗೆ ಇನ್ನೂ ಉದ್ದವಾಯಿತು.

'ಯಾರು!' ಶಾಸ್ತ್ರಿಗಳು ಉದ್ಗಾರ ತೆಗೆದರು.

'ಮಹಾರಾಜಾ ಯಶವಂತರು' ಗಣಪತಿ ತಟ್ಟನೆ ಉತ್ತರವಿತ್ತ.

ಅಲ್ಲಿ ಸೇರಿದ್ದವರಲ್ಲಿ ಕೆಲವರು ನಕ್ಕರು. ಶೇಷಗಿರಿರಾಯರು ಅವರನ್ನು ಪರಿಹಾಸ ಮಾಡಲು 'ಹಸುಮಗು ಪಾಪ! ಯಾರಿಗೂ ಗೊತ್ತಿಲ್ಲದೆ ಬಂದು ಹೋಗೋ ಶಕ್ತಿ ಅದಕ್ಕೆಲ್ಲಿಂದ ಬರಬೇಕು!' ಎಂದರು.

'ಹಾಗಲ್ಲ, ಇದ್ದರೂ ಇರಬಹುದು. ಆಮೇಲೆ?' ಶಾಸ್ತ್ರಿಗಳು ಸಮಾಧಾನದಿಂದ ಕೇಳಿದರು.

'ನನಗೂ ಸ್ವಲ್ಪ ಅನುಮಾನವಾಗಿಯೇ ಇತ್ತು. ಅದನ್ನು ನಿವಾರಣೆ ಮಾಡಿಕೊಳ್ಳಲು ನಮ್ಮ....' ಗಣಪತಿ ತಡೆವರಿಸಿದ.

'ಕಪಿನೀಪತಿ ಇದ್ದಾನಲ್ಲಾ' ಶಾಸ್ತ್ರಿಗಳು ವಾಕ್ಯ ಪೂರ್ತಿ ಮಾಡಿದರು.

'ಅವನನ್ನೇ ಕೂಗಿದೆ. ಸಮಾಚಾರನೆಲ್ಲಾ ವಿಶದವಾಗಿ ತಿಳಿಯಿತು. ಶಾಸ್ತ್ರಿಗಳೆ ಅಲ್ಲೊಂದು ಬಹಳ ಸ್ವಾರಸ್ಯವಾದ, ಗೋಪ್ಯವಾದ ವಿಚಾರ..' ಗಣಪತಿರಾಯರು ಮುಂದೆ ಸಾಗಿದರು.

'ನಿನ್ನ ಮುಖ ನೋಡಿದರೆ ಒಳಗೇ ನಗು ಒರ್ರೋ ಹಾಗಿದೆ..ಹೇಳಪ್ಪ, ಅದೇನಂತಹ ಗೋಪ್ಯವಾದ ಸಮಾಚಾರ?' ಶಾಸ್ತ್ರಿಗಳು ಚೇಷ್ಟೆಯಾಡಿದರು.

'ಹೌದು ಶಾಸ್ತ್ರಿಗಳೆ, ಕೇಳಿ. ಮಟಮಟ ಮಧ್ಯಾಹ್ನ. ಹನ್ನೆರಡು ಗಂಟೆ ಆಗ ತಾನೆ ಹೊಡೆದಿತ್ತಂತೆ. ಮಂತ್ರಿಗಳ ಮನೆಯ ಮುಂದೆ ಒಂದು ಗಾಡಿ ಬಂದು ನಿಂತಿತಂತೆ. ಒಳಗಿನಿಂದ ಒಬ್ಬ ಯುವಕನು ಇಳಿದು ಬಂದು 'ಮಂತ್ರಿಗಳನ್ನು ನೋಡಬಹುದೆ?' ಎಂದು ಕೇಳಿದನಂತೆ. ನಮ್ಮ ಕಪ್ಪೀ—ಅಲ್ಲಿದ್ದೋನು, ಯಾರೋ ಏನೋ ಎಂದು, 'ಅವರು ಬಹಳ ಕಲಸದಲ್ಲಿ ಇದ್ದಾರೆ....ಈಗ ಆಗೋ ಹಾಗಿಲ್ಲ' ಎಂದನಂತೆ. ಅಷ್ಟು ಹೊತ್ತಿಗೆ ರಂಗ ಒಳಗಿನಿಂದ ಬಂದು, ಯುವಕನನ್ನು ನೋಡಿ, ಕಪ್ಪೀ ಕಪಾಳಕ್ಕೊಂದು ಪ್ರಹಾರ ಮಾಡಿ, 'ಕಾಲಿಗೆ ಬೀಳೋ ಮಡ್ಡಿ' ಎನ್ನುತ್ತಾ, ಆ ಯುವಕನಿಗೆ ನಮಸ್ಕರಿಸಿ, 'ಮಹಾರಾಜ, ದಯವಿಟ್ಟು ಕ್ಷಮಿಸಿ. ಇವನಿಗೆ ತಾವು

ಯಾರೆಂಬುದು ತಿಳಿಯಲಿಲ್ಲ' ಎಂದು ಹೇಳಿ, ಒಳಕ್ಕೆ ಕರೆದುಕೊಂಡು ಹೋದನಂತೆ. ನಮ್ಮ ಕಪ್ಪೀಗೆ—ಮೈಕೈ ನಡುಕ ಹುಟ್ಟಿ ದಿಕ್ಕುತೋಚ ದಂತಾಗಿ ಬಾಯಲ್ಲಾ ಒಣಗಿಕೊಂಡು ಬಂತಂತೆ. ಅವನೇ ಹೇಳಬೇಕು ಶಾಸ್ತ್ರಿಗಳೆ....ಆಗ ಅದರ ರುಚಿ!' ಗಣಪತಿ ರುಚಿರುಚಿಯಾಗಿ ಹೇಳಿದ.

'ಒಳ್ಳೇ ಕಟ್ಟುಕಥೆ ಇದ್ದಹಾಗಿದೆ!' ಶೇಷಗಿರಿರಾಯರ ವಾಕ್ಯಾರ್ಥ ವಾಯಿತು.

'ಅಷ್ಟೇ ಅಲ್ಲ. ಕಪ್ಪೀ ಹಾಗೆ ನೋಡುತ್ತಾ ಇದ್ದನಂತೆ. ರಾಜರು ಒಳಕ್ಕೆ ಹೋಗುತ್ತಾ ಅಲ್ಲಿ ಕೆಲಸ ಮಾಡುತ್ತಿದ್ದ ಇಂದಿರಮ್ಮನನ್ನು ನೋಡಿ ಒಂದು ಕ್ಷಣಮಟ್ಟಿಗೆ ನಿಂತರಂತೆ.' ಕತೆ ಮುಂದೆ ಸಾಗಿತು.

'ಇದು ಏಟಿನ ಮಹತ್ವ!' ಶ್ರೀನಿವಾಸಾಚಾರ್ಯರೆಂದರು.

'ರಾಜರ ದೃಷ್ಟಿ......ಯಾಕಾಗಬಾರದು!' ಶೇಷಗಿರಿರಾಯರು ನುಡಿದರು.

'ಹಾಗಲ್ಲ ಆಚಾರ್ರೆ....ಯಾರ ಯಾರ ಹಣೆಯಲ್ಲಿ ಏನೇನು ಬರೆದಿರು ವುದೋ! ಆ ಇಂದಿರಮ್ಮನ ವಿಚಾರ ನಿಮಗೆ ಗೊತ್ತೋ?' ಶಾಸ್ತ್ರಿಗಳು ಕೇಳಿದರು.

'ಇಲ್ಲ. ಆಕೆ ಏನು ಮಂತ್ರಿಯವರ ಮಗಳೋ?' ಶ್ರೀನಿವಾಸಾ ಚಾರ್ಯರು ಸಂಶಯ ತೋರಿಸಿದರು.

'ಅಲ್ಲವೆ ಶಾಸ್ತ್ರಿಗಳೆ!' ಗಣಪತಿ ನುಡಿದ.

'ಅಯ್ಯೋ ಬೆಪ್ಪೇ ಹೋಗು. ಹಿಂದೆ ಶಿವಸಿಂಹರ ಮನೆಗೆ ನಾನು ಹೋಗಿ ಬರ್ತಾ ಇದ್ದ ಕಾಲದಲ್ಲಿ, ಒಂದು ದಿನ ಪೇಟೆಯಲ್ಲಿ ಹಾಗೇ ಒಗ್ಗಿಯಲ್ಲಿ ಹೊರಟೆವು. ಮುಂದೆ ಇನ್ನೊಂದು ಗಾಡಿಯಲ್ಲಿ ಮಂತ್ರಿಯವರ ಕುಟುಂಬ, ಸುಶೀಲಮ್ಮ....ಪಾಪ, ಹೋಗಿ ಬಿಟ್ಟಳಲ್ಲ ಆ ಮಗು ಸೀತಮ್ಮ.... ಇನ್ನೂ ಬಹಳ ಚಿಕ್ಕ ಹುಡುಗಿ ಆಗ....ಇಬ್ಬರೂ ಹೋಗ್ತಾಯಿದ್ದರು. ಅಲ್ಲೊಂದು ಕಡೆ ನಾಲ್ಕಾರು ಜನ ಸೇರಿದ್ದರು. ಮಂತ್ರಿಯವರ ಗಾಡಿಯನ್ನು ನೋಡಿದ ಕೂಡಲೇ ಸ್ವಲ್ಪ ಸರಿದರು. ಅಲ್ಲಿ ಒಬ್ಬ ಗೋಸಾಯಿ ಬಿದ್ದಿದ್ದ. ಒಂದು ಹುಡುಗಿ ಪಕ್ಕದಲ್ಲಿ ಅಳುತ್ತಾ ನಿಂತಿತ್ತು. ಅವರೂ ಇವರೂ

ಮಾತಾಡಿಸಿದರೂ ಅದು ಮಾತಾಡಲಿಲ್ಲ. ಇದನ್ನು ನೋಡಿ ಸುಶೀಲಮ್ಮ ನವರೇ ಬಂಡಿಯಿಂದಿಳಿದು ಬಂದು ಮಾತನಾಡಿಸಿದರು. ಆ ಮಗು ತಲೆಯೆತ್ತಿ ನೋಡಿ ಮಾತಾಡಿತು. ಅಷ್ಟು ಹೊತ್ತಿಗೆ ನಾನೂ ಇಳಿದು ಅಲ್ಲಿಗೆ ಹೋದೆ. ಶಿವಸಿಂಹರು ಗಾಡಿಯಲ್ಲಿಯೇ ಕೂತಿದ್ದರು. ಆ ಮಗೂಗೆ ಏನೂ ತಿಳಿದ ಹಾಗೆ ತೋರಲಿಲ್ಲ. 'ನಮ್ಮಪ್ಪ, ಬಹಳ ಹೊತ್ತಾಯಿತು ಮಲಗಿ, ಏಳಲೇ ಇಲ್ಲ.' ಎಂತಾ ಮಗು. ಸುಶೀಲಮ್ಮನವರು 'ಮಗೂ ನಮ್ಮನೇಗೆ ಒರು ತ್ತೀಯಾ?' ಎಂದರೂ; ಮಾತಾಡಲಿಲ್ಲ. ಹತ್ತಿರ ನಿಂತಿದ್ದ ಸೀತೆ....ಏನು ಹುಡುಗಿಯಪ್ಪ ಅದು!....ರತ್ನ ಇದ್ದ ಹಾಗಿತ್ತು..ಹೋಗಿ ಆ ಮಗು ವಿನ ಕೈ ಹಿಡಿದುಕೊಂಡು ಎಳೆಯಿತು. ಪಕ್ಕದಲ್ಲಿ ನಮ್ಮ ಕಪ್ಪೀ ಇದ್ದ. ಅವನು 'ಅಮ್ಮಣ್ಣಿಯೋರೆ....ನಮ್ಮ ಶಾಸ್ತ್ರಿಗಳು ಒಂದಿದ್ದಾರೆ' ಎಂದ. ಸುಶೀಲಮ್ಮನವರು ನನ್ನ ಕಡೆ ತಿರುಗಿ 'ಶಾಸ್ತ್ರಿಗಳೇ....ಸ್ವಲ್ಪ ಇದೆಲ್ಲಾ ನೋಡಿಕೊಳ್ಳಿ' ಎಂದು ಹೆಣದ ಕಡೆ ತೋರಿಸಿ, ಆ ಹುಡುಗಿಯನ್ನು ಕರೆದು ಕೊಂಡು ಹೋದರು. ನಾನು 'ಆಗಲಿ' ಎಂದೆ; ಹೋಗಿ ಶಿವಸಿಂಹರಿಗೆ ಹೇಳಿಬಿಟ್ಟು ಅಲ್ಲೇ ನಿಂತು......ಕೆಲಸವೆಲ್ಲಾ ಮುಗಿಸಿದೆ ಎನ್ನಿ. ಅದೇ ಹುಡುಗೀನೇ ಈ ಇಂದಿರೆ. ಆ ದಿನವೇನಪ್ಪ ನಾನು ನೋಡಿದ್ದು, ಆ ಶಿವಸಿಂಹರ ಕಣ್ಣುಗಳಲ್ಲಿ ನೀರು. ಬಹುಶಃ ಮಗನ ವಿಚಾರ ಜ್ಞಾಪಕಕ್ಕೆ ಬಂತೋ ಏನೋ ಪಾಪ. ಆ ಹುಡುಗ ಗಟ್ಟಿಗನೇ ಸರಿ. ತಂದೆಗೆ ತಕ್ಕ ಮಗನೇ. ಆ ವಿಚಾರದಲ್ಲಿ ನನಗೂ ಶಿವಸಿಂಹರಿಗೂ ವ್ಯಾಜ್ಯವೇ. ಅವೇನು ಶನಿಕಾಟವೋ ಅವರಿಗೆ!' ಶಾಸ್ತ್ರಿಗಳು ಕತೆಮಾಡಿ ಹೇಳಿದರು.

'ಸರಿ; ಶಾಸ್ತ್ರಿಗಳೆ, ಹಾಗಾದರೆ ಅವರು ಹೋಗಿಬರೋದು ದೇಶಕ್ಕೆ ಉಪಕಾರವೇ ಎನ್ನುತೀರೋ?' ಗಣಪತಿ ಕೇಳಿದ.

'ಹೌದಪ್ಪ. ಮಂತ್ರಿಗಳು ಬಹಳ ಬುದ್ಧಿವಂತರು. ಇನ್ನೂ ಬುದ್ಧಿಶಾಲಿ ಗಳೇನರಿದ್ದಾರಾಗಲಿ, ದೇಶಕ್ಕೆ ಉಪಕಾರ ಮಾಡಬೇಕೆಂದು ಮನಸ್ಸಿನಲ್ಲಿಟ್ಟು ಕೊಂಡು ಕೆಲಸ ಮಾಡುವವರು ಅತಿ ವಿರಳ. ಅಷ್ಟಿಲ್ಲದೆ ದೊಡ್ಡ ಮಹಾ ರಾಜರು ಇವರನ್ನು ಆಪ್ತರನ್ನಾಗಿ ಮಾಡಿಕೊಂಡಿದ್ದರೆ!' ಶಾಸ್ತ್ರಿಗಳು ಉತ್ತರ ಕೊಟ್ಟರು.

'ಮನ್ನೆ ಏನೋ ಒಂದುಪನ್ಯಾಸವನ್ನು ಕೊಟ್ಟರಂತಲ್ಲ?' ಶೇಷಗಿರಿ ರಾಯರು ಕೇಳಿದರು.

'ನೀವು ಬಂದಿರಲಿಲ್ಲವೇನು! ಬರಬೇಕಾಗಿತ್ತಂದರೆ. ಅವರು ಹೇಳೋ ವಿಚಾರಗಳನ್ನು ಎಲ್ಲರೂ ಗ್ರಹಿಸುವುದು ಬಹಳ ಕಷ್ಟ. ಈ ವಿಚಾರ ತಗೊಳ್ಳಿ. . ನಮ್ಮ ಹುಡುಗರಿಗೆ ನಮ್ಮವರೇ ವಿದ್ಯೆಯನ್ನುಪದೇಶಿಸಬೇಕು. ಇದರ ಸ್ವಾರಸ್ಯವೆಷ್ಟಿದೆ!' ಶಾಸ್ತ್ರಿಗಳು ಉಪನ್ಯಾಸದ ಸೂತ್ರ ಹೇಳಿದರು.

'ನೀವೇನಾದರೂ ಎನ್ನಿ ಸ್ವಾಮಿ, ಪರಲೋಕಸಾಧನೆಗೆ ತಕ್ಕ ವಿದ್ಯೆಯೇ ವಿದ್ಯೆ. . . . ಮಿಕ್ಕಿದ್ದೇನೂ ಪ್ರಯೋಜನವಿಲ್ಲ.' ಶ್ರೀನಿವಾಸಾಚಾರ್ಯರು ನಡುವೆ ತಮ್ಮದೊಂದು ಮುದ್ರೆಯನ್ನೊತ್ತಿದರು.

'ಒಳ್ಳೇ ಪರಲೋಕಸಾಧನೆ! ರಾಮಾಯಣ ಓದುತ್ತಾ ಇದ್ದರೆ ತಿಂಡೀಗೆ ಮಾರ್ಗ ಹೇಗೆ ಆಚಾರಸ್ವಾಮಿ? ಮೊದಲು ಹೊಟ್ಟೇ ಹೊರ ಕೊಳ್ಳೋ ಹಾಗೆ ಮಾಡಬೇಕು. . . . . . ಅದೇ ವಿದ್ಯೆ.' ಶೇಷಗಿರಿರಾಯರು ವ್ಯವಹಾರದ ವೇದಾಂತವನ್ನು ತಿಳಿಸಿದರು.

'ನಾಯಿ ನರಿ ಹಾಗೆ ಹೊಟ್ಟೆ ಹೊರಕೋಬೇಕು! ಮೊಲಕ್ಕಿದ್ದಷ್ಟು ಧೈರ್ಯ! ಇವೆಲ್ಲಾ ಒರೋ ವಿದ್ಯೆಯೇ ವಿದ್ಯೆ! ಬದುಕಿದ್ದರೆ ಧೀರನಾಗಿ ಬದುಕಿರಬೇಕು, ಇಲ್ಲದಿದ್ದರೆ ಬದುಕಿ ಪ್ರಯೋಜನವೇನು!' ಗಣಪತಿ ಸಿಂಹನ ಹಾಗೆ ಗರ್ಜಿಸಿದ.

'ಸಧ್ಯಕ್ಕೆ ಈಗ ಇವೆಲ್ಲಾ ಪ್ರಯೋಜನವಿಲ್ಲ. ಮಂತ್ರಿಗಳು ಹೇಳಿದ ಹಾಗೆ ಈಗ ನಮಗೆ ಬೇಕಾಗಿರುವುದು ಸ್ವಾರ್ಥತ್ಯಾಗ. ತಮ್ಮ ದೇಶದ ಮೇಲ್ಮೆಗಾಗಿ ತಮ್ಮ ಪ್ರಾಣಗಳನ್ನು ತುಚ್ಛೀಕರಿಸುವಂತಹ ಮನುಷ್ಯರು ಬೇಕು. ದೇಶವಾತ್ಸಲ್ಯ ರಾಜನ ಮೇಲೆ ಪ್ರೀತಿ ಇವೆಲ್ಲವನ್ನೂ ಹುಟ್ಟಿಸು ವುದೇ ವಿದ್ಯೆಯ ಕರ್ತವ್ಯ!' ಶಾಸ್ತ್ರಿಗಳು ತಮ್ಮ ವ್ಯಾಖ್ಯೆಯನ್ನು ಕೊಟ್ಟರು.

'ಏನು ಶಾಸ್ತ್ರಿಗಳೆ, ರಾಜನ ಮೇಲೆ ಪ್ರೀತಿ, ದೇಶವಾತ್ಸಲ್ಯ ಎಂತಿ ದ್ದೀರಿ! ಇವೆರಡೂ ಒಂದನ್ನೊಂದು ಪ್ರತಿಭಟಿಸಿದರೆ. . . . . .' ಶೇಷಗಿರಿ ರಾಯರು ಕೇಳಿದರು.

'ಎಂದಿಗೂ ಪ್ರತಿಭಟಿಸಲಾರವು. ಆದರೆ ರಾಜನಿಗೆ ದೇಶವನ್ನು ಹಾಳು ಮಾಡಬೇಕೆಂದು ಬುದ್ಧಿ ಹುಟ್ಟಿದರೆ ಆಗ ಆಗಬಹುದು. . . . ಎಲ್ಲಾದರೂ

ಉಂಟೆ, ನಿನ್ನ ಮನೆಗೆ ನೀನೇ ಬೆಂಕಿ ಇಡಬೇಕು ಎಂತ, ಎಂದಾದರೂ ಮನಸ್ಸು ಬಂದೀತೆ! ದೇಶಕ್ಕೂ ದೇಶದ ಜನಗಳಿಗೂ ಮೇಲ್ಮೆಯನ್ನುಂಟು ಮಾಡುವುದು ರಾಜನ ಕರ್ತವ್ಯ. ರಾಜನಿಗೆ ಪ್ರಜೆಗಳೇ ದೈವ. ಹಾಗೆ ಪ್ರಜೆಗಳನ್ನು ನುಂಗಲು ಮೊದಲುಮಾಡಿದರೆ ಅದು ಹುಲಿ......ರಾಜನಲ್ಲ!' ಶಾಸ್ತ್ರಿಗಳು ಉತ್ತರ ಕೊಟ್ಟರು.

'ನಮಗೆಲ್ಲಾ ರಾಜನ ಮೇಲೆ ಪ್ರೀತಿ ಇಲ್ಲವೆ?' ಗಣಪತಿ ಕೇಳಿದ.

'ಕೇಳಿ. ಜಪಾನಿನಲ್ಲಿ ಒಂದು ಪಾಠಶಾಲೆಗೆ ಬೆಂಕಿ ಬಿತ್ತಂತೆ. ಹುಡುಗರೂ ಉಪಾಧ್ಯಾಯರೂ ಎಲ್ಲರೂ ಓಡಲು ಮೊದಲುಮಾಡಿದರಂತೆ. ಬೆಂಕಿಯನ್ನು ಆರಿಸುವ ಪ್ರಯತ್ನವನ್ನು ಮಾಡಿದರು ಎನ್ನಿ. ಆರಿಸಿದ ಮೇಲೆ ಒಳಗಡೆ ಒಬ್ಬ ಹುಡುಗ ಬಿದ್ದಿದ್ದ. ಒಳಕ್ಕೆ ನುಗ್ಗಿ ಅವನನ್ನು ಈಚೆಗೆ ಎಳೆದು ಹಾಕಿದರು. ಮೈಕೈ ಅರ್ಧ ಸುಟ್ಟಿತ್ತಂತೆ. ಹೊಟ್ಟೆ ರಕ್ತಮಯವಾಗಿತ್ತಂತೆ. ಇದಕ್ಕೆ ಕಾರಣವೇನೆಂದು ಹುಡುಕಲು, ಹೊಟ್ಟೆಯೊಳಗೆ ಏನೋ ಇದ್ದ ಹಾಗೆ ತೋರಿತಂತೆ. ಈಚೆಗೆ ತೆಗೆದರು. ಅದು ರಾಜನ ಪಟವಾಗಿತ್ತು. ಬೆಂಕಿ ಬಿದ್ದಾಗ ಎಲ್ಲಾ ಓಡಿದರಲ್ಲ; ಈ ಹುಡುಗ ರಾಜನ ಪಟ ಸುಟ್ಟು ಹೋಗುತ್ತಲ್ಲಾ ಎಂತ ಅದನ್ನು ಗೂಡಿನಿಂದ ಈಚೆ ತೆಗೆದು, ತನ್ನ ಹೊಟ್ಟೆಯನ್ನು ಸೀಳಿ, ಅದರೊಳಗೆ ತುರುಕಿಕೊಂಡು ಪ್ರಾಣ ಬಿಟ್ಟ.' ಶಾಸ್ತ್ರಿಗಳು ಒಂದು ಕತೆ ಹೇಳಿದರು.

'ಇಂತಹ ಧೀರರಿರುವುದರಿಂದಲೇ ಅದೊಂದು ಜನಾಂಗವಾಗಿರುವುದು. ನಮ್ಮಂತಹ ಕದೀಮರಿದ್ದಿದ್ದರೆ....ಅವರೂ ನಮ್ಮ ಹಾಗೇ ಇರುತ್ತಿದ್ದರು' ಗಣಪತಿ ತತ್ವದರ್ಶನವಾದ ಋಷಿಯಂತೆ ನುಡಿದ.

'ಈ ಹಾಳು ಮ್ಲೇಚ್ಛ ಭಾಷೆಯನ್ನು ಕಿತ್ತೊಗೆದರೆ ಎಲ್ಲಾ ಸರಿ ಹೋಗುತ್ತೆ. ಎಲ್ಲಿಯವರೆಗೂ ನಾವು ಅದನ್ನೋದುತ್ತಿರುತ್ತೇವೋ ಅಲ್ಲಿಯವರಿಗೂ ನಮ್ಮ ಗತಿ ಹೀಗಿರುವುದೇ.' ಶ್ರೀನಿವಾಸಾಚಾರ್ಯರು ಮಡಿಬಾಯಿಂದ ಹೇಳಿದರು.

ಇದರ ಮೇಲೆ ಪ್ರಸಂಗವು ಮೊದಲಾಗಿ, ಎಲ್ಲರೂ ತಮ್ಮ ತಮ್ಮ ಮನೆಗೆ ಹೋಗುವ ಹೊತ್ತಿಗೆ ಶ್ರೀನಿವಾಸಾಚಾರ್ಯರಿಗೂ ಶೇಷಗಿರಿರಾಯರಿಗೂ ಕೈಕೈ ಹತ್ತುವವರೆಗೂ ಹೋಯಿತು.

'ಇವತ್ತೇನು ನಿಮಗೆ ಒಳ್ಳೇ ವಿಚಾರ ಸಿಕ್ಕಿತೆ! ಮನೇಲಿ ಅವರೆಲ್ಲಾ ಅಡಿಗೆ ಮಾಡಿಕೊಂಡು ಕಾದಿದ್ದರೆ ಇಲ್ಲಿ ನೀವು ಕಾಗೆಗಳ ಹಾಗೆ ಜಗಳ ವಾಡುತ್ತಾ ಇದ್ದೀರಿ.' ಶಾಸ್ತ್ರಿಗಳು ಮಾತು ಮುಗಿಸಬೇಕೆಂದು ನುಡಿದರು.

'ಅಲ್ಲ ಶಾಸ್ತ್ರಿಗಳೆ..ನಾನು ಹೇಳೋದರಲ್ಲಿ ಏನಾದರೂ ತಪ್ಪಿದ್ದರೆ..' ಶ್ರೀನಿವಾಸಾಚಾರ್ಯರು ಮತ್ತೂ ಪ್ರಾರಂಭಿಸಿದರು.

'ಸರಿಯಪ್ಪ....ನಿಂದೇ ಸರಿ. ನಾನೊಪ್ಪಿಕೋತೇನೆ. ಎಲ್ಲಿ ಸ್ವಲ್ಪ ನಿಸ್ಯ ನಶ್ಯದ ಡಬ್ಬಿ. ಹೀಗೆ ಬಿಸಾಡಿ.' ಶೇಷಗಿರಿರಾಯರೇ ಒಪ್ಪಂದ ಮಾಡಿ ಕೊಂಡರು.

---

೫

ಮಂತ್ರಿ ಬಾಜೀರಾಯನ ಮನೆಯ ಮುಂದಿನ ಹೂತೋಟದಲ್ಲಿ ಗಗರ್ಾಲಾಲನೂ ಬಿಹಾರಿಯೂ ಕುಳಿತಿದ್ದಾರೆ. ಮಂತ್ರಿಯು ಊರನ್ನು ಬಿಟ್ಟಾಗಿನಿಂದ ಮನೆಯ ಆಡಳಿತವೆಲ್ಲವೂ ಬಿಹಾರಿಯ ಕೈಸೇರಿದೆ. ಬಿಹಾರಿಯು ಗಗರ್ಾಲಾಲನ ಹೆಂಡತಿ. ಇವರೊಡನೆ ಇವರ ಸ್ನೇಹಿತನಾದ ರಾಮವರ್ಮನೂ ಸಹ ಕುಳಿತುಕೊಂಡಿದ್ದಾನೆ. ಬಿಹಾರಿಗೆ ಇಂದಿರೆಯನ್ನು ತಮ್ಮೊಡನೆ ಕೂಡಿಸಿಕೊಳ್ಳಬೇಕೆಂದಿಷ್ಟ. ಆದರೆ ಬಿಹಾರಿಯು ಕರೆದೊಡನೆಯೇ ಇಂದಿರೆಯು ಮಾತನಾಡದೆ ಮೆಲ್ಲಗೆ ಮನೆಯೊಳಕ್ಕೆ ಹೊರಟುಹೋದಳು.

ಗಗರ್ಾಲಾಲನು ಕೇಳಿದನು: 'ಎಷ್ಟೇ ಆಗಲಿ, ಹೆಣ್ಣುಮಕ್ಕಳಿಗೆ ಲಜ್ಜೆ ಹೆಚ್ಚು. ನಮ್ಮೊಡನೆ ಕುಳಿತುಕೊಳ್ಳಲಾಗದಿದ್ದರೆ, ತನ್ನ ಸಖಿಯೊಡನೆ ಕೂಡ ಲಾಗದೆ?'

ಬಿಹಾರಿ ಉತ್ತರಕೊಟ್ಟಳು: 'ಹೀಗೆಯೇ, ಇನ್ನೆರಡು ದಿನಗಳಲ್ಲಿ ಎಲ್ಲಾ ಸರಿಹೋಗುತ್ತೆ.'

ಇದಕ್ಕೆ ಕಾರಣ ಬಿಹಾರಿಯ ಉದ್ದೇಶ. ರಾಮವರ್ಮನಿಗೂ ಇಂದಿರೆಗೂ ಗಂಟುಹಾಕಿ ತನ್ನ ಕೈಲಾದಷ್ಟು ಹಣವನ್ನು ರಾಮವರ್ಮನಿಂದ ಸೆಳೆಯಲು ಉದ್ದೇಶಪಟ್ಟಿದ್ದಳು.

ರಾಮವರ್ಮನು ಹಣವಂತ. ಅವನ ತಂದೆ ದೊಡ್ಡ ವ್ಯಾಪಾರಿಯಾಗಿದ್ದ. ಬೇಕಾದ ಹಾಗೆ ಸಂಪಾದಿಸಿ ಕೂಡಿಟ್ಟು, ತನ್ನ ಒಬ್ಬ ಮಗನಿಗೇ ಎಲ್ಲ

ವನ್ನೂ ಬಿಟ್ಟು ಅವನ ತಂದೆಯು ಕಾಲವಾದನು. ಮಗನಾದರೋ ಮಾಡುವುದಕ್ಕೇನೂ ಕೆಲಸವಿಲ್ಲದೆ, ಊರಿನಲ್ಲಿರುವ ದೊಡ್ಡಮನುಷ್ಯರ ಮನೆಗಳಿಗೆ ಹೋಗಿಬರುತ್ತಾ, ಅವರೊಡನೆ ಮಾತನಾಡುವುದರಲ್ಲಿ ತನ್ನ ಕಾಲವನ್ನು ಕಳೆಯುತ್ತಿದ್ದನು. ಕೆಲಸ ಮಾಡಬೇಕೆಂಬುದೇ ಅವನಿಗೆ ತೋರಲಿಲ್ಲ. ಹೊಟ್ಟೆ ಹಸಿದಾಗ, ಬೇಕಾದುದನ್ನು ತೆಗೆದುಕೊಂಡು ತಿನ್ನುವ ಶಕ್ತಿಯಿದ್ದುದಾದುದರಿಂದ ಅವನಿಗೆ ಕೆಲಸ ಮಾಡಬೇಕೆಂಬುದೇ ಮನಸ್ಸಿಗೆ ಹಿಡಿಯಲಿಲ್ಲ. ಮಿಕ್ಕವರು ಅವರವರ ಕಷ್ಟಗಳನ್ನು ಹೇಳಿಕೊಂಡಾಗಲೆಲ್ಲಾ ತನಗೆ ಕೇಳುವುದೇ ಕಷ್ಟವೆಂದು ತೋರಿ, ಬೇರೆ ಬೇರೆ ವಿಚಾರವಾಗಿ ಮಾತುಗಳನ್ನೆತ್ತುತ್ತಿದ್ದುದಲ್ಲದೆ ಯುರೋಪು, ಅಮೇರಿಕ ಈ ದೇಶಗಳಲ್ಲಿ ನಡೆಯುತ್ತಲಿರುವ ಅಪರೂಪಗಳನ್ನು ವಿವರಿಸಲು ಮೊದಲು ಮಾಡುತ್ತಿದ್ದನು. ಹೀಗಿರಲು ಬಿಹಾರಿಯ ಬುದ್ಧಿವಂತಿಗೆಯಿಂದ ಇವನ ಮನಸ್ಸು ಇಂದಿರೆಯ ಕಡೆಗೆ ತಿರುಗಿತು.

'ನಮ್ಮ ಹೆಂಗಸರಿಗೆ ಈ ದುರಭಿಪ್ರಾಯವನ್ನು ಹೋಗಲಾಡಿಸಬೇಕು. ಗಂಡಸರೊಡನೆ ಮಾತನಾಡಿದರೆ ಅವರಿಗೆ ಪಾಪವೇನು ಬರುತ್ತೋ ಕಾಣೆ. ಮನೆಯಲ್ಲಿ ಅಣ್ಣತಮ್ಮಂದಿರಿಲ್ಲವೆ? ಅವರೊಡನೆ ಮಾತನಾಡುವುದಿಲ್ಲವೆ?' ಬಿಹಾರಿ ಮಾತೆತ್ತಿದಳು.

'ಈಗಾಗಲೆ ನಮ್ಮವರನ್ನು ಅಷ್ಟುಮಟ್ಟಿಗೆ ತಯಾರುಮಾಡಲು ಅಸಾಧ್ಯ. ಮೊದಲಿನಿಂದಲೂ ನಾವು ಅವರನ್ನು ಮೂಲೆಯಲ್ಲಿ ಕೂಡಿಸಿ, ಮನುಷ್ಯನ ಮುಖವನ್ನು ಕಂಡರೆ ಓಡುವಂತೆ ಅವರನ್ನು ಮಾಡಿದ್ದೇವೆ. ಅದು ನಮ್ಮ ತಪ್ಪೇ.' ರಾಮವರ್ಮ ಮರೆಮಾಚದೇ ಹೇಳಿದ.

'ಇಷ್ಟು ಜನರ ಪೈಕಿ ನೀವೊಬ್ಬರು ಇದನ್ನು ಹೇಳಿದಿರಿ. ಮಿಕ್ಕವರನ್ನು ಕೇಳಿದರೆ ಆಗ ಅದರ ಸ್ವಾರಸ್ಯ ತಿಳಿಯುವುದು. ನಮ್ಮಲ್ಲಿ ಗಂಡ-ಹೆಂಡಿರೆಂದರೆ, ಒಂದು ಕುದುರೆ ಮತ್ತೊಂದು ಎತ್ತು. ಇವೆರಡೂ ಸೇರಿ ಬಂಡಿಯನ್ನೆಳೆಯಲು ಸಾಧ್ಯವೆ? ಎಲ್ಲಾ ಹುಚ್ಚು!'

'ನೀವು ಹೇಳುತ್ತಿರುವುದೇನೋ ಸರಿ. ನಮ್ಮವರು ಹಿಂದಿನ ನಡತೆಗಳನ್ನು ಬಿಟ್ಟಿದ್ದಾರೆ; ಈಗಿನ ನಡೆನುಡಿಗಳನ್ನು ಇನ್ನೂ ಸಂಪೂರ್ಣವಾಗಿ ಅನುಸರಿಸಿಲ್ಲ. ಅರ್ಧ ಹಾಗೆ, ಮಿಕ್ಕದ್ದು ಹೀಗೆ. ಎರಡೂ ಕೆಟ್ಟು ಹಾಳಾಗಿವೆ. ಗರ್ಗಾಲಾಲರೆ, ಏನೆನ್ನುವಿರಿ?'

' ಪಾಶ್ಚಾತ್ಯರ ನಡೆನುಡಿಗಳನ್ನು ಆದರ್ಶವಾಗಿಟ್ಟುಕೊಳ್ಳಬೇಕೆಂಬುದೇ ನನ್ನ ಮತ. ಗಂಡಸರನ್ನು ನೋಡಿದರೆ ಹೆಂಗಸರು ಹೆಂಗಸರನ್ನು ನೋಡಿದರೆ ಗಂಡಸರು ಚಮುಕಿತರಾಗಲು ನಮ್ಮ ನಡೆನುಡಿಗಳೇ ಕಾರಣ. ಅವರು ಒಬ್ಬರೊಡನೊಬ್ಬರು ಸರಾಗವಾಗಿ ಓಡಾಡಿದರೆ ಇಂತಹ ಅಸಂಬಂಧ ಪ್ರಲಾಪಗಳು ಹುಟ್ಟುವುದಿಲ್ಲ. ನಮ್ಮವರಿಗೆ ಹೆಂಗಸೆಂದರೆ ಏನೆಂದು ತಿಳಿಯದೇ ಇರುವುದರಿಂದ ಹೀಗೆಲ್ಲಾ ಹುಚ್ಚು ಹುಚ್ಚಾಗಲು ಕಾರಣ.' ಗರ್ಗಾಲಾಲರು ಉತ್ತರಕೊಟ್ಟರು.

' ಕಾರಣವೇನಾದರೂ ಇರಲಿ, ಹುಚ್ಚು ಹಿಡಿಯುವುದೇನೋ ನಿಜ. ' ಬಿಹಾರಿ ನುಡಿದಳು.

' ಹಾಗಾದರೆ ಹುಚ್ಚು ಬರಬಾರದೆಂತಿರೇನು ? ' ರಾಮವರ್ಮ ಕೇಳಿದ.

' ಹುಚ್ಚೇನೋ ಬರಬೇಕು; ಆದರೆ ಹುಚ್ಚುಹುಚ್ಚಾಗಬಾರದು. ಹಿಂದುಮುಂದಿನ ಸಂದರ್ಭಗಳನ್ನು ಮರಿಯದೆ ಆಲೋಚಿಸಿ, ಕೆಲಸ ಮಾಡುವಂತಹ ಹುಚ್ಚಿಗೆ ಹುಚ್ಚೆನ್ನುವುದಿಲ್ಲ; ಪ್ರೇಮವೆನ್ನುತ್ತೇವೆ ಈ ಪ್ರೇಮದಲ್ಲಿಯೂ ಸಹ ಎಷ್ಟೋ ವಿಧಗಳಿವೆ. ಅವುಗಳನ್ನೆಲ್ಲಾ ವಿಂಗಡಿಸಿ ವಿಶದಪಡಿಸುತ್ತಾ ಹೊದರೆ ಕೊನೆಮೊದಲಿಲ್ಲ. ಕೆಲಸವನ್ನು ನಾವು ತಿಳಿದುಕೊಳ್ಳುವುದರಲ್ಲಿ ಉಪಯೋಗವಿಲ್ಲ....ಹಾನಿಯೇ ಉಂಟಾಗಬಹುದು. ' ಗರ್ಗಾಲಾಲ ಉತ್ತರಕೊಟ್ಟ.

' ಪ್ರೇಮದಿಂದ ಹಾನಿಯೆಂದಿಗಾದರೂ ಉಂಟಾದೀತೆ ? ಹಾಲು ವಿಷವಾಗಿ ಪರಿಣಮಿಸುವುದೆ ?.... ಇದು ಹೇಗಾದರೂ ಇರಲಿ.. ಇಂದಿರೆಯ ತಂದೆತಾಯಿಗಳ ವಿಚಾರವನ್ನು ತಿಳಿಯಲು ನನಗೆ ಸ್ವಲ್ಪ ಕುತೂಹಲ ಉಂಟು ' ರಾಮವರ್ಮ ಕೇಳಿದ.

' ಅದು ನಿಮ್ಮವರೆಗೂ ಬರುವಂತಹ ಅಪೂರ್ವ ವಸ್ತುವಲ್ಲ. ' ಗರ್ಗಾಲಾಲ ಅಷ್ಟಕ್ಕೆ ಮುಗಿಸಬೇಕೆಂದ.

' ತಿಳಿಯುವುದರಲ್ಲಿ ಬಾಧೆಯೇನೋ ನಾನು ಬೇರೆ ಕಾಣೆ. ಆದರೆ ಅದು ನನಗೆ ತಿಳಿಯದು....ನಾಳೆ ಪುನಃ ಬರುತ್ತೀರಷ್ಟೆ ? ' ಬಿಹಾರಿ ಜಾಲ ಬೀಸಿದಳು.

' ಆಗಬಹುದು. ಖಂಡಿತವಾಗಿ ಬರುತ್ತೇನೆ. ಲಾಲರೇ, ಅಪ್ಪಣೆಕೊಡಿ.' ರಾಮವರ್ಮ ಏಳುತ್ತ ಹೇಳಿದ.

ರಾಮವರ್ಮನನ್ನು ಬಾಗಿಲವರೆಗೂ ಸಾಗಿಸಿ ಬಂದು ಗರ್ಗಲಾಲನು ಬಿಹಾರಿಯೊಡನೆ ' ಇದು ನನಗೆ ಸರಿಬೀಳಲಿಲ್ಲ. ರಾಮವರ್ಮನನ್ನು ಇಂದಿರೆಯ ಕಡೆಗೆ ತಿರುಗಿಸಿದ್ದು ಒಳ್ಳೆಯದಲ್ಲ ' ಎಂದನು.

' ಪ್ರಿಯನೆ, ಒಳ್ಳೆಯದು ಕೆಟ್ಟದ್ದು ಎಲ್ಲಾ ಅವನಿಗಾಗುವುದೇ ವಿನಹ ನಮಗಲ್ಲ. ಮುಖ್ಯವಾಗಿ ಅವನು ಹಣವಂತ; ಅವನಂತೆ ಮಾತನಾಡಿದರೆ ನಮಗೂ ಅನುಕೂಲವಲ್ಲವೆ ! ' ಎಂದು ಬಿಹಾರಿ ನಕ್ಕಳು.

—

೬

ಮಹಾರಾಜ ಯಶವಂತನಿಗಿನ್ನೂ ಬಹಳ ಚಿಕ್ಕ ವಯಸ್ಸು. ಬಹಳ ಚಿಕ್ಕಂದಿನಲ್ಲಿಯೇ ಯಶವಂತನ ತಂದೆಯಾದ ಶೂರಸೇನ ಮಹಾರಾಜನು ಯುದ್ಧದಲ್ಲಿ ಮಡಿದನು. ತರುವಾಯ ರಾಜ್ಯವು ಯಶವಂತನ ಸೋದರ ಮಾವನಾದ ವೀರಸೇನನ ಕೈಸೇರಿತು. ಮಂತ್ರಿಯಾದ ಬಾಜೀರಾಯನು ಬುದ್ಧಿವಂತನೂ, ಶೂರಸೇನನ ಕೇವಲ ಆಪ್ತನೂ ಆಗಿದ್ದುದರಿಂದ ರಾಜ್ಯದ ಆಡಳಿತವು ವೀರಸೇನನಿಗೆ ಇಷ್ಟು ಶ್ರಮವನ್ನುಂಟುಮಾಡುವಂತಹದಾಗಿರಲಿಲ್ಲ. ವೀರಸೇನನಿಗಾದರೋ ರಾಜ್ಯದ ಮೇಲಾಗಲಿ ಪ್ರಜೆಗಳ ಮೇಲಾಗಲಿ ಮಮತೆಯಿರಲಿಲ್ಲ. ತನ್ನ ಮನಸ್ಸಿಗೆ ಬಂದುದನ್ನು ಮಾಡುತ್ತ, ತನಗೆ ಬೇಕಾದವರಿಗೆ, ತನಗೆ ಅನುಕೂಲವಾಗಿರುವವರಿಗೆ ಬೇಕಾದ ಹಾಗೆ ಹಣವನ್ನೂ ಪದವಿಗಳನ್ನೂ ಕೊಡುತ್ತಾ, ಪ್ರಜೆಗಳ ಅನಾನುಕೂಲಗಳನ್ನು ಸ್ವಲ್ಪವೂ ಗಮನಿಸದೆ ತನ್ನ ಲೋಲಾಪ್ತಿಗಳಲ್ಲಿಯೇ ಲೀನವಾಗಿದ್ದನು. ಯಾವ ಕೆಲಸದ ಪರಿಣಾಮವು ಹೇಗಾದರೂ ಇರಲಿ, ತನಗೆ ಹೆಚ್ಚು ಶ್ರಮವಿಲ್ಲದಿದ್ದರೆ ಸರಿ; ಇದೇ ಇವನ ಮತ.

ವೀರಸೇನನು ತನ್ನ ಅತ್ಯಂತ ಸುಂದರವಾದೊಂದು ಚಿಕ್ಕ ಮನೆಯಲ್ಲಿ ಸುಖಾಸನದ ಮೇಲೆ ಕುಳಿತಿದ್ದಾನೆ. ಕೆಳಗಡೆ ರತ್ನಗಂಬಳಿಯ ಮೇಲೆ

ಗಗರ್ಲಾಲನು ತನ್ನ ಕೈಗಳೆರಡನ್ನು ಜೋಡಿಸಿಕೊಂಡು ಬಹಳ ನಮ್ರತೆಯಿಂದ ಮಾತನಾಡುತ್ತಿದ್ದಾನೆ.

' ಮಹಾಸ್ವಾಮಿ, ನನ್ನ ಕೈಲಾದುದನ್ನು ಮಾಡಿದೆನು. ತಾವು ಕೊಟ್ಟ ಮಾತನ್ನು ಮಟ್ಟಿಗೆ ನಡಿಸಿಕೊಡಲಿಲ್ಲ. '

' ಅದಕ್ಕಿಂತಲೂ ಅತಿಶಯವಾದುದನ್ನು ಮಾಡಲೋಸುಗ ಅದನ್ನು ಬಿಡಬೇಕಾಯಿತು. ನಮ್ಮ ಸೇನಾಧಿಪತಿ ಮುದುಕನಾಗಿರುವನು..... ಆ ಕೆಲಸಕ್ಕೇನನ್ನುವಿ ? '

' ಮಹಾಸ್ವಾಮಿ..ಯಾವ ಕೆಲಸವೇ ಆಗಲಿ..ತಮ್ಮ ಸೇವೆಯಲ್ಲಿ ಇರಲು ನನ್ನ ಅದೃಷ್ಟವೇ ಸರಿ. '

' ಸ್ವಲ್ಪ ಕಾಲ ಸುಮ್ಮನಿರಬೇಕು. ನಿನಗೀಗ ಯಾವ ತೊಂದರೆಯೂ ಇಲ್ಲವಲ್ಲ? ಖರ್ಚಿಗೆ ಬೇಕಾದಷ್ಟನ್ನೊದಗಿಸಿಕೊಡುವೆನು. ಆದರೆ ಆ ಉಂಗುರ ಹೋದದ್ದು ನನಗೆ ಬಹಳವಾಗಿ ಬಾಧಿಸುತ್ತಿದೆ. ಅದನ್ನೇನಾದರೂ ಮಾಡಿ ಪತ್ತೆ ಮಾಡಬೇಕು. '

' ಆ ಕೆಲಸ ನನಗಿರಲಿ ಬಿಡಿ ಮಹಾಸ್ವಾಮಿ. ಈಗ ನನಗೊಬ್ಬ ರತ್ನದಂತಹ ಸೇವಕನು ಸಿಕ್ಕಿರುವನು. ಕದರಿಗೆ ಇಮ್ಮಡಿ ಶಕ್ತಿವಂತ. '

' ಏನಯ್ಯಾ, ಇಂತಹ ವಿಚಾರವನ್ನು ಸೇವಕನೊಡನೆ ಹೇಳುತ್ತೀಯಲ್ಲಾ ! '

' ಇಲ್ಲ ಮಹಾಸ್ವಾಮಿ. ಆ ವಿಚಾರ ಅವನಿಗೆ ತಿಳಿಯದಂತೆ ನಾನು ಕೆಲಸಮಾಡಿಸುತ್ತೇನೆ. '

' ನೀನೇನೊ ಬುದ್ಧಿವಂತನೇ ಹೌದು. ಆದಾಗ್ಯೂ ಬಹಳ ಎಚ್ಚರಿಕೆಯಿಂದಿರಬೇಕು. '

' ತಾವು ಹೇಳಿದ ವಿಚಾರದಲ್ಲಿಯೇ ನಿರತನಾಗಿದ್ದೇನೆ. ಸುಲಭಸಾಧ್ಯವಲ್ಲ. ಸದ್ಯದಲ್ಲಿ ಎರಡು ಸಾವಿರವಾದರೂ ಇದ್ದಲ್ಲಿ....ಕೆಲಸ ಮುಂದೆ ಸಾಗುತ್ತೆ, ಮಹಾಸ್ವಾಮಿ. '

' ಆಗಲಿ, ಕಳಿಸಿಕೊಡುತ್ತೇನೆ. '

—

*

೭

ಇತ್ತಲಾ ರಾಜಾರಾಮನು ಕದಂಬನೆಂಬ ಹೆಸರಿನಿಂದ ಗರ್ಗಲಾಲನ ಸೇವಕನಾದಂದಿನಿಂದ, ಅಲ್ಲಿ ನಡೆಯುವ ವಿದ್ಯಮಾನಗಳನ್ನೆಲ್ಲ ಗ್ರಹಿಸುತ್ತಾ ಕೆಲವು ದಿನಗಳಲ್ಲಿಯೇ ಬಿಹಾರಿಗೆ ಆಪ್ತನಾದನು. ಒಂದು ದಿನ ಇವನು ಬಾಗಿಲಲ್ಲಿ ಕುಳಿತು ಮೆಲ್ಲನೆ ತನ್ನಲ್ಲಿ ತಾನೇ 'ರಾಮ ರಾಮ ಜಯ ರಾಜಾರಾಂ' ಎನ್ನುತ್ತಿರಲು, ಒಳಗಿನಿಂದ ಬಿಹಾರಿಯು ಬಂದು 'ಕದಾ, ಏನು ಪಿಟ ಪಿಟ, ಎನ್ನುತ್ತಿರುವೆ?' ಎಂದಳು.

'ಏನೂ ಇಲ್ಲ ತಾಯಿ, ಸುಮ್ಮನೆ....'

'ತಾಯಿ, ತಾಯಿಯೆಂದರೆ ನನಗೆ ಬಹಳ ಕೋಪ ಬರುತ್ತೆ. ತಾಯಿ-ಗೀಯಿ ಎನ್ನಬೇಡ......'

'ಇದೇನು ತಾಯಿ ಹೀಗೆನ್ನುತ್ತೀರಿ?'

'ಮತ್ತೆ ತಾಯಿ! ಅದೆಲ್ಲಾ ಹಳೇ ಪುರಾಣದ ಕಾಲದ ಮಾತು. ಅದನ್ನು ಬಿಡು.'

'ಮತ್ತೇನೆನ್ನಬೇಕು ತಾಯಿ?'

'ಏನೂ ಎನ್ನಬೇಡ....ಕೇಳಿದ್ದಕ್ಕೆ ಜವಾಬು ಕೊಟ್ಟರೆ ಸರಿ, ಮೇಡಂ ಎಂದರೆ ಸಾಕು. ಇವತ್ತು ಅವರು ನಿನಗೇನು ಕೆಲಸ ಹೇಳಿದ್ದಾರೆ?'

'ಏನೂ ಇಲ್ಲ ತಾ....ಡಂ ಡಂ!'

ಬಿಹಾರಿಯು ನಗುತ್ತಾ 'ಅಭ್ಯಾಸ ಮಾಡಿಕೋ ಡಂಡಂ ಅಲ್ಲ ಮೇ..ಡಂ. ಯಜಮಾನರನ್ನು ಸಾರ್..ಎನ್ನುವುದು, ನನ್ನನ್ನು ಮೇಡಂ ಎನ್ನುವುದು' ಎಂದಳು.

'ನಿಮ್ಮನ್ನೇನು ಬೇಕಾದರೂ ಅಂತೇನಾಗಲಿ, ಯಜಮಾನರನ್ನು 'ಸಾರ್' ಎನ್ನಲಾರೆ.'

'ಎನ್ನಬಾರದೇಕೆ? ಅದರಲ್ಲಿ ತಪ್ಪೇನು?'

'ಅದೆಲ್ಲ ನನಗೆ ತಿಳಿಯದು. ಎನ್ನಲು ನನಗಿಷ್ಟವಿಲ್ಲ. ನನಗೂ ಅವರಿಗೂ ಸ್ವಲ್ಪ ಹಾಗೆ ಹಾಗೇ. ಅವರ ಮುಖ ನೋಡಿದೊಡನೆಯೇ ನನಗೆ ಮಾತು ನಿಂತುಹೋಗುತ್ತೆ. ಅವರು ನಿಮ್ಮ ಪಾಲೆಯಲ್ಲಿರುವ ವಜ್ರದಂತಹ ಮನುಷ್ಯರು.'

' ಎಂದರೇನು . . ಇದು ವಜ್ರವಲ್ಲವೇನು ? '

' ಕುಚೇಷ್ಟೆಗೆ ಹೇಳಲಿಲ್ಲ ಮೇ–ಡಂ. ಆದು ನಿಜವಾಗಿಯೂ ವಜ್ರ ವಿದ್ದಂತೆ ಕಾಣುವುದಿಲ್ಲ. ನಾನೇನೂ ಅಷ್ಟು ವಜ್ರದಲ್ಲಿ ವ್ಯಾಪಾರ ಮಾಡಿಲ್ಲ ಆದಾಗ್ಯೂ. . . .'

ಬಿಹಾರಿಯು ತನ್ನ ಕಿವಿಯಿಂದ ವಾಲೆಯನ್ನು ಈಚೆಗೆ ತೆಗೆದು ಕದಂಬನ ಕೈಗೆ ಕೊಟ್ಟಳು. ' ಇಲ್ಲ ಕದಾ, ಸ್ವಲ್ಪ ಸರಿಯಾಗಿ ನೋಡಿ ಹೇಳು....ಇದು ವರ್ಜವಲ್ಲದಿದ್ದರೆ. . ಸರಿ, ಮಾತನಾಡಿ ಪ್ರಯೋಜನವಿಲ್ಲ. '

' ಅಲ್ಲ ತಾಯಿ. '

' ಸರಿ. ಇದನ್ನು ಆಪರ ಮುಂದೆ ಹೇಳಬೇಡ. ನನ್ನನ್ನು ಮೇಡಂ ಎಂತಲೂ ಕರೆಯಬೇಡ; ಇಲ್ಲಿಂದಾಚೆಗೆ ನಾನು ನಿನ್ನ ಯಜಮಾನಿಯಲ್ಲ. '

' ನನ್ನ ಮಾತು ಸುಳ್ಳಿರಬಹುದು. ಮತ್ಯಾರನ್ನಾದರೂ ಕೇಳಬಾರದೆ ತಾಯಿ. '

' ಅವಶ್ಯಕತೆಯಿಲ್ಲ. '

' ಇದರಿಂದ ಯಾವ ತೊಂದರೆ ಬಂದೊದಗುತ್ತೊ, ನಾನು ಬೇರೆ ಕಾಣೆ. ನಾನು ಇವತ್ತು ಮಾತನಾಡಿದ್ದೇ ತಪ್ಪು, '

' ಹಾಗಲ್ಲ ಕದಾ, ಇಂದಿನಿಂದಾಚೆಗೆ ನೀನು ನನ್ನ ಸೇವಕನಲ್ಲ, ನನ್ನ ಸಹೋದರ. '

—

೮

ರಾಮವರ್ಮನಿಗೆ ದಿನೇ ದಿನೇ ಇಂದಿರೆಯ ಮೇಲೆ ಮಮತೆಯು ಹೆಚ್ಚುತ್ತಾ, ಇಂದಿರೆಯಿಲ್ಲದಿದ್ದರೆ ತನ್ನ ಜೀವನವೇ ಟೊಳ್ಳೆಂದು ತೋರಿ ಬಂದಿತು. ಇವಳನ್ನು ನೋಡುವದಕ್ಕಾಗಿ, ರಾಮವರ್ಮ ಬಿಹಾರಿಯ ಮನೆಗೆ ಬರುತ್ತಿದ್ದನು. ಎಷ್ಟು ಸಲ ಬಂದು ನೋಡಿದರೂ, ಇಂದಿರೆಯು ಮಾತ್ರ ಇವನ ಕಡೆ ಬಂದಾವರ್ತಿ ಕೂಡ ನೋಡಲಿಲ್ಲ. ರಾಮವರ್ಮನು ಪದೇ ಪದೇ ಇವಳ ವಿಚಾರವಾಗಿ ಬಿಹಾರಿಯನ್ನು ಕೇಳುತ್ತಿದ್ದನು. ಬಿಹಾರಿ

ಯಾದರೋ ಏನನ್ನೂ ಹೇಳಲಾರದೆ ' ನೀವು ಹೇಳಿದಂತೆಯೇ ನಮ್ಮವರನ್ನು ಸರಿಮಾಡಲು ಕಷ್ಟ. ಇಂದಿರೆಗೆ ಗಂಡನೊಡನೆ ಮಾತನಾಡುವದೆಂದರೆ ಪ್ರಾಣ ಹೋದುದಕ್ಕಿಂತ ಹೆಚ್ಚು. ಗಂಡನಿರುವ ಕಡೆ ಕೂಡ ಸುಳಿಯುವ ದಿಲ್ಲ. ಹೀಗೆ ಇನ್ನೂ ಕೆಲವು ದಿನಗಳಾಗಬೇಕು. ' ಎಂದು ಉತ್ತರವನ್ನು ಕೊಡುತ್ತಿದ್ದಳು.

ಮಧ್ಯಾಹ್ನ ಸುಮಾರು ಮೂರು ಗಂಟೆಯ ಸಮಯ. ಚಿಕ್ಕ ಮನೆ ಯಲ್ಲಿ ಬಿಹಾರಿಯೊಬ್ಬಳೇ ಕುಳಿತು ತನಗೂ ಕದಂಬನಿಗೂ ನಡೆದ ವಿಚಾರ ವನ್ನು ಮನಸ್ಸಿನಲ್ಲಿ ಯೋಚಿಸುತ್ತಾ, ತನ್ನ ಹಿಂದಿನ ಜೀವನವನ್ನು ನೆನೆಸಿ ಕೊಳ್ಳುತ್ತಾ ಖಿನ್ನಳಾಗಿ ಕುಳಿತಿದ್ದಳು. ಇಂತಹ ಸಮಯದಲ್ಲಿ ಇಂದಿರೆಯು ಒಂದು ಕಾಗದವನ್ನು ಕೈಲಿ ಹಿಡಿದುಕೊಂಡು ಒಳಹೊಕ್ಕಳು.

' ಅಮ್ಮಾ, ಮಂತ್ರಿಯವರು ಇನ್ನು ಒಂದು ತಿಂಗಳೊಳಗಾಗಿ ಇಲ್ಲಿಗೆ ಬರುವರಂತೆ. ನಿಮಗೆ ತಿಳಿಸಲು ಕಾಗದ ಬಂದಿದೆ. '

' ಕುಳಿತುಕೋ ಇಂದಿರೆ. ಎಲ್ಲರೂ ಸೌಖ್ಯವಾಗಿದ್ದಾರೆಯೇ ? ಯಾರು ಕಾಗದವನ್ನು ಬರೆದಿರುವರು ? '

' ಸುಶೀಲಮ್ಮನವರು......ಬರುವುದಕ್ಕೆ ಮುಂಚಿತವಾಗಿ ಪುನಃ ಬರುತ್ತಾರಂತೆ..ಅಯ್ಯೋ ಪಾಪ ! ಎಲ್ಲಿಗೆ ಹೋದರೂ ಅಕ್ಕ ಸೀತಮ್ಮನನ್ನು ಮರೆಯಲು ಸಾಧ್ಯವಿಲ್ಲವಂತೆ. '

' ಹೌದಮ್ಮ. ಹೊಟ್ಟೆಯಲ್ಲಿ ಹುಟ್ಟಿದ ಮಗುವನ್ನು ಮರೆಯಲು ಸಾಧ್ಯವೇ ! ಇಂದಿರಮ್ಮ, ನಿನ್ನಲ್ಲಿ ಒಂದು ವಿಚಾರ ಮಾತನಾಡಬೇಕಾಗಿದೆ. ನೀನು ಮನಸ್ಸಿಗೇನೂ ತಿಳಿದುಕೊಳ್ಳುವದಿಲ್ಲವಷ್ಟೆ ? '

' ಆಗಲಮ್ಮ, ಅದಕ್ಕೇನು ! ನನ್ನಲ್ಲಿ ಅಷ್ಟು ಮಟ್ಟಿಗೆ ವಿಶ್ವಾಸವಿಟ್ಟು ಕೇಳುವವರಾರಿದ್ದಾರಲ್ಲ, ಅಷ್ಟೇ ಸಾಕು. '

' ಯಾಕಮ್ಮಾ ಹೀಗನ್ನುತ್ತಿ ಇಂದಿರೆ....? ಇದು ಒಂದು ಸಮಸ್ಯೆ.. ನೀನೇ ಪೂರ್ತಿಮಾಡಬೇಕು. ಒಬ್ಬಾತನು ಒಬ್ಬಾಕೆಯನ್ನು ಪ್ರೀತಿಸುತ್ತಿ ದ್ದಾನೆ. ಆಕೆಯ ಕುಲಗೋತ್ರಗಳು ಗೊತ್ತಿಲ್ಲದಿದ್ದರೂ ಆಕೆಯನ್ನೇ ಮದುವೆ ಮಾಡಿಕೊಳ್ಳಲು ಅಪೇಕ್ಷಿಸುತ್ತಿದ್ದಾನೆ. '

' ಆಕೆಯೂ ಆತನನ್ನು ಪ್ರೀತಿಸುವುದಾದರೆ..ಆಗಬಹುದು. '

'ಅದೇ..ಅಲ್ಲಿದೋದು. ನಾನು ಆತನನ್ನು ಒಲ್ಲೆ. ಆತನೇನೋ ಆಕೆಯಲ್ಲಿಯೇ ಮಗ್ನನಾಗಿದ್ದಾನೆ. ಆಕೆಯೇ ಆತನ ಸರ್ವಸ್ವ. ಆಕೆಯ ಅಭಿಪ್ರಾಯವನ್ನು ತಿಳಿಯಬೇಕು. ಆಕೆಯು ನಿನಗೆ ತಿಳಿದಿರುವಾಕೆಯೇ.'

'ನನಗೆ ಗೊತ್ತಿದ್ದರೆ ಹೇಳುತ್ತೇನಮ್ಮ'

'ಆತನ ಹೆಸರು ರಾಮವರ್ಮ.'

'ಯಾರನ್ನು ಪ್ರೀತಿಸುತ್ತಿರುವನು?'

'ನಿನ್ನನ್ನು—ಮತ್ತಾರನ್ನು!'

'ನನ್ನನ್ನೇ! ಏತಕ್ಕಾಗಿ?'

ಬಿಹಾರಿಯು ಇಂದಿರೆಯ ಮುಖದಲ್ಲಿದ್ದ ಏನೂ ಅರಿಯದ ಬಾಲ್ಯಾವಸ್ಥೆಯ ಆ ಕಳೆಯನ್ನು ನೋಡಿ ಮನಮರುಗಿದಳು. ಹಟಾತ್ತಾಗಿ ಅವಳ ಮನಸ್ಸಿಗೆ ಹಿಂದಿನ ಯಾವುದೋ ಒಂದು ಸಮಾಚಾರವು ಜ್ಞಾಪಕಕ್ಕೆ ಬಂತು. ಬಹಳ ಪ್ರಯತ್ನಪಟ್ಟು, ಹಾರಿಹೋಗುತ್ತಿದ್ದ ತನ್ನ ಮನವನ್ನು ತಡೆದಳು. ಯಾವ ಉದ್ದೇಶದಿಂದ ಈ ಮಾತುಗಳು ಮೊದಲಾದವೋ ಆ ಉದ್ದೇಶವು ಮಾಯವಾಯಿತು. 'ಏತಕ್ಕಾಗಿ?' ಇಂತಹ ಮುದ್ದು ಗಿಳಿಯನ್ನು ಹದ್ದಿನ ವಶಮಾಡಲು ಮನಸ್ಸು ಯಾರಿಗಾದರೂ ಹೇಗೆ ಬಂದೀತು!

'ಏತಕ್ಕಾಗಿ ಎಂಬುದನ್ನು ಯಾರಿಂದ ಹೇಳಲು ಸಾಧ್ಯ.'

'ನನಗೆ ಈ ಜನ್ಮದಲ್ಲಿ ಮದುವೆಯಿಲ್ಲ.'

'ಏತಕ್ಕೆ ಇಂದಿರೆ..ಅಂತಹ ಪಾಪಕೃತ್ಯವನ್ನೇನು ಮಾಡಿರುವೆ?'

'ಪಾಪಕೃತ್ಯವಲ್ಲ....ಪುಣ್ಯವಿಲ್ಲ. ನನ್ನ ಸರ್ವಸ್ವವನ್ನು ಒಬ್ಬಾತನ ಪಾದದಲ್ಲಿ ಸಮರ್ಪಿಸಿರುವೆ. ಆತನು ನನ್ನನ್ನು ಮದುವೆಯಾಗುವಂತಿಲ್ಲ.'

ಬಿಹಾರಿಯ ಎದೆಯು ಘಕ್ಕೆಂದಿತು. 'ಹಾಗಲ್ಲಮ್ಮ....ದೇವರ ಮಾಯೆಯನ್ನು ವಿವರಿಸಲಾಗುವುದಿಲ್ಲ. ದೈವಸಹಾಯವಿದ್ದಲ್ಲಿ..'

'ದೈವಸಹಾಯವಿದ್ದಲ್ಲಿ....ನನಗೀ ಸ್ಥಿತಿ ಬರುತ್ತಿತ್ತೇ?'

'ಇಂದಿರೆ, ನಿನ್ನ ಮನಸ್ಸನ್ನು ನೋಯಿಸಿದೆ. ಕ್ಷಮಿಸುವಿಯಾ.. ನನ್ನಿಂದೇನಾಗಬೇಕಾದರೂ ನಾನು ಮಾಡಲು ಸಿದ್ಧಳಾಗಿರುವೆ. ಹೇಳು.'

'ಅಮ್ಮಾ, ಅದು ದೈವಸಂಕಲ್ಪದಿಂದಾಗಬೇಕಲ್ಲವೆ, ಮನುಷ್ಯ

ಪ್ರಯತ್ನದಿಂದಲ್ಲ. ನನ್ನ ಮೇಲೆ ನೀವಿಷ್ಟು ಮಮತೆಯನ್ನು ತೋರಿದ್ದು ನನ್ನ ಪುಣ್ಯವೇ ಸರಿ. '

' ಇಂದಿರೆ, ನಿನ್ನ ಮನಸ್ಸು ಒಳ್ಳೆಯದು. ದೇವರು ದೊಡ್ಡವನು. ನಿನಗೆ ಹೇಗಾದರೂ ಸಹಾಯಮಾಡುವನು. ಕಷ್ಟಪರಂಪರೆ ಎಷ್ಟು ಬಂದಾಗ್ಯೂ ಅವು ಸದಾಕಾಲದಲ್ಲಿಯೂ ಇರುವುದೇ ? ನೀನು ಇನ್ನೂ ಹುಡುಗಿ. ದೇವರು ನಿನಗೆ ಹೇಗಾದರೂ ಸುಖವನ್ನುಂಟುಮಾಡುವನು '

ಇಂದಿರೆಯು ಅಲ್ಲಿಂದ ಹೊರಟುಹೋದಳು. ಬಿಹಾರಿಯು ತನ್ನ ಅವಸ್ಥೆಯನ್ನು ನೆನಸಿಕೊಂಡಳು. ಅಷ್ಟು ಜನರ ಮಧ್ಯದಲ್ಲಿ ತಾನು ಓಡಾಡುತ್ತಿದ್ದರೂ ಅವಳು ಒಂಟಿಯಾಗಿದ್ದಂತೆಯೇ ಅವಳ ಭಾವನೆ. ಈಗಲಾದರೋ ಇಂದಿರೆಯೊಡನೆ ಮಾತನಾಡಿದ ಮೇಲೆ ಅದುವರವಿಗೂ ಇದ್ದ ಒಂಟಿತನವು ಮಾಯವಾದಂತಾಯಿತು.

—

೯

ಅಸ್ತಮಯ ಸೂರ್ಯನ ಗಮನವನ್ನೇ ನಿರೀಕ್ಷಿಸುತ್ತಾ, ಆಗಸದಲ್ಲಿ ಕಂಡುಬರುವ ವಿಚಿತ್ರವಾದ ಬಣ್ಣಗಳನ್ನೂ ಆಕಾರಗಳನ್ನೂ ನೋಡಿ ತಮ್ಮಲ್ಲೇ ಅವುಗಳ ಹೋಲಿಕೆಗಳನ್ನೂ ಸ್ವರೂಪಗಳನ್ನೂ ಚರ್ಚಿಸುತ್ತಾ ಇಬ್ಬರು ಯುವಕರು ಒಂದು ಸಣ್ಣಗುಡ್ಡದ ಮೇಲೆ ಕುಳಿತಿದ್ದಾರೆ.

' ಕದರಿ, ಸೂರ್ಯಾಸ್ತಸಮಯವೂ ಕೂಡ ಜನರಿಗೆಷ್ಟು ಆನಂದವನ್ನು ಬೀರುತ್ತಿದೆ ನೋಡಿದೆಯಾ! ಸಜ್ಜನರು ಬರುವಾಗಲೂ ಅಲ್ಲದೆ ತಾವು ಹೋಗುವಾಗಲೂ, ಎಲ್ಲರಿಗೂ ಆನಂದಪಡಿಸಿ ಹೋಗುವರಲ್ಲವೇ ! '

'ಮಹಾರಾಜರೆ, ಸೂರ್ಯಾಸ್ತಸಮಯವು ಸೂರ್ಯೋದಯಕ್ಕಿಂತಲೂ ಹೆಚ್ಚು ಆನಂದಕರವೆಂದು ನನಗೆ ತೋರುತ್ತದೆ. ಇದನ್ನು ನೋಡಿದರೆ ನನಗೆ ಮಗಳು ತೌರಮನೆಗೆ ಹೋಗುವಂತಿದೆ. '

' ಎಂದರೆ ನಿನ್ನ ಅನುಭವದಿಂದ ಈ ರೀತಿ ಕಾಣುತ್ತೆ. ನನಗಾದರೋ ಓರ್ವ ಯುವತಿಯು ತನ್ನ ಪ್ರೇಮಕ್ಕೆ ನೆಲೆಯಾದ ಸುಂದರಾಂಗನನ್ನು

ಆಲಂಗಿಸಲು ಹಸನ್ಮುಖಿಯಾಗಿ ಬರುವಂತೆ, ಸೂರ್ಯನು ತನ್ನ ವಿವಿಧ ಕಿರಣ ಗಳಿಂದ ಪಶ್ಚಿಮಾಂಬುಧಿಯನ್ನು ಸೇರಲು ಹೋಗುತ್ತಿರುವಂತೆ ಕಾಣುತ್ತಿದೆ.'

'ಮಹಾರಾಜರೆ, ಇದು ತಮ್ಮ ಅನುಭವವೆಂದು ಈಗ ನಾನು ಊಹಿಸ ಬೇಕಾಗಿದೆ. ತಮ್ಮ ಅನುರಾಗವು ಯಾವ ಅಂಗನೆಯ ತಡೆಗೆ ತಿರುಗಿದೆಯೋ ಆಕೆಯೇ ಪುಣ್ಯಶಾಲಿ.'

'ಅದೇ ತಪ್ಪು. ರಾಜರ ಪ್ರೀತಿಯು ಕೇವಲ ನಿಮಿಷಮಾತ್ರವೆಂಬುದು ಎಲ್ಲರಿಗೂ ತಿಳಿದ ವಿಚಾರ. ನಾನು ರಾಜನಲ್ಲದಿದ್ದಲ್ಲಿ ಇಷ್ಟು ಕಷ್ಟವಿರಲಿಲ್ಲ. ಕೇವಲ ಸಾಧಾರಣಳಲ್ಲಿ ಪ್ರೀತಿ ನೆಲಸಿರುವುದರಿಂದ, ನನಗೆ ಹಾಸಿಯೇ ಹೊರತು ಬೇರೆಯಿಲ್ಲ.'

'ನನಗಿದೆಲ್ಲವೂ ತಿಳಿಯದು ಮಹಾರಾಜ. ತಮ್ಮನ್ನು ಮಟ್ಟಿಗೆ ಚೆನ್ನಾಗಿ ಒಲ್ಲೆ. ಮುಖಸ್ತುತಿಯೆಂದೆನ್ನಬೇಡಿ, ತಾವು ಪ್ರತಿದಿನವೂ ಸಾಯಂಕಾಲ ಇಲ್ಲಿಗೆ ತಪ್ಪದೇ ಬರುವುದೇ ತಮ್ಮ ಪ್ರೀತಿಯು ಅಮೋಘ ವೆಂದು ತೋರಿಸುತ್ತಿಲ್ಲವೆ....ಅಲ್ಲದೆ....'

ಈ ಮಾತು ಮುಗಿಯುವುದರೊಳಗಾಗಿ ಚೀತ್ಕಾರ ಧ್ವನಿಯು ಕೇಳಿ ಸಿತು. ಆ ಧ್ವನಿಯ ದಿಕ್ಕನ್ನು ಹಿಡಿದು ಇಬ್ಬರೂ ಓಡಿದರು. ಎದುರಿಗೆ ಸ್ವಲ್ಪ ದೂರದಲ್ಲಿ ಒಂದು ಕೊಳ. ಅದರಲ್ಲಿ ಒಂದು ವ್ಯಕ್ತಿಯು ಬಿದ್ದು ಒದ್ದಾಡುತ್ತಿ ದ್ದಂತೆ ಯಶವಂತನಿಗೆ ತೋರಿತು. ಅವನು ತಕ್ಷಣವೇ ನೀರಿನಲ್ಲಿ ಧುಮುಕಿದನು. ಅವನ ಹಿಂದೆಯೇ ಕದರಿಯೂ ಸಹ ನೀರಿನಲ್ಲಿ ಬಿದ್ದನು. ಇಬ್ಬರೂ ನಿಶ್ಚೇಷ್ಟ ವಾಗಿದ್ದ ಹೆಂಗಸೊಬ್ಬಳನ್ನು ದಡಕ್ಕೆಳೆದುಕೊಂಡು ಬಂದು ಮಲಗಿಸಿದರು. ಉಸಿರಾಡುತ್ತಿರಲಿಲ್ಲ. ಯಶವಂತನು ಅವಳ ಮುಖವನ್ನು ನೋಡಿದೊಡನೆಯೇ ಕಣ್ಣುಗಳಲ್ಲಿ ನೀರು ಸುರಿಸಲಾರಂಭಿಸಿದನು. ಇದನ್ನು ನೋಡಿ ಕದರಿಯು, 'ಮಹಾರಾಜ, ಹೀಗೆ ಬನ್ನಿ' ಎಂದು, ಅವಳ ಹತ್ತಿರಕ್ಕೆ ಬಂದು, ಅವಳ ಕೈಗಳೆರಡನ್ನೂ ಮೇಲಕ್ಕೆತ್ತಿ ನಾಲ್ಕಾರು ಸಲ ಎದೆಯ ಮೇಲೆ ತಂದು ಒತ್ತಿ ದನು. ಕೆಲವು ನಿಮಿಷಗಳಾದ ನಂತರ ಮಲಗಿದ್ದ ವ್ಯಕ್ತಿಯು ಕಣ್ದೆರೆಯಿತು; ದುರದುರನೆ ನೋಡಿತು ಅವಳ ಮುಖದಲ್ಲಿ ಭಯವು ಕಂಡುಬಂದಿತು. ಕೂಡಲೆ ಯಶವಂತನು ಮೆಲ್ಲನೆ 'ಸಖಿ, ಇಂದಿರೆ......ಭಯಪಡಬೇಡ' ಎಂದನು. ಇಂದಿರೆಯು ಮೆಲ್ಲನೆ 'ನನ್ನ ನ್ನೇತಕ್ಕೆ ಬದುಕಿಸಿದಿರಿ..ಈ ಪಾಪಿ..'ಎನ್ನುತ್ತಾ

ಪುನಃ ತನ್ನ ಕಣ್ಣುಗಳನ್ನು ಮುಚ್ಚಿಕೊಂಡಳು. ಯಶವಂತನು ಇಂದಿರೆಯ ತಲೆಯನ್ನು ತನ್ನ ತೊಡೆಯ ಮೇಲಿಟ್ಟುಕೊಂಡು ಪ್ರಲಾಪಿಸಿದನು. 'ಇಂದಿರೆ, ಇಂದಿರೆ. . ಒಮ್ಮೆ ನೋಡು. ನನ್ನ ಮನದಲ್ಲಿರುವುದನ್ನು ನಿನಗೆ ತಿಳಿಸುವ ಬಗೆ ಹೇಗೆ! ಏತಕ್ಕಿಲ್ಲಿಗೆ ಬಂದೆ! ಆತ್ಮಹತ್ಯವೆ! ಪ್ರಿಯೆ, ಮಾತನಾಡು.'

ಇಂದಿರೆಯು ಮಾತನಾಡಲಿಲ್ಲ. ಹೀಗೆ ಹೊತ್ತು ಕಳೆದರೆ ಹಾನಿಕರವೆಂದು ತಿಳಿದು, ಕದರಿಯ ಸಹಾಯದಿಂದ ಇಂದಿರೆಯನ್ನೆತ್ತಿಕೊಂಡು, ಗುಡ್ಡದ ಹಿಂದಿದ್ದ ತನ್ನ ಗಾಡಿಯಲ್ಲಿಟ್ಟು, ಯಶವಂತನು ಗಾಡಿಹೊಡೆಯುವನಿಗೆ 'ಶಿವಸೀ, ಈಕೆಯನ್ನು ಈ ಮಾರ್ಗದಿಂದ ಬೇಗನೆ ಮನೆಸೇರಿಸು. ಇಲ್ಲಿ ನಡೆವ ಸಂಗತಿಯೊಂದನ್ನೂ ತಿಳಿಸಬೇಡ. ನಮ್ಮ ಹೆಸರನ್ನೆತ್ತಬೇಡ.' ಎಂದು ಹೇಳಿದನು. ಗಾಡಿಯು ಹೊರಟಿತು. ಯಶವಂತನೂ ಕದರಿಯೂ ಅರಮನೆಯ ಮಾರ್ಗವನ್ನು ಹಿಡಿದರು.

'ಕದರಿ, ಈ ದಿನ ನಾವಿಲ್ಲಿದ್ದುದು ದೈವಸಂಕಲ್ಪವೇ ಸರಿ.'

ಕದರಿಯು ಮೆಲ್ಲನೆ ತಲೆಯನ್ನಲ್ಲಾಡಿಸಿದನು. 'ಎಲ್ಲವೂ ದೈವ ಸಂಕಲ್ಪ.'

ಇದನ್ನು ಕೇಳಿದೊಡನೆಯೇ ಯಶವಂತನು ಕದರಿಯ ಭುಜದ ಮೇಲೆ ಕೈಹಾಕಿದನು. ತಕ್ಷಣವೇ ಕದರಿಯು ಚಮಕಿತನಾಗಿ ದಿಗ್ಭ್ರಾಂತನಾದನು. ಏನು ಹೇಳುವುದಕ್ಕೂ ಬಾಯಿ ಬರದೆ, ಕಣ್ಣುಗಳನ್ನು ಬಿಡುತ್ತಾ ಭಯದಿಂದ ಹಿಂದಕ್ಕೆ ಸರಿಯಲಾರಂಭಿಸಿದನು.

'ಏತಕ್ಕೆ. . ಕದರಿ. . ಭಯವೇ?'

'ಮಹಾರಾಜ, ನಾನು ಪರಮಪಾಪಿ. ನಾನು ಮಾಡಿರುವ ಕೃತ್ಯಗಳನ್ನು ತಾವು ಅರಿಯಿರಿ. ನಾನು ಮಾಡಿದ್ದೆಲ್ಲಾ ಜ್ಞಾಪಕಕ್ಕೆ ಬರುವುದನ್ನು ಕಂಡೆನು. ತಮ್ಮಲ್ಲಿ ಮರೆಮಾಚಲಾರೆ. ತಮ್ಮ ಕೈಲಿರುವ ಉಂಗುರವನ್ನು ನೋಡಿದೊಡನೆಯೇ ನನ್ನ ಎದೆಯು ಒಡೆದುಹೋಯಿತು.'

ಆ ಮುದುಕನು ಉಂಗುರವನ್ನು ಯಶವಂತನ ಕೈಗೆ ಕೊಟ್ಟಾಗಿನಿಂದ ಅದು ಯಶವಂತನ ಬೆರಳಿನಲ್ಲಿಯೇ ಇದ್ದಿತು. ಯಶವಂತನು ಕದರಿಯ ಬೆನ್ನಿನ ಮೇಲೆ ಕೈಹಾಕಲು ಅದು ಕದರಿಯ ಕಣ್ಣಿಗೆ ಬಿದ್ದಿತು. ಕದರಿಯ

ಮಾತುಗಳನ್ನು ಕೇಳಿದೊಡನೆಯೇ ಯಶವಂತನಿಗೆ ತಕ್ಷಣವೇ ವಿಚಾರ ವನ್ನೆಲ್ಲಾ ತಿಳಿದುಕೊಳ್ಳಬೇಕೆಂದು ಕುತೂಹಲ ಹುಟ್ಟಿದರೂ ಅದು ಸರಿ ಯಾದ ಸ್ಥಳವಲ್ಲವೆಂಬುದನ್ನರಿತು ಅವನು ಮುಂದರಿದನು.

ಯಶವಂತನ ಬಟ್ಟೆಗಳೆಲ್ಲಾ ಒದ್ದೆಯಾಗಿದ್ದವು. ಸುತ್ತಲೂ ಮರ-ಗಿಡ ಗಳು. ಹಾದಿಯೋ ಕಾಲು-ಹಾದಿ. ಮುಳ್ಳಿನ ಗಿಡಗಳನ್ನು ಹಾದು ಹೋಗು ತ್ತಿರಲು ಯಶವಂತನಿಗಾಗಲಿ ಅಥವಾ ಕದರಿಗಾಗಲಿ ಅವನನ್ನೇ ಹಿಂಬಾಲಿ ಸುತ್ತಿದ್ದ ವ್ಯಕ್ತಿಯು ಗೋಚರವಾಗುತ್ತಿರಲಿಲ್ಲ. ಗರ್ಗಲಾಲನು ಅರಮನೆ ಯಿಂದ ಹಿಂತಿರುಗಿ ಬರುತ್ತಿರುವಾಗ ದೂರದಲ್ಲಿ ಯಶವಂತನೂ ಕದರಿಯೂ ಮಾತನಾಡುತ್ತಿದ್ದುದನ್ನು ಕಂಡನು. ಹಟಾತ್ತಾಗಿ ತನ್ನ ಗುಟ್ಟೆಲ್ಲವೂ ರಟ್ಟಾಗ ಬಹುದೆಂದು ತಿಳಿದು ಅವರನ್ನು ಹಿಂಬಾಲಿಸಿದನು. ಆದರೆ ಕದರಿಯೊಡನೆ ಮಾತನಾಡುತ್ತಿದ್ದಾತನು ಯಶವಂತನೆಂಬುದು ಅವನಿಗೆ ಗೊತ್ತಿರಲಿಲ್ಲ.

ರಾಜಾರಾಮನಾದರೋ ತಾನು ಕದಂಬನೆಂಬ ಹೆಸರಿನಿಂದ ಗರ್ಗ ಲಾಲನ ಮನೆಯನ್ನು ಸೇರಿದಂದಿನಿಂದ, ಲಾಲನ ಚರ್ಯೆಗಳನ್ನೆಲ್ಲಾ ಗಮನಿ ಸುತ್ತಾ ಅವನ ಹಿಂದೆಯೇ ಕೈಲಾದಷ್ಟು ಮಟ್ಟಿಗೆ ಇರುತ್ತಿದ್ದನು. ಈಗಲೂ ಕೂಡ ರಾಜಾರಾಮನು ಅವನ ಹಿಂದಿದ್ದನು.

ಮಹಾರಾಜ ಯಶವಂತನೂ ಕದರಿಯೂ ಇಬ್ಬರೂ ಅರಮನೆಯೊಳಕ್ಕೆ ಹೊಕ್ಕರು. ಇನ್ನು ಸ್ವಲ್ಪ ನಿದಾನಿಸಿದರೆ ಅವರು ತಪ್ಪಿಸಿಕೊಳ್ಳಬಹುದೆಂದು ಗರ್ಗಲಾಲನಿಗೆ ತೋರಿತು. ಆದುದರಿಂದ ಅವನು ಅತಿತ್ವರೆಯಿಂದ ಅರಮನೆ ಯೊಳಕ್ಕೆ ನುಗ್ಗಿದನು. ಸುಮಾರು ಹತ್ತುಗಜಗಳ ದೂರದಲ್ಲಿ ಯಶವಂತನೂ ಕದರಿಯೂ ಮಾತನಾಡುತ್ತಿದ್ದರು. ಯಶವಂತನು ತನ್ನ ಕೈಯನ್ನು ಮೇಲೆಕ್ಕೆ ತ್ತಲು, ಬೆರಳಿನಲ್ಲಿದ್ದ ಉಂಗುರವು ಗರ್ಗಲಾಲನಿಗೆ ಚೆನ್ನಾಗಿ ಕಾಣಿಸಿತು. ಅವನು ತಡೆಯಲಾರದಂತಾದನು; ಮುಂದಕ್ಕೆ ನುಗ್ಗಿದನು. ನಿಮಿಷ ಮಾತ್ರ ದಲ್ಲಿ ಯಶವಂತನ ಮೇಲೆ ಹಾರಿ ಉಂಗುರಕ್ಕೆ ಕೈಹಾಕಿದನು. ಪಕ್ಕದಲ್ಲಿ ನಿಂತಿದ್ದ ಕದರಿಯು ಇದನ್ನು ಕಂಡೊಡನೆಯೇ ಲಾಲನ ಬೆನ್ನಿನ ಮೇಲೆ ಬಲವಾಗಿ ಮುಷ್ಟಿಪ್ರಹಾರವನ್ನು ಮಾಡಲು, ಕುಡುಗೋಲಿನಿಂದ ಕತ್ತರಿ ಸಲ್ಪಟ್ಟ ಪೈರಿನಂತೆ ಲಾಲನು ಅಲ್ಲಿಯೇ ನೆಲಕ್ಕೆ ಬಿದ್ದನು. ಅರಮನೆಯ

ಬಾಗಿಲ ಬಳಿಯಿಂದ ರಾಜಾರಾಮನು ಇದೆಲ್ಲವನ್ನೂ ನೋಡಿ, ' ಆಯಿತು ಇವನ ಕೆಲಸ ' ಎನ್ನುತ್ತಾ ಅಲ್ಲಿಂದ ಹಿಂತಿರುಗಿದನು.

—

೧೦

ಇತ್ತಲಾ ಮಂತ್ರಿಯ ಮನೆಯಲ್ಲಿ ಇಂದಿರೆಯು ಮಂಚದ ಮೇಲೆ ಮಲಗಿದ್ದಾಳೆ. ಅವಳಿಗೆ ಬಿಹಾರಿಯು ಉಪಚಾರಮಾಡುತ್ತಾ ಕುಳಿತಿದ್ದಾಳೆ ಬಿಹಾರಿಗೆ ನಿಜವಾಗಿಯೂ ಬಹಳ ಸಂಕಟವಾಗಿತ್ತು. ಇಂದಿರೆಯನ್ನು ನೋಡಿದಾರಭ್ಯ ಅವಳನ್ನು ತನ್ನ ಮೇಲ್ಮೆಗಾಗಿ ಉಪಯೋಗಿಸಬೇಕೆಂದು ಪ್ರಯತ್ನಿಸಿದಾಗ್ಯೂ ಅವಳೆದುರಿಗೆ ನಿಂತು ಮಾತನಾಡುವಾಗ ಅಥವಾ ಅವಳಿಗೆ ಸ್ವಲ್ಪ ತೊಂದರೆಯೊದಗಿದಾಗ ಬಿಹಾರಿಯ ಮನಸ್ಸು ಬೆಣ್ಣೆಯಂತೆ ಕರಗುತ್ತಿತ್ತು. ' ಇವಳಾರು ? ಇವಳಲ್ಲಿ ನನಗಿಷ್ಟೇಕೆ ಮಮತೆ ? ' ಎಂದು ತನ್ನಲ್ಲಿ ತಾನೇ ಬಿಹಾರಿಯು ಎಂದುಕೊಳ್ಳುತ್ತಿದ್ದಳು. ಅವಳ ಮನಸ್ಸಿನಲ್ಲೊಂದು ಕಡೆ 'ನನ್ನ ಮಗಳಿದ್ದಿದ್ದರೆ ಹೀಗೆಯೇ ಇರುತ್ತಿದ್ದಳೊ ಏನೋ.. ನನಗೆ ಮಗಳೆಲ್ಲಿ ! ' ಎಂಬ ಸಣ್ಣ ದನಿಯೊಂದು ಹುಟ್ಟುತ್ತಿದ್ದಿತು. ಇದರಿಂದ ಸಮಯವೊದಗಿದಾಗ ಇಂದಿರೆಯ ವಿಚಾರವನ್ನು ತಿಳಿದುಕೊಳ್ಳಬೇಕೆಂದು ಬಿಹಾರಿಯು ತನ್ನ ಮನಸ್ಸಿನಲ್ಲಿಯೇ ನಿಷ್ಕರಿಸಿಕೊಂಡಿದ್ದಳು.

ಇಂದಿರೆಯು ಕಣ್ಣುಬಿಟ್ಟು ' ನಾನೆಲ್ಲಿದ್ದೇನೆ ? ನೀನು ಯಾರು ? ' ಎಂದಳು.

'ಅಮ್ಮಾ ಇಂದಿರೆ, ನೀನು ನಿನ್ನ ಮನೆಯಲ್ಲಿಯೇ ಇರುವೆ. ಮಾತನಾಡಿ ಆಯಾಸಮಾಡಿಕೊಳ್ಳಬೇಡ. ಸ್ವಲ್ಪ ಹಾಲನ್ನು ಕೊಡಲೇ ? '

' ಬೇಡಮ್ಮಾ..ನೀವೇತಕ್ಕೆ ಇಲ್ಲಿದ್ದೀರಮ್ಮ..ಅವರೆಲ್ಲಿ ? '

' ಯಾರು ಇಂದಿರೆ? ನಿನಗೆ ಜ್ವರವು ವಿಪರೀತವಾಗಿದೆ. ಯಾರನ್ನು ನೋಡಿದೆ? ಇಲ್ಲಿಗೆ ಯಾರೂ ಬರಲಿಲ್ಲವಲ್ಲ. '

' ಅಮ್ಮಾ..ಅಮ್ಮಾ..ನನ್ನನ್ನು ಬಿಟ್ಟೇತಕ್ಕೆ ಹೋದೆ? ನನ್ನ ತಾಯಿ ಬಂದಿದ್ದಳಲ್ಲಿ. '

ಹುಚ್ಚು ಹುಡುಗಿ ಜ್ವರಾಧಿಕ್ಯದಿಂದ ಹೀಗೆ ಮಾತನಾಡುತ್ತಿದ್ದಾಳೆ ಎಂದು ಬಿಹಾರಿಯು 'ಹೌದಮ್ಮ, ಸುಮ್ಮನೆ ನಿದ್ದೆ ಮಾಡು. ಈ ಔಷಧಿಯನ್ನು ಸ್ವಲ್ಪ ಕುಡಿ. ಎಲ್ಲವೂ ಸರಿಹೋಗುತ್ತೆ.' ಎಂದಳು.

'ಇಲ್ಲಮ್ಮಾ....ನನ್ನ ಮನಸ್ಸಿನಲ್ಲಿ ನಿಲ್ಲಲಾರದು. ನಿಮ್ಮಲ್ಲಿ ಹೇಳುತ್ತೇನೆ. ನಿಮ್ಮೊಡನೆ ಮಾತನಾಡಿದ ಮೇಲೆ ನಾನು ನನ್ನ ಕೋಣೆಯೊಳಕ್ಕೆ ಹೋದೆ. ಇದ್ದಕ್ಕಿದ್ದ ಹಾಗೆಯೇ ನನ್ನ ತಂದೆ ತಾಯಿಗಳ ಜ್ಞಾಪಕ ಬಂದಿತು.'

'ಇಂದಿರೆ, ಆಯಾಸವಾಗುತ್ತಮ್ಮ, ನಾಳೆ ಆಗಲಿ. ಈಗ ಸ್ವಲ್ಪ ಸುಧಾರಿಸಿಕೋ.'

ಇಂದಿರೆಯು ನಿಲ್ಲಿಸಲಿಲ್ಲ. 'ನೀವು ಹೇಳಿದ ಮಾತುಗಳೂ ಸಹ ನನ್ನ ತಲೆಗೇರಿದವು. ನನ್ನ ತಂದೆಯು ಪಟ್ಟ ಶ್ರಮವನ್ನು ನೋಡಿದೆ....ನನ್ನಿಂದ ಇನ್ನೇನು ಅನಾಹುತಗಳು ನಡೆಯಬೇಕೋ.....ಇವನ್ನು ಸಹಿಸಲಾರದೆ ಪ್ರಾಣಬಿಡಬೇಕೆಂದು ಆ ಕೊಳದಲ್ಲಿ ಬಿದ್ದೆ.'

ಕಣ್ಣುಗಳಲ್ಲಿ ನೀರು ಹರಿಯಿತು. ಬಿಹಾರಿಯು ಇದನ್ನು ನೋಡಲಾರದೆ ಇಂದಿರೆಯನ್ನು ಸಮಾಧಾನಪಡಿಸಲು ಹತ್ತಿರಕ್ಕೆ ಸರಿದಳು. ಏನೋ ಒಂದು ವಿಜಾತೀಯವಾದ ಪ್ರೇಮವು ಅವಳ ಹೃದಯವನ್ನಾವರಿಸಿತು; ಮೆಲ್ಲನೆ ಇಂದಿರೆಯ ಮುಂಗುರುಳೆಯನ್ನು ಸರಿಮಾಡತೊಡಗಿದಳು.

'ಇಂದಿರೆ, ಅದನ್ನೆಲ್ಲಾ ಮತ್ತೆ ನೆನೆಸಿಕೊಂಡು ಏತಕ್ಕೆ ಸಂಕಟಪಡುತ್ತೀಯೆ? ಹಣೆಯಬರಹವನ್ನು ತಪ್ಪಿಸಲಾರಿಂದ ಸಾಧ್ಯ?'

'ನೀರಿನಲ್ಲಿ ಧುಮುಕಿದರೂ ಈ ಹಾಳು ಪ್ರಾಣವು ಹೋಗಲಿಲ್ಲ. ಅಷ್ಟರಲ್ಲಿಯೇ ಅವರು ಒಂದು ಮೇಲಕ್ಕೆಳೆದರು.....ಅವರೆಲ್ಲಮ್ಮಾ?'

'ಅವರು......ಯಾರು?'

'ಅಮ್ಮಾ ಯಾರೆಂದು ಹೇಳಲಮ್ಮಾ..ಯಾರು ನನಗೆ ಸರ್ವಸ್ವವೋ ಅವರು.'

'ಲಜ್ಜೆಯೇ ಇಂದಿರೆ........ಹೆಸರು ಹೇಳಬಾರದೆ?'

'ಲಜ್ಜೆಯಲ್ಲ....ಅವರ ಹೆಸರನ್ನ ಹೇಳಿ ಉಪಯೋಗವಿಲ್ಲ. ಅಮ್ಮಾ ಒದುಕಿಸಿದವರು ಹತ್ತಿರ ಕೂಡ....'

'ಇಂದಿರೆ..ಇದೇನಿದು? ಇಷ್ಟು ನಿರಾಶಳಾಗಬಹುದೆ?'

' ಮತ್ತೇನನ್ನು..ನನಗೆ..'

' ಇಂದಿರೆ..ಹೀಗೆಲ್ಲಾ ಯೋಚನೆ ಮಾಡುತ್ತಿದ್ದರೆ ನಿನಗೆ ಮೇಲಾಗುವುದಿಲ್ಲ. ನೀನು ಯಾರನ್ನು ಪ್ರೀತಿಸುತ್ತಿರುವೆಯೋ ಆತನೂ ನಿನ್ನನ್ನು ಪ್ರೀತಿಸುತ್ತಿರಬಹುದು. ಆದಕ್ಕಾಗಿಯೇ ಇಲ್ಲಿಗೆ ಬರಲಿಲ್ಲವೆಂದು ತೋರುತ್ತೆ.. ಧೈರ್ಯವನ್ನು ತಾಳು. '

' ಆಗಲಿ....ಆಮೇಲೆ ನನ್ನನ್ನೆಲ್ಲಿಗೋ ಗಾಡಿಯಲ್ಲೋ ಏನೋ ಹಾಕಿಕೊಂಡು ಹೋದಂತಿತ್ತು. ಈ ಮನೆಯೊಳಕ್ಕೆ ಬಂದ ಹಾಗಾಯಿತು. ಇಲ್ಲಿ, ನನ್ನೆದುರಿನಲ್ಲಿ..ನನ್ನ..ತಾಯಿ..ಬಂದು..ಉಪಚಾರ ಮಾಡಿದಂತೆ ಆಯಿತು. ಎಲ್ಲಾ ನೆನಪಿನಲ್ಲಿದ್ದ ಹಾಗಿದೆ. '

' ಇಂದಿರೆ..ನಿನ್ನ ತಾಯಿ ಯಾರು? ಎಲ್ಲಿದ್ದಾಳೆ? ಹೇಳಿ ಕಳುಹಿಸಲೆ?'

' ನನ್ನ ತಾಯಿಯನ್ನು ಯಾವಾಗಲೋ ನೋಡಿದ್ದು! ನನ್ನ ತಂದೆಯನ್ನು ಕೇಳಿದರೆ..'ನಿಮ್ಮ ತಾಯಿ ಸತ್ತುಹೋದಳು.' ಎಂದು ಹೇಳುತ್ತಿದ್ದನು. ಸುಮ್ಮನೆ ಕುಳಿತು ಆಗಾಗ ಅವರು ಕಣ್ಣಿನಲ್ಲಿ ನೀರು ಹಾಕುತ್ತಿದ್ದರು. ನಾನು ಕೇಳಿದರೆ ಮಾತನಾಡುತ್ತಿರಲಿಲ್ಲ. ಬಹಳ ಬಲವಂತ ಮಾಡಿದರೆ..'ಕಣ್ಣಿನಲ್ಲಿ ನೀರು ಸುರಿಯುತ್ತೆ..ಅದೊಂದು ರೋಗ' ಎನುತ್ತಿದ್ದರು. ಸಾಯುವವರೆಗೂ ನನ್ನೊಡನೆ ಇನ್ನೇನನ್ನೂ ಹೇಳಲಿಲ್ಲ. ಸಾಯುವಾಗ ' ಇಂದಿರೆ, ನಿನ್ನ ತಾಯಿ ಸತ್ತಳೆಂದು ಸುಳ್ಳಾಡಿದೆ. ಬದುಕಿರಬಹುದು. ಯಾವಾಗಲಾದರೂ ನಿನ್ನನ್ನು ನೋಡಬಹುದು......ದೈವಸಂಕಲ್ಪವಿದ್ದಲ್ಲಿ. ಎಲ್ಲವೂ ಸರಿಹೋಗುವದು. ಪಾಪಿಯಾದ ನನ್ನ ಹೊಟ್ಟೆಯಲ್ಲಿ ಹುಟ್ಟಿ ನಿನಗೀ ಗತಿ ಬಂತು. ನಿನ್ನನ್ನು ದೇವರೇ ಕಾಪಾಡಬೇಕು' ಎಂದು ಹೇಳಿ ನಡುಹಾದಿಯಲ್ಲಿ ಸತ್ತರು. ಅಲ್ಲಿಗೆ ದೈವಸಂಕಲ್ಪದಿಂದ ಸುಶೀಲಮ್ಮನವರು ಬಂದು ನನ್ನನ್ನು ನೋಡಿ ಕನಿಕರದಿಂದ ತಮ್ಮಲ್ಲಿಟ್ಟುಕೊಂಡರು. ನನ್ನ ತಾಯಿಗಿಂತಲೂ ಹೆಚ್ಚಾಗಿ ಕಾಪಾಡಿದರು. ದೇವರು ಅವರನ್ನು ಚೆನ್ನಾಗಿ ಇಟ್ಟಿರಲಿ. '

' ಇಂದಿರೆ..ನಿಮ್ಮ ತಂದೆಯ ಹೆಸರೇನು? '

' ಶಂಕರಸಿಂಹರು. '

ಬಿಹಾರಿಗೆ ಗಂಟಲಿನಲ್ಲಿ ಏನೋ ಸಿಕ್ಕಿಕೊಂಡಂತಾಯಿತು. ಬಹಳ

ಕಷ್ಟದಿಂದ ಅದನ್ನು ನುಂಗಿದಳು. 'ಇಂದಿರೆ....ನಿನ್ನ ತಾಯಿಯು....ನಿನ್ನಲ್ಲಿಗೆ ಬಂದರೆ...ಈಗ..?'

'ಆ ದಿನವೇ ಸುಖವಾಗಿ ಸಾಯುತ್ತೇನಮ್ಮಾ....ಅದೇ ಸುದಿನ.'

'ಅವಳೆಷ್ಟೇ ಕೆಟ್ಟವಳಾಗಿದ್ದರೂ....?'

'ಎಷ್ಟು ಕೆಟ್ಟವಳಾದರೂ ಅವಳು ನನ್ನ ತಾಯಿ ಅವಳೆಷ್ಟು ಕಷ್ಟ ಪಡುತ್ತಿದ್ದಾಳೋ ಏನೋ!'

'ನಿನ್ನ ತಾಯಿ ಈಗ ನಿನ್ನಲ್ಲಿಗೆ ಬಂದರೆ ನೀನು ಯಾವ ಯೋಚನೆಯೂ ಮಾಡದೆ ಸುಖವಾಗಿರುವೆಯಾ?'

'ಅಯ್ಯೋ ಅದು ನನ್ನ ಹಣೆಯಲ್ಲಿ ಬರೆದಿದೆಯೇ!'

'ಇಂದಿರೆ..ಇಂದಿರೆ....ನಿಮ್ಮಿಬ್ಬರನ್ನೂ ಈ ಅಧೋಗತಿಗೆ ತಂದ ಆ ರಕ್ಕಸಿ ನಾನೇ...' ಎನ್ನುತ್ತ ಬಿಹಾರಿಯು ಮೇಲಕ್ಕೆದ್ದಳು.

'ಅಮ್ಮಾ....ಅಮ್ಮಾ!'

ಇಂದಿರೆಯು ಹಾಸಿಗೆಯನ್ನು ಬಿಟ್ಟೇಳಲಾರದೆ ತನ್ನ ಎರಡು ಕೈಗಳನ್ನೂ ಬಿಹಾರಿಯ ಕಡೆಗೆ ಚಾಚಿದಳು. 'ಅಮ್ಮಾ...ನನ್ನನ್ನೇತಕ್ಕೆ ಬಿಟ್ಟು ಹೋಗುವೆ!....ಅಮ್ಮಾ!'

ಬಿಹಾರಿಯು ಕಣ್ಣೀರನ್ನು ಸುರಿಸುತ್ತಾ ಹೋಗಿ ಇಂದಿರೆಯನ್ನು ತಬ್ಬಿಕೊಂಡು 'ಇಂದಿರೆ..ಮಗು..ಮಗು!' ಎಂದಳು. ಪ್ರಪಂಚವೇ ಇಂದಿರೆಗೆ ಸಿಕ್ಕಂತಾಯಿತು. ಇಬ್ಬರ ಕಣ್ಣುಗಳಲ್ಲಿಯೂ ಕಂಬನಿಗಳು ಧುಮುಕಲಾರಂಭಿಸಿದವು. ಒಬ್ಬರ ಭುಜದ ಮೇಲೆ ಮತ್ತೊಬ್ಬರ ಕತ್ತು. ಒಬ್ಬರ ಬೆನ್ನನ್ನು ಮತ್ತೊಬ್ಬರು ಸವರುತ್ತಿದ್ದರು. ಒಬ್ಬರಿಗೊಬ್ಬರು ಕೋಟಿ ವಿಚಾರಗಳನ್ನು ಹೇಳಬೇಕೆಂದು ತೋರಿತು.

ಹೀಗಿರಲು ಚಿಕ್ಕಮನೆಯ ಬಾಗಿಲು ತೆರೆಯಲ್ಪಟ್ಟಿತು. ಕದಂಬನು ಒಳಗೆ ಪ್ರವೇಶ ಮಾಡಿದನು. ತಕ್ಷಣವೇ ಅಲ್ಲಿನ ಪರಿಸ್ಥಿತಿಯನ್ನು ನೋಡಿ ಹೊರಗೆ ಹೋಗುವದರಲ್ಲಿರಲು, ಬಿಹಾರಿಯು ಮೇಲಕ್ಕೆದ್ದು 'ಕದಾ, ಹೋಗಬೇಡ. ಇದು ನಿನಗೆ ತಿಳಿಯಬೇಕಾದ ವಿಚಾರವೇ' ಎಂದಳು. ಕದಂಬನು ಒಳಕ್ಕೆ ಬಂದು ನಿಂತನು.

'ಕದಾ, ಹೆಚ್ಚೇನಿಲ್ಲ. ಇಂದಿರೆಯು ಯಾರೆನ್ನುವಿ? ನನ್ನ ಮುದ್ದು

ಕುವರಿ. ಈಗ ತಾನೇ ಅವಳ ಬಾಯಿಯಲ್ಲಿಯೇ ಅದನ್ನು ನಾನು ಕೇಳಿದೆನು. ನನಗೆ ಮತ್ತಾರೂ ಆಪ್ತರಿಲ್ಲ. ನೀನು ನನ್ನ ಸಹೋದರ. ಇದು ನಿನಗೂ ತಿಳಿಯಬೇಕಾದ ವಿಚಾರವೇ ಅಲ್ಲವೇ!'

ಕದಂಬನು ಚಮುಕಿತನಾದನು; 'ಏನು ಹೇಳುವುದಕ್ಕೂ ತೋಚದು' ಎಂದನು. 'ನಿಮ್ಮನ್ನು ನೋಡುವುದಕ್ಕಾಗಿಯೇ ಬಂದೆ....ಆದರೆ ನೀವಿ ದ್ದುದನ್ನು ನೋಡಿ, ನಿಮಗೆ ತೊಂದರೆ ಕೊಡಲಿಷ್ಟವಿಲ್ಲದೆ ಸುಮ್ಮನಾದೆ. ನಿಮಗೊಬ್ಬರಿಗೇ ತಿಳಿಯಬೇಕಾದ ಸಂಗತಿಯೊಂದಿದೆ.'

'ಇಂದಿರೆ, ಹೋಗಿಬರುವೆ; ನಿಮಿಷದಲ್ಲಿಯೇ ಹಿಂತಿರುಗಿ ಬರುವೆ.'

ಬಿಹಾರಿಯು ಕದಂಬನೊಡನೆ ಆ ಚಿಕ್ಕಮನೆಯಿಂದೀಚೆಗೆ ಬಂದಳು. ಕದಂಬನು ತಾನು ನೋಡಿದುದನ್ನೆಲ್ಲಾ ತಿಳಿಸಿದನು.

'ಇನ್ನು ಆತನ ತಂತ್ರಗಳಾವುವೂ ನಡಿಯುವಂತಿಲ್ಲ. ನಿಮಗೆ ತೊಂದರೆ ಆಗಬಾರದೆಂಬುದೇ ನನ್ನ ಕೋರಿಕೆ. ಎಲ್ಲವನ್ನೂ ಸಿದ್ಧಮಾಡಿದ್ದೇನೆ. ತಾವು ಈ ಊರಿಂದಾಚೆಗೆ ಈಗಲೇ ಹೋಗುವುದುತ್ತಮ. ಏನನ್ನುವಿರಿ?'

'ಇಲ್ಲ ಕದಾ. ಇಂದಿರೆಯನ್ನು ಬಿಟ್ಟು ಹೋಗಲಾರೆ. ಅಲ್ಲದೆ ಏತಕ್ಕಾಗಿ ಈ ಹಾಳು ಜೀವವನ್ನಿಟ್ಟುಕೊಂಡಿರುವೆನೋ ಅದನ್ನು ನೆರವೇರಿಸಿದ ಹೊರತು ಇಲ್ಲಿಂದಾಚೆಗೆ ಹೋಗಲಾರೆ.'

'ಅಮ್ಮ, ಇದು ಸರಿಯಲ್ಲ. ಆತನು ಮಾಡಿರುವ ಕೆಲಸಗಳಿಗೆಲ್ಲಾ ನೀವೇ ಒತ್ತಾಯವೆಂಬುದನ್ನು ನಂಬಿ, ನಿಮಗೂ ತೊಂದರೆ ಕೊಡುತ್ತಾರೆ.'

'ಆತನು ಮಾಡಿರುವ ಕೆಲಸಗಳು ಆತನೇ ಮಾಡಿದ್ದೆನ್ನಲು ರುಜುವಾತು ಬೇಕಲ್ಲ. ನಾನು ಇಲ್ಲಿಂದಾಚೆಗೆ ಓಡಿಹೋದರೆ..ಇದಕ್ಕೆ ರುಜುವಾತು ಸಿಕ್ಕುವ ಬಗೆ ಹೇಗೆ!....ನನ್ನ ಸಂಕಲ್ಪವೊಂದುಂಟು. ಅದನ್ನು ನೆರವೇರಿ ಸಲು ನಿನ್ನ ಸಹಾಯವನ್ನು ಬೇಡಿದರೇನೆನ್ನುವಿ?'

'ನನ್ನ ಸೋದರಿಯೆಂದಮೇಲೆ ಕೈಲಾದುದನ್ನು ಮಾಡುವೆನು.'

ಇಷ್ಟರಲ್ಲಿ ಹೊರಗಡೆಯಿಂದ ನಾಲ್ಕು ಸಿಪಾಯಿಗಳು ಮನೆಯ ಕಡೆ ಬಂದರು. ಕದಂಬನು ಅವರನ್ನು ತೋರಿಸಿ 'ನೋಡಿದಿರೋ, ಇಲ್ಲಿಂದಾಚೆಗೆ ಇನ್ನು ನೀವು ಹೋಗಬೇಕಾದರೆ ಅಸಾಧ್ಯ' ಎಂದನು.

'ಅಸಾಧ್ಯ! ಅಂತಹುದೇನೂ ಇಲ್ಲ. ಆದರೆ ನನಗೇ ಹೋಗಲು ಮನಸ್ಸಿಲ್ಲ. ಅವರು ನನ್ನನ್ನೆಳೆದುಕೊಂಡು ಹೋದರೆ ಹೋಗಲಿ.'

'ಹಾಗಲ್ಲ. ನೀವು ಕೋಣೆಯೊಳಕ್ಕೆ ಹೋಗಿ ಬಾಗಿಲು ಹಾಕಿಕೊಳ್ಳಿ; ನಾನು ಪುನಃ ಬಂದು ಕೂಗುವ ವರೆಗೂ ತೆಗೆಯಬೇಡಿ.'

'ಹಾಗೆಯೇ ಆಗಲಿ. ಇಂದಿರೆಗೆ ಈ ವಿಚಾರವು ಗೋಚರವಾಗದಿರಲಿ. ಘಾಬರಿಯಿಂದ ಅನರ್ಥವಾದೀತು.'

'ಸರಿ. ಅದಕ್ಕಾಗಿ ಭಯಪಡಲವಶ್ಯಕವಿಲ್ಲ. ಇಂದಿರೆಗೆ ಯಾವ ವಿಧವಾದ ತೊಂದರೆಯನ್ನು ಯಾರೂ ಉಂಟುಮಾಡಲಾರರು.'

ಇಷ್ಟು ಹೊತ್ತಿಗೆ ಸಿಪಾಯಿಗಳು ತಲಬಾಗಿಲ ಬಳಿ ಹತ್ತು ಗಜ ದೂರದಲ್ಲಿದ್ದರು. ಕದಂಬನು ಅಲ್ಲಿಂದ ಹೊರಟು ಅವರ ಮುಖಂಡನ ಕಿವಿಯಲ್ಲಿ ಏನನ್ನೋ ಹೇಳಿ ಹೊರಟುಹೋದನು. ಬಿಹಾರಿಯು ಬಾಗಿಲು ಹಾಕಿಕೊಂಡಳು. ಸಿಪಾಯಿಗಳು ಸದ್ದುಮಾಡದೆ ಬಾಗಿಲ ಬಳಿಗೆ ಬಂದು ಕೂತರು.

—

## ೧೧

ಕದರಿಯು ಗರ್ಗಲಾಲನನ್ನು ಬಲವಾಗಿ ಹಿಡಿದು ಎತ್ತಿಕೊಂಡು ಅರಮನೆಯ ಒಂದು ಕೋಣೆಯಲ್ಲಿ ಉರುಳಿಸಿದನು. ಅವನ ಹಿಂದೆಯೇ ಯಶವಂತನೂ ಕೂಡ ಆ ಮನೆಯೊಳಕ್ಕೆ ಹೊರಟನು.

'ನಮ್ಮನ್ನೇತಕ್ಕೆ ಹಿಂಬಾಲಿಸಿದೆ? ಸುಳ್ಳು ಹೇಳಿದರೆ ನಿನ್ನನ್ನು ಸುಟ್ಟು ಭಸ್ಮ ಮಾಡುತ್ತೇನೆ. ನಿಜವನ್ನು ಬೊಗಳು.'

ಗರ್ಗಲಾಲನೇನೋ ಧೈರ್ಯಶಾಲಿಯೇ. ಆದರೆ ಕದರಿಯ ಏಟೂ ಯಶವಂತನ ಮುಖಚ್ಛಾಯೆಯೂ, ಇವೆರಡೂ ಸೇರಿ ಅವನನ್ನು ಬಿರುಗಾಳಿಗೆ ಸಿಕ್ಕ ಎಲೆಯಂತೆ ಅಲ್ಲಾಡಿಸಿಬಿಟ್ಟವು. ಅವನಿಗೆ ಉಪಾಯವೇನೂ ಕಂಡು ಬರಲಿಲ್ಲ. ಸುತ್ತಲೂ ನೋಡಿದನು. ಕದರಿಯು 'ಏನು ಹಾಗೆ ನೋಡುತ್ತೀ? ಪಿಶಾಚಿ!....ಬೇಗನೆ ಹೇಳುತ್ತೀಯೋ ಅಥವಾ ಅದನ್ನು ನಿನ್ನಿಂದ ಗುದ್ದಿ ಈಚೆಗೆ ತೆಗೆಯಲೋ?' ಎಂದೊಡನೆಯೇ ಗರ್ಗಲಾಲನಿಗೆ ಪ್ರಾಣವು ಹಾರಿ ಹೋದಂತಾಯಿತು.

' ನಿಮ್ಮ ಕೈಲಿರುವ ಉಂಗುರವನ್ನು ಅಪಹರಿಸಲೋಸುಗ ಹಿಂಬಾಲಿಸಿ ಬಂದೆ.' ಗರ್ಗಾಲಾಲನು ಒಪ್ಪಿಕೊಂಡ.

' ಅದರಿಂದ ನಿನಗೇನುಪಯೋಗ ?' ಯಶವಂತ ಕೇಳಿದ.

' ಬಡವನಿಗೆ ಹೊನ್ನಿನಿಂದೇನುಪಯೋಗವೆಂದರೆ....'

' ಪಾಪಿ ಸರಿಯಾಗಿ ಬೊಗಳು.' ಕದರಿ ಬೆದರಿಸಿದ.

' ಇವನಿಗೂ ನನಗೂ ಆಗುವುದಿಲ್ಲ. ಅದಕ್ಕಾಗಿ ನನ್ನ ಮೇಲೆ....'

' ಅದೇತಕ್ಕೆ ಆಗುವುದಿಲ್ಲ....ಅಪರಾಧವೇನು ?'

' ನನ್ನ ಸೇವಕ ಕದಂಬನನ್ನು ಕರೆಸಿ ಕೇಳಿದರೆ ಎಲ್ಲವೂ ಚೆನ್ನಾಗಿ ತಿಳಿಯುತ್ತದೆ.'

' ಪ್ರಕೃತದಲ್ಲಿ ಅದರ ಅವಶ್ಯಕತೆಯಿಲ್ಲ.'

ಇಷ್ಟರಲ್ಲಿ ಗರ್ಗಾಲಾಲನಿಗೆ ಧೈರ್ಯವು ತಲೆದೋರಿತು. ಇವರನ್ನು ಒಳ್ಳೆಯ ಮಾತಿಗಿಂತಲೂ, ಬೆದರಿಸಿ ಬಿಡಿಸಿಕೊಳ್ಳಬೇಕೆಂದು ಮನಸ್ಸಿನಲ್ಲಿ ನಿರ್ಧಾರಮಾಡಿಕೊಂಡನು.

' ನನ್ನನ್ನು ತಡೆಯುವುದರಿಂದ ನಮ್ಮ ಯಜಮಾನರಿಗೆ ಕೋಪ ಬರಬಹುದು. ಸುಮ್ಮನೆ ನನ್ನನ್ನು ಹಿಂಸಿಸಿ ನೀವೂ ಹಿಂಸೆಗೇತಕ್ಕೆ ಗುರಿಯಾಗುವಿರಿ?' ಗರ್ಗಾಲಾಲ ಗಟ್ಟಿಯಾಗಿ ಕೇಳಿದ.

' ಪಾಪಿ, ಯಾರೊಡನೆ ಮಾತನಾಡುತ್ತಿರುವಿ....' ಕದರಿ ಅವನಿಗೆ ಭೈರವಸ್ವರೂಪ ತೋರಿಸಿದ.

' ನನ್ನ ಯಜಮಾನರ ಹೆಸರನ್ನು ಹೇಳಿದರೆ ಎಲ್ಲವೂ ತಿಳಿಯುತ್ತದೆ.'

' ಅಂತಹ ಘನವಾದ ನಿನ್ನ ಯಜಮಾನರು ಯಾರು ?' ಯಶವಂತ ಕೇಳಿದ.

' ವೀರಸೇನರು.'

' ವೀರಸೇನರು ನಿನ್ನ ದುಷ್ಕೃತ್ಯಗಳಿಗೆಲ್ಲಾ ಕಾರಣರೇನು ?'

' ಅವರು ಮಹಾರಾಜ ಯಶವಂತರ ಮೇಲೆ ಬೀಳೆಂದು ನಿನಗೆ ಹೇಳಿದರೇನು ?' ಕದರಿ ಕೆಣಕಿ ಮತ್ತೆ ಕೇಳಿದ.

' ಇಲ್ಲ. ನಾನು ಮಹಾರಾಜ ಯಶವಂತರಿಗೇನೂ..ಅಪಕಾರವನ್ನು ಮಾಡಿಲ್ಲವಲ್ಲ.'

' ನಿನ್ನ ಎದುರಿನಲ್ಲಿ ನಿಂತಿರುವವರೇ......ಅವರು.' ಕದರಿ ಹೇಳಿದ.

ಗರ್ಗಾಲಾಲನ ಧೈರ್ಯವು ನೀರಾಗಿ ಹರಿದುಹೋಯಿತು. ಮತ್ಯಾವ ವಿಧವಾದ ಉಪಾಯವೂ ಪ್ರಯೋಜನವಿಲ್ಲವೆಂದರಿತು, ಮಹಾರಾಜ ಯಶವಂತನಿಗೆ ಉದ್ದಕ್ಕೆ ನಮಸ್ಕಾರ ಮಾಡಿದನು. ' ನನ್ನ ಸರ್ವಾಪರಾಧ ವನ್ನು ಕ್ಷಮಿಸಿ, ಮಹಾರಾಜ. ತಾವೆಂದು ತಿಳಿದಿರಲಿಲ್ಲ! '

' ಏಳು ಏಳು, ಸುಮ್ಮನೇ ಈ ನಾಟಕವನ್ನೇತಕ್ಕೆ ಹೂಡುತ್ತಿರುವಿ? ನೀನು ಮಾಡಿರುವ ಪ್ರತಿಯೊಂದು ಕೆಲಸವೂ ನನ್ನ ಕಿವಿಗೆ ಬಿದ್ದಿದೆ. ಪ್ರತಿ ನಿಮಿಷದಲ್ಲಿಯೂ ನಿನ್ನ ಚರ್ಯಗಳನ್ನು ಗಮನಿಸಲು ನನ್ನ ಮಿತ್ರನನ್ನು ನಿನ್ನ ಬಳಿ ಇಟ್ಟಿರುವೆ. ಕದಂಬ ಯಾರೆಂದು ತಿಳಿದಿರುವಿ? ನನ್ನ ಮಿತ್ರ, ರಾಜಾರಾಮ. ಈಗಲಾದರೂ ನಿಜವು ತಿಳಿಯಿತೆ? ಮಂತ್ರಿ ಬಾಜೀರಾಯರು ಹಿಂತಿರುಗಿ ಬರುವವರೆಗೂ ನಿನ್ನನ್ನು ಸೆರೆಯಲ್ಲಿಟ್ಟಿದ್ದು, ಅನಂತರ ಅವರ ಇಷ್ಟಾನುಸಾರ ನಿನಗೆ ತಕ್ಕ ಶಿಕ್ಷೆಯನ್ನು ವಿಧಿಸಲಾಗುತ್ತದೆ. ನೀನಿಷ್ಟು ಬುದ್ಧಿವಂತನಾದರೂ ಅರಮನೆಯ ಮುಂಭಾಗದಲ್ಲಿ ಶಿಪಾಯಿಗಳಿಲ್ಲದಿದ್ದು ದನ್ನು ಗಮನಿಸಲಿಲ್ಲ. ಸಿಪಾಯಿಗಳಿದ್ದ ಪಕ್ಷದಲ್ಲಿ ನೀನು ಒಳಕ್ಕೆ ಬರುತ್ತಿರ ಲಿಲ್ಲ; ಹೀಗೆ ನಮ್ಮ ಕೈಗೆ ಸಿಕ್ಕಿಬೀಳುತ್ತಿರಲಿಲ್ಲ. ಈಗ ನೋಡು ನಾಲ್ಕಾರು ಸಿಪಾಯಿಗಳು ಬಾಗಿಲಲ್ಲಿರುವರು. ಇಗೋ ಮತ್ತೆ ನಾಲ್ವರು ನಿನ್ನನ್ನು ಸೆಳೆದೊಯ್ಯಲು ಬರುತ್ತಿರುವರು.'

ನಾಲ್ಕು ಸಿಪಾಯಿಗಳು ಒಳಕ್ಕೆ ಬಂದು, ಗರ್ಗಾಲಾಲನಿಗೆ ಬೇಡಿಯನ್ನು ಹಾಕಿ ಅವನನ್ನು ಕರೆದುಕೊಂಡು ಹೋದರು.

---

## ೧೨

ಇಂದಿರೆಗೆ ಕ್ರಮೇಣ ಗುಣವಾಗುತ್ತಾ ಬಂದಿತು. ಮೊದಲನೆಯ ದಿನ ಅವಳು ಚಿಕ್ಕಮನೆಯಿಂದೀಚೆಗೆ ಬಂದೊಡನೆಯೇ ಅಲ್ಲಿದ್ದ ಸಿಪಾಯಿಗಳನ್ನು ನೋಡಿ ಬೆಚ್ಚಿಬಿದ್ದಳು; ಬಿಹಾರಿಯ ಬಳಿಗೆ ಹೋಗಿ ಕೇಳಿದಳು. ' ಅಮ್ಮಾ, ಇದೇನು? ಸಿಪಾಯಿಗಳೇತಕ್ಕಿಲ್ಲಿ? '

'ಇಂದಿರೆ, ಮನೆಯು ಕಾವಲಿಗಾಗಿ. ನಾವೇ ಹೆಂಗಸರೇ ಇಲ್ಲಿರುವುದರಿಂದ ಕಾವಲಿಗಾರರಾದರೂ ಇರಬೇಕಲ್ಲವೆ?'

'ಹೌದು. ಆದರೆ....'

ಇಂದಿರೆಯು ಬಿಹಾರಿಯ ಮುಖವನ್ನು ನೋಡಿದಳು. ಅವಳ ಮನಸ್ಸಿನಲ್ಲಿರುವುದು ಬಿಹಾರಿಗೆ ತಿಳಿಯಿತು. ಬಿಹಾರಿಯು ತನ್ನ ದೃಷ್ಟಿಯನ್ನು ಬೇರೆ ಕಡೆ ತಿರುಗಿಸಿ ಇಂತೆಂದಳು. 'ಮಗೂ, ನಿಂತಿರುವೆಯಲ್ಲಾ. ಕೂತುಕೋ.' ಇಂದಿರೆಯು ಅಲ್ಲಿದ್ದ ಒಂದು ಸುಖಾಸನದ ಮೇಲೆ ಕುಳಿತಳು. 'ಮಗು, ನನ್ನಿಂದ ನಿನಗೀ ದುರವಸ್ಥೆಯೊದಗಿತು. ನನ್ನ ಪಾಪಕರ್ಮವೆಂದಿಗೆ ಸವೆಯುವುದೋ ಕಾಣೆ.'

'ಅಮ್ಮಾ, ಸುಮ್ಮನೇತಕ್ಕೆ ಪೇಚಾಡುತ್ತಿರುವಿ?....ಆದದ್ದು ಆಗಿ ಹೋಯಿತು. ಈಗಲಾದರೂ ಸುಖ....'

'ಇಂದಿರೆ, ಅದು ನನ್ನ ಹಣೆಯಲ್ಲಿ ಬರೆದಿಲ್ಲ. ಕೈಗೆ ಸಿಕ್ಕಿದುದನ್ನು ಬಿಟ್ಟೆ. ಎಲ್ಲವನ್ನೂ ಹೇಳಿದ ಹೊರತು ನನಗೆ ನೆಮ್ಮದಿಯಿಲ್ಲ.'

'ಅಮ್ಮಾ, ನಿನ್ನ ಪೇಚಾಟವನ್ನು ನೋಡಲಾರೆನಮ್ಮ.'

'ಇಂದಿರೆ, ನನ್ನ ವೃತ್ತಾಂತವನ್ನು ಕೇಳಿದ ನಂತರ ನನ್ನನ್ನು ಈಗಿನಂತೆ ಪ್ರೀತಿಸುವಿಯಾ? ನಿನಗೆ ಮೋಸ ಮಾಡಲಿಷ್ಟವಿಲ್ಲ. ಕೇಳು....ನಿನ್ನ ತಂದೆಯು ನನ್ನನ್ನು ಮದುವೆಯಾದುದರಿಂದ ಆತನಿಗೆ ಬರುತ್ತಿದ್ದ ಆಸ್ತಿಯೆಲ್ಲವೂ ನಿಂತು ಹೋಯಿತು.'

'ಅದೇಕಮ್ಮಾ?'

'ಮಗು, ನಾನೊಬ್ಬ ಬಡವನ ಮಗಳು. ನನ್ನ ತಂದೆಯೊಬ್ಬ ಕಾರಕೂನ. ಈಗಿನ ಸೇನಾಧಿಪತಿಯ ಕೈಕೆಳಗೆ ಆತನು ಕೆಲಸ ಮಾಡುತ್ತಿದ್ದ. ಇಬ್ಬರೂ ಒಂದೇ ಕುಲಕ್ಕೆ ಸೇರಿದವರು. ಆದರೇನು, ಸೇನಾಧಿಪತಿಯು ಹಣವಂತ. ನಾವು ಬಡವರು. ಇಬ್ಬರಿಗೂ ಸ್ನೇಹವು ಹೇಗೆ ತಾನೇ ಇದ್ದೀತು! ಒಂದು ದಿನ ರಾಜಕಾರ್ಯಕ್ಕಾಗಿ ಸೇನಾಧಿಪತಿಯು ತನ್ನ ಮಗನನ್ನು ನಮ್ಮ ಮನೆಗೆ, ನನ್ನ ತಂದೆಯನ್ನು ನೋಡಲು, ಕಳುಹಿಸಿದನು. ಆ ಸಮಯದಲ್ಲಿ ತಂದೆಯವರು ಎಲ್ಲಿಗೋ ಹೋಗಿದ್ದರು; ನಾನೇ ಮಾತನಾಡಬೇಕಾಗಿ ಬಂದಿತು ಒಬ್ಬರನ್ನೊಬ್ಬರು ನೋಡಿದೊಡನೆಯೇ ಪ್ರೇಮವು ಹುಟ್ಟಿತು.

ನಾನೆಷ್ಟು ವಿಧವಾಗಿ ಹೇಳಿದರೂ ಕೇಳದೆ ಆತನು ನನ್ನನ್ನೇ ಮದುವೆಯಾಗ ಬೇಕೆಂದು ಹಟಹಿಡಿದನು.'

'ಹಾಗಾದರೆ ನಾನು..ಶಿವಸಿಂಹರ ವಂಶದವಳೆ!'

'ಹೌದು, ಮಗು. ಶಿವಸಿಂಹರ ಕಿವಿಗೆ ಈ ವಾರ್ತೆಯು ಬಿದ್ದೊಡ ನೆಯೇ ಅವರು ಮಗನನ್ನು ಬೈದು, ನಮ್ಮ ಮನೆಗೆ ಬಾರದಂತೆ ಕಟ್ಟು ಮಾಡಿದರು. ಅದಕ್ಕಾತನು ಲೆಕ್ಕಿಸಲಿಲ್ಲ; ಆತನನ್ನು ಮನೆಯಿಂದಟ್ಟಿದರು. ನಿನ್ನ ತಂದೆಯುವರು ಇಲ್ಲಿಂದ ಘನಪುರಿಗೆ ಹೊರಟು, ಅಲ್ಲಿ ಆರು ತಿಂಗಳ ವರೆಗೆ ಕೆಲಸಮಾಡಿ, ಸ್ವಲ್ಪ ಹಣವನ್ನು ಗಳಿಸಿ, ನನ್ನ ತಂದೆಯ ಬಳಿಗೆ ಬಂದರು; ನನ್ನನ್ನು ಮದುವೆಮಾಡಿಕೊಡೆಂದು ತಂದೆಯುವರನ್ನು ಕೇಳಿದರು. ತಂದೆ ಯುವರು ಆತನ ಪ್ರೇಮಕ್ಕೆ ಬಾಗಿ ಪ್ರತ್ಯುತ್ತರವನ್ನೀಯಲಾರದೆ ನನ್ನನ್ನು ಆತನಿಗೆ ಕೊಟ್ಟು ಮದುವೆಮಾಡಿದರು. ಮದುವೆಯಾದ ಎರಡನೆಯ ವರ್ಷ ದಲ್ಲಿಯೇ ನೀನು ಹುಟ್ಟಿದೆ ಐದುವರ್ಷ ಕಾಲ ಎಲ್ಲವೂ ಸುಖಮಯವಾಗಿ ದ್ದಿತು. ಆದರೆ ದಾರಿದ್ರ್ಯ ಪೀಡೆಯೊಂದು ನಮ್ಮನ್ನು ಬಾಧಿಸುತ್ತಿತ್ತು.

'ಒಂದು ದಿನ ಸಾಯಂಕಾಲ ನಿನ್ನ ತಂದೆಯುವರು ಒಬ್ಬ ಯುವಕನನ್ನು ಗಾಡಿಯಲ್ಲಿ ಹಾಕಿಕೊಂಡು ಮನೆಗೆ ತಂದರು. ಅವನು ಒಂದು ಗಾಡಿಯ ಎದುರಿಗೆ ಸಿಕ್ಕಿ ಘಾಯಪಟ್ಟಿದ್ದನು. ಪರದೇಶಿಯಾದುದರಿಂದ ಆತನನ್ನಾದರಿ ಸುವರಾರೂ ಇರಲಿಲ್ಲ. ನಿನ್ನ ತಂದೆಯುವರಿಗೆ ಅವನ ಮೇಲೆ ಕರುಣ ಹುಟ್ಟಿ ಕಾಲು ಸರಿಹೋಗುವವರೆಗೂ ತಮ್ಮ ಮನೆಯಲ್ಲಿಯೇ ಇಟ್ಟುಕೊಂಡಿದ್ದರು. ಎಂದು ಅವನು ನಮ್ಮ ಮನೆಯಲ್ಲಿ ಕಾಲಿಟ್ಟನೋ ಅಂದೇ ನನ್ನ ಶಾಂತಿಯು ಕೊನೆಗಂಡಿತು. ಆತನಿಗೆ ಶುಶ್ರೂಷೆ ಮಾಡುತ್ತಾ, ಅವನ ಮಾತುಗಳನ್ನೇ ಕೇಳುತ್ತಾ, ನಿಧಾನವಾಗಿ ಆತನ ಬಲೆಯಲ್ಲಿ ಬಿದ್ದೆನು. ಹೆಚ್ಚು ಹೇಳಲೇನು, ಅವನು ಮನೆಯನ್ನು ಬಿಟ್ಟು ಆಚೆ ಹೊರಡಲು, ನಾನು ಮುಂದಾಲೋಚನೆ ಇಲ್ಲದೆ, ಅವನನ್ನೇ ಹಿಂಬಾಲಿಸಿ, ಈ ನರಕದಲ್ಲಿ ಬಿದ್ದೆನು.'

'ಅಮ್ಮಾ, ಇದೆಲ್ಲಾ ಅವರವರು ಮಾಡಿದ ಕರ್ಮದ ಫಲ. ಇವುಗಳ ಆಲೋಚನೆಯನ್ನು ಇನ್ನು ಬಿಡು. ದೇವರು ಕರುಣಿ. ಎಂತಹ ಪಾಪಿಗಳನ್ನಾ ದರೂ ಮನ್ನಿಸುವನು.'

'ಮಗು ಇಂದಿರೆ, ನೀನು ಹೇಳುವದೇನೋ ನಿಜ. ಆದರೆ ನಿನ್ನಿಂದ

ನಾನು ಕೃತಾರ್ಥಳಾಗಬೇಕು. ನೀನೇ ನನಗೆ ಮುಕ್ತಿಮಾರ್ಗ ತೋರಿಸ ತಕ್ಕವಳು. ಇಂದಿರೆ, ನಿನ್ನನ್ನು ಬಿಟ್ಟು ನಾನು ಒಂದು ನಿಮಿಷ ಮಾತ್ರವೂ ಇರಲಾರೆ. '

' ಯಾಕಿರಬೇಕಮ್ಮ? ನಾನು ತಾನೆ ನಿನ್ನನ್ನು ಬಿಟ್ಟು ಹೇಗಿರಲಮ್ಮ? ಆ ಲಾಲನೆಲ್ಲಿ? '

' ಅವನಿಗಾಗಬೇಕಾದ ಶಿಕ್ಷೆಯಾಯಿತು. ಈಗ ಶೆರೆಯಲ್ಲಿದ್ದಾನೆ. '

' ಏತಕ್ಕಾಗಿ? ಅಂತಹ ತಪ್ಪೇನಿದೆ? '

' ಅದು ನಿನಗೆ ತಿಳಿಯತಕ್ಕದ್ದಲ್ಲ ಇಂದಿರೆ ಮಹತ್ತರವಾದ ಪಾಪ ಕಾರ್ಯವನ್ನು ಮಾಡಿರುವನು. ಅದಕ್ಕೆ ತಕ್ಕ ಶಿಕ್ಷೆಯನ್ನು ಅನುಭವಿಸ ಬೇಕೆಂದು ನಾನು ಹಿಂದೆಯೇ ಎಷ್ಟೋಸಲ ಅವನಿಗೆ ಹೇಳಿರುವೆ. '

' ಅಂತಹ ಪಾಪಕಾರ್ಯ? '

' ಅದನ್ನು ನಾನೀಗ ಹೇಳಲಾರೆ. ನನ್ನಿಂದಾಗಬೇಕಾದ ಕಾರ್ಯ ವೊಂದುಂಟು. ಅದನ್ನು ನಾನು ಮುಗಿಸಿದ ಮೇಲೆ ಎಲ್ಲವೂ ನಿನಗೇ ತಿಳಿ ಯುವದು. ಅಂದು ನಾನು ಸುಖವಾಗಿ ಸಾಯುವೆ. '

' ಅಮ್ಮಾ ಇದೇನು....ನೀನೇತಕ್ಕೆ ಅಂತಹ ಕೆಲಸಕ್ಕೆ ಕೈಹಾಕ ಬೇಕು?..ಸಾವನ್ನೇತಕ್ಕೆ ಕೋರುತ್ತಿರುವಿ? '

' ಇಂದಿರೆ, ನಾನು ಸಾವನ್ನು ಕೋರುತ್ತಿಲ್ಲ. ಆ ಕೆಲಸವನ್ನು ಮಾಡುವುದು ನನ್ನ ಕರ್ತವ್ಯ. ಅದರಲ್ಲಿ ಸತ್ತರೆ ವೀರಸ್ವರ್ಗ. '

' ಅಮ್ಮಾ ನನಗೇಕೋ ಬಹಳ ಭಯವಾಗುತ್ತಿದೆ. ಆದಾಗ್ಯೂ ಮನಸ್ಸೊಂದು ಕಡೆ ನಿನ್ನ ನಿರ್ಧಾರವು ಸರಿಯೆಂದು ಹೇಳುತ್ತಿದೆ. '

' ನೀನೇನೂ ಆಲೋಚನೆ ಮಾಡಬೇಡ ಮಗೂ. ಎಲ್ಲಾ ದೈವ ಸಂಕಲ್ಪ. '

' ಆಗಲಮ್ಮಾ....ಅಲ್ಲಿ ನೋಡಮ್ಮ, ಆ ಗುಲಾಬಿಯ ಹೂ ಎಷ್ಟು ಚೆನ್ನಾಗಿದೆ! ಆ ಗಿಡದಲ್ಲಿ ಗೊಂಚಲಿನಲ್ಲಿರುವಷ್ಟು ಸೌಂದರ್ಯ ಇದಕ್ಕೆ ಬರುವದಿಲ್ಲ. ಹೂವೇನೋ ಬಹಳ ಮುದ್ದಾಗಿದೆ. '

' ಒಂಟಿಯಾಗಿದ್ದು ಎಷ್ಟು ಸೌಂದರ್ಯವಿದ್ದರೂ ಅಷ್ಟೇ, ಸರಿಯಾದ

ಪುರುಷನನ್ನು ಸೇರಿದ ಹೊರತು. ಮಗು, ದೇವರ ದಯವಿದ್ದರೆ ನಿನ್ನ ಇಷ್ಟಾರ್ಥವು ಬೇಗನೆ ಪೂರೈಸುವುದು. '

' ಅಮ್ಮಾ....ಆ ಅದೃಷ್ಟ ನನಗಿದೆಯೆ ? '

—

೧೩

ಬಿಹಾರಿಗೆ ಮನಸ್ಸಿನ ಕಳವಳ ಹೆಚ್ಚಿ ನಿದ್ದೆ ಚೆನ್ನಾಗಿ ಹತ್ತದೆ ಬೆಳಗಾಗುವ ಹೊತ್ತಿಗೆ ಮುಖವು ಬಿಳುಪೇರಿದ್ದಿತು. ಆದರೆ ತಾನು ಮಾಡತಕ್ಕುದುದನ್ನು ಅವಳು ಆ ರಾತ್ರಿಯೇ ನಿರ್ಧಾರಮಾಡಿಕೊಂಡಿದ್ದಳು. ಒಬ್ಬಳೇ ಅದನ್ನು ಮಾಡಲು ಸಾಧ್ಯವಿರಲಿಲ್ಲ. ಅಂತಹ ಕೆಲಸಕ್ಕೆ ಸಹಾಯಮಾಡುವವರಾರು ? ಕದಂಬನಲ್ಲದೆ ಮತ್ತಾರಿಂದಲೂ ಸಾಧ್ಯವಿಲ್ಲವೆಂದು ಅವಳಿಗೆ ತೋರಿತು. ಅವನನ್ನು ನೋಡಿದ ಕೂಡಲೇ ಅವನ ಸಹಾಯವನ್ನು ಬೇಡಬೇಕೆಂದು ಬಿಹಾರಿಯು ಮನಸ್ಸಿನಲ್ಲಂದುಕೊಂಡಳು. ಎಂದಿನಂತೆ ಮಾರನೆಯ ದಿನ ಕದಂಬನು ಬಿಹಾರಿಯನ್ನು ನೋಡಲು ಬಂದನು.

' ಕದಾ, ಈಗ ತಾನೆ ನಿನ್ನನ್ನು ನೆನೆಸಿಕೊಳ್ಳುತ್ತಿದ್ದೆ. ನಿನಗೆ ಸಾವಿರ ವರುಷ ಆಯುಸ್ಸು ! ' ಹೀಗೆನ್ನುತ್ತಾ ಬಿಹಾರಿಯು ಅವನ ಮುಖವನ್ನು ನೋಡಿದಳು. ಆ ದಿನ ಕದಂಬನ ಮುಖದ ಕಳೆಯೇ ಬದಲಾಯಿಸಿದ್ದಿತು.

' ಹೀಗೆ ಬಾ, ಕದಾ. ಕುಳಿತುಕೊ. ಏನು ಯೋಚಿಸುತ್ತಿರುವೆ ? ನನ್ನೊಡನೆ ಹೇಳಬಾರದೆ ?....ನಾನು ನಿನ್ನ ಸೋದರಿಯಲ್ಲವೆ ? '

' ಅದಕ್ಕಾಗಿಯೆ ನಾನಿಲ್ಲಿಗೆ ಬಂದುದು. ನನ್ನ ಹೆಸರು ಕದಂಬನಲ್ಲ. ನಿಮಗಿದುವರೆವಿಗೂ ಮೋಸ ಮಾಡಿದೆನು; ಕ್ಷಮಿಸಬೇಕು. '

ಕದಂಬನ ಗಂಟಲು ಕಟ್ಟಿದಂತೆ ತೋರಿತು. ಧ್ವನಿಯೂ ಒರಟಾಗಿದ್ದಿತು. ಇದನ್ನು ಕೇಳಿದೊಡನೆಯೇ ಬಿಹಾರಿಯು, ' ನೆಲದ ಮೇಲೆ ಕೂತಿರಲ್ಲ ! ಇಲ್ಲಿ ಕೂಡಿ. ' ಎಂದು ಗದ್ಗದಸ್ವರದಿಂದ ಮಾತನಾಡಿದಳು.

' ನನ್ನ ಸ್ಥಳವಿದೇ....ನನಗಿಲ್ಲಿಯೇ ಸುಖವಾಗಿದೆ. '

' ಕದಂಬನಲ್ಲದಿದ್ದರೆ....ನನ್ನ ಸಹೋದರರೂ ಅಲ್ಲವೆನ್ನಿ. '

'ನನ್ನನ್ನು ನಿಮ್ಮ ಸಹೋದರನೆಂದೆಣಿಸಬೇಕೆಂದೇ ನಿಮ್ಮಲ್ಲಿಗೆ ಈ ರೀತಿಯಲ್ಲಿ ಒಂದು ಹೇಳುತ್ತಿರುವುದು.'

'ಬಹುವಚನವನ್ನೇತಕ್ಕೆ ಉಪಯೋಗಿಸುತ್ತಿರುವಿರಿ?'

'ತಾವೂ ಅದನ್ನು ತೆಗೆದುಹಾಕಿದ ಪಕ್ಷದಲ್ಲಿ, ನಾನೂ ಹಾಗೆಯೇ ಮಾಡುವೆನು.'

'ಸಹೋದರ, ನಿನ್ನ ಹೆಸರೇನು?'

'ಸಹೋದರಿ, ನನ್ನ ಹೆಸರು ರಾಜಾರಾಮು. ನಾನು ಮಹಾರಾಜ ಯಶವಂತರ ಸೇವಕ.

ಇಬ್ಬರೂ ಒಬ್ಬರ ಮುಖವನ್ನು ಮತ್ತೊಬ್ಬರು ನೋಡಿ ನಕ್ಕರು. ಬಿಹಾರಿಯ ಕಣ್ಣುಗಳಲ್ಲಿ ನೀರು ತುಂಬಿತು. 'ದೇವರು ದೊಡ್ಡವನು. ನಿಜವಾಗಿಯೂ ಕರುಣಿ....ಸಹೋದರ, ನೀನೊಬ್ಬನೇ ಮೋಸ ಮಾಡಿಲ್ಲ. ನಾನೂ ಸಹ ನಿನಗೆ ಮೋಸಮಾಡಿದ್ದೇನೆ.'

'ಅದೆಂತು?'

'ನನ್ನ ಹೆಸರು ಬಿಹಾರಿಯಲ್ಲ....ಲೀಲಾವತಿ. ನಾನು ಸೇನಾಧಿಪತಿಯ ಸೊಸೆ.'

ರಾಜಾರಾಮನು ಎರಡು ಕೈಗಳಿಂದಲೂ ತನ್ನ ಮುಖವನ್ನು ಮುಚ್ಚಿಕೊಂಡು ಕುಳಿತನು. ಸ್ವಲ್ಪ ಹೊತ್ತಿನಲ್ಲಿಯೇ ಅವನು ಬಿಕ್ಕಿ ಅಳುತ್ತಿದ್ದಂತೆ ತೋರಿತು. ಬಹಳ ಪ್ರಯತ್ನಪಟ್ಟು 'ಅಕ್ಕ, ನಾನು ನಿಮ್ಮ ದೊಡ್ಡಪ್ಪ ಪರಮಸಿಂಹರ ಮಗ' ಎಂದನು. ಬಿಹಾರಿಯು ಹಟಾತ್ತಾಗಿ ಮೇಲಕ್ಕೆ ಎದ್ದಳು. ರಾಜಾರಾಮನ ಬಳಿ ಬಂದು ಅವನ ಭುಜದ ಮೇಲೆ ಕೈಯಿಟ್ಟು, 'ರಾಜ! ಇದೇನಿದು? ನೀನು ಬಹಳ ಧೈರ್ಯಶಾಲಿ. ಅಳಬಹುದೆ! ಬೇಡಪ್ಪ. ಅವರವರ ಕರ್ಮಕ್ಕೆ ಅನುಸಾರವಾಗಿ ಅವರವರು ಅನುಭವಿಸಬೇಕಲ್ಲವೆ?' ಎಂದು ಸಮಾಧಾನಪಡಿಸಲೆತ್ನಿಸಿದಳು.

'ಇಲ್ಲ ಅಕ್ಕ; ಹಿಂದಿನದೆಲ್ಲ ನನಗೆ ಜ್ಞಾಪಕಕ್ಕೆ ಬಂತು. ತಡೆಯಲಾರದೆ ಅಳು ಬಂದಿತು.'

'ರಾಜ, ಈಗಲೂ ನನ್ನಮೇಲೆ ನಿನಗೆ ಅದೇ ಪ್ರೀತಿಯಿದೆಯೆ?'

'ಅಕ್ಕ, ಏತಕ್ಕಾಗಿ ಹೀಗೆ ಕೇಳುತ್ತಿರುವೆ?'

' ನಿನ್ನಿಂದ ಬಹಳ ಸಹಾಯವಾಗಬೇಕು. '

' ಆಗಬಹುದು; ಆದರೆ ಮಹಾರಾಜರ ಅಪ್ಪಣೆ....'

' ಆ ಕೆಲಸಕ್ಕೆ ಮತ್ತಾರನ್ನೂ ಕರೆಯಲಾರೆ. ನೀನು ಬರುವುದಿಲ್ಲವೆಂದರೆ ನಾನೊಬ್ಬಳೇ ಹೋಗಬೇಕು; ಹೋಗುವೆ. '

' ಬೇಡ ಅಕ್ಕ....ನಾನೂ ಬರುತ್ತೇನೆ. '

' ಇವತ್ತೇ ಸಾಯಂಕಾಲಕ್ಕೆ ಹೊರಡಲು ಸಿದ್ಧವಾಗಬೇಕು. ಮಹಾರಾಜರ ಅಪ್ಪಣೆಯನ್ನು ಪಡೆದು ಬರುವಿಯಷ್ಟೆ? '

' ಆಗಲಿ ಅಕ್ಕಾ....ನನ್ನ ಕೈಲಾದುದನ್ನು ಮಾಡಲು ಸಿದ್ಧ. '

* * * * *

ಆ ದಿನ ಸಾಯಂಕಾಲ ಅರಮನೆಯಿಂದ ಒಂದು ಕುದುರೆಯ ಗಾಡಿಯು ಹೊರಟಿತು. ಒಳಗಿದ್ದಿಬ್ಬರೂ ಬಹಳ ಮೌನವಾಗಿ ಕುಳಿತಿದ್ದರು. ಊರು ಮುಂದಿನ ಹನುಮಂತನ ದೇವಾಲಯಕ್ಕೆ ನೂರು ಗಜಗಳ ದೂರದಲ್ಲಿ ನಿಂತಿತು. ಒಳಗಿದ್ದ ವ್ಯಕ್ತಿಗಳು ಗಾಡಿಯಿಂದಿಳಿದು ದೇವಾಲಯದೊಳಕ್ಕೆ ಹೋದರು.

ಪೂಜಾರಿಯು ದೇವರ ಮುಂದೆ ಕುಳಿತ್ತಿದ್ದನು. ಇವರನ್ನು ನೋಡಿದೊಡನೆಯೇ ಅಲ್ಲಿಂದೆದ್ದು ಮುಂದಕ್ಕೆ ಬಂದನು. ಮುಂದೆ ಹೊರಟ ವ್ಯಕ್ತಿಯು ಅವನ ಕಿವಿಯಲ್ಲಿ ಏನೋ ಹೇಳಿತು. ಪೂಜಾರಿಯು ಚಮುಕಿತನಾಗಿ ' ತಮ್ಮ ಇಷ್ಟಾನುಸಾರ ' ಎಂದು ಹೇಳುತ್ತಾ ಆಚೆ ಹೊರಟು ಹೋದನು. ವ್ಯಕ್ತಿಯು ವಿಗ್ರಹದ ಹಿಂದೆ ಹೋದಕೂಡಲೆ ಗುಡಿಯ ಬಾಗಿಲುಗಳು ಹಟಾತ್ತಾಗಿ ಮುಚ್ಚಿಕೊಂಡವು. ಎದುರಿನಲ್ಲಿ ಅತಿ ದೇದೀಪ್ಯಮಾನವಾದ ಬೆಳಕು ಹಿಂದೆ ನಿಂತಿದ್ದ ವ್ಯಕ್ತಿಯನ್ನು ದಿಕ್ಕುತೋಚದಂತೆ ಮಾಡಿತು. ಸ್ವಲ್ಪ ಹೊತ್ತಿನಲ್ಲಿಯೇ ವಿಗ್ರಹದ ಹಿಂದಿನಿಂದ ಒಂದು ವಿಕಾರವಾದ ವ್ಯಕಿಯು ಮೇಲಕ್ಕೆದ್ದು, ಬಾಗಿಲ ಒಳಿ ಬಂದಿತು.

' ರಾಜ, ಸದ್ದುಮಾಡದೆ ನನ್ನ ಹಿಂದೆಯೇ ಬಾ. '

' ಅಕ್ಕಾ....ಇದೇನು? ಏನು ಮಾಡಬೇಕೆಂದಿರುವೆ? '

' ಹೇಳಲಾರೆ; ಹಿಂದೆ ಬರಲು ನಿನಗಿಷ್ಟವಿಲ್ಲದಿದ್ದಲ್ಲಿ ನಾನೊಬ್ಬಳೇ ಹೋಗುತ್ತೇನೆ. '

' ಬೇಡ ಅಕ್ಕ, ಇಗೋ ಬಂದೆ. '

ವಿಕಾರವಾದ ವ್ಯಕಿಯು ಮುಂದೆ ಹೊರಟಿತು. 'ಇದೇ ಆವ್ಯಕ್ತಿಯೆ!' ಎಂದಂದುಕೊಳ್ಳುತ್ತಾ ರಾಜಾರಾಮನು ಅದರ ಹಿಂದೆಯೇ ಹೊರಟನು. ವಿಗ್ರಹದ ಹಿಂದುಗಡೆ ನೆಲದಲ್ಲಿ ಒಂದು ಬಾಗಿಲು ಕಂಡುಬಂದಿತು. ಪಕ್ಕದಲ್ಲಿದ್ದ ಮೊಳೆಯನ್ನು ಆ ವಿಕಾರವ್ಯಕ್ತಿಯು ತುಳಿಯಲು, ಬಾಗಿಲು ತೆರೆಯಿತು. ಇಬ್ಬರೂ ಒಳಗಿಳಿದರು. ಮೊದಲು ಮೊದಲು ಆ ಅಂಧಕಾರದಲ್ಲಿ ರಾಜಾರಾಮನಿಗೆ ಕಣ್ಣು ಕಾಣಿಸಲಿಲ್ಲ. ಸ್ವಲ್ಪ ಹೊತ್ತಾದನಂತರ ಸುತ್ತುಮುತ್ತಲೂ ಸ್ವಲ್ಪ ಮಟ್ಟಿಗೆ ಕಾಣಿಸಲಾರಂಭಿಸಿತು. ರಾಜಾರಾಮನು ದಿಗ್ಭ್ರಾಂತನಾಗಿ ಬಿಹಾರಿಯ ಹಿಂದೆಯೇ ಇದ್ದನು. ಇನ್ನೆಷ್ಟುದೂರ ಹೀಗೇ ಹೋಗಬೇಕೋ ಎನ್ನುವಷ್ಟರಲ್ಲಿ ಎದುರಿಗೆ ಬಾಗಿಲು ತೆರೆದಂತಾಯಿತು.

'ರಾಜ, ನನ್ನ ಹಿಂದೆಯೇ ನಿಲ್ಲು. ಎದುರಿಗೆ ಕಾಣುತ್ತಿರುವುದು ಬಾಗಿಲಲ್ಲ.'

ರಾಜಾರಾಮನು ಅದರಂತೆಯೇ ಮಾಡಿದನು. ಯಾರೋ ಒಗ್ಗಿ ನೋಡಿ, ಪುನಃ ಬಾಗಿಲನ್ನು ಪೂರ್ತಿಯಾಗಿ ತೆರೆದಂತಾಯಿತು.

'ಇಗೋ ನಮ್ಮ ಎಡದಲ್ಲಿರುವುದೇ ಬಾಗಿಲು. ನೀನು ಒಳಕ್ಕೆ ಬರಬೇಡ. ಇಲ್ಲಿಯೇ ಮರೆಯಾಗಿರು. ಎದುರಿಗಿರುವುದೊಂದು ಕನ್ನಡಿ. ಅದರಲ್ಲಿ ಕಾಣದಂತೆ ಬಚ್ಚಿಟ್ಟುಕೋ. ನಾನು ಕೂಗಿದ ತಕ್ಷಣವೇ....'

'ಆಗಲಿ ಅಕ್ಕ..ನೀನು ಕೂಗಿದೊಡನೆಯೇ..'

'ಮೆಲ್ಲನೆ ಮಾತನಾಡು, ಸರಿ. ಸ್ವಲ್ಪವೂ ಅಲುಗಬೇಡ.'

ರಾಜಾರಾಮನು ಕನ್ನಡಿಯಲ್ಲಿ ಕಾಣದಂತೆ ಬಚ್ಚಿಟ್ಟುಕೊಂಡ ತರುವಾಯ, ಬಿಹಾರಿಯು ಒಳಹೊಕ್ಕು ಬಾಗಿಲನ್ನು ಪುನಃ ಹಾಗೆಯೇ ಸರಿಸಿದಳು. ಸ್ವಲ್ಪ ಹೊತ್ತಿನಲ್ಲಿಯೇ ಬಿಹಾರಿಯು ಕೂಗಿದಂತಾಯಿತು. ರಾಜಾರಾಮನು ಬಾಗಿಲನ್ನು ತಳ್ಳಿದನು. ಎದುರಿನಲ್ಲಿ ಬಿಹಾರಿಯು ವಿಕಾರವಾಗಿ ನಿಂತಿದ್ದಳು. ಮುಖಕ್ಕೆ ಮುಖವಾಡವಿರಲಿಲ್ಲ. ಅವಳೆದುರಿನಲ್ಲಿ ಒಬ್ಬ ದೃಢಕಾಯನು ನಿಂತಿದ್ದನು. ಅವನ ಮುಖಕ್ಕೆ ಮುಖವಾಡವಿದ್ದಿತು. ಅವನ ಕೈಯಲ್ಲೊಂದು ಕತ್ತಿಯಿದ್ದಿತು. ಬಿಹಾರಿಯು ಎದುರಿನಲ್ಲಿ ನಿಂತಿದ್ದನಾದುದರಿಂದ ರಾಜಾರಾಮನಿಗೆ ಆ ವ್ಯಕ್ತಿಯ ಬೆನ್ನಲ್ಲದೆ ಮುಖವು ಕಾಣಲಿಲ್ಲ. ಈ ದೃಢಕಾಯನು ಕತ್ತಿಯನ್ನು ಮೇಲಕ್ಕೆತ್ತಿ ಬಿಹಾರಿಯನ್ನು ಕತ್ತರಿಸುವುದ

ರಲ್ಲಿರಲು, ರಾಜಾರಾಮನು ಹಾರಿ ಅವನ ಕತ್ತಿನ ಮೇಲೆ ಬಲವಾಗಿ ಗುದ್ದಿದನು. ಕತ್ತಿಯು ಅವನ ಕೈಯಿಂದ ಜಾರಿ ಬಿತ್ತು; ಹಟಾತ್ತಾಗಿ ಅವನು ಕೆಳಗುರುಳಿದನು. ಆ ವ್ಯಕ್ತಿಯ ಎದೆಯಲ್ಲಿ ಒಂದು ಭರ್ಚಿಯು ನಾಟಲ್ಪಟ್ಟಿದ್ದಿತು. ರಾಜಾರಾಮನು ಮೆಲ್ಲನೆ ಮುಖವಾಡವನ್ನು ಸರಿಸಿದನು; ನೋಡುತ್ತಲೇ ಕಂಭದಂತೆ ನಿಂತನು.

ಸ್ವಲ್ಪ ಹೊತ್ತಿನ ಮೇಲೆ ಅವನು ಸುತ್ತಲೂ ನೋಡಿದನು. ಆ ಕೊಠಡಿಗೆ ಅವನು ಬಂದಿದ್ದು ಎರಡನೆಯ ಸಲ. ಮೊದಲನೆಯ ಸಲ ಮಹಾರಾಜ ಯಶವಂತನೊಡನೆ ಅವನ ತಂದೆಯು ಖಾಯಿಲೆಯಲ್ಲಿದ್ದಾಗ ಅಲ್ಲಿಗೆ ಅವನು ಬಂದಿದ್ದನು. ಅದು ತಕ್ಷಣವೇ ಮನಸ್ಸಿಗೆ ಬಂತು. ಎದುರಿನಲ್ಲಿ ಗೋಡೆಯ ಮೇಲೆ ಒಂದು ಭಂಗಾರದ ಕತ್ತಿ; ಹಿಡಿಗೆ ಮೂರು ಪಚ್ಚೆಗಳು. ಕನಸೋ ಕಳವಳವೋ ಎಂದಂದುಕೊಳ್ಳುತ್ತಾ ರಾಜಾರಾಮನು ತನ್ನ ಕಣ್ಣುಗಳನ್ನುಜ್ಜಿಕೊಂಡು ಮತ್ತೊಮ್ಮೆ ನೋಡಿದನು. ಎದುರಿನಲ್ಲಿ ಬಿದ್ದಿದ್ದ ವ್ಯಕ್ತಿಯನ್ನು ಚೆನ್ನಾಗಿ ನೋಡಿದನು. ವೀರಸೇನನೆಂಬುವುದಕ್ಕೆ ಯಾವ ಕೊರತೆಯೂ ಇರಲಿಲ್ಲ. ಅವನ ಎದೆಯ ಮೇಲೆ ಕಿವಿಯಿಟ್ಟು ನೋಡಿ ರಾಜಾರಾಮನು 'ಅಕ್ಕ..ಮುಗಿಯಿತು' ಎಂದನು.

'ರಾಜ. . ನನ್ನನ್ನು ಅಚೆಗೆ ಸಾಗಿಸು..ನಾನಿನ್ನೊಂದು ಹೆಜ್ಜೆಯನ್ನೂ ಇಡಲಾರೆ.'

ನಿಂತುಕೊಳ್ಳಲಾರದೆ ಬಿಹಾರಿಯು ಬೀಳುವುದರಲ್ಲಿದ್ದಳು. ರಾಜಾರಾಮನು ತಕ್ಷಣವೇ ಅವಳನ್ನು ಹಿಡಿದೆತ್ತಿಕೊಂಡು ಬಂದ ದಾರಿಯನ್ನು ಹಿಡಿದು ಹೊರಟನು.

—

೧೪

'ಇದು ನಿಜವೆ ರಾಜಾರಾಂ?'

'ಹೌದು ಮಹಾರಾಜರೆ, ನಾನೇ ಕಣ್ಣಾರೆ ನೋಡಿದೆ. ಖಂಡಿತವಾಗಿಯೂ ಆಕೆಯು ಬದುಕುವಂತಿಲ್ಲ. ತಮ್ಮನ್ನು ನೋಡಬೇಕೆಂದು ಹಂಬಲಿಸುತ್ತಿರುವಳು.'

' ಬಾಜೀರಾಯರಿಗೆ ಆ ವಿಚಾರವೆಲ್ಲಾ ತಿಳಿದಿರುವುದೆ ? '

' ಇಲ್ಲ. ನಾವು ಹೇಳಲಿಲ್ಲ. ಅವರು ಬಂದೊಡನೆಯೇ ಬಿಹಾರಿಯನ್ನು ನನ್ನ ಮನೆಗೆ ಕರೆದುಕೊಂಡು ಹೋಗಬೇಕೆಂದು ಪ್ರಯತ್ನಪಟ್ಟೆ. ಆದರೆ ಅವರು ಅದಕೊಪ್ಪಲಿಲ್ಲ. ಆತನ ಪತ್ನಿಯಂತೂ ಆ ಸುಶೀಲವನ್ಮನವರು. ಬಿಹಾರಿಯು ಲೀಲಾವತಿಯೆಂದು ತಿಳಿದ ಕೂಡಲೇ ತಾನೆ ಆಕೆಯ ಒಳಿ ಕೂತು ಶುಶ್ರೂಷೆಯನ್ನು ಮಾಡುತ್ತಿರುವಳು. '

' ಅಂತಹ ಸುಶೀಲೆಯರಿರುವದರಿಂದಲೇ ದೇಶದಲ್ಲಿ ಸ್ವಲ್ಪವಟ್ಟಿಗಾದರೂ ಕ್ಷೇಮವಿರುವುದು. ಅವರನ್ನು ನೋಡುವ ಮಾತ್ರದಿಂದಲೇ ಪುಣ್ಯ.... ನಡೆ ಹೋಗೊಣ. '

ತಕ್ಷಣವೇ ಹೊರಟು, ಗೋಪ್ಯವಾಗಿ ಮಂತ್ರಿಯ ಮನೆಯನ್ನು ಅವರು ಪ್ರವೇಶಿಸಿದರು. ಅಲ್ಲಿ ಮಂಚದ ಮೇಲೆ ಬಿಹಾರಿಯನ್ನು ಮಲಗಿಸಿದ್ದರು. ಒಂದು ಪಕ್ಕದಲ್ಲಿ ಇಂದಿರೆಯೂ ಮತ್ತೊಂದು ಕಡೆ ಸುಶೀಲೆಯೂ ಕುಳಿತಿದ್ದರು. ಪಕ್ಕದಲ್ಲಿ ಮಂತ್ರಿ ಬಾಜೀರಾಯನು ನಿಂತು ಮಾತನಾಡುತ್ತಿದ್ದನು. ಮಹಾರಾಜ ಯಶವಂತನೂ, ರಾಜಾರಾಮನೂ ಇಬ್ಬರೂ ಒಳ ಹೊಕ್ಕೊಡನೆಯೇ ಇಂದಿರೆ ಸುಶೀಲೆಯರಿಬ್ಬರೂ ಒಳಗೆ ಹೊರಡಲುದ್ಯುಕ್ತರಾದರು. ಆದರೆ ಮಂತ್ರಿ ಬಾಜೀರಾಯನು ' ಇಬ್ಬರೂ ಹೊರಟರೆ ಹೇಗೆ ? ಏತಕ್ಕಾದರೂ ಕೂಗಿದರೆ. . ' ಎನ್ನುತ್ತಾ, ಮಹಾರಾಜ ಯಶವಂತನ ಕಡೆಗೆ ತಿರುಗಿ, ' ಕ್ಷಮಿಸಬೇಕು. ತಾವು ಬಂದಿದ್ದು ತಿಳಿಯಲಿಲ್ಲ ಅಪ್ಪಣೆಯಾದರೆ ಇಲ್ಲಿಯೇ ಇರುವರು. ' ಎಂದನು.

' ಬಾಜೀರಾಯರೆ, ನಿಮ್ಮ ದಯೆಗೂ ಭಕ್ತಿಗೂ ಸದೃಶವನ್ನು ಕಾಣೆ. ನಾವೆಂಬುದು ಎಲ್ಲರಿಗೂ ಮೇಲಿನನು. ' ಎಂದು ಮೆಚ್ಚಿ ನುಡಿದ.

' ಅಮ್ಮ . . ಇಂದಿರೆ, ' ಬಿಹಾರಿ ಉಸುರಿದಳು.

' ಇಲ್ಲೇ ಇದ್ದೇನಮ್ಮ ' ಇಂದಿರೆ ಉತ್ತರ ಕೊಟ್ಟಳು.

' ತಮ್ಮ...ರಾಜ ' ಬಿಹಾರಿ ತೊದಲಿ ನುಡಿದಳು.

' ಅಕ್ಕ ಇಗೋ ಒಂದೆ. .....ಮಹಾರಾಜರೂ ಬಂದಿದ್ದಾರಕ್ಕ ರಾಜಾರಾಂ ತಿಳಿಸಿದ.

ಬಿಹಾರಿಯು ಕಣ್ದೆರೆದು ನೋಡಿ, ಏಳುವುದಕ್ಕೆ ಪ್ರಯತ್ನಪಟ್ಟಳು.

' ಬೇಡಿ, ಬೇಡವಮ್ಮ....ಹಾಗೆಯೇ ಮಲಗಿರಮ್ಮ. ಸ್ವಲ್ಪ ದಿನಗಳಲ್ಲಿಯೇ ಗುಣವಾಗುತ್ತದೆ. ಆಮೇಲೆ..' ಯಶವಂತ ತಡೆದ.

' ಮಹಾರಾಜರೇ....ನನ್ನ....ಈ ಪಾಪಿಯ ಮೊರೆಯನ್ನು ಕೇಳಿ ಬಂದಿದುದಕ್ಕೆ....ನಿಮಗೆ ದೇವರು ಮಂಗಳವನ್ನುಂಟುಮಾಡಲಿ. ನನ್ನ ಕೆಲಸ..ಮುಗಿಯಿತು. ಸೂರ್ಯಾಸ್ತಸಮಯದೊಳಗಾಗಿ ಇಲ್ಲಿಂದ ಹೊರಟು ಹೋಗುತ್ತೇನೆ. ಅನಾಥರನ್ನು ರಕ್ಷಿಸುವುದು ನಿಮ್ಮ ಭಾರ. ಈ ಇಂದಿರೆ.. ನಾಲಿಗೆಯೊಣಗಿಕೊಂಡು ಬಂತು..ಮಗೂ..ಸ್ವಲ್ಪ ನೀರು..' ಬಿಹಾರಿಯು ದೈನ್ಯಾಸದಿಂದ ಆಯಾಸಪಟ್ಟುಕೊಂಡು ನುಡಿದಳು. ಇಂದಿರೆಯು ನೀರನ್ನು ಕುಡಿಸಿದಳು. ಪುನಃ ಬಿಹಾರಿಯು ಮಾತನಾಡತೊಡಗಿದಳು. ' ಮಂತ್ರಿಗಳೇ ..ಅಮ್ಮ....ಸುಶೀಲಮ್ಮ..ನೀವೇ ಈ ಅನಾಥೆಗೆ....ಇಂದಿರೆಗೆ ತಂದೆತಾಯಿಗಳು...ನಿಮ್ಮ ಕೈಯಲ್ಲಿಟ್ಟು ಸುಖವಾಗಿ ಸಾಯುತ್ತೇನೆ. '

ಸುಶೀಲೆಯ ಕಣ್ಣುಗಳಲ್ಲಿ ನೀರು ಬರಲು, ಅವಳೆದ್ದು ಪಕ್ಕದಲ್ಲಿದ್ದ ಚಿಕ್ಕ ಮನೆಯೊಳಕ್ಕೆ ಹೋದಳು. ಇಂದಿರೆಯು ತಲೆಯನ್ನು ಬಗ್ಗಿಸಿ ಕೂತವಳು ತಲೆಯನ್ನು ಮೇಲಕ್ಕೆತ್ತಲಿಲ್ಲ. ಕಣ್ಣಿನಲ್ಲಿ ನೀರು ತುಂಬಿತ್ತು. ಮಂತ್ರಿ ಬಾಜೀರಾಯನು ಸಂಕಟವನ್ನು ನುಂಗಿ ಮುಖದಲ್ಲಿ ಏನೂ ತೋರಿಸಬಾರದೆಂದು ಪ್ರಯತ್ನಪಡುತ್ತಿದ್ದದು ಗೋಚರವಾಗುತ್ತಿತ್ತು.

' ರಾಜಾ, ಈ ಪಾಪಿಯಿಂದ....ನಿಮ್ಮ ವಂಶಕ್ಕೆಲ್ಲಾ ಕೆಟ್ಟ ಹೆಸರು ಬಂತು. ಹೆಚ್ಚು ಹೇಳಲಾರೆನಪ್ಪ..ಕ್ಷಮಿಸು.....' ಬಿಹಾರಿಯು ಕ್ಷೀಣ ಸ್ವರದಲ್ಲಿ ಮತ್ತೆ ಉಸುರಿದಳು. ರಾಜಾರಾಮನು ಏನನ್ನೂ ಹೇಳಲಾರದೆ ' ಅಕ್ಕಾ—ಅಕ್ಕಾ ! ' ಎಂದನು.

' ಮಹಾರಾಜರೇ, ನಾನು..ರಾಜದ್ರೋಹಿ ಕ್ಷಮಿಸಿ. ನಾನೇ ನಿ.. ಮ್ಮ....ಸೋ..ದ..ರ..ಮಾ..ವ..' ಬಿಹಾರಿಯು ಕೊನೆಯದಾಗಿ ತಡವರಿಸಿ ನುಡಿದಳು.

ಮಾತು ಪೂರ್ತಿಯಾಗಿ ಮುಗಿಯಲಿಲ್ಲ. ಬಿಹಾರಿಯು ಈ ಪ್ರಪಂಚವನ್ನು ಬಿಟ್ಟು ಹೊರಟುಹೋದಳು. ಕೆಲವು ನಿಮಿಷಗಳು ಯಾರೂ ಮಾತನಾಡಲಿಲ್ಲ. ಇದೆಲ್ಲಾ ನಡೆಯುತ್ತಿದ್ದಾಗ ಯಶವಂತನು ನಿಂತಿದ್ದುದನ್ನು ಯಾರೂ ಗಮನಿಸಲಿಲ್ಲ. ಈಗ ತಾನಾಗಿ ಅಲ್ಲಿ ಹಾಕಿದ್ದ ಕುರ್ಚಿಯ

ಮೇಲೆ ಹೋಗಿ ಕೂತು ತನ್ನ ಎರಡು ಕೈಗಳಿಂದಲೂ ಮುಖವನ್ನು ಮುಚ್ಚಿಕೊಂಡನು. ರಾಜಾರಾಮನೂ ಮಂತ್ರಿಯೂ ಇಬ್ಬರೂ ಅಲ್ಲಿಂದಾಚೆಗೆ ಹೋದರು. ಇಂದಿರೆಯು ಹಾಗೇ ಕುಳಿತಿದ್ದಳು. ಯಶವಂತನು ಮೆಲ್ಲಗೆ ಕುರ್ಚಿಯನ್ನು ಬಿಟ್ಟು ಮೇಲಕ್ಕೆದ್ದನು. ಇಂದಿರೆಯ ಬಳಿಗೆ ಬಂದು ಭುಜದ ಮೇಲೆ ಕೈಯಿಟ್ಟು ಮೆಲ್ಲಗೆ 'ಇಂದಿರೆ..!' ಎಂದನು. ಇಂದಿರೆಯು ಮೇಲಕ್ಕೆ ಎದ್ದಳು. ತನ್ನ ಮುಖವನ್ನು ತೋರಿಸದೆ ಯಶವಂತನ ಎದೆಯ ಮೇಲೆ ತನ್ನ ತಲೆಯನ್ನಿಟ್ಟು ಬಿಕ್ಕಿಬಿಕ್ಕಿ ಅಳಲಾರಂಭಿಸಿದಳು. ಯಶವಂತನು ಅವಳನ್ನು ಆ ಚಿಕ್ಕ ಮನೆಯಿಂದಾಚೆಗೆ ಕರೆದುಕೊಂಡು ಹೋದನು.

—

೧೫

ವೀರಸೇನನು ಎದೆಯೊಡೆದು ಸತ್ತನೆಂದು ಆ ಊರಲ್ಲೆಲ್ಲಾ ಮಾರನೆಯ ದಿನವೇ ಹರಡಿತು. ಪತ್ರಿಕೆಗಳು ಅವನ ಬಾಲ್ಯ, ಯವ್ವನಗಳನ್ನು ವಿವರಿಸಲಾರಂಭಿಸಿದವು; ಅವನ ಧೈರ್ಯ ಸ್ಥೈರ್ಯಗಳನ್ನೂ ತಿಳಿವಳಿಕೆಯನ್ನೂ ಆಡಳಿತ ಕ್ರಮವನ್ನೂ, ಇವೆಲ್ಲವನ್ನೂ ಒಂದೂ ಬಿಡದಂತೆ ಚರ್ಚಿಸಿ, ದೇಶಕ್ಕೆ ಅತ್ಯಂತ ಉಪಕಾರಿಯಾದೊಂದು ಜೀವವು ಪರಲೋಕಕ್ಕೈದುದಕಾಗಿ ತಮ್ಮ ವ್ಯಸನವನ್ನು ಸೂಚಿಸಿದವು. ಎಲ್ಲರಿಗೂ ಈ ಸಾವು ವ್ಯಸನಕರವಾಗಿದ್ದಾಗ್ಯೂ, ಇನ್ನುಮೇಲೆ ಮಹಾರಾಜ ಯಶವಂತನೇ ರಾಜ್ಯಭಾರವನ್ನು ವಹಿಸುವನೆಂಬ ಸಂತೋಷವು ಜನರಲ್ಲಿ ತುಂಬಿ ತುಳುಕಾಡುತ್ತಿದ್ದಿತು.

ಕಾಲವು ನೀರಿನಲ್ಲಿ ಹಾಕಿದ ಸಕ್ಕರೆಯಂತೆ, ಮಾಯವಾಯಿತು. ಇವೆಲ್ಲವೂ ಆ ಕಾಲದ ಕಾರ್ಮುಗಿಲಿನೊಳಗೆ ಶಿಲ್ಕಿ, ಮಾಯವಾಗಲು ಆರಂಭಿಸಿದವು.

ಒಂದು ದಿನ ಅರಮನೆಯಲ್ಲಿ ಮಹಾರಾಜ ಯಶವಂತನು ರಾಜಾರಾಮನೊಡನೆ ಕುಳಿತು ಮಾತನಾಡುತ್ತಿದ್ದಾನೆ. ಆತನಿಗಾದರೋ, ಹಿಂದಿನ ನಡೆವಳಿಕೆಗಳನ್ನು ಮರೆಯಲು ಅಸಾಧ್ಯ.

'ಆದರೆ ಈ ಉಂಗುರಕ್ಕೂ ಅದಕ್ಕೂ ಸಂಬಂಧವೇನು?' ಯಶವಂತ ಕೇಳಿದ.

'ಮಹಾರಾಜ, ಈ ಉಂಗುರದ ಮಹಿಮೆಯನ್ನು ತಾವೇ ನೋಡಬಹುದು' ಎಂದು ಉತ್ತರ ಕೊಟ್ಟು, ಬಾಗಿಲಲ್ಲಿದ್ದ ಕದರಿಯನ್ನು ಒಳಕ್ಕೆ ಕರೆದು, ರಾಜಾರಾಮನು ಆ ಉಂಗುರವನ್ನು ತೆಗೆದುಕೊಂಡು ಅವನ ಕೈಮೇಲೆ ಗೀರಿಳೆದನು. ಇದ್ದಕ್ಕಿದ್ದ ಹಾಗೆಯೇ ಕದರಿಯು ಕೆಳಗೆ ಬಿದ್ದನು. ರಾಜಾರಾಮನು ಘಟ್ಟಿಯಾಗಿ ಕದರಿಯ ಕಿವಿಯಲ್ಲಿ ಕೂಗಿದನು; ಅಲ್ಲಾಡಿಸಿದನು; ಆದರೆ ಕದರಿಯು ಏಳಲಿಲ್ಲ. ಅವನನ್ನೆತ್ತಿಕೊಂಡು ಮತ್ತೊಂದು ಚಿಕ್ಕ ಮನೆಯೊಳಕ್ಕೆ ಹೋಗಿ ಅಲ್ಲೊಂದು ಕುರ್ಚಿಯ ಮೇಲೆ ಕೂಡಿಸಿದನು. ಮಹಾರಾಜ ಯಶವಂತನೂ ಸಹ ಅವರನ್ನು ಹಿಂಬಾಲಿಸಿದನು.

'ಮಹಾರಾಜ, ಇದು ಈ ಪಚ್ಚೆಯ ಮಹಿಮೆ.'

'ಸರಿ. ರಾಜಾರಾಂ, ಇದು ನಿನ್ನಲ್ಲಿಯೇ ಇರಲಿ.'

'ಮಹಾರಾಜ, ಕ್ಷಮಿಸಬೇಕು. ಇದು ತಮಗೆ ಸರಿ..'

'ನನ್ನ ರಕ್ಷಣೆಗಾಗಿ ನೀನು ಇದನ್ನು ಇಟ್ಟುಕೊಳ್ಳಬಹುದಷ್ಟೆ.'

ಅಷ್ಟು ಹೊತ್ತಿಗೆ ಕದರಿಯು ಕಣ್ಣು ಬಿಟ್ಟು ಘಾಬರಿಯಾಗಿ ಸುತ್ತಲೂ ನೋಡಿದನು; ಏನೂ ತೋಚದೆ ದಿಗ್ಭ್ರಾಂತನಾಗಿ ನಿಂತನು. ಅವನ ಮುಖವನ್ನು ನೋಡಿ ಮಹಾರಾಜ ಯಶವಂತನು 'ಸರಿ ರಾಜಾರಾಂ, ನೀನು ಹೇಳಿದ್ದೇ ನಿಜ' ಎಂದನು.

ಎರಡು ವರ್ಷಗಳು ಕಳೆದವು. ಅರಮನೆಯಲ್ಲಿ ಶೂರಸೇನನು ಪುನಃ ಹುಟ್ಟಿದನು. ಜನರ ಸಂತೋಷಕ್ಕೆ ಪಾರವೇ ಇರಲಿಲ್ಲ. ಎಲ್ಲರ ಮನೆಗಳಲ್ಲಿ ಈಗಲೂ ಸಹ ಮಹಾರಾಜ ಮತ್ತು ಮಹಾರಾಣಿ ಇವರ ಚಿತ್ರಗಳಿವೆ. ಎಲ್ಲಕ್ಕಿಂತಲೂ ಅತಿಶಯವಾದ ಚಿತ್ರವೊಂದುಂಟು. ಅದು ಮಹಾರಾಜ ಯಶವಂತನ ಮದುವೆಯ ಭಾವಚಿತ್ರ. ಇದರ ಹತ್ತಿರಕ್ಕೆ ಹೋಗಿ ನೋಡಿ— ಯಶವಂತನು ಮೊದಲಿನಂತೆಯೇ ಕಾಂತಿಯುಕ್ತನಾಗಿದ್ದಾನೆ. ಪಕ್ಕದಲ್ಲಿ ಇರುವವರಾರು? ನಮ್ಮ ಇಂದಿರೆಯೇ. ಈಗ ಆಕೆಯ ಮುಖದ ಕಳೆಯು ಇಮ್ಮಡಿಯಾಗಿದೆ. ಈಶ್ವರನು ಎಲ್ಲರಿಗೂ ಮಂಗಳವನ್ನುಂಟುಮಾಡಲಿ.

—

# ಆತ್ಮಾಹುತಿ

ಒಂದು ಸಾಮಾಜಿಕ ಕಥೆ

ದ್ವಾ ಸುಪರ್ಣಾ ಸಯುಜಾ ಸಖಯಾ
ಸಮಾನಂ ವೃಕ್ಷಂ ಪರಿಷಸ್ವಜಾತೇ ।
ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತ್ಯ
ನಶ್ನನ್ನನ್ಯೋ ಅಭಿಚಾಕಶೀತಿ ॥

—ಮುಂಡಕೋಪನಿಷತ್ತು

ನನ್ನ
ತಾಯಿಯ ಪಾದಗಳಲ್ಲಿ
ಸಮರ್ಪಣೆ

# ಪೀಠಿಕೆ

●

ಸಾಧಾರಣವಾಗಿ ಕಥೆಗಳೆಲ್ಲಾ ಮುಗಿಯುತ್ತವೆ. ಆದರೆ ಈ ಕಥೆಯು ಮುಗಿದಿಲ್ಲ. ಏತಕ್ಕೆಂದರೆ ರಾಮು ಇನ್ನೂ ಇದ್ದಾನೆ. ಮುಂದೆ ಅವನಿಂದ ನಾಲ್ಕಾರು ಕೆಲಸಗಳು ನಡೆಯಬೇಕಾಗಿದೆ. ನಾನು ಆಗಾಗ ಅವನೊಡನೆ ಮಂಗಳಚಾಟ್ಯೆ— ಆಲದಮರದ ಕೆಳಗೆ —ಯಲ್ಲಿ ಕುಳಿತು ಹತ್ತಾರು ಯೋಚನೆಗಳನ್ನು ಮಾಡುತ್ತಿರುತ್ತೇನೆ.

ನಮ್ಮ ಸ್ನೇಹ ಹೀಗೆಂದು ಬಣ್ಣಿಸುವುದು ಕಷ್ಟ. ಒಂದೇ ಮಾತಿನಲ್ಲಿ ಹೇಳಿ ಮುಗಿಸಬೇಕೆಂದರೆ, ನಾನೇ ರಾಮು, ರಾಮೂನೇ ನಾನು. ಎರಡು ಶರೀರಗಳು ಬೇರೆಬೇರೆಯಾಗಿ ಓಡಾಡುತ್ತಿದ್ದರೂ ಇಬ್ಬರೂ ಒಬ್ಬರಿದ್ದ ಹಾಗೇ; ರಾಮುನ ಗುಣಗಳು ನನ್ನ ಗುಣಗಳಿಗಿಂತ ಹತ್ತರಷ್ಟು ಸೂಕ್ಷ್ಮ, ನೂರರಷ್ಟು ದೊಡ್ಡವು, ಸಾವಿರದಷ್ಟು ಶ್ರೇಷ್ಠ.

ನಾವು ಕಲ್ಕತ್ತೆಗೆ ಏತಕ್ಕೆ ಹೋದೆವು, ಹೇಗೆ ಹೋದೆವು; ರಾಮೂನ ಜೊತೆಯಲ್ಲಿ ನನ್ನನ್ನೇತಕ್ಕೆ ಅಲ್ಲಿಗೆ ಕಳಿಸಿಕೊಟ್ಟರು, ಇವೆಲ್ಲಾ ನಿಮಗೆ ಕೊನೆಗೆ ತಿಳಿಯುತ್ತೆ. ಆದರೆ ರಾಮೂನ ಮನಸ್ಸು ನಿಮಗೆ ತಿಳಿಯಬೇಕಾದರೆ ಕಲ್ಕತ್ತೆಯಲ್ಲಿ ನಡೆದ ವಿಚಾರ ನೀವು ಸ್ವಲ್ಪ ಕೇಳಬೇಕು.

*　　*　　*　　*　　*

ಚಿತ್ತರಂಜನ ಬೀದಿ, ಮದ್ರಾಸಿ ಹೋಟಲಿನಲ್ಲಿ ನಾವು ಇಳಿದೆವು. ರೈಲಿನಿಂದ ಇಳಿದು, ಟ್ಯಾಕ್ಸಿಯಲ್ಲಿ ಕುಳಿತು ಅಲ್ಲಿಗೆ ಸೇರಿದೆವು. ಆ ದಿನ ನಮ್ಮಿಬ್ಬರಿಗೂ ಇಷ್ಟೇ ಗೊತ್ತಾದದ್ದು. ಒಂದು ವಾರ, ರಾಮೂ ನಾನೂ ನಮ್ಮ ಕೋಣೆಯನ್ನು ಬಿಟ್ಟು ಈಚೆಗೆ ಬರಲೇ ಇಲ್ಲ. ಪ್ರತಿಯೊಂದಕ್ಕೂ ಅಲ್ಲೇ ಅನುಕೂಲವಾಗುವಂತೆ ಆ ಹೋಟಲಿನ ಯಜಮಾನರು ಮಾಡಿ ಕೊಟ್ಟಿದ್ದರು. ಅದರಲ್ಲೂ ರಾಮೂ ಆಗ ತಾನೆ ಖಾಯಿಲೆಯಿಂದೆದ್ದವನು ಎಂದು ತಿಳಿದ ಮೇಲೆ, ದಿನಕ್ಕೊಂದು ಸಲವಾದರೂ ಅವರು ನಮ್ಮನ್ನು

ನೋಡಿಹೋಗುತ್ತಿದ್ದರು. ನಮ್ಮ ಭಾಗದಲ್ಲಿ ಐದು ಕೋಣೆಗಳಿದ್ದವು. ಒಂದೊಂದರಲ್ಲಿ ಮೂವರು. ನಮ್ಮ ಚಿಕ್ಕ ಮನೆಯಲ್ಲಿ ಮಟ್ಟಿಗೆ ಇಬ್ಬರೇ. ಒಂದು ವಿಚಿತ್ರ,ರಾಮೂನ ಮುಖವನ್ನು ನೋಡಿದೊಡನೆಯೆ ಪ್ರತಿಯೊಬ್ಬರೂ ಅವನ ವಿಚಾರದಲ್ಲಿ ಕುತೂಹಲರಾಗಿರುತ್ತಿದ್ದರು. ಆದರಲ್ಲಿ ಮೂವರು ಕೆಲಸದಲ್ಲಿದ್ದವರು; ಮಿಕ್ಕವರು ವಿದ್ಯಾರ್ಥಿಗಳು. ಒಂದು ವಾರದೊಳಗಾಗಿ ಎಲ್ಲರೂ ಸ್ನೇಹಿತರಾದರು. ತಮ್ಮತಮ್ಮ ಊರುಗಳನ್ನು ಬಿಟ್ಟು ಬೇರೆಬೇರೆ ದೇಶಗಳಿಗೆ ಹೋದರೆ ಹೀಗೆ ವಿಶ್ವಾಸಗಳು ಹುಟ್ಟುತ್ತವೆಯೊ ಏನೋ! ಅಲ್ಲಿ ಇದ್ದವರೆಲ್ಲರೂ ದಕ್ಷಿಣದಿಂದ ಬಂದವರೇ.

ನಾವಿದ್ದ ಚಿಕ್ಕ ಮನೆಯಿಂದ ಬೀದಿಯ ಮುಕ್ಕಾಲು ಭಾಗ ಕಾಣು-ತ್ತಿತ್ತು. ಬೆಳಗಿನ ಝಾವ ಮೂರು ಗಂಟೆಯಿಂದ ಜನರ ಓಡಾಟ, ಗಜಿಬಿಜಿ ಶಬ್ದ. ರಾತ್ರಿ ಒಂದು ಗಂಟೆಯ ವರೆಗೂ ಹೀಗೇ. ಸಾಧಾರಣ ಬೀದಿಗಳ ಎರಡರಷ್ಟು ಅಗಲವಾದ ಬೀದಿ. ಆದಾಗ್ಯೂ ಅಲ್ಲಿ ಸ್ಥಳವಿದ್ದಂತೆ ಕಾಣುತ್ತಿರ ಲಿಲ್ಲ. ನಾನಾವಿಧವಾದ ಗಾಡಿಗಳು ಕಿಕ್ಕಿರಿದು ಹೋಗುತ್ತಿದ್ದವು. ಇವುಗಳ ಮಧ್ಯೆ ರಿಕ್ಷಾಗಳು.

ರಿಕ್ಷಾಗಳ ವಿಚಾರದಲ್ಲಿ ರಾಮೂಗೆ ಬಹಳ ಸಂಕಟ. 'ಮನುಷ್ಯನ ಮೇಲೆ ಮನುಷ್ಯ ಕುಳಿತು ಹೋಗುವುದೂ ಒಂದೇ, ರಿಕ್ಷಾ ಹತ್ತುವುದೂ ಒಂದೇ. ಕುದುರೆಗಳಾದರೂ ವಾಸಿ; ಅಷ್ಟು ಕೆಲಸ ಮಾಡುವುದಿಲ್ಲ. ರಿಕ್ಷಾ ಎಳೆಯುವವನಿಗೆ ರಾತ್ರಿ ಒಂದು ಗಂಟೆಯಿಂದ ಮೂರು ಗಂಟೆಯ ವರೆಗೆ ವಿರಾಮ, ಅಷ್ಟೆ. ಅದರಿಂದ ಅವನಿಗೆ ಜೀವನ. ಆದರೆ ಅವನ ಯಜಮಾನನಿಗೆ ಮೋಟಾರು ಗಾಡಿ, ದೊಡ್ಡ ಮನೆ, ಇನ್ನೂ ಬೇಕಾದ ಇತರ ವಸ್ತುಗಳು. ಆ ಶಬ್ದವಿದೆಯಲ್ಲ—ಅವನು ರಿಕ್ಷಾ ಎಳೆಯುತ್ತ ಮಾಡುವುದು—ಅದು ಈಗಲೋ ಆಗಲೋ ಸಾಯುವವನ ಉಸಿರಿದ್ದಂತೆ! ಆ ಶಬ್ದದ ಘೋಷವೇ ಸಾಕು, ಪ್ರಪಂಚದಲ್ಲಿ ಅವನ ಆಸೆಗಳಿಗೆಲ್ಲಾ ಎಂತಹ ಗೋರಿಯಾಗಿದೆ ಎಂಬುದನ್ನು ತಿಳಿಸುವುದಕ್ಕೆ.' ರಾತ್ರಿ ಹನ್ನೊಂದು ಗಂಟೆಯ ಸಮಯದಲ್ಲಿ ರಾಮೂ ಇದನ್ನು ಕೇಳಿ ನುಡಿಯುತ್ತಿದ್ದ ಈ ವಾಕ್ಯಗಳನ್ನು ಕೇಳಿದರೆ ಎಂತಹ ಕಲ್ಲೆದೆಯೂ ಕರಗಬೇಕಾದ್ದೇ.

ಆಗ ಐದೂವರೆಗೇ ಸೂರ್ಯಾಸ್ತಮಯ. ನಾವು ಮೂರನೆಯ

ಅಂತಸ್ತಿನ ಮೇಲೇರಿ ಮಹಡಿಯ ಮೇಲೆ ಕಾಲ ಕಳೆಯುತ್ತಿದ್ದೆವು. ಎಲ್ಲಿ ನೋಡಿದರೂ ಮಹಡಿಗಳೇ. ಕಣ್ಣಿಗೆ ಕಾಣುವ ವರೆಗೂ ಮನೆಗಳೇ ಹೊರತು ಎಲ್ಲಿಯೂ ಒಂದು ಗಿಡ ಕೂಡ ಕಾಣುವಂತಿಲ್ಲ. ಇಂತಹ ಸ್ಥಳದಲ್ಲಿ ಹುಟ್ಟಿ ಬೆಳೆದವರಿಗೆ ಮಲೆನಾಡಿನ ದರ್ಶನವಾದರೆ ಎಷ್ಟು ಆನಂದವೋ ನೀವೇ ಹೇಳಿ. ಎಷ್ಟೋ ಸಲ ರಾಮೂ ಹೇಳುತ್ತಾ ಇದ್ದ — ಇದು ಊರಾದರೂ ಬೆಂಗಾಡು — ಎಂತ. ಹಚ್ಚಗಿರುವ ಗಿಡಬಳ್ಳಿಗಳನ್ನು ನೋಡಿ ಅಭ್ಯಾಸ ವಾದವರಿಗೆ ಬರೀ ಮಹಡಿಗಳನ್ನು ನೋಡುವುದು ಹೇಗೆ ತಾನೆ ಸರಿ ಹೋದೀತು !

ನಾಲ್ಕಾರು ದಿನ ಕಳೆದ ಮೇಲೆ ನಮ್ಮಲ್ಲೊಬ್ಬರು ಸಿನೀಮಾಕ್ಕೆ ಹೋಗಬೇಕೆಂದು ಠರಾವು ತಂದರು. ಆಗ ಮಾತನಾಡುವ ಚಿತ್ರದ ಪ್ರದರ್ಶನ ಅದೇ ಮೊದಲು: **ನಾಟಕದ ಭೂತ** (The Phantom of the Opera) ಎಂಬುವ ಚಿತ್ರ ಆ ದಿನ. ಎಲ್ಲರೂ ಹೋಗಬೇಕೆಂದಾಗ ನಾವು ಬೇಡವೆನ್ನುವುದು ಸರಿಯೆಂದು ತೋರಲಿಲ್ಲ. ಅಲ್ಲದೆ ರಾಮೂಗೆ ಅದರಿಂದ ಸ್ವಲ್ಪ ಮಟ್ಟಿಗೆ ಅನುಕೂಲವಾದರೂ ಆಗಬಹುದು. ಎಲ್ಲರ ಜೊತೆಯಲ್ಲಿ ನಾವೂ ಹೋಗಬೇಕು ಎಂದು ನಿರ್ಧಾರಮಾಡಿಕೊಂಡೆವು.

ಅವತ್ತೇ ರಾಮೂ ಈಚೆಗೆ ಬಂದಿದ್ದ. ಸಾಯಂಕಾಲದ ಆಟಕ್ಕೆ ಹೋಗೋಣವೆಂದರೆ, ನಮ್ಮಲ್ಲಿ ಕೆಲಸಕ್ಕೆ ಹೋಗುವವರು ಬರುವಂತಿಲ್ಲ. ಅದಕ್ಕಾಗಿ ಎರಡನೆಯ ಆಟಕ್ಕೇ ಹೊರಟೆವು. ಆ ಬೀದಿಯಲ್ಲಿ ರಾತ್ರಿ ಬೆಳಕಿನಲ್ಲಿ ನಮಗೆ ಎಲ್ಲಿಗೆ ಹೋಗುತ್ತಿದ್ದೇವೆಂಬುದು ಗೊತ್ತೇ ವಿನಹ, ಯಾವ ದಿಕ್ಕಿಗೆ ಹೋಗುತ್ತಿದ್ದೇವೆಂಬುದು ಕೂಡ ತಿಳಿಯಲಿಲ್ಲ. ಒಂದು ಸಲ ಬಲಕ್ಕೆ ತಿರುಗುತ್ತಿದ್ದೆವು. ಮತ್ತೊಂದು ಸಲ ಎಡಕ್ಕೆ. ಯಾರೋ ಒಬ್ಬರು ಇದೇ ಮಾರ್ಕೆಟ್ಟು (Market) ಅಂದರು, ನೋಡಿದೆವು; ಬರಿಯ ಬೆಳಕು, ದೀಪಗಳು, ಅಲ್ಲಲ್ಲಿ ಕೆಲವು ಹಣ್ಣುಗಳು ಇಷ್ಟೇ ಕಾಣುತ್ತಿದ್ದವು. ಅಲ್ಲಿಂದ ಮುಂದಕ್ಕೆ ಒಂದು ಸಣ್ಣ ಸಂದು, ಅದರಲ್ಲಿ ಹೋಗುವಾಗ ನಮ್ಮ ಜೊತೆಯಲ್ಲಿ ಬಂದವರಲ್ಲಿ ಕೆಲವರು ಪಿಸಪಿಸ ಮಾತಾಡಿಕೊಂಡರು. ಮಹಡಿಯ ಮೇಲೆ ನಿಂತಿದ್ದ ಒಂದು ವ್ಯಕ್ತಿಯನ್ನು ತೋರಿಸಿದರು. ನಾವೂ ನೋಡಿದೆವು. ಪೂರ್ತಿಯಾಗಿ ಜಪಾನ ರಾಜ್ಯದ್ದಿದ್ದಂತೆ ಕಾಣಲಿಲ್ಲ; ಆದರೆ ಹಿಂದೂಸ್ತಾನದ್ದಿದ್ದಂತೆಯೂ

ತೋರಲಿಲ್ಲ. ಅದೇನೋ ಒಂದು ವಿಧವಾಗಿ ನೋಡುತ್ತಿತ್ತು. ಪಕ್ಕದಲ್ಲಿದ್ದವ ನೊಬ್ಬನು 'ರಾಮೂ, ಈಗ ತಾನೆ ಹೊರಕ್ಕೆ ಬರುತ್ತಿದ್ದಿ. ನಿನ್ನ ಕಣ್ಣು ನಿನ್ನ ವಶದಲ್ಲಿರಲಿ' ಎಂದ. ನನಗೆ ಕೋಪ ಬಂತು. ಅವನನ್ನು ಹೊಡೆಯುವುದಕ್ಕೆ ಹೋದೆ. ರಾಮೂ ನನ್ನನ್ನು ತಡೆದ: 'ಅವನು ಹೇಳೋದು ಸರಿ, ಅಣ್ಣಯ್ಯ. ಸಾಮಾನ್ಯವಾಗಿ ಹಳಬರು ಹೊಸಬರಿಗೆ ಹೇಳತಕ್ಕ ಮಾತು.'

ನನಗೆ ಕೋಪ ಬಂದದ್ದು ಸ್ವಲ್ಪ ತಡೆದಹಾಗಾಯಿತು. ಆದರೆ, ರಾಮೂನ ವಿಚಾರದಲ್ಲಿ ಈ ಮಾತಂದನಲ್ಲ ಎಂತ ನನಗೆ ಕೋಪ. ರಾಮೂನ ವಿಚಾರ ಇವನಿಗೇನು ಗೊತ್ತು! ಗೊತ್ತಿರಲು ಕಾರಣವೇನೂ ಇಲ್ಲ. ಸ್ವಲ್ಪ ದೂರ ಹೋಗುವ ಹೊತ್ತಿಗೆ ಮೈ ಬಿಸಿ ಸ್ವಲ್ಪ ಕಡಿಮೆಯಾಯಿತು. ಅವನ ಕ್ಷಮಾಪಣೆಯನ್ನು ನಾನೇ ಬೇಡಿದೆ. ಆಗ ಅವನು ಕೂಡ ತನ್ನದು ತಪ್ಪೆಂದ. 'ನನಗೇಕೆ ಬೇಕಿತ್ತು ಈ ವಿಚಾರ. ಸಿಕ್ಕಿದವರಿಗೆಲ್ಲಾ ಬುದ್ಧೀ ಹೇಳೋಕೆ ಹೋದರೆ ಹೀಗೇ!'

'ಹಾಗಲ್ಲ, ಕೋಪಿಸಿಕೊಳ್ಳಬೇಡಿ. ನಮ್ಮ ಮೇಲೆ ವಿಶ್ವಾಸವಿಟ್ಟು ಹೇಳುವವರಾರಿದ್ದಾರೆ! ಏನೋ, ವಿಷಘಳಿಗೆ; ನನ್ನನ್ನು ಕ್ಷಮಿಸಿ.'

'ಹೋಗಲಿ ಬಿಡಿ. ನೀವೂ ಮನಸ್ಸಿನಲ್ಲಿಟ್ಟುಕೊಳ್ಳದಿದ್ದರೆ ಸರಿ.'

ಅಷ್ಟು ಹೊತ್ತಿಗೆ ಸಿನೀಮಾ ಮಂದಿರಕ್ಕೆ ಹೋದೆವು. ಟಿಕೆಟ್ಟುಗಳನ್ನು ಕೇಳಿದರೆ ಒಂದು ರೂಪಾಯಿ ಎರಡಾಣೇದು ಮಾತ್ರ ಇದ್ದುವು. ಅಷ್ಟು ದೂರ ಬಂದು ಪುನಃ ಹಿಂದಕ್ಕೆ ಹೋಗಬಾರದೆಂದು ಅವನ್ನೇ ಕೊಂಡುಕೊಂಡು ಒಳಕ್ಕೆ ಹೋದೆವು. ಕೊನೆಯ ಸಾಲು ತುಂಬಿತ್ತು. ಎರಡನೆಯ ಸಾಲಿನಲ್ಲಿ ಅರ್ಧಕ್ಕೆ ಜನರು ಕೂತಿದ್ದರು. ಅವರನ್ನು ದಾಟಿಕೊಂಡು ಹೋಗಬೇಕಾಗಿತ್ತು. ಹೊರಟೆವು. ಕೊನೆಯಲ್ಲಿ ನಾನು; ನನ್ನ ಮುಂದೆ ರಾಮೂ. ದಾರಿಯಲ್ಲಿ ಒಬ್ಬ ಯುವತಿಯು ಕುಳಿತಿದ್ದಳು. ಅವಳ ಕತ್ತಿನ ಮೇಲ್ಹೊದಿಕೆಯು ಕೆಳಗೆ ಜಾರಿ ಬಿದ್ದಿತ್ತು. ಅದರ ಪಕ್ಕದಲ್ಲಿ ರಾಮೂ ಕಾಲಿಟ್ಟ; ನೋಡಿ, 'ನೋಡ ಲಿಲ್ಲ, ದಯವಿಟ್ಟು ಕ್ಷಮಿಸಿರಿ' ಎಂದ. ಅವಳು ತಲೆ ಎತ್ತಿ ನೋಡಿದಳು. ರಾಮೂನ ಮುಖವನ್ನು ನೋಡಿ ನಗುತ್ತಾ ತನ್ನ ಹೊದ್ದಿಕೆಯನ್ನು ತೆಗೆದು ಕೊಂಡಳು. ಪಕ್ಕದಲ್ಲೇ ಸ್ಥಳವಿತ್ತು. ರಾಮೂ ಅಲ್ಲಿಯೇ ಕೂತುಕೊಂಡ. ಪಕ್ಕದಲ್ಲಿ ನಾನು ಕೂತೆ.

ಐದು ನಿಮಿಷದೊಳಗಾಗಿ ಆಟವು ಮೊದಲಾಯಿತು. ಬೇರೆ ಬೇರೆ ದೇಶದ ಸಮಾಚಾರಗಳನ್ನು ತೋರಿಸಿದರು. ಮಧ್ಯೆ ತಮಾಷೆಗಳು ಬಹಳ ರಸವತ್ತಾಗಿದ್ದವು. ಆದರೆ ಆಡಿದ ಮಾತುಗಳು ನಮಗೆ ತಿಳಿಯಲಿಲ್ಲ. ಪುಸ್ತಕದ ಮಾತು ನಮಗೆ ಅರ್ಥವಾಗುತ್ತಿತ್ತಾಗಲಿ, ಮಾತನಾಡುತ್ತಿದ್ದ ಭಾಷೆ ಇಂಗ್ಲಿಷು ಎಂದು ಹೇಳುವಷ್ಟು ಕೂಡ ನಮಗೆ ಪರಿಚಯವಾಗಲಿಲ್ಲ. ಆದಾಗ್ಯೂ ಮಾತುಗಳಿದ್ದುದರಿಂದ ಒಂದು ವಿಧವಾದ ಜೀವಕಳೆ ಅದಕ್ಕೆ ಬಂದಿತ್ತು. ಅದರಲ್ಲಿ ಒಂದು ಮುದುಕಿ ಮಾತನಾಡಿದಳು; ಆಗ ತಿಳಿಯಿತು ನಮಗೆ **ಮೂಕೀಗೂ ಟಾಕೀಗೂ** ವ್ಯತ್ಯಾಸ.

ನಮ್ಮನ್ನೇ ನಾವು ಮರೆತೆವು. ನಾಯಕಿಯ ಗಾನವೂ ಅವಳ ಸಂಗಡ ಮಂದ್ರಲ್ಲೇ ಹಾಡುತ್ತಿದ್ದ **ಭೂ**ತದ ರೀತಿಯೂ, ನಮಗೆ ಅತ್ಯದ್ಭುತವಾಗಿ ತೋರಿತು. ಪಕ್ಕದಲ್ಲಿ ಕೂತಿದ್ದ ಯುವತಿಯು 'Isn't it grand!' ಎಂದಳು. ರಾಮೂ ಅದಕ್ಕೆ 'lovely' ಎಂದ. ಮತ್ತೆ ಅವಳು ರಾಮೂನ ಮುಖವನ್ನು ನೋಡಿದಳು. ರಾಮೂನ ಕಣ್ಣಲ್ಲಿ ನೀರು ಬಂದಿತ್ತು. 'ಓ!' ಎಂಪಳು ಅವಳು. ರಾಮೂ ನಕ್ಕ; ಅವಳೂ ನಕ್ಕಳು. 'You love music?' ಎಂದಳು.

'Nothing plays on the heart's lyre more sublimely'

'I see you are a poet!'

'No, I am an ordinary human being.'

'How I wish all were as human!'

ನನಗೆ ಜ್ಞಾಪಕಕ್ಕೆ ಬಂತು ರಾಮೂ ಹೇಳುತಿದ್ದುದು:

**"ತಂಬೂರಿ ಮೀಟಿದವ ಭವಾಬ್ಧಿ ದಾಟಿದವ**
**ತಾಳವನೆ ತಟ್ಟಿದವ ಅಸುರರೆದೆ ಮೆಟ್ಟಿದವ**
**ಗಾಯನವ ಹಾಡಿದವ ಹರಿಮೂರ್ತಿ ನೋಡಿದವ**
**ಹರಿಮೂರ್ತಿ ನೋಡಿದವ ವೈಕುಂಠಕ್ಕೋಡಿದವ"**

ನನಗೆ ಆನಂದವು ಮಿತಿಮೀರಿತು. ಒಂದು ಕಡೆ ನೋಟ; ಮತ್ತೊಂದು ಕಡೆ ರಾಮೂನ್ನ ಅವಳು ಹೊಗಳಿದ್ದು. ಈಗಲೂ ಅದನ್ನು ನೆನಸಿಕೊಂಡರೆ ಮೈಯೆಲ್ಲಾ ಉಬ್ಬುತ್ತೆ. ಅಷ್ಟೇ ಅಲ್ಲ, ಎಂತಹ ದುಃಖವಿದ್ದರೂ ಮಾಯವಾಗುತ್ತೆ. ನಮ್ಮೀ ಪ್ರಪಂಚದಲ್ಲಿ ಹುಟ್ಟೋ ವ್ಯಕ್ತಿಗೆ ಸಂಕಟವೇ ಹೆಚ್ಚು;

ಜೀವಮಾನದಲ್ಲಿ ನಡೆದ ಒಂದೆರಡು •ಸುಖಸಮಯಗಳನ್ನು ನೆನಪಿನಲ್ಲಿಟ್ಟು ಕೊಳ್ಳದಿರುವ ಜೀವ ಅತಿ ಬಡಪಾಯಿಯೇ ಸರಿ. ಒಂದೊಂದು ಸಲ ಯೋಚನೆ ಬಂದಲ್ಲಿ ಮೈರಕ್ತವೆಲ್ಲಾ ಹೀರಿದಂತಾಗುತ್ತೆ. ಇದೇ ಸಮಯದಲ್ಲೇ ಸಂತೋಷಸಮಯವನ್ನು ನೆನಸಿಕೊಂಡಲ್ಲಿ ರಕ್ತವೃದ್ಧಿಯಾಗುತ್ತೆ. ಹೊರಗಿನ ವಸ್ತುವಿನ ಮೇಲೆ ಆಧಾರವಾದ ಆನಂದವನ್ನು ಯಾರಾದರೂ ಅನ್ಯರು ಕಿತ್ತೊಗೆಯಬಲ್ಲರು! ಆದರೆ ಅಂತರಂಗದಲ್ಲಿ ಆತ್ಮಕ್ಕೆ ಅಂಟಿರುವ ಆನಂದ ವನ್ನು ತೆಗೆದೆಸೆಯಲು ಯಾರಿಂದ ಸಾಧ್ಯ! ಜಗತ್ತಿನ ಸ್ವಭಾವ ಪ್ರಭಾವ ಗಳನ್ನರಿಯದ ಹಸುಗೂಸಿನಂತಹ ಯುವಕನಿಗೆ ಆದ ಆನಂದವು ಶಾಶ್ವತ, ಕ್ಷಣಿಕವಲ್ಲ; ಏತಕ್ಕೆಂದರೆ, ಅದನ್ನು ನೆನಸಿಕೊಂಡಾಗಲೆಲ್ಲಾ ಆನಂದವು ಹೆಚ್ಚುತ್ತದೆ.

ಆಟವು ಮುಗಿಯಿತು. ಮಂದಿರದಿಂದ ಈಚೆಗೆ ಬಂದೆವು. ಎದುರಿಗೆ ಒಂದು ಕುದುರೆಯಗಾಡಿ, ಮೆಲ್ಲನೆ ಮುಂದಕ್ಕೆ ಬಂತು. ಪಕ್ಕದಲ್ಲಿ ನಿಂತಿದ್ದ ಪೋಲೀಸಿನವನು ಒಳಗಿದ್ದ ವ್ಯಕ್ತಿಗೆ ಒಂದೇಟು ಹಾಕಿದ. ದೊಪ್ಪನೆ ಶಬ್ದ ವಾಯಿತು. ನನ್ನ ಪಕ್ಕದಲ್ಲಿದ್ದ ರಾಮು 'ಹಾ!' ಎಂದ. 'ಅವರಿಗೆ ಹೀಗೆ ಬೀಳದಿದ್ದರೆ ಅವರು ಹತೋಟಿಯಲ್ಲಿರುವುದಿಲ್ಲ' ಎಂದ ನಮ್ಮ ಜೊತೆಯಲ್ಲಿ ದ್ದಾತ. ನಮ್ಮ ಪಕ್ಕದಲ್ಲಿ ಕೂತಿದ್ದ ಹೆಂಗಸು ನಮ್ಮ ಹಿಂದಿದ್ದಳು. ನಡೆದ ಸಮಾಚಾರವನ್ನೂ ಪೋಲೀಸಿನವನು ಹೊಡೆದಿದ್ದನ್ನೂ ಕೇಳಿ ಮೆಲ್ಲನೆ ಎಂದಳು, 'Don't worry, she is a prostitute' ಗಾಡಿ ಸ್ವಲ್ಪ ದೂರ ಹೋದದ್ದು ಅಲ್ಲೇ ನಿಂತಿತು. ನಾವೂ ಅದೇ ದಾರಿಯಲ್ಲಿ ಹೊರಟೆವು. ಗಾಡಿಯ ಹತ್ತಿರ ಹೋದಾಗ ಆವಳ ಮುಖ ಕಾಣಿಸಿತು. ನಾವು ಬರುತ್ತಿ ದ್ದಾಗ ಮಹಡಿಯ ಮೇಲಿನಿಂದ ನಮ್ಮನ್ನು ನೋಡುತ್ತಿದ್ದವಳು ಅವಳೇ. ರಾಮು ತಲೆಬೊಗ್ಗಿಸಿಕೊಂಡು ಏನೇನೋ ಯೋಚನೆ ಮಾಡುತ್ತಾ ನಮ್ಮ ಜೊತೆಯಲ್ಲಿ ನಡೆಯುತ್ತಿದ್ದ.

ಆ ತಿಂಗಳೆಲ್ಲಾ ಅವನ ತಲೆಯಲ್ಲಿ, ನಾಯಕಿಯ ಸಂಗೀತ, ಪೋಲೀಸಿ ನವನ ಏಟು, ಇವೆರಡೂ ಇತ್ತು. ಅಷ್ಟು ಹೊತ್ತಿಗೆ ನಮ್ಮೀ ಭಾರತಭೂಮಿ ಯಲ್ಲಿ ಅಸಹಕಾರವು ಅತಿಶಯವಾಗಿತ್ತು. ಎಲ್ಲೆಲ್ಲೂ ಅಲ್ಲೋಲಕಲ್ಲೋಲ ವಾಗುವ ಸ್ಥಿತಿ. ಮಹಾತ್ಮರು ಉಪ್ಪಿನ ಸತ್ಯಾಗ್ರಹಕ್ಕೆ ಆರಂಭಿಸಿದ್ದರು.

ನಮ್ಮ ಪೈಕಿ ವಿದ್ಯಾರ್ಥಿಯೊಬ್ಬನ ಒಳಿ ಈ ಸತ್ಯಾಗ್ರಹಕ್ಕೆ ಸಂಬಂಧಪಟ್ಟ ಪುಸ್ತಕಗಳಿದ್ದವು. ಅವುಗಳನ್ನು ಓದುತ್ತಾ ರಾಮೂ ತನ್ನ ಕಾಲವನ್ನು ಕಳೆಯುತ್ತಿದ್ದ. ಇದು ನನಗೆ ಸರಿಬೀಳಲಿಲ್ಲ.

'ಇದು ಸರಿಯಲ್ಲ ರಾಮೂ, ನಾವು ಬಂದಿರುವುದು ಓದೋದಕ್ಕೆ.'

'ನಾವು, ಎನ್ನಬೇಡ ನೀನು, ಎನ್ನು. ನಾನು ಓದೋದಕ್ಕೆ ಬಂದಿಲ್ಲ. ನಮ್ಮ ದೇಶದಲ್ಲಿ ಆಗತಿರೋ ಅನಾಹುತ ನಾವೇ ತಿಳಿಯದೆ ಇದ್ದರೆ ಬದುಕಿದ್ದೇನು ಸಾರ್ಥಕ ?'

'ಈಗ ನಿನ್ನ ಮನಸ್ಸು ಚೆನ್ನಾಗಿಲ್ಲ. ಆಯ ತಪ್ಪಿದೆ. ಇದು ಸಮಯವಲ್ಲ.'

'ಏಕಣ್ಣಾ, ನಿನಗೀ ಬುದ್ಧಿ! ನೀನೇ ಎಷ್ಟೋ ಸಲ ಹೇಳಿಲ್ಲವೇ—ಕಾಲ ಹೋಗುತ್ತೆ ಮಾತು ಉಳಿಯುತ್ತೆ—ಅಂತ ?'

'ಹೌದು, ನಿನ್ನನ್ನು ನೋಡಿಕೊಳ್ಳೋದಕ್ಕೆ ನನ್ನನ್ನು ಶೇಷಗಿರಿ ರಾಯರು ಕಳಿಸಿಕೊಟ್ಟಿರೋದು.'

'ಹೌದು ನನ್ನ ಶರೀರವನ್ನು ನೋಡಿಕೊಳ್ಳೋದಕ್ಕೆ. ನನ್ನ ಮನಸ್ಸಿನ ಮೇಲೂ ನಿನಗಧಿಕಾರ ಅವರು ಕೊಟ್ಟಿದ್ದಾರೇನು ?'

'ಬೇಡ, ಓದಬೇಡ. ಪರಿಣಾಮ ಭಯಂಕರವಾದೀತು.'

'ಸರಕು ಒಪ್ಪಿಸಿದ ಮೇಲೆ, ಸುಂಕವುಂಟೆ ದೇವ! ಇಂತಹ ಭೀತಿ ನಿನಗೆಲ್ಲಿಂದ ಬಂತೋ ?'

'ಭೀತಿ ಅಲ್ಲ......'

'ಅಲ್ಲ, ಅಲ್ಲ....ಆಸೆ ದುರಾಸೆ ಎಲ್ಲರೂ ಹಾಳಾದರೂ, ದೇಶವು ಹಾಳಾದರೂ, ನೀನು ಮಟ್ಟಿಗೆ ಸುಖವಾಗಿರಬೇಕು!'

'ನನ್ನನ್ನು ದಿಕ್ಕುತೋಚದಂತೆ ಮಾಡುತ್ತಿ. ನನಗೆ ನಿನ್ನೊಡನೆ ವಾದಿಸುವಷ್ಟು ಸಾಮರ್ಥ್ಯವಿಲ್ಲ. ಆದಾಗ್ಯೂ, ಈ ಪುಸ್ತಕಗಳನ್ನು ಓದುವುದರಿಂದ ನಮಗೆ ಏನೋ ಕೇಡಾಗುತ್ತೆ ಎಂತ ನನ್ನ ಮನಸ್ಸು ಹೇಳುತ್ತಾ ಇದೆ.'

'ಅಣ್ಣಾ, ಸ್ವಲ್ಪ ಧೈರ್ಯ ತಗೋ. ಒಂದು ವೇಳೆ ಕೆಟ್ಟ ಪರಿಣಾಮವಾದರೂ ನನ್ನ ನಿನ್ನ ಜೀವಗಳು ಈ ಮಹಾಸಮುದ್ರದಲ್ಲಿ ಎರಡು ಸಾಸಿವೆ

ಕಾಳು. ಒಬ್ಬರಿಗೂ ಉಪಕಾರವಿಲ್ಲದೆ ನೂರುವರ್ಷ ಬಾಳೋದಕ್ಕಿಂತ, ಉಪಕಾರ ಮಾಡಲು ಪ್ರಯತ್ನಪಟ್ಟು, ಆ ಪ್ರಯತ್ನದಲ್ಲೇ ಸಾಯುವುದು ಲೇಸು.'

'ಏನು ಮಾತಿದು, ರಾಮು! ಸಾವು, ಸಾವು! ಏತಕ್ಕೆ ನಿನಗೀ ಸಾವಿನ ಯೋಚನೆ?'

'ಬದುಕುವ ಯೋಚನೆ ಇಲ್ಲದಿದ್ದವನಿಗೆ ಸಾವೇ ಬದುಕು.'

'ನಿಮ್ಮ ತಂದೆ ಈ ಮಾತನ್ನು ಕೇಳಿದರೆ ಎಷ್ಟು ಸಂತೋಷಪಟ್ಟಾನು!'

'ನಮ್ಮ ತಂದೆಯ ವಿಚಾರ ನಿನಗೆ ಗೊತ್ತಿಲ್ಲ. ಎಂದು ಕಾಶಿಯನ್ನು ಬಯಸಿದನೋ, ಅಂದೇ ನಾನರಿತೆ, ತನ್ನ ಜೀವಮಾನವನ್ನೆಲ್ಲಾ ಗಂಗೆಗೆ ಅರ್ಪಿಸಿದ್ದಾನೆಂದು. ನಮ್ಮ ಮನಸ್ಸನ್ನು ಇತರರು ತಿಳಿಯುವದು ಬಹಳ ಕಷ್ಟ. ನಮ್ಮ ಜನದ ಪ್ರಕೃತಿಯೇ ಹೀಗೆ. ತಾವರೆಯ ಎಲೆಯ ಮೇಲೆ ನೀರಿದ್ದಂತೆ ಸಂಸಾರದಲ್ಲಿ ಅಂಟಿಕೊಂಡಿದ್ದರೂ ಇಲ್ಲದಂತೆ ಇರುವ ಜೀವನ ನಮ್ಮ ತಂದೆಯದು. ನಿನಗೆ ಅದರ ಮರ್ಮ ತಿಳಿಯಲಿಲ್ಲ.'

'ಎಲ್ಲಾ ಸರಿ. ನಿನ್ನ ಜೀವನ ರಾಮೂ!'

'ನನ್ನ ಜೀವನ! ಏತರ ಜೀವನ. ನನಗೆ ಐಶ್ವರ್ಯವಿದೆಯೆ– ತ್ಯಾಗ ಮಾಡಿ ಸಾರ್ಥಕ ಮಾಡಿಕೊಳ್ಳುವುದಕ್ಕೆ! ನನಗೇನಿದೆ! ಬೇಕಾದರೆ ಇರುವ ದುಃಖವನ್ನು ಜನರಿಗೆ ಹಂಚಬಹುದು. ಹೀಗೆ ಹಂಚಿ ಬದುಕುವದಕ್ಕಿಂತ ನನ್ನನ್ನೇ ಅರ್ಪಿಸಲು ಸಮಯ ಸಿಕ್ಕರೆ, ನಾನೇ ಧನ್ಯ!'

'ಜೀವದ ಆಸೆಯನ್ನು ಬಿಟ್ಟು ಮಾತಾಡಬೇಡ.'

'ಜೀವದ ಆಸೆ! ನನಗೆ ಜೀವದ ಆಸೆಯನ್ನಿಟ್ಟು ನನ್ನನ್ನು ಬೆಟ್ಟಗುಡ್ಡಗಳಂತೆ ಸಾವಿರಾರು ವರ್ಷಗಳ ವರೆಗೆ ಬದುಕಿರುವಂತೆ ನೀನು ಬಯಸಿದರೆ, ನನಗೆ ನಿನ್ನಂತಹ ಪರಮ ಶತ್ರು ಬೇರೆಯಿಲ್ಲ.

*    *    *    *    *    *

ರಾಮು ಯಾರು? ನಾವೇತಕ್ಕೆ ಕಲ್ಕತ್ತೆಗೆ ಬಂದೆವು? ಈ ವಿಚಾರವನ್ನು ಮುಂದೆ ಹೇಳುತ್ತೇನೆ.

—

# ಸಿಂಹಾವಲೋಕನ

೧

ರಾಮಮೂನ ಹಳ್ಳಿ ನಮ್ಮೂರಿಗೆ ಬಹಳ ಹತ್ತಿರ. ಬೆಳಿಗ್ಗೆ ಆರೂವರೆ ಗಂಟೆಗೆ ಹೊರಟರೆ ಮಧ್ಯಾಹ್ನ ಹನ್ನೆಡು ಗಂಟೆಯಿಂದ ಒಂದು ಗಂಟೆಯೊಳಗಾಗಿ ಸೇರಬಹುದು. ಮುಕ್ಕಾಲು ಭಾಗ ರೈಲು ದಾರಿ; ಮಿಕ್ಕಿದ್ದು ಕಾಲುದಾರಿ. ಎರಡು ಗಂಟೆಗಳ ವ್ಯತ್ಯಾಸವಾಗುವುದೂ ಉಂಟು. ಇದಕ್ಕೆಲ್ಲಾ ಕಾರಣ ನಮ್ಮ ರೈಲು. ಅದು ಹೊರಡೋವರಿವಿಗೂ ಹೊರಡೋ ನಿಶ್ಚಯವಿಲ್ಲ; ಮೂರು ಮೈಲು ಮುಂದಕ್ಕೆ ಬಂದು ಸೇಕ್ದಾರರ ಕುದುರೆಯಂತೆ ಎಷ್ಟೋ ಸಲ ನಿಂತುಬಿಟ್ಟಿದೆ. ಇದಕ್ಕೆ ಬಹಳವಾಗಿ ವರುಣನೇ ಕಾರಣ. ಇಂಜನ್ ವ್ಯಾಪಾರ ಮಾಡಿದೋರೂ ಕಾರಣ ಎಂತ ಜನರು ಹೇಳುತ್ತಾ ಇದ್ದರು.

ಜನದ ಮಾತೇನು ! ಅವರ ಬಾಯಿಗೆ ಬೀಗ ಹಾಕೋದಕ್ಕೆ ಜನಾರ್ದನನಿಂದ ಕೂಡ ಸಾಧ್ಯವಿಲ್ಲ. ರೈಲಿಂದ ಇಳಿದು ಹಳ್ಳಿಯ ದಾರಿ ಹಿಡಿದು ಹೊರಟರೆ ನಮ್ಮ ಹಳ್ಳಿಯ ಜನವೇ ಹೆಚ್ಚು. ಹಾಗಿಲ್ಲದಿದ್ದರೂ ನಮ್ಮ ಹಳ್ಳಿಯವರ ಮಾತೇ ಹೆಚ್ಚು. ಇದಕ್ಕೆ ಕಾರಣ ನಮ್ಮ ಹಳ್ಳಿಯವರು ಹಳ್ಳಿಯವರಾದರೂ ಅವರಲ್ಲಿ ಅಮೂಲ್ಯವಾದ ನಾಗರಿಕತೆಯ ಕುರುಹು ಬಂದಿತ್ತು—ಅದು ಸಾಲವನ್ನು ತೆಗೆದುಕೊಳ್ಳೋದು. ಕೊಡೋ ವಿಚಾರದಲ್ಲಿ ಅವರಿಗೇನೂ ಅಷ್ಟು ಕುತೂಹಲವಿಲ್ಲ. 'ಕೊಡೋರಿಗೆ ಕೊಟ್ಟುಬಿಟ್ಟರೆ, ನಮಗೇನು ಉಳಿಯುತ್ತೆ!' ಇದೇ ಅವರ ಪ್ರಾತಃಸಂಧ್ಯೆ. ಪೂರ್ವಕಾಲದಲ್ಲಿ ಹೀಗಿರಲಿಲ್ಲ ಎಂತ ಪ್ರತಿಯೊಬ್ಬರೂ ಹೇಳುತ್ತಲಿರೋದೇ. ಎಷ್ಟೋ ಸಲ ದಾರಿಯಲ್ಲಿ ಹೋಗುತ್ತ ಈ ಮಾತು-ಕತೇನೇ ಎಲ್ಲಾರ ಬಾಯಲ್ಲಿ.

'ಅಲ್ಲ, ಸೋಮಿ, ನಂಜಪ್ನೋರು ಎಂಗಿದ್ರು! ಒಳ್ಳೆ ರಾಜರು—ರಾಜರ ಮನತನದಂಗಿದ್ದರು, ಬಹಳ ಉಪಕಾರಿ, ಸೋಮಿ.'

'ನಿಮಗೆಲ್ಲಾ ಬಹಳ ಉಪಕಾರ ಮಾಡಿದ್ದಾರಯ್ಯ!'

'ಔದು, ದೇವ್ರು, ನಿಶಿರಾತ್ರಾಗೆ ಓಗಿ ಕೇಳ್ಲಿ, ಒಂದೆರಡಲ್ಲ, ಐದು ಕೇಳ್ಲಿ—ತಗೋಳೋ—ಎಂಬೋದೇ.'

'ಬಡ್ಡಿ ಚೆನ್ನಾಗಿ ಹಾಕ್ತಾಯಿದ್ದರಲ್ಲ!'

'ಆ—ಇಲ್ಲ, ಸೋಮಿ, ಬಡ್ಡಿ-ಗಿಡ್ಡಿ ಮಾತು ಆತನ ತಾಕಿಲ್ಲ. ಒಳ್ಳೇ ದೊಡ್ಡೋರು ಸೋಮಿ, ಅವರು, ನಮ್ಮ ತಾಕೆ ಬಡ್ಡೀ-ಗಿಡ್ಡೀ ತಿಂದು ಬದುಕುತಾರಾ? ಏನೋ ಅದೂ, ಇದೂ ಕೆಲಸ ಏಳ್ತಾ ಇದ್ರು ಅನ್ನಿ. ನಾವು ಅಂತಾವ್ರಕೆಲ್ಲ ಎದರೊನ್ರೀಕಿಲ್ಲ!'

'ನೀವು ಹಣಾ ಹೇಗೆ ಹಿಂದಕ್ಕೆ ಕೊಡುತ್ತಾ ಇದ್ದಿರಿ?'

'ಏಗೇನು! ಒಂದೆರಡು ತಿಂಗಳ ಕಾಲ ಆತ ನಮ್ಮನ್ನೇನೂ ಕೇಳ್ತಿರಲಿಲ್ಲ. ಬಡ್ಡಿ-ಗಿಡ್ಡಿಯಿಲ್ಲ. ನಾವೇನಾನಾ ಒಂದು ಆಸು-ಗಿಸು ತಂದ್ರ, ಆ ಆಣಕ್ಕೆ, ಎರಡ್ತಿಂಗಳಾದ ಮೇಗೆ, ಅಣ, ವಾಪಸ್ನು ಕೊಟ್ಟುಬಿಡಬೇಕ್ರ. ಆ ಆಸುವಿನ ಕರ ಮಟ್ಟಿಗೆ ಸೋಮಿಯೋರ್ಗ್ಗೇನೆ.'

ಈ ವಿಚಾರ ನನ್ನ ಸ್ನೇಹಿತ ರಾಮೂನ ತಾತನ ಮಾತು. ಸಂಜಪ್ಪನವರೆಂದರೆ ಆ ಪ್ರಾಂತ್ಯದಲ್ಲಿಯೇ ಒಂದು ವಿಧವಾದ ಗೌರವ. ಪ್ರತಿ ನವರಾತ್ರಿ ಆಯುಧಪೂಜೆ ದಿಸಕ್ಕೆ ಮುಂಚಿತವಾಗಿ ಪ್ರತಿಯೊಬ್ಬರೂ ಆಯುಧಪೂಜೆಗೆ ಬೇಕಾದ ಸಾಮಗ್ರಿಯನ್ನು ಕೊಂಡುಕೊಳ್ಳುವುದಕ್ಕೆ ಇವರ ಹತ್ತಿರಕ್ಕೆ ಬರುವುದೇ. ವಿಜಯದಶಿಮಿ ಸಾಯಂಕಾಲ ಎಲ್ಲರೂ ಇವರಿಗೆ ನಮಸ್ಕಾರ ಹಾಕಿಹೋಗುವುದೇ. ಮಾರನೆಯ ದಿನ ಏಕಾದಶಿ, ಇವರಿಗೆ ಊಟವಿಲ್ಲ, ಫಲಾಹಾರ. ಅದಕ್ಕಾಗಿ ಒಬ್ಬೊಬ್ಬರೂ ಒಂದೊಂದು ವಿಧವಾದ ಫಲವನ್ನು ತಂದು ಅರ್ಪಿಸಿ, ಬಾಗಿಲಲ್ಲಿ ಕೂತಿದ್ದು, ಆಕಳಿಸಿ, ಆಮೇಲೆ ಕಂಬಳಿ ಕೊಡವಿಕೊಂಡು 'ಅಪ್ಪಣೆ ತಕ್ಕೊಂಡು' ಹೋಗುವುದೇ.

ನನಗೆ ಒಂಬತ್ತು ವರ್ಷ. ರಾಮೂಗೆ ಏಳು ವರ್ಷ. ಇಬ್ಬರೂ ದಸರಾ ಹಬ್ಬಕ್ಕೆ ಹಳ್ಳಿಗೆ ಹೋಗುತ್ತಾ ಇದ್ದೆವು. ನಾವು ಬರೋದು ಮುಂಚಿತವಾಗಿ ಗೊತ್ತಾಗಿದ್ದರೆ, ರೈಲಿಗೇ ಗಾಡಿ ಬಂದುಬಿಡುತ್ತಿತ್ತು. ಸಿದ್ದಂದು ಎತ್ತುಗಳು; ಬೈರಂದು ಬಂಡಿ. ನನ್ನ ಸೋದರಮಾವ ಬಂಡಿಹೊಡೆಯೋದು. ಮೆಲ್ಲಗೆ ಅವನು ರಾಮೂನ ಕೇಳೋದು, 'ನಿಮ್ಮ ರೈಲು ಬೇಗ ಹೋಗುತ್ತೋ

ನಮ್ಮ ಬಂಡಿ ಬೇಗ ಹೋಗುತ್ತೋ?' ಎಂತ. ನಾವಿಬ್ಬರೂ ಬಂಡಿಯೊಳಗಿನಿಂದ 'ರೈಲೇ' ಎಂಬೋದು. ಇದನ್ನು ಕೇಳಿ ಸೋದರಮಾವ 'ಈಗ ನೋಡಿ, ಬಿಡತೇನೆ ಗಾಡೀನ! ನಿಮ್ಮ ರೈಲೂ ಇಲ್ಲ, ಮೋಟಾರೂ ಇಲ್ಲ!' ಎನ್ನುತ್ತ, ಸ್ವಲ್ಪ ಕ್ಯರಕ್, ಕ್ಯರಕ್, ಶಬ್ದಮಾಡಿ, ಚಾಟಿ ಕೊನೆಯಲ್ಲಿರುವ ಮುಳ್ಳಿನಿಂದ ಎತ್ತುಗಳಿಗೆ ತಿವಿಯೋದು. ಒಂದೆರಡು ನಿಮಿಷಗಳೊಳಗಾಗಿ ಎಂತಹ ಎತ್ತುಗಳಿಗಾದರೂ ಬಾಯಲ್ಲಿ ನೊರೆ ಬಂದುಬಿಡಬೇಕಾದ್ದೇ. ಹಿಂದೆ ಬಂದ ಸಿದ್ದ ಬೈರ ಇಬ್ಬರೂ ಬೊಬ್ಬೆಯಿಡಬೇಕಾದ್ದೇ!

'ಏನ್ಸ್ವಾಮಿ, ಇಂಗೆ ಮಾಡ್ಬಿಟ್ರೇ!'

'ಅಯ್ಯೋ ಮುರ್ಠಾಳ, ನಿನಗೇನು ಗೊತ್ತೋ ಈ ವಿಚಾರ. ಈ ಎತ್ತುಗಳಿಗೆ ಪೀನಾಶಿರೋಗ ಬಂದುಬಿಟ್ಟಿದೆಯೋ. ಹೀಗೆ ನಾಲ್ಕು ಮೈಲಿ ಓಡಿಸಿ, ಹಳ್ಳಿಗೆ ಹೋಗ್ತಾ, ಅವನ್ನ ಕಾಲು ಕಟ್ಟಿ ಮಲಗಿಸಿ, ಮುಖವಾಡ, ಮೂಗುಪಟ್ಟಿ ಹಾಕಿ, ಕಿವೀಲಿ ಬಿಸಿಬಿಸಿ ನೀರು ಬಿಡಬೇಕೋ. ಆಗ ತಯಾರಾಗ್ತವೆ ನೋಡು!'

'ಔದು ಸೋಮಿ. ಈ ಎಡಕ್ಕೈತಲ್ಲಾ, ಈ ಕರೀ ಎತ್ತು, ಇದಕ್ಕೆ ಸ್ವಲ್ಪ ಪೀನಾಸೀವಾ.'

'ಉಳೋ ನಿನಗೆ ಬುದ್ಧಿ ಮೂರುಳ್ಳಿಗಡ್ಡೆ ಎಂಬೋದು ಇದಕ್ಕೇನೋ. ನನ್ನ ಮಾತು ಕೇಳು. ನನ್ನ ಕೈಗೆ ಒಂದು ವಾರ ಕೊಡು. ಎರಡನ್ನೂ ಸರಿಮಾಡಬಿಡ್ತೇನೆ!'

ಹಳ್ಳೀಗೆ ಹೋದಮೇಲೆ ಸಿದ್ದ ಹಾಗೇ ಮಾಡಿದ. ನನ್ನ ಮಾವ ಒಂದನ್ನು ಸರಿಮಾಡಲು ಪ್ರಯತ್ನಪಟ್ಟ. ಅದು ಪ್ರಾಣಬಿಡುತ್ತಾಯಿದ್ದುದನ್ನು ನೋಡಿ ಸಿದ್ದ ಸಂಜಪ್ಪನವರ ಹತ್ತಿರ ಬಂದು ಗೋಳಾಡಿದ. ಅವರು ಬಂದು ನೋಡೋ ಹೊತ್ತಿಗೆ ಆ ಕರೀ ಎತ್ತು ತೇಲಗಣ್ಣು ಮೇಲಗಣ್ಣು ಮಾಡಿತ್ತು. ನನ್ನ ಮಾವನಿಗೆ ಅಷ್ಟೋತ್ತರವಾಯಿತು. ಆ ಎತ್ತು ಉಳಕೊಂಡು ಕೆಲಸಕ್ಕೆ ತಯಾರಾಗಬೇಕಾದರೆ ಆರು ತಿಂಗಳಾಯಿತಂತೆ. ನನ್ನ ಮಾವನೇನೋ ಹೇಳ್ತಾನೇ ಇದ್ದ; 'ಒಳ್ಳೇ ಹೊತ್ತಿನಲ್ಲಿ ಈ ಮುದುಕರು ಬಂದು ಎಲ್ಲಾ ಕೆಡಸಿಬಿಟ್ಟರು. ಇಲ್ಲದೇ ಇದ್ದರೆ ಇನ್ನೊಂದು ಎರಡು ನಿಮಿಷದಲ್ಲಿ ಎಲ್ಲಾ ತಯಾರು ಮಾಡಿಬಿಟ್ಟಿದ್ದೆ. ಮುದುಕರು—ಆಕ್ಷೇಪಣೆ

ಮಾಡುವಹಾಗಿಲ್ಲ.' ಅಲ್ಲಿಂದಾಚೆಗೆ ನನ್ನ ಮಾವ 'ಪಶುವೈದ್ಯ ಚಿಕಿತ್ಸೆ' ಎಂದು ಎಲ್ಲರ ಮುಂದೆ ತನ್ನ ಪರಾಕ್ರಮವನ್ನು ಹೊಗಳಿಕೊಳ್ಳುತ್ತಾಯಿದ್ದ.

ಹೀಗೆ, ಬಂಡೀಲಿ ಊರಿಗೆ, ಎಂದರೆ, ಹಳ್ಳೀಗೆ ಹೋಗಿ ಸೇರುತ್ತಾ ಇದ್ದೆವು. ಇದರಂತೆ ಈ ಸಲವೂ ಸೇರಿದೆವು. ಬಾಗಿಲಿನಲ್ಲೇ ನಮ್ಮ ಕಣ್ಣಿಗೆ ಬಿತ್ತು ನಾಲ್ಕಾರು ಹಣ್ಣುಗಳು. ಆ ಗುಂಪಿನಲ್ಲಿ ನಮ್ಮ ಮಾವನ ಕಣ್ಣು ಒಂದು ಹಣ್ಣಿನ ಮೇಲೆ ಹೋಗಿ ನಿಂತಿತು; 'ಅಣ್ಣಯ್ಯ, ಅದು ಕೆಂಪು ಹಲಸು, ಒಳ್ಳೇ ಜೇನತುಪ್ಪ ಇದ್ದ ಹಾಗೆ. ನೀನೆಂದಾದರೂ ತಿಂದಿದ್ದೀಯಾ?' 'ಇಲ್ಲ' ಎಂದ ರಾಮು. ಅಷ್ಟೇ ಸಾಕು. ಒಳಗೆ ಹೋದ. ನಂಜಪ್ಪನವರು ಏನೋ ಮಾಡುತ್ತಾ ಕುಳಿತಿದ್ದರು. ಅವರನ್ನು ಏನೋ ಕೇಳಿದ. ಒಳಗೆ ಅಡಿಗೆ ಮಾಡುವುದಕ್ಕೆ ಸೇರಿದ್ದ ಇಬ್ಬರು ಮಹಿಳೆಯರನ್ನು ನಗಿಸಲು, 'ಪಾಯಸಕ್ಕೆ ಉಪ್ಪು ತರಲೆ?'ಎಂದ. ಅಲ್ಲಿಂದ ಈಚೆಗೆ ಬಂದು 'ಅಣ್ಣಯ್ಯ ಆ ಹಣ್ಣು ತೆಗಿ' ಎಂದ. ಇದನ್ನೆಲ್ಲಾ ನೋಡುತ್ತಾ ತರಕಾರಿ ಹೆಚ್ಚುತ್ತಿದ್ದ ನಮ್ಮ ಸೋದರತ್ತೆ ಮೆಲ್ಲನೆ, 'ಇವತ್ತೇನೋ ಇದೆ. ಹುಡುಗರನ್ನು ಏನೋ ಮಾಡಿಬಿಡತಾರೆ!' ಎಂದಂದುಕೊಂಡಹಾಗಿತ್ತು.

ನಾನೇನೋ ಹೋಗಿ ಹಣ್ಣನ್ನು ಸೆಳೆದೆ. ಅದು ಕದಲಲಿಲ್ಲ. ಅವನೇ ಬಂದು ಎಳೆದ. ಜೊತೆಗೆ ಸಣ್ಣದಾದ ಇನ್ನೊಂದನ್ನೂ ತೆಗೆದುಕೊಂಡು ಒಳಕ್ಕೆ ಹೋಗಿ ಚಿಕ್ಕ ಮನೆಯಲ್ಲಿ ಕೂತೆವು. ಒಂದು ಸಣ್ಣ ಬಟ್ಟಲಿನಲ್ಲಿ ಒಳ್ಳೇ ಎಣ್ಣೆಯನ್ನಿಟ್ಟುಕೊಂಡು ಹಣ್ಣನ್ನು ಬಿಡಿಸಲು ಮೊದಲುಮಾಡಿದ್ದಾಯಿತು. ಹಣ್ಣೇನೋ ಬಹಳ ರುಚಿಯಾಗಿತ್ತು. ಆದರೆ ನಾನು ರಾಮು ಇಬ್ಬರೂ ಆ ದಿನ ಸಾಯಂಕಾಲವೇ ಹೊಟ್ಟೇನೋವೆಂದು ಮಲಗಿದೆವು. ಅದನ್ನು ಚೇತರಿಸಿ ಕೊಳ್ಳಲು ಒಂದು ಪಕ್ಷದ ವರೆಗೆ ಬೇಕಾಯಿತು. ಆದರೇನು, ನಾವು ಒಂದು ತೊಳೆಯನ್ನಾಗಲಿ ಮುಟ್ಟಲಿಲ್ಲವೆಂದು ನನ್ನ ಮಾವ ಪ್ರಮಾಣ ಮಾಡುತ್ತಿದ್ದ.

ಇಷ್ಟಾದರೂ ನಂಜಪ್ಪನವರು ನಮ್ಮ ಮಾವನನ್ನು ಬೈಯುತ್ತಿರಲಿಲ್ಲ. ಏನೋ ದೂರದ ಸಂಬಂಧವಾಗಿದ್ದರೂ ಅವರ ಮನೆಯಲ್ಲಿ ಓಡಾಟವೆಲ್ಲಾ ನನ್ನ ಸೋದರಮಾವಂದೇ. ಎಷ್ಟಾದರೂ ನನ್ನ ಮಾವ ಆತನಿಗೆ ದತ್ತುಪುತ್ರ ಎಂತ ಊರಿನವರೆಲ್ಲಾ ಹೇಳುತ್ತಾಯಿದ್ದರೂ, ಹಳ್ಳಿಯವರು ಮಟ್ಟಿಗೆ ಆ ವಿಚಾರವನ್ನು ಎತ್ತುತ್ತಲೇ ಇರಲಿಲ್ಲ.

ಸಂಜಪ್ಪನವರ ಒಬ್ಬನೇ ಮಗ, ನಮ್ಮ ರಾಮೂನ ತಂದೆ. ಮನುಷ್ಯ ಕೆಂಪಗಿದ್ದ, ಸ್ವಲ್ಪ ಉದ್ದವಾದ ಮೂಗು. ಕಣ್ಣುಗಳಲ್ಲಿ ತೇಜಸ್ಸು ಹೆಚ್ಚಾಗಿತ್ತು, ಮುಖದಲ್ಲಿ ವರ್ಚಸ್ಸು. ವಿದ್ಯೆಯಲ್ಲಿ ಸಾಮಾನ್ಯ; ಆದರೂ ಆಗಿನ ಕಾಲದಲ್ಲಿ ಸಾಧಾರಣವಾಗಿ ಓದುತ್ತಿದ್ದಕ್ಕಿಂತಲೂ ಸ್ವಲ್ಪ ಹೆಚ್ಚಾಗಿಯೇ ಓದಿದ್ದ. ಮಾತನಾಡುವಾಗ ಬಹಳ ಮೆಲ್ಲನೆ ಮಾತು; ಆದೇ ಕಾರ್ಯದಲ್ಲಿ ಬಹಳ ಚುರುಕು. ಹೆಚ್ಚೇಕೆ ಸಂಜಪ್ಪನವರಲ್ಲಿದ್ದ ಸುಗುಣಗಳೂ ದುರ್ಗುಣಗಳೂ ರಾಮೂನ ತಂದೆಯಲ್ಲಿ ಸುಗುಣಗಳಾಗಿಬಿಟ್ಟಿದ್ದವು.

ಹದಿನೆಂಟು ವರ್ಷಕಾಲ ತಂದೆಮಕ್ಕಳಿಬ್ಬರೂ ಒಟ್ಟಾಗಿದ್ದರು. ರಾಮೂನ ತಂದೆ ಶೀನಪ್ಪನಿಗೆ ಸಂಜಪ್ಪನ ಲೆಕ್ಕಾಚಾರ ಸರಿಹೋಗಲಿಲ್ಲ. ಏನೇನೋ ಕಷ್ಟಪಟ್ಟು ಲೆಕ್ಕಪಕ್ಕಗಳನ್ನು ಬರೆಯುತ್ತಿದ್ದ. ಆದರೆ ಎರಡು ಎರಡನ್ನು ಸೇರಿಸಿ ಇಪ್ಪತ್ತೆರಡು ಮಾಡುವಷ್ಟು ಲೆಕ್ಕ ಅವನು ಕಲಿತಿರಲಿಲ್ಲ. ಮಂಡೀಗೆ ಸಾಮಾನು ತೆಗೆದುಕೊಂಡು ಹೋದಾಗಲೆಲ್ಲಾ ಶೀನಪ್ಪನ ಕೈಯಿಂದಲೇ ಖರ್ಚು ಬೀಳುತ್ತಿತ್ತು. ರೈತರಿಗೆ ಈ ವಿಚಾರ ಚೆನ್ನಾಗಿ ಮಂದಟ್ಟಾಗಿತ್ತು. ಆದಕ್ಕೇ ಅವರು ಯಾವಾಗಲೂ ಶೀನಪ್ಪನವರ ಕೈಯಲ್ಲಿಯೇ ತಮ್ಮ ದವಸ ಧಾನ್ಯವನ್ನು ಮಂಡೀಗೆ ಕಳಿಸಿಕೊಡುತ್ತಾ ಇದ್ದರು. ಒಂದೆರಡು ವರ್ಷದಲ್ಲೇ ಸಂಜಪ್ಪನವರಿಗೂ ಈ ವಿಚಾರ ತಿಳಿಯಿತು.

ಹಳ್ಳಿಯವರ ವಿಚಾರ ಶೀನಪ್ಪನಿಗೆ ಅಷ್ಟು ತಿಳಿಯದು. ಸಂಜಪ್ಪನವರಿಗೆ ಮಾತ್ರ ಬಹಳ ಚೆನ್ನಾಗಿ ಗೊತ್ತಿತ್ತು. ಶೀನಪ್ಪ ತನ್ನ ಮನಸ್ಸಿನಲ್ಲಿದ್ದುದನ್ನು ಅವರಿಗೆ ಹೇಳಿಬಿಡುತ್ತಿದ್ದ. ಆದರೆ ಸಂಜಪ್ಪನವರ ವಿಚಾರ ಚಂಡೀ ಕತೆ ಇದ್ದ ಹಾಗೆ. ಮಾತು ಮಾತಿಗೂ ಶೀನಪ್ಪನಿಗೆ ಮೋಸ ಕಾಣುತ್ತಿತ್ತು; ಆದರೆ ಸಂಜಪ್ಪನವರಿಗೆ ತಮಗೆ ಅನುಕೂಲ ಮಾಡಿಕೊಳ್ಳೋದರಲ್ಲಿ ಮೋಸ ಎಂಬೋದು ತೋರುತ್ತಿರಲಿಲ್ಲ. ಹಳ್ಳಿಯವರು ತಮ್ಮಲ್ಲಿ ಬಂದರೆ ತಮ್ಮಿಂದ ಲಾಭ ಹೊಂದೋದಕ್ಕೇ ಎಂದು ಸಂಜಪ್ಪನವರ ನಿರ್ಧಾರಣೆ. ತಾವು ಆಸ್ಪದ ಕೊಟ್ಟರೆ ಅವರು ಖಂಡಿತವಾಗಿ ಮುಳುಗಿಸುವದರಲ್ಲಿ ಯಾವ ಸಂದೇಹವೂ ಅವರಿಗೆ ಕಂಡುಬರಲಿಲ್ಲ. ಆದ್ದರಿಂದ ತಮ್ಮನ್ನು ತಾವು ಉಳಿಸಿಕೊಳ್ಳಬೇಕಾದರೆ ಹಳ್ಳಿಯವರಿಂದ ಲಾಭ ಹೊಂದಬೇಕೆಂಬುದೇ ಸಂಜಪ್ಪನವರ ಮತ.

ಆಗಾಗ ಹೊಸ ಹೊಸ ರೀತಿಯಲ್ಲಿ ಹಳ್ಳಿಯವರು ಸಂಜಪ್ಪನವರನ್ನು

ಮಾತಾಡಿಸುತ್ತಿದ್ದರು. ' ಸೋಮಿ, ಈ ಸಾರ್ತಿಗ, ನಮ್ಮೊಲಕ್ಕೆ ಕಬ್ಬಿಟ್ಟು ಬಿಡೋಣ ? ' ಸಂಜಪ್ಪನವರಿಗೆ ಇದು ಬೇಕಾಗಿದ್ದರೂ ಅವರು ಒಂದು ವಿಧವಾಗಿ ಮುಖ ಮಾಡಿಕೊಂಡು ಹೀಗೆ ಹೇಳೋದು: ' ಅದರಲ್ಲೇನು ಒರುತ್ತೇ ಲಾಭ ! ಇಟ್ಟಿದ್ದೆಲ್ಲಾ ನಮಗೇ ಆಗಿಬಿಡುತ್ತೆ ! '

' ಇಲ್ಲ, ದೇವ್ರು. ಏನಾಗ್ತೈತೋ ಅಂಗ ಲೆಕ್ಕಾಚಾರ ನೋಡ್ರು. '

'ಇದಕ್ಕೆಲ್ಲಾ ಏನಾಗುತ್ತೋ. ಲೆಕ್ಕಾಚಾರದ ಮಾತಿಗೆ ಒಂದರೆ ನಿನಗೂ ಕಷ್ಟ, ನನಗೂ ಕಷ್ಟ. ನಿನಗಷ್ಟು ಇಷ್ಟ ಇದ್ದರೆ ಇಟ್ಟುಬಿಡು. ಕೊಡಿಸಿಬಿಡುತ್ತೇನೆ '

ಇಲ್ಲ, ಸೋಮಿ, ಅಂಗೊಂದು ಗೀಟಿಟ್ಟು ನೋಡ್ಬಿಟ್ರು '

' ಗೀಟೂ ಬೇಡ, ಏನೂ ಬೇಡ. ಅದೆಷ್ಟಾಗುತ್ತೋ ಎಲ್ಲಾ ಪೇಟೆ ಒಳಿಗೆ ತಿಳಿಯುತ್ತೆ. ನಿನಗದರ ಮೇಲೆ ಮನಸ್ಸಿದ್ದರೆ ಇಟ್ಬಿಡು, ಬೀಜದ ಖರ್ಚು ನಂದಿರಲಿ. ಕೆಲಸ ಎಲ್ಲಾ ನಿಂದು. ಬಂದ ಮೇಲೆ ಬೀಜದ ಖರ್ಚು ಕೊಟ್ಟುಬಿಟ್ಟು, ನಿನಗರ್ಧ ಇಟ್ಕೋ. ಏನಾದರೂ ಮಿಕ್ಕರೆ ನನಗೆ ಕೊಟ್ಟುಬಿಡು. '

' ಇಂಡೀ-ಗಿಂಡೀಗೆಂಗ್ರು ಮತ್ತೆ ? '

' ಹಿಂಡೀದು, ನಿನಗಿವತ್ತು ಬೇಕಾದರೆ ಕೊಡಿಸುತ್ತೇನೆ. ಇನ್ನೆರಡು ತಿಂಗಳೊಳಗಾಗಿ ತೀರಿಸಿಬಿಡು. ಹಣಕೊಡೋಕಾಗದಿದ್ದರೆ ಅದಕ್ಕೆ ರಾಗೀ ಕೊಟ್ಟುಬಿಡು, ಆಯ್ತು. ನನಗೀಗ ಪೇಟೆಗೆ ಹೋಗೊ ಸಂದರ್ಭ ಇಲ್ಲ. ನಿನಗೋಸ್ಕರ ಒರತೇನೆ ಬೇಕಾದರೆ, ಗಾಡಿಗೀಡಿ ಸರಿಮಾಡಿಕೊಂಡು ಬಾ. '

—

೨

ಇಷ್ಟೆಲ್ಲಾ ಆಗಿ ರೈತ ಗಾಡೀ-ಗೀಡಿ ಸರಿಮಾಡಿಕೊಂಡು ಬರೋ ಹೊತ್ತಿಗೆ ಸಂಜಪ್ಪನವರು ಹಗೇವಿನಿಂದ ಒಂದು ಬಂಡಿ ರಾಗಿ ಇಚೆಗೆ ತೆಗೆಸಿರೋದು. ಬಂಡಿ ಬಂದ ಕೂಡಲೆ ಆ ರಾಗಿಯನ್ನು ಬಂಡಿಯೊಳಗೆ ತುಂಬಿಸಿ ಕಳಿಸಿಕೊಟ್ಟು ತಾವು ರೈಲಿನಲ್ಲಿ ಪಟ್ಟಣವನ್ನು ಸೇರೋದು. ಈ ಒಂಡಿಯ ಉಸ್ತುವಾರೀಗೆ ನನ್ನ ಮಾವನನ್ನು ಅವರ ಹಿಂದೆ ಕಳಿಸೋದು.

ಬಂಡಿಯಲ್ಲಿ ಪ್ರಯಾಣ ಮಾಡೋದು ಎಂದರೆ ಅದೇ ಒಂದು ವಿದ್ಯಾಲಯಕ್ಕೆ ಸೇರಿದ ಹಾಗೆ. ಹೊರಡೋದಕ್ಕಿಂತ ಮುಂಚಿತವಾಗಿ ಮಾಡಬೇಕಾದ ಪೂಜೆಪುನಸ್ಕಾರಗಳು; ಕೈಕಳಗಿರೋ ಆಳುಗಳಿಗೆ ಮಾಡಬೇಕಾದ ಆಶೀರ್ವಾದಗಳು. ಇಷ್ಟಾಗಿ ಹೊರಟ ಒಂದೆರಡು ನಿಮಿಷದಲ್ಲೇ ಮರೆತವುಗಳನ್ನು ಜ್ಞಾಪಿಸಿಕೊಂಡು ಹಿಂದಕ್ಕೋಡಿ ಬರುವ ಸಂಭ್ರಮ. ಕೊನೆಗೆ ಹಳ್ಳಿಯನ್ನು ಬಿಡುವುದರೊಳಗಾಗಿ ಆಗಬೇಕಾದ ' ರೋಲ್ ಕಾಲ್. '

ಪರೀಕ್ಷೆ ಕಾಲದಲ್ಲಿ ನಾಲ್ಕಾರು ಉಪಾಧ್ಯಾಯರು ಹೇಗೆ ಒಟ್ಟಿಗೆ ಸೇರಿ ವಿದ್ಯಾರ್ಥಿಗಳನ್ನು ತಬ್ಬಿಬ್ಬು ಮಾಡುತ್ತಾರೋ ಹಾಗೆಯೇ ನಾಲ್ಕಾರು ರೈತರು ಸೇರಿ ಎತ್ತುಗಳನ್ನು ತಬ್ಬಿಬ್ಬು ಮಾಡಿದ ಹೊರತು ಬಂಡಿ ಮುಂದಕ್ಕೆ ಹೊರಡೋದೇ ಇಲ್ಲ. ಎಷ್ಟೋ ಸಲ ಮೂಗುದಾಣಿ ಕಿತ್ತುಹೋಗಿ, ಹಗ್ಗಕ್ಕಾಗಿ ಕತ್ತಾಳಿಪಟ್ಟೆ ಹುಡುಕಿಕೊಂಡು ಹೊರಟಿದ್ದೂ ಉಂಟು. ಒಬ್ಬಿಬ್ಬರು ಆಗ್ರಹದಿಂದ ಎತ್ತುಗಳನ್ನು ಒದ್ದಿದ್ದೂ ಉಂಟು; ಅವರ ಮೇಲಿನ ಕೋಪಕ್ಕೆ ಆ ಎತ್ತುಗಳು ಮತ್ತೊಬ್ಬರನ್ನು ಒದೆಯೋದೂ ಉಂಟು.

ಪ್ರಯಾಣಕ್ಕೆ ಒತ್ತಿ ಕಟ್ಟೋದರಲ್ಲಿ ನನ್ನ ಮಾವನ್ನ ಬಿಟ್ಟರೆ ಇಲ್ಲ. ಅದಕ್ಕೇ ಅವನು ಬರತಾನೆ ಎಂದರೆ ಹಳ್ಳಿಯ ರೈತರು ಯಾರೇ ಆಗಲಿ, ಎಲ್ಲಿಗೆ ಬೇಕಾದರೂ, ಹೋಗೋದಕ್ಕೆ ಸಿದ್ಧ. ಅಡಕೆ, ಎಲೆ, ಹೊಗೆಸೊಪ್ಪು ಸಕ್ಕ, ಇವುಗಳಿಲ್ಲದೆ ನನ್ನ ಮಾವ ಪ್ರಯಾಣವೇ ಬೆಳೆಸುತ್ತಿರಲಿಲ್ಲ. ಜೊತೆಗೆ ತನ್ನ ಜೋತೆಗೆ ಬರುವವರಿಗಾಗಿ ರಾಗಿರೊಟ್ಟಿ, ತನಗಾಗಿ ಒಂದೆರಡು ರವೆ ಉಂಡೆ, ಒಂದು ಒಟ್ಟಲು ತುಂಬ ಹಾಲು.

ಹಳ್ಳಿಯಿಂದ ಸಾಯಂಕಾಲ ನಾಲ್ಕು ಗಂಟೆಗೆ ಹೊರಡಬೇಕೆಂದು ಪ್ರಯತ್ನಪಟ್ಟರೆ, ಸೂರ್ಯ ಮುಳುಗೋದರೊಳಗಾಗಿ ಹಳ್ಳಿಬಿಟ್ಟು ರಾತ್ರಿ ಹತ್ತುಗಂಟೆಗೆ ನಡುದಾರಿ ಛತ್ರಕ್ಕೆ ಬಂದು ಸೇರುತ್ತಿದ್ದರು. ಅಲ್ಲಿ ರೊಟ್ಟಿ ತಿಂದು ಬೆಳಗಿನ ಝಾವ ಅಂದರೆ ಮೂರುಗಂಟೆಗೆ ಬಂಡೀ ಕಟ್ಟಿದರೆ, ರೈತ ಪಟ್ಟಣಕ್ಕೆ ಬಂದು ಸೇರೋ ಹೊತ್ತಿಗೆ ಸಂಜಪ್ಪನವರು ಊಟವನ್ನು ಮುಗಿಸಿಕೊಂಡಿರುತ್ತಿದ್ದರು; ಒಂದೊಂದು ಸಲ ಮಧ್ಯಾಹ್ನದ ಗೊರಕೆಗಳನ್ನೂ ಮುಗಿಸಿಕೊಳ್ಳುತ್ತಿದ್ದರು. ಈ ರೈತ ಬಂದ ಮೇಲೆ ಅವನ ಹೊಟ್ಟೇ ಕಡೆಗೆ ಒಂದಷ್ಟು ತೋರಿಸಿ, ಆಮೇಲೆ ಮುಂಡಿಯ ಕಡೆಗೆ ಹೊರಡುವುದು. ಈ

ವಿಚಾರ ನನ್ನ ಸೋದರಮಾವನಿಗೆ ಬಹಳ ಚೆನ್ನಾಗಿ ಗೊತ್ತು. ಆದಕ್ಕವನು ಯಾವಾಗಲೂ ತಯಾರಾಗಿಯೇ ಬರುತ್ತಿದ್ದ. ಬೆಳಗ್ಗೆ ಪಟ್ಟಣಕ್ಕೆ ಬಂದ ಕೂಡಲೇ ರೈತರನ್ನು ಹತ್ತಿರದಲ್ಲಿದ್ದ ಒಂದು ಫಲಾಹಾರ ಮಂದಿರಕ್ಕೆ ಎಳೆದು ಕೊಂಡು ಹೋಗುತ್ತಿದ್ದ. ಅಲ್ಲಿ ಘಟ್ಟಿಯಾಗಿ ಎಲ್ಲರಿಗೂ ಕೇಳಿಸುವಂತೆ 'ಅಯ್ಯೋರೇ, ಎರಡೆರಡಿಡ್ಲಿ, ಎರಡುದೊನ್ನೆ ಚಿತ್ರಾನ್ನ, ಇವರಿಗೆ ಕೊಟ್ಟು ಬಿಡಿ' ಎಂದು ಕೂಗುತ್ತಿದ್ದ. ಜೊತೆಗೆ ಬಂದ ರೈತರು 'ಸೋಮಿ, ನಿಮ್ಗೆ?' ಎಂಬೋದು; ನನ್ನ ಮಾವ 'ಎಲಾ, ನೀವು ತಿನ್ನಿರೋ. ನನಗೇನು! ನೀವು ಚೆನ್ನಾಗಿದ್ದರೆ ನಮ್ಗೆಲಸ?' ಎನ್ನುತ್ತ, ಪುನಃ ಹಿಂದೆ ಹೇಳಿದ್ದನ್ನೇ ಹೇಳೋದು ಹೋಟಲಿನವನು ಅವನ್ನು ರೈತರಿಗೆ ಕೊಟ್ಟಮೇಲೆ, ಅವನು ಸಾಧಾರಣವಾಗಿ 'ಸ್ವಾಮಿ, ತಮಗೇನ್ಕೊಡಲಿ?' ಎಂಬೋದು; ರೈತರು ಒತ್ತಾಯಪಡಿಸೋದು. ನನ್ನ ಸೋದರಮಾವನವರು ಬಹಳ ಜುಗುಪ್ಸೆ ಯಿಂದ 'ಹೋಗಲಿ ಕೊಡಪ್ಪ, ಅಷ್ಟು ಜಾಮೂನೋ, ಹಲ್ವಾನೋ,' ಎಂಬೋದು. ಅದನ್ನು ತಂದು ಕೈಗಿಟ್ಟ ಮರುಕ್ಷಣದಲ್ಲೇ ಅದು ಬಾಯಿ ಯೊಳಗೆ ಹೋಗಿ ಮಾಯವಾಗುವುದು. ರೈತರು ಬಹಳ ಸಂತೋಷದಿಂದ ಆ ಹೋಟಲಿನವನಿಗೆ ಹಣ ಕೊಟ್ಟುಬಿಡೋದು. ಕೊಡೋ ತನಕ ಸುಮ್ಮ ನಿದ್ದು, 'ಎಲಾ, ಎಲಾ, ನೀವೇ ಕೊಟ್ಟುಬಿಟ್ಟಿರೇನೋ' ಎಂಬೋದು, ರೈತರು ಹೇಗುತ್ತಾ 'ಪರ್ವಾಯಿಲ್ಲ, ಸೋಮಿ—ನೀವೇನೂ ತಿನ್ನಲೇಯಿಲ್ಲ!' ಎಂಬೋದು. ಅವರು ಹಳ್ಳೀಗೆ ಬಂದ ಮೇಲೆ ಎಲ್ಲಾರ ಹತ್ತಿರ ಹೇಳೋದು—'ಹೋದರೆ ಓಗಬೇಕು ನೋಡಿ ನಮ್ಮ ಸೋಮಿಗಳ ಜೊತೇಲಿ. ಎನ್ ಸುಮ್ಮನೆ ನಮ್ಮ ಒಟ್ಟೆ ಒಡೆಯೋ ಅಂಗೆ ಆಕಿಸಿಬಿಡ್ತಾರೆ ಸೋಮಿಗಳು!'

ಊರಿನಲ್ಲಿ ನಲವತ್ತಾರು ಮಂಡಿಗಳಿದ್ದರೂ ಸಂಜಪ್ಪನವರು ಯಾವಾ ಗಲೂ ಒಂದೇ ಮಂಡೀಗೇ ಹೋಗುತ್ತಾ ಇದ್ದದ್ದು. ಇದಕ್ಕೆ ಅನೇಕ ಕಾರಣಗಳು. ಅವರ ತಂದೆ ತಾತ ಮುತ್ತಾತ ಕಾಲದಿಂದಲೂ ಅಲ್ಲಿಯವರೆ ಲ್ಲರೂ ಆ ಮಂಡೀಗೇ ಸಾಮಾನನ್ನು ಹಾಕುತ್ತಾ ಇದ್ದದ್ದು. ಆ ಮಂಡಿಯ ಯಜಮಾನನ ಮಗನು—ಈಗ ಆತನೇ ಯಜಮಾನ—ಸಂಜಪ್ಪನವರು ಇವರಿಬ್ಬರು ಒಂದೇ ಪಾಠಶಾಲೆಯಲ್ಲಿ ಒಂದೇ ತರಗತಿಯಲ್ಲಿ ಓದುತ್ತಾ ಇದ್ದುದಲ್ಲದೆ, ಒಂದೇ ಪಂಡಿತರ ಬಳಿ ಅಮರ ಪಾಠಮಾಡಿದ್ದರು. ಇದಲ್ಲದೆ

ನಂಜಪ್ಪನವರ ಲೆಕ್ಕಕ್ಕೂ ಮಂಡೀ ಲೆಕ್ಕಕ್ಕೂ ಯಾವಾಗಲೂ ತಾಳೆ ಹೊಂದುತ್ತಾ ಇತ್ತು.

ತಿಳಿಯದೆ ಇದ್ದವರು ತಗೊಳ್ಳೋದಕ್ಕೂ ಕೊಡೋದಕ್ಕೂ ತೂಕದಲ್ಲಿ ವ್ಯತ್ಯಾಸ ಎನ್ನುತ್ತಾರೆ. ಅದು ಅವರ ತಪ್ಪಲ್ಲ. ದೊಡ್ಡ ತೂಕ ಚಿಕ್ಕ ತೂಕ ಎಂಬೋ ವಿಚಾರ ವ್ಯಾಪಾರಸ್ಥರಿಗಲ್ಲದೆ ಮತ್ತೊಬ್ಬರಿಗೆ ತಿಳಿಯುವುದು ಹೇಗೆ? ಹೀಗೇ ದೊಡ್ಡಳತೆ ಚಿಕ್ಕಳತೆ. ಹಳ್ಳಿಯಿಂದ ಸಾಮಾನು ಮಂಡೀಗೆ ಬಂದರೆ ಅದನ್ನು ಅಳೆದುಕೊಳ್ಳುವುದು ದೊಡ್ಡಳತೆಯಲ್ಲೇ. ದೊಡ್ಡಳತೆ ಚಿಕ್ಕಳತೆಗಳಿಗೆ ವ್ಯತ್ಯಾಸ ಬಹಳವೇನೂ ಇಲ್ಲ; ಒಂದು ಏಳುಸೇರು ಎಂದರೆ ಇನ್ನೊಂದು ಐದು ಸೇರು. ಮಂಡೀ ಲೆಕ್ಕದಲ್ಲಿ ಬಂಡೀ ಬಂಡೀ ಅಳಿಯು ವಾಗ ಇದೇನು ಬಹಳ ಹೆಚ್ಚು! ಇದಲ್ಲದೆ ಅಳಿಯೋರಿಗಷ್ಟು, ಲೆಕ್ಕ ಮಾಡೋರಿಗಷ್ಟು, ಮಂಡೀಗೆ ಕರೆದುಕೊಂಡು ಹೋಗೋರಿಗಷ್ಟು, ನೋಡೋರಿಗಷ್ಟು, ಹೀಗೆಲ್ಲಾ ಅಷ್ಟಷ್ಟು ಹೋಗಿ ಮಿಕ್ಕಿದ್ದು ಲೆಕ್ಕ ಪಕ್ಕ ಗಳಿಗೆ **ದಾಖಲು.** ಇವತ್ತು ದವಸವನ್ನು ಮಂಡೀಗೆ ತೆಗೆದುಕೊಂಡು ಹೋದರೆ ಇವತ್ತೇ ದುಡ್ಡು ಬಂದುಬಿಡುತ್ತೆಯೆ? ಆದರೂ ಏನೋ ಗುರ್ತು ಪರಿಚಯದಿಂದ ಮೊದಲೇ ಅಲ್ಪಸ್ವಲ್ಪ ದುಡ್ಡುಕೊಡುವುದೂ ಉಂಟು. ಆದರೆ ರೈತನಿಗೆ ದುಡ್ಡಿನ ತಾಪತ್ರಯ ಹೆಚ್ಚು. ಕಡ್ಡಾಯವಾಗಿ ಅವನು ಕೊಟ್ಟೇ ತೀರಬೇಕು. ಇಲ್ಲವೆ, ಹಿಂಡಿ ಮುಂತಾದುವುಗಳಿಗಾಗಬೇಕಾದ್ದರಿಂದ, ಮಂಡಿಯವರು ಒಂದೊಂದು ವೇಳೆ ದಯಮಾಡಿ ಶೇಕಡ ಇಪ್ಪತ್ತರಂತೆ ಅವನಿಗೆ ಹಣ ಸಲ್ಲಿಸಿದರೆ ರೈತನಿಗೆ ಬಹಳ ಉಪಕಾರ ಮಾಡಿದ ಹಾಗೇ! ಈ ವಿಚಾರವೆಲ್ಲಾ ನಂಜಪ್ಪನವರಿಗೆ ಬಹಳ ಮಂದಟ್ಟು; ಅದಕ್ಕಾಗಿಯೇ ಅವರು ಈ ಮಂಡಿಯನ್ನೇ ಹಿಡಿದು ಕೆಲಸ ಮಾಡುತ್ತಾ ಇದ್ದದ್ದು.

ಇಷ್ಟು ಚತುರರಾಗಿದ್ದರೂ ನಂಜಪ್ಪನವರೂ ಒಂದೊಂದು ಸಲ 'ಗಸ್ತು' ತಿಂದುಬಿಡುತ್ತಾ ಇದ್ದರು. ಹೀಗೆ ಮಾಡುತಿದ್ದೋನು ಮಾರ. ನಮ್ಮೆಷ್ಟು ಹೇಳುತ್ತಾ ಇದ್ದರು—ಇವನು ಮಾರ; ಇವನ ಹೆಂಡತಿ ಮಾರಿ. ಇಬ್ಬರೂ ಸೇರಿದರೆ ಮಾರಾಮಾರಿ ಎಂತ. ಅದೇನೂ ಸುಳ್ಳಲ್ಲ. ಯಾವಾ ಗಲೂ ಇವರಿಬ್ಬರೂ ಸೇರಿ ಏನಾದರೂ ಒಂದು ವ್ಯಾಜ್ಯವನ್ನು ನಂಜಪ್ಪನವರ ಬಳಿಗೆ ತರೋದೇ.

ಈ ಮಾರ ಒಂದು ಸೇ ಹಳ್ಳೀಲಿ ದೊಡ್ಡ ಹೊಲದಲ್ಲಿ ಕಬ್ಬು ಹಾಕಿದ. ಮಿಕ್ಕವರ ಹಾಗೇ ಎಲ್ಲಾ ಕಟ್ಟುಪಾಡುಗಳಿಗೂ ಒಪ್ಪಿಕೊಂಡ. ಪೈರು ಮೊಣಕಾಲುದ್ದ ಬರೋದರ ಒಳಗಾಗಿ ಸುತ್ತಮುತ್ತಲಿದ್ದ ಮೂರು ನಾಲ್ಕು ಆಸಾಮಿಗಳಲ್ಲಿ ಸಾಲವನ್ನು ತೆಗೆದು ತಿಂದುಬಿಟ್ಟ. ತನ್ನ ಹೆಂಡತೀಗೆ ಹೇಳಿದ ' ಎಲೆ, ನಿನ್ನ ಡಾಬು ಕೊಡೆ. ಅದನ್ನು ಮಾರಿ ಥಳಥಳ ಅನ್ನೋ ವಾಲೆ ತಂದಿಕ್ತ್ನಿ ' ಎಂತ ಡಾಬು ತೆಗೆದುಕೊಂಡು ಹೊರಟ. ವಾಲೆಯನ್ನು ತಂದು ಕೊಟ್ಟ. ಇದೆಲ್ಲಾ ಆಗಿ ಸುಮಾರು ಎರಡು ತಿಂಗಳು ಎಂಬೋ ಹೊತ್ತಿಗೆ, ರಾತ್ರಿ ಎಂಟು ಗಂಟೆ, ಅವನ ಮನೇಲಿ ದೊಡ್ಡ ಗೊಂದಲ. ಗಂಡ ಹೆಂಡರು ಕಚ್ಚಾಡುತ್ತಾ ಈಚೆಗೆ ಬಂದರು. ಸಂಜಪ್ಪನವರ ಅಂಗಳದಲ್ಲಿ ಜನ ತುಂಬಿಬಿಟ್ಟರು. ಹೆಂಡತಿ ಗಂಡನ ಮೇಲೆ ಚಾಡಿ ಹೇಳಿದಳು: ತಂದು ಕೊಟ್ಟಿದ್ದ ವಾಲೇನ ಯಾವನೋ ಒಬ್ಬ ಬಂದು ಕೇಳುತ್ತಾ ಇದ್ದಾನೆ, ಎಂತ. ಅವನನ್ನು ಕರೆಸಿದರವರು. ಅವನು ಮಗ್ಗುಲ ಹಳ್ಳಿಯ ಅಕ್ಕಸಾಲಿಗ ಅಂಕಪ್ಪ.

' ಏನೋ ಅಂಕಪ್ಪ, ಸಮಾಚಾರ ? '

' ಏನಿಲ್ಲ ಸಂಜಪ್ಪ ಸೋಮಿಯೋರೆ, ಇವನು ಆವತ್ತು ನನ್ನ ಜೊತೆಗೆ ಪೇಟೆಗೆ ಬಂದನಲ್ಲ—ಅಲ್ಲಿ ಅವನ ಹೆಂಡತೀ ಡಾಬು ಮಾರಿಬಿಟ್ಟ. ಹಣ ತಗೊಂಡ. ಬೇರೆ ಅಂಗಡೀಗೆ ಹೋಗಿ ನನ್ನ ಕೈಲಿ ರುಜು ಹಾಕಿಸಿ ಈ ವಾಲೆ ತಂದ. ಎರಡು ತಿಂಗಳೊಳಗಾಗಿ ತೀರಿಸಿಬಿಡುತ್ತೀನಿ ಅಂದ. ಏನು ಹರ ಇಲ್ಲ, ಶಿವ ಇಲ್ಲ. ಆ ಹಣ ಏನೋ ಹಿಂಡೀಗೆ ಬೇಕಾಗಿತ್ತಂತೆ. ಹಿಂಡಿ ತಗೊಂಡು ಬಂದು ಬಿಟ್ಟ. '

' ಯಾವ ಹಣ ! ನಾನು ಕೊಟ್ಟನಲ್ಲಪ್ಪ, ಇವನಿಗೆ ಹಿಂಡೀಗೆ ಹಣ ! ಡಾಬು ಮಾರಿದ್ದು ಏನು ಮಾಡಿದನೋ ಏನೋ—ಏನೋ ಮಾರ ? '

' ಈ ಸಲ ಇಂಡೀಗ ನೀವು ಕೊಟ್ರಿ—ಓದ ಸಲಕ್ರೀ ? '

' ಹೊದಸಲ ನಾನೇ ತಂದು ಕೊಟ್ಟನಲ್ಲೋ ! '

' ಅಂಗೇನ್ರು ಗ್ಯಾಪಕಿಲ್ರಿ, ಅಲ್ಲಿ ಕೊಡಬೇಕಿತ್ರಿ....'

' ಸರಿ, ಆಮೇಲೆ ? '

' ಆಮೇಲೆ, ಹಣ ಕೊಡಬೇಕು, ಇಲ್ಲ ವಾಲೆ ಕೊಡಬೇಕು ಅಂತಾನೆ

ಈಗ ಅದಕ್ಕಾಗಿ ನಾನು ವಾಲೇನೇ ತಗೊಂಡಬಿಡಬೇಕ್ರು ಅಂತ ಬಂದೆ. ಮಾರಿ, ಕೊಟ್ಟುಬಿಟ್ಟಳ್ರಿ. '

' ಅಪ್ನೋರೆ, ಎಂಗೋ ಕೊಟ್ಟುಬಿಟ್ಟೆವ್ರಿ. ನೀವೇ ಗಾಣಾ ಮಾಡಿ ಒರೋ ಬೆಲ್ಲದಾಗೆ ನಂಗೆ ವಾಲೆ ಕೊಡಿಸಿಬಿಡಬೇಕ್ರು. '

' ಆ ಬೆಲ್ಲಕ್ಕೆಷ್ಟು ಜನ ಬರತಾರೋ—ಲೋ, ಮಾರ ಎಂಥಾ ಮನೆ ಹಾಳ್ನೋ ನೀನು ! '

ಆ ಬೆಲ್ಲ ತಯಾರಾಗೋ ಹೊತ್ತಿಗೆ ಮಾರನ ಸಾಲಗಾರರು ಇರುವೆ ಮುತ್ತಿಕೊಂಡ ಹಾಗೆ ಮುತ್ತಿಕೊಂಡರು. ಸಂಜಪ್ಪನವರು ಕೈಯಿಂದ ಹಣ ಕೊಟ್ಟು ವಾಲೆ ತೆಗೆದುಕೊಟ್ಟು, ಎರಡು ಮೂರು ವರ್ಷಗಳಾದ ಮೇಲೆ ಮಾರನಿಂದ ಕೊಂಚಕೊಂಚವಾಗಿ ವಸೂಲು ಮಾಡಿಕೊಂಡರು. ಅಂದಿನಿಂದಾಚೆಗೆ ಮಾರನ ಕಡೆ ಸ್ವಲ್ಪ ಜಾಗರೂಕತೆಯಿಂದ ನೋಡಿಕೊಳ್ಳುತ್ತಿದ್ದರು.

ಈ ಮಾರನಲ್ಲೂ ಒಂದು ದೊಡ್ಡ ಗುಣವಿತ್ತು. ಎಲ್ಲಾರ ಹತ್ತಿರ ಸುಳ್ಳು ಹೇಳುತ್ತಾಯಿದ್ದ; ಎಲ್ಲರನ್ನೂ ಮೋಸಮಾಡುತ್ತಿದ್ದ, ಶೀನಪ್ಪನವರನ್ನು ಅವರ ತಾಯಿ ಪಾರ್ವತಮ್ಮನವರನ್ನು ಇವರಿಬ್ಬರನ್ನು ಕಂಡರೆ ಅತ್ಯಂತ ವಿಶ್ವಾಸ, ಭಕ್ತಿ. ಅವರೊಡನೆ ಸುಳ್ಳಾಡುತ್ತಿರಲಿಲ್ಲ. ಸಾಕಿದ ನಾಯಿಯ ಹಾಗಿರುತ್ತಿದ್ದ. ಪಾರ್ವತಮ್ಮನಿಗೆ ಖಾಯಿಲೆಯಾದಾಗ ರಾತ್ರಿ ಹಗಲೂ ನಾಯಿ ಕಾದಹಾಗೆ ಕಾಯುತಾಯಿದ್ದ. ಕಾಲಿನ ಮೇಲೆ ಹುಣ್ಣಾಗಿತ್ತು. ವೈದ್ಯರು ಹೇಳಿಬಿಟ್ಟರು. ಆ ಹುಣ್ಣಿಗೆ ಯಾವ ಯಾವ ಎಲೆಯೋ ಬೇಕು ಎಂತ; ಎಲ್ಲೆಲ್ಲೊ ರಾತ್ರಿ ಹಗಲು ಓಡಾಡಿ ಆ ಎಲೆಗಳನ್ನೆಲ್ಲಾ ತಂದ. ಬಹಳ ಕಷ್ಟಪಟ್ಟ. ಆದರೂ ಪಾರ್ವತಮ್ಮನಿಗೇನೂ ವಾಸಿಯಾಗಲಿಲ್ಲ ದಿನೇ ದಿನೇ ಹೆಚ್ಚಾಗಿ ಕೆಲವು ದಿನಗಳಲ್ಲಿಯೇ ದಾಟಿಕೊಂಡಳು. ಮುತ್ತೈದೆಯ ಸಾವು; ಅಷ್ಟು ವ್ಯಥೆಪಡಬೇಕಾದ್ದಿಲ್ಲ ಎಂದು ಎಲ್ಲರೂ ಅಂದರು. ಆದರೆ ಇವರಿಬ್ಬರಿಗೆ ಮಟ್ಟಿಗೆ ಮಾತ್ರ ಬಹಳ ವ್ಯಥೆ. ಅಲ್ಲಿಂದಾಚೆಗೆ ಮಾರನಿಗೆ ಶೀನಪ್ಪನವರ ಮೇಲೆ ಮಮತೆ ಇಮ್ಮಡಿಯಾಯಿತು.

ಊರ ಮುಂದೆ—ಹಳ್ಳೀಲಿ ಕೂಡ ಹೀಗೇ ಹೇಳೋದು—ಒಂದು ದೊಡ್ಡ ಅತ್ತೀ ಮರ. ಆ ಮರವನ್ನು ಯಾವಾಗ, ಯಾರು, ಏತಕ್ಕೆ ಹಾಕಿದರೋ

ಗೊತ್ತಿಲ್ಲ. ಈಗ ಅದರದು ಎರಡೇ ಕೊಂಬೆಗಳೇ ಇರೋದು. ಆದರೂ ಕೆಳಗಡೆ ಅದರ ನೆರಳಲ್ಲಿ ಒಂದೆಪ್ಪತ್ತು ಮಂದಿ ಧಾರಾಳವಾಗಿ ಕೂಡಬಹುದು. ಒಂದು ಮೊಂಡ ಕೊಂಬೆ ಈಗಲೂ ಇದೆ. ಇದೂ ಹಾಗೇ ಬೆಳದಿದ್ದರೆ ಹೇಗಿರುತ್ತಿತ್ತೋ! ಅದರ ಪಕ್ಕದಲ್ಲೇ ಒಂದು ದೊಡ್ಡ ಭಾವಿ. ಅದರಿಂದ ಒಂದೆರಡು ಎಕರೆ ತೋಟಕ್ಕೆ ನೀರು ಸರಬರಾಯಾಗಬೇಕು. ನಂಜಪ್ಪನವರು ಎಷ್ಟೋ ಹೇಳಿದರು, ಅಲ್ಲಿದ್ದ ಕೊಂಬೆಯನ್ನು ಕಡಿಯಬೇಕು ಎಂತ. ಯಾರೂ ಒಪ್ಪಲಿಲ್ಲ. ಹಣ್ಣುಬಿಡೋ ಕೊಂಬೆ, ಎಷ್ಟೋ ಪಕ್ಷಿಗಳು ಹಣ್ಣು ತಿಂದು ನೀರು ಕುಡಿದು ಹೋಗುತ್ತವೆ, ಆ ಕೊಂಬೆಯನ್ನು ಕಡಿಯಬೇಕೆ? ಇದೇ ಅವರ ವಾದ.

ಕೊನೆಗೆ ಶೀನಪ್ಪನವರು ಇದಕ್ಕೆ ಕೈಹಾಕಿದರು. ಯಾರೂ ಕಡಿಯೋದಕ್ಕೆ ಒಪ್ಪಲಿಲ್ಲ. 'ಏನೋ ಮಾರ?' ಎಂದರು. ಅದಕ್ಕವನು 'ಕಡಿ ಅಂದರೆ, ಕಡಿದ್ಹಾಕ್ತೀನ್ರು' ಎಂದ. ಸಾಯಂಕಾಲದ ವರೆಗೆ ಕಡಿದ. ಆ ಕೊಂಬೆ ಏನೂ ಜಗ್ಗಲಿಲ್ಲ. ಸುತ್ತಮುತ್ತಲಿನವರೆಲ್ಲಾ ಅಂದರು 'ಮಾರ ಕಡೀತಿದ್ದಾನೆ ಅವನಿಗೇನೋ ಇದೆ ಅನಿಷ್ಟ' ಎಂತ. ಅವರು ಅಂದ ಹಾಗೇ ಕೊಂಬೇನೂ ಮುರೀತು, ಮಾರನೂ ಅಲ್ಲಿಂದ ಬಿದ್ದ. ಎಡಗಾಲಿಗೇಟು ಬಿತ್ತು. ಈಗಲೂ ಕುಂಟುತ್ತಾ ಇದ್ದಾನೆ. ಅಲ್ಲಿಂದಾಚೆಗೆ ಅವನ ಕೆಲಸವೆಲ್ಲಾ ಕುಂಟೇ ಆಯಿತು. ಶೀನಪ್ಪನವರೇ ಅವನ ಮೇಲ್ವಿಚಾರಣೆ ಕೈಗೊಂಡರು. ಇದು ನಂಜಪ್ಪನವರಿಗೆ ಸ್ವಲ್ಪ ಸರಿಬೀಳಲಿಲ್ಲ. ನಾಲ್ಕು ತಿಂಗಳ ಕಾಲ ಮಾರ ಮೇಲಕ್ಕೇಳಲಿಲ್ಲ. ಶೀನಪ್ಪನವರೇ ಅವನಿಗೆ ಬೇಕಾದ್ದನ್ನು ಅನುಕೂಲ ಮಾಡಿಕೊಟ್ಟರು. ಹೀಗಿರುವಾಗ ಒಂದು ದಿನ ಸಾಯಂಕಾಲ ತಾಲ್ಲೂಕು ಕಚ್ಚೇರಿ ಗುಮಾಸ್ತರು ನಂಜಪ್ಪನವರ ಮನೆಗೆ ಬಂದರು. ಊಟ ಉಪಚಾರಗಳು ಮುಗಿದ ಮೇಲೆ ಅದೂ ಇದೂ ಮಾತನಾಡುತ್ತ ಈ ಮಾರನ ವಿಚಾರ ಬಂತು 'ಕೊಡೋರಿಗೇನು ಗೊತ್ತಾಗುತ್ತೆ ಸಂಪಾದಿಸೋ ವಿಚಾರ! ಸಂಪಾದಿಸೋರ ಕಷ್ಟ!' ಎಂದರು ನಂಜಪ್ಪನವರು. ಗುಮಾಸ್ತರು, 'ಹಾಗಲ್ಲ ಸ್ವಾಮಿ, ಇದೊಂದು ವಿಧವಾದ ದಾನ ಧರ್ಮ ಎಂಬೋಣ' ಅಂದರು. ಇದನ್ನು ಕೇಳಿ ಶೀನಪ್ಪನ ಮನಸ್ಸು ಸ್ವಲ್ಪ ಕೆಟ್ಟಿತು. ಯಾವುದಾದರೂ ಸಂದರ್ಭ ಸಿಕ್ಕರೆ ಹಳ್ಳಿಯನ್ನು ಬಿಟ್ಟು ಹೋಗಬೇಕೆಂದಂದುಕೊಂಡನು.

ತಾಯಿ ಸತ್ತ ಮೇಲಂತೂ ಶೀನಪ್ಪನಿಗೆ ಮನೆಯ ಸಂಸಾರವೆಲ್ಲ ಗಂಟುಬಿದ್ದ ಹಾಗಾಯಿತು. ಮನೆಗೆ ಗಂಡಸೂ ಹೆಂಗಸೂ ಶೀನಪ್ಪನೇ ಆದ. ಮಾವನಿಗೆ ಸ್ವಲ್ಪ ಕುಂಟಿಕೊಂಡು ನಡೆಯೋದಕ್ಕೆ ಆದಕೂಡಲೆ ಅವನೂ ಇಲ್ಲೇ ಕೆಲಸಕ್ಕೆ ನಿಂತ. ಇಲ್ಲದಿದ್ದರೆ ಮನೇಲಿದ್ದ ಜೀವರಾಶಿಗಳ ಗತಿಯೇನು? ನಂಜಪ್ಪನವರಿಗೆ ಈ ವಿಚಾರದಲ್ಲಿ ಅಷ್ಟು ಯೋಚನೆಯಿರಲಿಲ್ಲ. ಏನೋ ಹೇಗೋ ಎಲ್ಲಾ ನಡೆದುಹೋಗುತ್ತೆ; ತಮಗೆ ಬೇಕಾದ್ದನ್ನು ತಾವು ಸರಿಯಾಗಿಟ್ಟುಕೊಂಡರೆ ಸಾಕು. ಅವರಿಗೇನು ಹೆಚ್ಚು ಬೇಕಾಗಿರಲಿಲ್ಲ; ಹೊತ್ತಿಗೆ ಸರಿಯಾಗಿ ಊಟ, ಒಂದೋರು ಹೋದೋರು ನಾಲ್ಕು ಜನಕ್ಕೆ ಕಾಫಿ, ಫಲಹಾರ, ಅಷ್ಟೆ. ಇದೆಲ್ಲಾ ಆಗಬೇಕಾದ್ದು ಹೇಗೆ ಎಂಬೋ ವಿಚಾರವನ್ನು ಶೀನಪ್ಪನಿಗೆ ಒಪ್ಪಿಸಿಬಿಟ್ಟಿದ್ದರು.

—

೪

ಈ ಪ್ರಪಂಚದಲ್ಲಿ ಎಷ್ಟೋ ಬುದ್ಧಿವಂತರಿದ್ದಾರೆ. ಎಷ್ಟೋ ಬಲಿಷ್ಠರಿದ್ದಾರೆ. ಎಷ್ಟೋ ವೀರ್ಯವಂತರೂ ತೇಜಸ್ವಿಗಳೂ ಇದ್ದಾರೆ. ಆದರೆ ಅವರೆಲ್ಲರಿಗೂ ತಮ್ಮ ತಮ್ಮ ಗುಣಗಳನ್ನು ವ್ಯಕ್ತಪಡಿಸಲು ಸಾಕಾದಷ್ಟು ಅವಕಾಶವು ದೊರೆಯುವ ಹಾಗಿಲ್ಲ. ಒಂದು ವೇಳೆ ದೊರೆತರೂ ಆ ಸಮಯದಲ್ಲಿ ಬೇಗನೆ ತಾವು ಮಾಡಬೇಕಾದ ಕೆಲಸವನ್ನು ಮಾಡುವವರೂ ಅತಿ ವಿರಳ. ಇದಕ್ಕೆ ಕಾರಣಗಳು ಬಹಳವಾಗಿರಬಹುದು. ನಮ್ಮ ನಮ್ಮ ಜನ್ಮಾಂತರದ ಕರ್ಮಗಳಿರಬಹುದು. ನಮ್ಮ ಮನಸ್ಸಿನ ಬೋಧೆಗಳಂತಿರಬಹುದು. ಒಂದೊಂದು ಸಲ ಕೆಲವರಿಗೆ ಅಘಾದವಾದ ಶಕ್ತಿಯೊಂದು ಗೋಚರವಾಗಿ ಅದರ ಪ್ರಾಬಲ್ಯಕ್ಕೊಳಗಾಗಿ ಅದೆಲ್ಲೆಲ್ಲಿ ತಮ್ಮನ್ನು ಹೇಗೆ ಹೇಗೆ ಸೆಳೆದುಕೊಂಡು ಹೋಗುವುದೋ ಅದರಂತೆ ಅಲ್ಲಲ್ಲಿ ಹೋಗಲು ಸಿದ್ಧರಾಗಿ ಅವರು ನಿಲ್ಲಬಹುದು. ಇವೆಲ್ಲಾ 'ಬಹುದು'ಗಳೇ!

ಹೊಸಬರು ಯಾರು ಬಂದರೂ ನಂಜಪ್ಪನವರ ಮನೆಗೆ ಬಂದರೆ ಊಟ ಮಾಡಿಕೊಂಡು ಹೋಗುವುದೇ ಪದ್ಧತಿ. ಒಮ್ಮೆ ಬಂದವರೊಬ್ಬರು ಹಾಗೇ

ಹೋಗಿಬಿಟ್ಟರು. ಶೀನಪ್ಪ ಈಚೆಗೆ ಬಂದು ಕೇಳಿದ, 'ಅವರು ಊಟ ಮಾಡದೆ ಹೋದರಲ್ಲ?' ಎಂದು.

'ಹೌದಪ್ಪ, ಶೀನ, ಅದು ಹಾಗೇ.'

'ಎಂದರೇನಪ್ಪ, ನನಗೆ ತಿಳಿಯಲಿಲ್ಲ. ಮಧ್ಯಾಹ್ನ ಮನೆಗೆ ಬಂದೋರು ಊಟ ಮಾಡದೇ ಹೋಗಬಹುದೆ? ಎಲ್ಲಾದರೂ ಉಂಟೆ?'

'ಅವರು ಕಾರ್ಯಾರ್ಥವಾಗಿ ಬಂದಿದ್ದರು. ಅದಕ್ಕಾಗಿ ಬಂದವರು ಸಾಧಾರಣವಾಗಿ ಊಟ ಮಾಡುವುದಿಲ್ಲ.'

'ಅದೆಂತಹ ಕಾರ್ಯ?'

'ಮದುವೇಗೆ ವರನನ್ನು ಹುಡುಕಿಕೊಂಡು ಬಂದೋರು ಅವರ ಮನೆಯಲ್ಲಿ ಊಟ ಮಾಡಿದರೆ ನಿಶ್ಚಯವಾಗುವುದಿಲ್ಲ.'

'ನಮ್ಮಲ್ಲೇಲಿ ಯಾರಿದ್ದಾರಪ್ಪ, ವರ?'

'ನೀನೇ—ಇನ್ನಾರು?'

ಇದುವರಿವಿಗೂ ತಾನೂ ಒಬ್ಬ ಗೃಹಸ್ಥನಾಗಬೇಕು, ತನಗೂ ಒಂದು ಮದುವೆಯಾಗಬೇಕು ಎಂಬೋ ವಿಚಾರ ಶೀನಪ್ಪನಿಗೆ ಗೋಚರವಾಗಿರಲಿಲ್ಲ. ಯಾವುದಕ್ಕೂ ಒಂದು ಕಾಲ ಬರಬೇಕು.

ಈಗಿನ ಕಾಲದಲ್ಲಿ ಮದುವೆ ಎಂದರೆ ಗಂಡಸಿಗೂ ನಾಚಿಕೆ. ಮಹಾಭಾರತದ ಭೀಷ್ಮನನ್ನು ಸಂಹರಿಸಲು ಸಹಾಯಮಾಡಿದವನ ಗಾಳಿ ಸ್ವಲ್ಪ ನಮ್ಮ ಮೇಲೂ ಬಿದ್ದಹಾಗೆ ತೋರುತ್ತೆ. ಆಗಿನ ಕಾಲದಲ್ಲಿ ಹಾಗಿರಲಿಲ್ಲ. ಮದುವೆ ಎಂದರೆ ಏನೋ ಒಂದು ಆಶ್ಚರ್ಯ, ಒಂದು ಆನಂದ, ಎಂಬೋಣ. ತನಗೆ ಅಧಿಕಾರ ನಡೆಸಲು ಒಬ್ಬಳು ಸಿಕ್ಕುತ್ತಾಳಲ್ಲ ಎಂಬೋ ಆನಂದವೋ, ಅಥವಾ ಅಳಿಯನಾಗಿ ಗಿಳಿಯನ ಜೊತೆಗೆ ಗಿಳಿಯಂತೆ ನೋಡುತ್ತಾರೆ, ಮಾವನ ಮನೆಯವರು, ಅತ್ತೆಯ ಮನೆಗೆ ಹೋದಾಗ ಎಂದೋ, ಅಥವಾ ಪ್ರಪಂಚದಲ್ಲಿ ಹುಟ್ಟಿದ ಮೇಲೆ ಪ್ರತಿಯೊಬ್ಬನಿಗೂ ಒಂದು ಸಲವಾದರೂ ಮೆರವಣಿಗೆ ಆಗಲೇಬೇಕೆಂಬುದೋ, ಯಾವುದೋ ಏನೋ, ಅಂತೂ ಆನಂದವೆಂಬುದಕ್ಕೆ ಯಾವ ಸಂದೇಹವೂ ಇರಲಿಲ್ಲ. ಕಾಲವೂ ಅದಕ್ಕೆ ಹಾಗೇ ಇತ್ತು. 'ಸಕುಟುಂಬಾನಾಂ ಕ್ಷೇಮಸ್ಥೈರ್ಯ' ಇತ್ಯಾದಿಗಳನ್ನು ಹೇಳುವುದಕ್ಕೆ ಅರ್ಹನಾದರೆ ಹೊಟ್ಟೆಗೆ ಯಾವ ತೊಂದರೆಯೂ ಇಲ್ಲದೆ ಬೀಳುತ್ತಿತ್ತು.

ಸನ್ಯಾಸಿಯಾಗುವುದಕ್ಕೆ ಕೂಡ ಹೆಂಡತಿ ಇರಬೇಕು, ಇಲ್ಲದಿದ್ದರೆ ಅರ್ಹನಲ್ಲ ಎನ್ನಬೇಕಾದ ಸ್ಥಿತಿಯಾಗಿದ್ದಾಗ ಈ ಮದುವೆಗೆ ಸಮಾಜ ಮತಗಳಲ್ಲಿ ಯಾವ ಅಂತಸ್ತು ಇತ್ತೆಂದು ನೀವೇ ಊಹಿಸಬಹುದಲ್ಲ! 'ಗೋ ಬ್ರಾಹ್ಮಣೇಭ್ಯಃ ಶುಭಂ ಭವತು!' ಎಲ್ಲಿಯವರೆಗೂ ಮೊದಲು ಬರುವ 'ಗೋ' ಸುರಕ್ಷಿತವಾಗಿ ಇರುತ್ತೋ, ಅಲ್ಲಿಯ ವರೆಗೂ ಬ್ರಾಹ್ಮಣರಿಗೂ ಭಯವಿಲ್ಲವೆಂಬ ತತ್ವ ಇವರಿಗೆ ಬಹಳ ಚೆನ್ನಾಗಿ ತಿಳಿದಿತ್ತು. ಪ್ರತಿಯೊಬ್ಬನಿಗೂ ಒಂದು 'ಗೋ' ಒಂದು ಹೆಂಡತಿ, ಇವೆರಡಿದ್ದರೆ ಸಾಕು. ನಮ್ಮ ಶೀನಪ್ಪನಿಗೆ ಗೋವುಗಳಿಗೇನೂ ಕಡಿಮೆಯಿರಲಿಲ್ಲ. ಹೆಂಡತಿ ಒಂದು ಬಿಟ್ಟರೆ ಸಾಕು, ಪೂರ್ಣ ಗೃಹಸ್ಥಾಶ್ರಮ ಒದಗಿದ ಹಾಗೇ. ಒಂದು ತರಗತಿಯಿಂದ ಮತ್ತೊಂದು ತರಗತಿಗೆ ಮುಂದಕ್ಕೆ ಹಾಕಿದರೆ ಪಾಠಶಾಲೆಯ ವಿದ್ಯಾರ್ಥಿಗೆ ಎಷ್ಟು ಸಂತೋಷವೋ ಅಷ್ಟು ಸಂತೋಷ ನಮ್ಮ ಶೀನಪ್ಪನಿಗೆ ಆಗಿಯೇ ಇರಬೇಕು. ಏಕೆಂದರೆ ಇದೂ ಒಂದು ಪ್ರೊಮೋಷನ್ (Promotion) ಆದ ಹಾಗೇ—ಬ್ರಹ್ಮಚರ್ಯಾಶ್ರಮದಿಂದ ಗೃಹಸ್ಥಾಶ್ರಮಕ್ಕೆ.

ಒಮ್ಮೊಮ್ಮೆ ಸಂತೋಷವಾಗುತ್ತಲಿದ್ದುದೇನೋ ನಿಜ. ಆದರೆ ಮದುವೆ ಮಾಡಿಕೊಂಡ ಮೇಲೆ ಹಳ್ಳಿಯನ್ನು ಬಿಟ್ಟುಹೋಗೋದು ಹೇಗೆ? ಹಳ್ಳಿಯನ್ನು ಬಿಟ್ಟುಹೋದ ಹೊರತು ಮನಸ್ಸಿಗೆ ನೆಮ್ಮದಿಯಿಲ್ಲ. ಬಿಟ್ಟುಹೋಗುವುದಕ್ಕೆ ತಂದೆಯ ಅಡ್ಡಿ. ತಂದೆಯ ಮಾತನ್ನು ಮೀರಿ ಹಳ್ಳಿಯನ್ನು ಬಿಟ್ಟು ಹೋಗಿ ಪೇಟೆಯಲ್ಲಿ ನಿಲ್ಲುವುದಕ್ಕೆ ಶೀನಪ್ಪನ ಮನಸ್ಸು ಒಪ್ಪದು. ಆದರೆ ಒಂದೊಂದು ಸಲ ಎದುರಿಗೆ ನಿಂತು ಕೇಳಿಯೇ ಬಿಡೋಣ ಎನಿಸುವುದು; ಅದು ಧರ್ಮಕ್ಕೆ ವಿರೋಧ ಎಂದು ಮರುಕ್ಷಣದಲ್ಲಿಯೇ ಅವನ ಮನಸ್ಸು ಹೇಳುತ್ತಿತ್ತು.

ಒಂದು ದೊಡ್ಡ ಸಮಸ್ಯೆಯಾಯಿತಿದು. ಒಂದು ತಿಂಗಳ ವರೆಗೂ ಹಾಗೂ ಹೀಗೂ ಮನಸ್ಸು ಚಂಚಲವಾಗಿತ್ತು. ಹಾಲು ಕರೆಯುವಾಗಲೂ ಶೀನಪ್ಪನಿಗೆ ಇದೇ ಯೋಚನೆಯೇ. ಹಾಲು ಬರೋದು ನಿಂತ ಮೇಲೂ ಕಣ್ಣು ಬಿಟ್ಟುಕೊಂಡು ಕರೆಯುತ್ತಾ, ನಾಲ್ಕಾವರ್ತಿ ಹಾಲು ಚಲ್ಲಿದ್ದೂ ಆಯಿತು. ಬೆಳಗ್ಗೆ ಹಲ್ಲು ಉಜ್ಜಿಕೊಳ್ಳುತ್ತಾ ಕೂತುಕೊಂಡು ಎಷ್ಟು ಹೊತ್ತಾದರೂ ಬಚ್ಚಲುಮನೆಯಿಂದ ಈಚೆಗೆ ಬರದೆ ಬೈಗಳೂ ತಿಂದಿದ್ದಾಯಿತು. ಆಮೇಲೆ ಹಟಾತ್ತಾಗಿ ಪಟ್ಟಣದಿಂದ ಹಿಂದೆ ಬಂದಿದ್ದ ಮಹಾಸು

ಭಾವರು ಪುನಃ ಬಂದಿಳಿದರು. ಈ ವಿಚಾರ ಶೀನಪ್ಪನಿಗೆ ಗೊತ್ತಾಗಿದ್ದರೆ ಇರೋ ಕೆಲಸವೆಲ್ಲಾ ಬಿಟ್ಟು ಅವರ ಮಾತು ಕೇಳಿಕೊಂಡು ನಾಲ್ಕಾರು ಬೈಗಳು ತಿನ್ನುತ್ತಿದ್ದನೋ ಏನೋ! ಮಾತೂ ಕತೆ ಎಲ್ಲಾ ಮುಗಿದ ಮೇಲೆ ಸಂಜಪ್ಪನವರು ಶೀನಪ್ಪನನ್ನು ಕರೆದು ಹೇಳಿದರು.

'ಶೀನ, ಎಲ್ಲಾ ಗೊತ್ತಾಗಿಬಿಟ್ಟಿದೆ. ನಾಳೆ ಭಾನುವಾರ ಇಲ್ಲಿಂದ ಹೋಗೋದು. ಬುಧವಾರ ಲಗ್ನ.'

ಶೀನಪ್ಪ ಸುಮ್ಮನಿದ್ದ. ಸಂಜಪ್ಪನವರು ಮತ್ತೆ ಮಾತನಾಡಿದರು. 'ಅವರೇನೋ ವರದಕ್ಷಿಣೆ ಕೊಡುತೇವೆ, ಎಂದರು. ನನಗ್ಯಾಕೋ ಅದು ಸರಿಬೀಳಲಿಲ್ಲ. ನಾನು ವರದಕ್ಷಿಣೆ ತೆಗೆದುಕೊಂಡುಬಿಟ್ಟರೆ ನಿನ್ನ ಮಾರಿ ಕೊಂಡ ಹಾಗೇ ಸರಿ. ಅದಕ್ಕೆ ಅದೆಲ್ಲಾ ಬ್ಯಾಡ. ನಿನ್ನ ಓದಿಸಿಬಿಡಲಿ' ಹುಡುಗೀ ಮೇಲೆ ಅವರಿಗೆ ಬೇಕಾದ ಒಡವೆ ಹಾಕಲಿ, ಎಂದು ಹೇಳಿಬಿಟ್ಟೆ.'

ಶೀನಪ್ಪನೇನೂ ಮಾತಾಡಲಿಲ್ಲ. ಅವನ ಪಕ್ಕದಲ್ಲಿ ಹುಲ್ಲಿನ ಕಂತೆಗಳನ್ನು ಜೋಡಿಸುತ್ತಿದ್ದ ಮಾರ ಬಾಯಿಬಿಟ್ಟ: 'ಅಪ್ನೋರೇ, ಉಡುಗಿ ಎಂಗೈತೋ!' ಸಂಜಪ್ಪನವರಿಗೆ ರೇಗಿತು. 'ಆ ಮಾತು ಕೇಳೋಕೆ ನಾನೇನು ತಿಂತೇನೆ ಹೊಟ್ಟೆಗೆ! ದೊಡ್ಡ ಮನುಷ್ಯ ತನ್ನ ಮಗಳನ್ನು ಕೊಡತೇನೆ ಎಂತ ಬಂದರೆ 'ಹುಡುಗಿ ಹೇಗಿದೆ? ನಮ್ಮ ಹುಡಗನ್ನ ನೋಡುತ್ತೀರ? ಎಂತಹ ಪಂಚೆಗಳು ಕೊಡುತ್ತೀರಿ?' ಏನೇನು ಅಡಿಗೆ ಮಾಡಿಸುತ್ತೀರಿ? ಇವೆಲ್ಲಾ ಕೇಳೋದೆ! ನಿನಗೆ ಸರಿಯಾದ ಮಾತು ನೀನಾಡಿದೆ!'

'ಅಪ್ನೋರೇ, ಸಿಟ್ಟಾಗಬೇಡ್ರಿ. ಕಾಲ ಚಂದಾಕಿಲ್ಲ, ಅವರಿಗೇನಾನೈತೋ ಇಲ್ಲೋ–ಉಡುಗಿ ಚಂದಾಗನಳೋ ಇಲ್ಲೋ–ಸಣ್ಣಪ್ನೋರಿಗೆ ನೀವೆಲ್ಲಾ ಸೇರಿ ಗಂಟಾಕಿಬಿಟ್ಟ ಮ್ಯಾಗೆ, ಅವರ್ಚನ್ನಾಗಿ ನಾಕ್ದಿವಸ ಬಾಳ್ಬೇಕೋ ಬ್ಯಾಡ್ರೋ.'

'ಏನೋ, ಶೀನಾ, ಏನಂತಿಯೋ?'

'ಏನಪ್ಪ, ನಿನಗೆ ಹೇಗೆ ತೋರಿದರೆ ಹಾಗಪ್ಪ. ಹೋಗೋಣ, ನೀ ಮಾಡಿಕೋ ಎಂದ್ರೆ, ನಾನು ಮಾಡಿಕೊಂಡುಬಿಡತೇನೆ.'

ಹೇಗಾದರೂ ಆಗಲಿ. ಸದ್ಯ ಈ ಹಳ್ಳೀ ಸಂಸಾರ ತಪ್ಪಿಸಿಕೊಂಡು ಪೇಟೆಯಲ್ಲಿ ಏನಾದರೂ ಒಂದಷ್ಟು ಓದೋದಕ್ಕೆ ಸಮಯ ಸಿಕ್ಕರೂ

ಸಾಕು, ಎಂದು ಮನಸ್ಸಿನಲ್ಲೇ ಅಂದುಕೊಂಡ ಶೀನಪ್ಪ. ನಂಜಪ್ಪನವರು ಇದಕ್ಕೆ ಒಪ್ಪಿದ್ದೇ ಹೆಚ್ಚು. ಇವೆಲ್ಲಾ ದೈವಿಕ. ಇದಾದ ಮೇಲೆ ಅವರಿಗೇ ಬಹಳ ಆಶ್ಚರ್ಯವಾಯಿತು, ತಾವು ಹೇಗೆ ಇದಕ್ಕೆಲ್ಲಾ ಅಷ್ಟು ಬೇಗ ಒಪ್ಪಿಕೊಂಡುಬಿಟ್ಟರೂ ಎಂತ.

ಹೆಂಗಸರಿರೋ ಮನೇಲಿ ಒಂದು ಮದುವೆ ವಿಚಾರ ಎಂದರೆ ಎಷ್ಟು ರಗಳೆ, ಎಷ್ಟು ಗಲಭೆ! ಒಂದು ಅರಿಸಿನ ಕುಂಕುಮದ ಗಲಭೆಯೇ ಸಾಕು. ಆ ಹಿಟ್ಟು ಈ ಹಿಟ್ಟು ಇವುಗಳ ವಿಚಾರ. ಸೀರೆ ಕುಪ್ಪಸಗಳ ವಿಚಾರವಂತೂ ಹೇಳೋ ಹಾಗೇ ಇಲ್ಲ. ಮನೆಯ ಯಜಮಾನರಿಗೆ ತಲೆ ಸಿಡಿದು ಬೀಳೋ ವರೆವಿಗೂ ಅದು ತರಬೇಕು, ಇದು ತರಬೇಕು, ಎಂದು ಗೋಳಾಡಿಸುತ್ತಾ ಇರೋದೇ. ಅಕ್ಕ ಕೆಂಪುಸೀರೆ ಚೆನ್ನಾಗಿದೆ ಎಂದರೆ, ತಂಗೀಗೆ ಆನಂದಕಲರದೇ ಬೇಕು. ಇಬ್ಬರೂ ಸೇರಿ ತಾಯಿಯ ಬಳಿಗೆ ಹೋದರೆ ಕೇಸರಿ ಬಣ್ಣದ್ದೇ ಲಕ್ಷಣ, ಎಂದು ಆಕೆ ಹೇಳೋದು. ಮನೇ ಹೆಂಗಸಿಗೆ ಬುದ್ಧಿ ಹೇಳಬೇಕು ಎಂತ ಯಜಮಾನ ಹಸರು ಸೀರೆ ಚನ್ನಾಗಿದೆ ಎಂದರೆ, ಯಜಮಾನಗಿತ್ತಿ 'ಚನ್ನಾಯಿತು, ಮೊದಲೇ ಹಸರು ಸೀರೆ ತರೋದು! ಎತ್ಕೊಳ್ತ ಮನೇಲಿ ಗಂಡುಮಗು ಆಗಬಾರದು ಎಂತಲೋ ಏನೋ!' ಎಂದು ಅವರಿವರ ಬಾಯಿ ಮುಚ್ಚಿಸಿ ತನಗೆ ಬೇಕಾದ್ದನ್ನೇ ತರಿಸಿಕೊಳ್ಳೋದು. ಶೀನಪ್ಪನ ಮದುವೆಯಲ್ಲಿ ಈ ವಿಚಾರಗಳೇ ಇಲ್ಲ. ಮನೇಲಿದ್ದ ಮುದುಕೀಗೆ ವಯಸ್ಸಾ ಗಿತ್ತು. ರಾಮ, ಕೃಷ್ಣ ಎಂತ ಅಡಗೆ ಮಾಡಿ ಕಾಲಕಳೆಯುತ್ತಿದ್ದಳು. ಒಬ್ಬರ ಗೋಜಿಗೆ ಹೋಗಳು. ಎಲ್ಲಾ ಸಿದ್ಧಪಡಿಸಿ 'ಅಜ್ಜೀ ಬಂಡಿ ಹತ್ತು' ಎಂದು ಹತ್ತಿಸಿದರೆ, ಉಸ್ಸಮ್ಮ ಎಂತ ಹತ್ತಿ ಕೂತಕೊಂಬೋಳು. ಏನೋ ಗಂಡ ಸರಿಗೆ ತೋಚಿದ್ದೆಲ್ಲಾ ಅವರೇ ತೆಗೆದುಕೊಂಡರು. ಪ್ರಯಾಣವು ನಡೆಯಿತು.

---

೫

ವಿಧಿವಿಲಾಸದ ವಿಪರೀತ ಹೀಗೆ ಎಂದು ಹೇಳುವುದಕ್ಕೆ ಬಾರದು ಕೀಳು ಮೇಲುಗಳನ್ನು ಮೇಲುಕೀಳುಗಳನ್ನಾಗಿ ಮಾಡುವುದರಲ್ಲಿ ಇದಕ್ಕೆ ಸಮನಿಲ್ಲ. 'ಅಂತಿದ್ದ ಇಂತಿದ್ದ ಎಂತಿದ್ದ ಎನಬೇಡಿ। ಕುಂತಿಯ ಮಕ್ಕಳು

ತಿರದೂಣೆ ವಿಳ್ಕವರು । ಎಂತಿದ್ದರೇನಯ್ಯ ಸರ್ವಜ್ಞ ॥ ಇದಕ್ಕೆ ನಮ್ಮ ನಾರಣಪ್ಪನವರ ಜೀವನವೇ ಸಾಕ್ಷಿ. ಚೌಬೀನೆ ವ್ಯಾಪಾರ ಮಾಡುತ್ತಿದ್ದೋರು; ಈಗಲೂ ಅವರನ್ನು ಚೌಬೀನೆ ನಾರಣಪ್ಪನೋರು ಎಂದು ಕರೆಯುವದೇನೋ ಉಂಟು. ಆದರೆ ವ್ಯಾಪಾರ ಮಟ್ಟಿಗಿಲ್ಲ. ಅವರ ತಂದೆಗಳ ಕಾಲದಲ್ಲಿ ಪಟ್ಟಣಕ್ಕೆ ಏನು ಹೊಸದು ಬಂದರೂ ಅವರ ಮನೆಗೇ ಮೊದಲು ಅದು ಬರೋದು. ವಿಕ್ಟೋರಿಯಾ ಬಂತು; ಅವರ ತಂದೆ ಮೊದಲು ಅದನ್ನು ಕೊಂಡುಕೊಂಡು ಬಂದರು. ಹೀಗೊಂದು ಹತ್ತು ವರ್ಷ ಕಾಲ ಪಟ್ಟ ನಡೆಯಿತು. ಆಮೇಲೆ ಪ್ರಾರಂಭವಾಯಿತು. ಆ ಊರಿಗೆ ಏನು ಬಂದರೂ ಅವರ ಮನೇಗೇ ಅದು ಬರೋದು, ಬಂದು ಮಲೇರಿಯಾದಿಂದ ಪ್ಲೇಗಿನವರೆಗೆ. ಒಂದು ಲಾಟರಿ ಟಿಕೆಟ್ಟಿನಿಂದ 'ಆರ್ಗತ್‌ನಾಟ್' ಕಂಪನಿ ಮುಣಗೋ ವರೆಗೆ. ಈ ಪರಿಸ್ಥಿತಿಯಲ್ಲಿ ಇವರಿಗೆ ಪಂಚಕನ್ಯೆಯರು, ಅಂದರೆ ಐದು ಮಂದಿ ಹುಡಿಗೆಯರು. ಇಬ್ಬರು ಗಂಡು ಹುಡುಗರು.

'ಗಂಡು ಹುಡುಗರು' ಎಂತೀರಲ್ಲಾ ಹೆಣ್ಣು ಹುಡುಗರು ಬೇರೆ ಉಂಟೆ? ಎಂದು ತಾವು ಕೇಳಬಹುದು. ಉಂಟು. ಈ ಕಾಲದಲ್ಲಿ ನಾಜೋಕಾಗಿ ಕ್ರಾಪಿಗೆ ಎಣ್ಣೆ-ಗಿಣ್ಣೆ ಹಾಕಿಕೊಂಡು ಗೌರಮ್ಮನ ಹಾಗೆ ಸೊಬಗಿನಿಂದ ಮೆರೆಯೋ ಹುಡುಗರೆಲ್ಲಾ ಹೆಣ್ಣುಹುಡುಗರೇ ಎಂಬೋಣ, ಅಂದರೆ ಅವರಲ್ಲಿ ಹೆಣ್ಣಿನಲ್ಲಿರುವ ಮೃದುತ್ವ, ಮಾಧುರ್ಯ, ಇವುಗಳು ಪ್ರಾಮುಖ್ಯವಾಗಿರುತ್ತವೆ. ಮನೆಯಲ್ಲಿರುವ ಮಡಿಕೆ ಪಾತ್ರೆಗಳಲ್ಲಿ ನಾರಿಕೇಳಫಲ ಹಾಕಿ, ಕ್ರಿಕೆಟ್, ಬೇಸ್‌ಬಾಲ್‌ಗಳನ್ನಾಡಿ ಉಗ್ರಾಣದ ಮನೆಯಲ್ಲಿ ಸಾಮು ಮಾಡೋ ಹುಡುಗರೆಲ್ಲಾ ಗಂಡು ಹುಡುಗರೆನ್ನಿ. ಇವರಲ್ಲಿ ಭೀಮಸೇನ, ಹಿಡಿಂಬ, ಮುಂತಾದವರ ಪ್ರತಿಭೆ ಪ್ರಜ್ವಲಿಸುತ್ತದೆ. ಈ ವಿಚಾರ ನಮಗೆ ಚೆನ್ನಾಗಿ ವ್ಯಕ್ತವಾಗುವುದು ನವರಾತ್ರಿಯಲ್ಲಿ. ಒಳ್ಳೊಳ್ಳೇ ಅಲಂಕಾರಗಳನ್ನು ಮಾಡಿ ಬೊಂಬೆಕೂಡಿಸಿದರೆ ಒಂದು ನಿಮಿಷದೊಳಗಾಗಿ ಅವು ಪ್ರಾಚೀನ ರೂಪವನ್ನು ಹೊಂದುತ್ತವೆ ಗಂಡು ಹುಡುಗರಿರುವ ಮನೆಯಲ್ಲಿ!

ಚೌಬೀನೆ ನಾರಾಣಪ್ಪನವರಿಗೆ ಆದಾಯ ಕಡಿಮೆಯಾದಾಗ್ಯೂ ಮನೆಯಲ್ಲಿ ನಡೆಯಬೇಕಾದದ್ದು ಏನೂ ಕಡಿಮೆಯಾಗಲಿಲ್ಲ. ಆದರೆ ಆ ಪ್ರಾಣಿ ಒಬ್ಬರ ಮುಂದಾದರೂ ತಮ್ಮ ಸ್ಥಿತಿಯನ್ನು ಹೇಳಿಕೊಂಡವನಲ್ಲ. ಹೇಗೆ

ತರುತ್ತಿದ್ದನೋ ಹೇಗೆ ತೀರಿಸುತ್ತಿದ್ದನೋ ಈಶ್ವರನಿಗೇ ಗೊತ್ತು. ಒಂದು ನವರಾತ್ರಿಯಾದರೆ ಏನು ಮಹೋತ್ಸವ! ಬೆಳಗ್ಗಿನಿಂದ ಸಾಯಂಕಾಲದ ವರೆಗೂ ಮಂತ್ರ ಅಭಿಷೇಕಗಳು, ಸಾಯಂಕಾಲದಿಂದ ಪುನಃ ಬೆಳಗಿನವರೆಗೂ ಸಂಗೀತ ಹರಿಕತೆಗಳು. ಊಟವಾದ ಮೇಲೆ ಒಂದು ಹತ್ತು ನಿಮಿಷ ಮಲಗೋದಕ್ಕೆ ಕೂಡ ಪುರಸೊತ್ತಿಲ್ಲ ಹಾಗೆ ಜಮಖಾನೆಯ ಮೇಲೆ ಬಿದ್ದುಕೊಂಡರೆ ಒಂದೆರಡು ನಿಮಿಷಗಳೊಳಗಾಗಿ ಬರುವುದೇ; 'ಶಾಸ್ತ್ರಿಗಳೆ, ಏಳಿ ಏಳಿ, ಆ ಜಮಖಾನೆ ಇಸ್ಪೀಟಾಡೋರಿಗೆ ಬೇಕು ' ಎಂತ.

ಈ ಇಸ್ಪಿಟಾಟವೋ ಇದೊಂದು ದೊಡ್ಡ ಮಾಯೆ. ಎಲ್ಲೋ ಬೀದಿಯಲ್ಲಿ ಯಾತಕ್ಕೋ ಹೋಗುತ್ತಿದ್ದೋರನೆಲ್ಲಾ ಇದು ಸೆಳೆದುಬಿಡೋದೇ. ಅದರೊಳಗಾಗಿ ಚೌಬೀನೆ ನಾರಾಣಪ್ಪನೋರ ಮನೇಲಿ ಎಂದರೆ ಎಲ್ಲಾರಿಗೂ ಬಾಯಲ್ಲಿ ನೀರೂರೋದೇ. ಆಡೋರಿಗೂ ಫಲಹಾರ, ಮೇಲೆ ನೋಡೋರಿಗೂ ಫಲಹಾರ. ಆಡೋರಕಿಂತ ನೋಡೋರಿಗೇ ಹೆಚ್ಚು. ಆಡೋರೊಬ್ಬೊಬ್ಬರೂ ಒಂದೊಂದು ಹುಡುಗನ್ನ ಕರೆದುಕೊಂಡು ಬರೋದು. ಅದೇನು ಮನೆಯ ಯಜಮಾನಿಯನ್ನು ಮೆಚ್ಚಿಸೋದಕ್ಕೋ ಅಥವಾ ಅವನಿಗೆ ಈ ವಿದ್ಯೆ ಚೆನ್ನಾಗಿ ನಾಟೋದಕ್ಕೋ! ನಾರಣಪ್ಪನವರು ಆಟವಾಡದಿದ್ದರೂ ನೋಡುವದರಲ್ಲಿ ಒಳ್ಳೇ ರಸಿಕರು. ಬೇಕಾದ್ದಾಗಲಿ ಐದು ಜನದ ಮೇಲೆ ಆಡಲೇಬಾರದು; ಪಟ್ಟಿನ ಆಟವೇ ಆಗಬೇಕು. ಎರಡಾಟಕ್ಕೆ ಮೂರಾಟಕ್ಕೆ ಒಂದು ಸಲ ಎತ್ತಿ ಆಡಿಸಿಬಿಡೋರು. ಎಲ್ಲರಿಗೂ ಕೋಪ ಬರೋದು. ಆದರೆ ನಾರಣಪ್ಪನವರೇ ಗೆಲ್ಲುತ್ತಾಯಿದ್ದರು. ಹೀಗಾಗಿ ಎರಡು ದಿನ ಪಟ್ಟಾಗಿ ಬಂದೋರು ಮೂರನೆಯ ದಿನ ಪರಾರಿ. ಆದರೆ ನಾಲ್ಕು ಮಂದಿ ಮಾತ್ರ ಯಾವಾಗಲೂ ಸಿದ್ಧವೇ. ಅವರನ್ನ ಎತ್ತಿ ಆಡಿಸಲಿ, ಒತ್ತಿ ಆಡಿಸಲಿ, ತಿರುಗಿಸಲಿ, ಬದಲಾಯಿಸಲಿ ಅವರೇನು ಕದಲು-ಮೆದಲುವ ಹಾಗಿಲ್ಲ.

ರಾಮಣ್ಣನವರು ಎಲ್ಲರಿಗೂ ಸ್ವಲ್ಪ ದೊಡ್ಡೋರು. ಅವರು ಕಚೇರಿಗೆ ಹೋಗುತ್ತಿದ್ದರಂತೆ; ಅವರು ಯಾವಾಗ ಹೋಗುತ್ತಿದ್ದರೋ ಗೊತ್ತಿಲ್ಲ. ನಮ್ಮ ಮನಸ್ಸಿಗೇನೋ ಬಹಳ ದೊಡ್ಡ ಉದ್ಯೋಗವಿರಬೇಕು ಅಂತ. ಯಾಕೆಂದರೆ, ಅವರ ಮನೆಗೆ ಆಗಾಗ ಡವಾಲಿ ಜವಾನ ಒಂದು ದೊಡ್ಡ ಪೆಟ್ಟಿಗೆ ಹೊತ್ತುಕೊಂಡು ಬಂದು ಇಟ್ಟುಹೋಗತಾಯಿದ್ದ. ಜವಾನರು

ಒರಬೇಕಾದರೆ ಸಾಧಾರಣದವರ ಮನೆಗೆ ಒರೋ ಹಾಗಿಲ್ಲ. ಕಚೇರಿಗಳಲ್ಲಿ ಸಾಧಾರಣ ಕಾರಕೂನರಿಗೆ ಅವರೇನೂ ಸಲಾಂ ಹಾಕೋ ಮಾತೇಯಿಲ್ಲ. ಎಂಥಾ ಕಾರಕೂನನೇ ಆಗಲಿ, ಅವನೇನು ಸೂಟು ಹಾಕಿರಲಿ, ಊಟು ಹಾಕಿರಲಿ, ಜವಾನನಿಗೆ ಮೊದಲು ಸಲಾಂ ಹಾಕಿ ಆಮೇಲೆ ಬುದ್ಧಿಯವರನ್ನು ನೋಡಬೇಕು. ಇಂತಹ ದವಾಲಿ ಜವಾನರು ಆಗಾಗ ಒಂದುಹೋಗುತ್ತಿದ್ದರು. ಮಿಕ್ಕವರ ಮನೆಗೇನಾದರೂ ಅಕಸ್ಮಾತ್ತಾಗಿ ಒಂದಾಗ್ಯೂ ಒರೀ ಕೈಲಿ ಒರೋದು, ಜೇಬಿನಲ್ಲಿ ಏನಾದರೂ ಇಟ್ಟುಕೊಂಡು ಹೋಗೋದು. ಇಲ್ಲಿ ಹಾಗಿರಲಿಲ್ಲ.

ಇವರು ಬಹಳ ದೊಡ್ಡ ಮನುಷ್ಯರೆಂದು ಎಲ್ಲರೂ ಒಪ್ಪಿಕೊಳ್ಳುತ್ತಿದ್ದರು. ಏಕೆಂದರೆ ಇವತ್ತು ಹತ್ತಾರು ವರ್ಷ ಇಸ್ಪೀಟು ಆಟದಲ್ಲಿ ನುರಿತಿದ್ದರೂ ಯಾರ ಮೇಲೂ ಯಾವ ಸಂದರ್ಭದಲ್ಲೂ ಕೋಪಮಾಡಿಕೊಂಡಿರಲಿಲ್ಲ. ಜೈನ ಕಾವ್ಯಗಳಿಗೆ ಶಾಂತಿರಸ ಪ್ರಾಧಾನ್ಯವೆಂದು ಎಲ್ಲರೂ ಹೇಳುವುದುಂಟು. ಮಹಾಯೋಗಿಗಳು ಶಾಂತಿಗಾಗಿ ತಪಸ್ಸು ಮಾಡುತ್ತಾರಂತೆ. ಇಂಥಾವರನ್ನು ಸ್ವಲ್ಪ ಇಸ್ಪೀಟಾಟಕ್ಕೆ ಕೂಡಿಸಿ ನೋಡಿ, ಇವರ ಶಾಂತಿರಸದ ವರಸೆಯಾದರೂ! ಮಹಾತ್ಮರು ಮನುಷ್ಯನ ಶಾಂತಿರಸವನ್ನು ಅಳೆಯುವುದಕ್ಕೇನಾದರೂ ಒಂದನ್ನು ಮಾಡಬೇಕು ಎಂದಿದ್ದರೆ, ಎಲ್ಲರೂ ಇಸ್ಪೀಟಾಟಕ್ಕೇ ತಮ್ಮ ಘನವಾದ ವೋಟನ್ನು ಕೊಡುತ್ತಿದ್ದರು. ಇಷ್ಟು ಶಾಂತಿಸ್ವಭಾವದವರಿಗೂ ಅಪನಿಂದೆ ತಪ್ಪಲಿಲ್ಲ. ಅದೇನು ಸಿಜಸ್ಥಿತಿಯೋ ಅಥವಾ ವಿಕಟ ಕವಿತ್ವವೋ—ಎಲ್ಲರೂ ಹೇಳುತ್ತಿದ್ದರು, ರಾಮಣ್ಣನವರು ಇಸ್ಪೀಟು ಹಿಡಿಯುವುದಕ್ಕೆ ಕಾರಣ ಅವರ ಅರ್ಧಾಂಗಿ ಎಂತ. ಇವರು ಹೇಳುತ್ತಿದ್ದುದನ್ನೆಲ್ಲಾ ಕೇಳಿದರೆ ರಾಮಾಯಣಕ್ಕೆ ಶೂರ್ಪನಖಿಯೇ ನಾಯಕಿಯಾಗುತ್ತಿದ್ದಳು. ತಾಟಕಿ, ಹಿಡಂಬಿ, ಲಂಕಿಣಿ ಮುಂತಾದ ಕವಿಸಮೂಹದ ಮುಖದಿಂದ ಹೊರಟ ಅರ್ಥಶಬ್ದಾಲಂಕಾರಗಳನ್ನೊಳಕೊಂಡ ಆದರ್ಶಕಾವ್ಯಗಳು ಈಕೆಯ ಪೀಠಿಕಾಪ್ರಕರಣಕ್ಕೆ ಕೂಡ ಹತ್ತಿರ ಒರುವಂತಿಲ್ಲ, ಎನ್ನುವಂತೆ ತೋರುತ್ತೆ. ಇವೆಲ್ಲಾ ತಮಗೆ ಉತ್ಪ್ರೇಕ್ಷೆ ಎಂದು ತೋರಬಹುದು. ಆದರೆ ಒಲ್ಲವನೇ ಒಲ್ಲ ಬೆಲ್ಲದ ರುಚಿಯ. ಮನೆಯಲ್ಲಿ ಮನೆಯಾಕೆಯ ಅಡಕಿತದ ಕೆಳಗೆ ಸಿಕ್ಕಿ ಒಡಾಡಿದ ಯಾವ ನಾಯಕನನ್ನು ನೀವು

ಸ್ವಲ್ಪ ಕೇಳಿದ್ದಾದರೂ ಇದರಲ್ಲಿ ಪ್ರಕೃತಿಸೌಂದರ್ಯವು ಇಷ್ಟಿದೆ ಎಂಬುದನ್ನು ಕಂಡುಕೊಳ್ಳುವಿರಿ.

ಸೋಲು ಗೇಲವು ದೈವಯೋಗ. ಈ ವಿಚಾರ ರಾಮಣ್ಣನವರಿಗೆ ಚೆನ್ನಾಗಿ ಅನುಭವ. ಪ್ರತಿ ಆಟವನ್ನೂ ತಾವೇ ಗೆಲ್ಲುತ್ತಿದ್ದರೆ ಆಡೋರಿಗೆ ಬೇಜಾರೆಂಬುದನ್ನರಿತಿದ್ದರು. ಅದಕ್ಕಾಗಿ ಇವರಿಗೆ ಆಡಬೇಕು ಅಂತಿತ್ತಾಗಲಿ ಗೆಲ್ಲಬೇಕು ಎಂದಿರಲಿಲ್ಲ. ಇದು ಎಲ್ಲಿಯ ವರೆಗೆ ಹೋಗಿತ್ತೆಂದರೆ ಪಟ್ಟಿಗೆ ಕೂಡ ಅವರು ಕೈಹಾಕುತ್ತಿರಲಿಲ್ಲ. ಪಕ್ಕದಲ್ಲಿ ಕೂತಿದ್ದೋರು 'ನಿಮ್ಮದೇ ರಾಮಣ್ಣೋರೇ!' ಎಂದರೆ, ಆಗ ತಾನೆ ನಿದ್ದೆಯಿಂದೆದ್ದ ಹಸುಮಗು ಕಣ್ಣು ಬಿಟ್ಟು ನಕ್ಕ ಹಾಗೆ ಕಣ್ಣು ಬಿಟ್ಟು, ತುಟಿಯನ್ನಲ್ಲಾಡಿಸುತ್ತಾ ನಿಧಾನವಾಗಿ ಎಲೆಗಳನ್ನು ಜೋಡಿಸಿ ತೆಗೆದುಕೊಳ್ಳುತ್ತಿದ್ದರು. ಇವರು ಗೆದ್ದರೆ ನಮಗೆ ಬಹಳ ಸಂತೋಷ. ನಮಗೆ ತಿಂಡಿ ಸಿದ್ಧವಾಗಿರುತ್ತಿತ್ತು. ದೊಡ್ಡೋರಿಗೆಲ್ಲಾ ಜಗಳ; ಚಿಕ್ಕೋರಿಗೆಲ್ಲಾ ತರಿಸಿದ್ದ ತಿಂಡಿ.

ಮತ್ತೊಬ್ಬರು ಗೋವಿಂದರಾಯರು. ಇವರ ದೊಡ್ಡ ಗುಣಾ ಏನಂದರೆ ಇವರು ಬೆತ್ತವಿಲ್ಲದೆ ಒರೋದಿಲ್ಲ. ಇವರು ಯುವಕರಾಗಿದ್ದಾಗ 'ಕ್ರಿಕೆಟ್' ಆಡತಾಯಿದ್ದರಂತೆ. ಅದರ ಜ್ಞಾಪಕಾರ್ಥವಾಗಿ ಇವರು ಈಗ ಒಂದು ಬೆತ್ತ ಯಾವಾಗಲೂ ಹಿಡಿದಿರೋದೇ. ಅವರ ಮನಸ್ಸನ್ನು ಸ್ವಲ್ಪ ಚಂಚಲಪಡಿಸಬೇಕಾದರೆ ಆ ಬೆತ್ತ ಬಚ್ಚಿಟ್ಟರೆ ಸಾಕು. ಕೆಲವರ ಪ್ರಾಣ ಊಟದಲ್ಲಿರುತ್ತೆ, ಕೆಲವರದು ಸಂಗೀತದಲ್ಲಿರುತ್ತೆ; ಇವರದು ಆ ಬೆತ್ತದೊಳಗಿತ್ತು. ಇವರು ಅತಿ ಬುದ್ಧಿವಂತರು. ಇವರ ಬುದ್ಧಿವಂತಿಕೆ ನೋಡಿ ಜನರು ಇವರ ಹತ್ತಿರ ಹೋಗೋದಕ್ಕೆ ಹೆದರುತ್ತಾ ಇದ್ದರು. ಇಸ್ಪೀಟಿನಲ್ಲಿ ಇವರ ವಿಚಾರವೇ ಒಂದು ಮಾದರಿ. ಇವರು ಆಟ ಆಡುತ್ತಿದ್ದುದು ತಾವು ಗೆಲ್ಲುವುದಕ್ಕಲ್ಲ; ಆಟ ಹೇಳಿದವರನ್ನು ಸೋಲಿಸುವುದಕ್ಕೆ. ಇವರಿಗೆ ಬರುತ್ತಿದ್ದ ಕೇಸುಗಳಲ್ಲಿಯೂ ಹೀಗೇ. ಇವರು ಸಂಗೀತದಲ್ಲಿಯೂ ಬಹಳ ಗಟ್ಟಿಗರು. ಅದಕ್ಕೇ ಇಸ್ಪೀಟಿನಲ್ಲಿ ಯಾವಾಗ ಯಾರು ಕೇಳಿದರೂ ಉತ್ತರ ಭೈರವಿ ಅಥವಾ ಕಲ್ಯಾಣಿ. ಇವರ ಒಣ್ಣಾ ಯಾವಾಗಲೂ 'ಕಳಾವರೇ;' ಯಾಕೆಂದರೆ, ಅದನ್ನು ರಾಗವಾಗಿ ಹೇಳೋದಕ್ಕೆ ಆಗೋಹಾಗೆ ಮಿಕ್ಕಿದ್ದನ್ನು ಹೇಳೋದಕ್ಕಾಗೊಲ್ಲ. ವರ್ಷಾನುಗಟ್ಲೆ ಅವರ ಆಟ ನೋಡಿದೋರು

ಇದ್ದಾರೆ, ಕೇಳಿದೋರೂ ಇದ್ದಾರೆ; ಆದರೆ ಅವರು 'ಜಾಕಿ' ಹಾಕೋ ವಾಗ ರಾಗವಾಗಿ ಹಾಡಲಿಲ್ಲ ಎಂತ ಯಾರಾದರೂ ಹೇಳಿದರೆ ಸರಿಯೆ ಮತ್ತೆ! ಇವರು ಇಸ್ಪೀಟಾಡುತ್ತಿದ್ದುದು ಸುಮ್ಮನೆ ಕಾಲಹರಣೆಗಲ್ಲ. ಹೇಗೆ ಸಾಣೆ ಕಲ್ಲು ತಿರುವುತ್ತ ಚಾಕು ಹಿಡಿದರೆ, ಅದು ಸಾಣೆ ಹಿಡಿಯುತ್ತದೆಯೋ, ಹಾಗೆಯೇ ಲಾಯರು ಇಸ್ಪೀಟಾಡಿದರೆ ಅವರ ಬುದ್ಧಿ ಸಾಣೆ ಹಿಡಿದ ಹಾಗಾ ಗುತ್ತೆ ಎಂಬುವುದು ಇವರ ಮತ.

ಇಷ್ಟಾದರೂ ಇವರು ಇಸ್ಪೀಟಿನ ಮೇಲಷ್ಟು ದೃಷ್ಟಿಯಿಟ್ಟಿರಲಿಲ್ಲ ಎಂದೇ ಹೇಳಬೇಕು. ಒಂದು ಬಣ್ಣ ಇಳಿದರೆ ಮತ್ತೊಂದನ್ನು ಹಾಕಿ ಬಿಡು ತ್ತಿದ್ದರು. ಯಾರಾದರೂ ಪಕ್ಕದಲ್ಲಿದ್ದೋರು ತೋರಿಸಿದರೆ ಅವರಿಗೆ ಆಗ ಕಾಣುತ್ತಿತ್ತು, ತಾವು ಸರಿಯಾಗಿ ಆಡಲಿಲ್ಲ ಎಂತ. ಯಾರೂ ತೋರಿಸದೇ ಇದ್ದರೆ, ಎಲೆಗಳನ್ನು ಒಂದೊಂದಾಗಿ ತೆಗೆದು ಜೋಪಾನ ಮಾಡಿ ತಮ್ಮ ಮುಂದೆ ಇಟ್ಟುಕೊಂಡುಬಿಡುತ್ತಿದ್ದರು. ತಮಗೆ ಪಟ್ಟು ಬರೋ ಹೊತ್ತಿ ನಲ್ಲಿ ಅನೇಕರು ಸಿಂಹನಾದವನ್ನು ಮಾಡಿ ತಮ್ಮಲ್ಲಿರುವ ವಜ್ರಾಯುಧವನ್ನು 'ಟಪ್ಪನೆ' ಆ ಎಲೆಗಳ ಮೇಲೆಲ್ಲಾ ಪ್ರಯೋಗಿಸಿ, ವೀರಮುಂಡಿ ಹಾಕಿ, ಎಲ್ಲಾ ಬಾಚಿಕೊಂಡುಬಿಡುತ್ತಾರೆ. ಇದು ನಾಗರಿಕರ ಲಕ್ಷಣವಲ್ಲ ಎಂಬುದು ನಮ್ಮ ಗೋವಿಂದರಾಯರಿಗೆ ಚೆನ್ನಾಗಿ ತಿಳಿದಿತ್ತು. ಮೆಲ್ಲನೆ ಕೈಯಿಂದ ಎಲೆಯನ್ನು ತೆಗೆದುಕೊಂಡು ಜೇನುತುಪ್ಪ ಗಂಟಲಿನೊಳಗೆ ಹಾಕಿ ಕೊಂಡ ಹಾಗೆ ಎಲೆಯನ್ನು, ಸಮುದ್ರದ ಮೇಲೆ ಹಡಗುಗಳು ಹೋಗು ವಂತೆ, ತೇಲಿಸಿ ಬಿಡುತ್ತಿದ್ದರು. ಪಕ್ಕದಲ್ಲಿದ್ದವರು ದೃಷ್ಟಿ ಕೊಡದಿದ್ದರೆ, ಇವರು ಏನು ಹಾಕಿದರು ಎಂತ ಹೇಳೋದಕ್ಕೆ ಕೂಡ ಸಾಧ್ಯವಿಲ್ಲ.

'ಇಸ್ಪೀಟು ಎಂಬೋದು ಸಾಮಾನ್ಯವೆ! ನಮ್ಮಲ್ಲಿರೋ ಪಂಚ ಪ್ರಾಣಗಳಲ್ಲಿ ನಾಲ್ಕು ಆಚೆ ನಾಲ್ಕು ರಂಗುಗಳ ಮೇಲಿರುತ್ತೆ!' ಇದು ನಮ್ಮ ತಿಪ್ಪಯ್ಯನವರ ಮತ. ಇಸ್ಪೀಟಿಗೆ ಕೂತಾಗ ಹಾಳುಗೊಡ್ಡು ಹರಟೆ ಏಕೆ? ಹರಟೆ ಹೊಡೆಯಬೇಕಾದರೆ ಇಸ್ಪೀಟೇಕೆ? ಘಳಿಗೆಗೊಮ್ಮೆ 'ನೀನೇ ನಂತೀ?' 'ನೀನೇನಂತಿ?' ಎಂತ ಕೇಳಿಕೋತಾ ಕೂತುಕೋಬೇಕು. ಆಟ ಆಡೋದಕ್ಕೆ ಕೂತ ಮೇಲೆ ದೃಷ್ಟಿಯಿರಬೇಕು. ಈ ಹೊತ್ತಿನಲ್ಲಿಯೇ ಬರೋದು ಕೆಲಸಕ್ಕೆ ಬಾರದ ಮಾತು. ಅವನ ಅಂಗಡಿಯಲ್ಲಿ ಬೆಲ್ಲ ಸುಲಭ;

ಜಪಾನಿನ ರೇಷ್ಮೆ ಬಹಳ ಸುಲಭ; ಸೀಮೆಂಟಿನ ಕಟ್ಟಡದ ಸಮಾನವಿಲ್ಲ, ಇವೆಲ್ಲಾ! ಇದರಲ್ಲಿ ತಿಪ್ಪಯ್ಯನವರಿಗೆ ಸ್ವಲ್ಪ ಮುಂಗೋಪ. ಈ ವಿಚಾರ ಚೆನ್ನಾಗಿ ಮುಂದಟ್ಟಾಗಿಯೇ ನಂಜಪ್ಪನವರು ನಾಲ್ಕಾರು 'ಪ್ಯಾಕು' ಯಾವಾಗಲೂ ಇಟ್ಟೇ ಇರುತ್ತಿದ್ದರು.

ಇವರು ಸಂಸ್ಕೃತದಲ್ಲಿ ಬಹಳ ಗಟ್ಟಿಗರು. ಸಂಸ್ಕೃತ ಸಂಗೀತಗಳಲ್ಲಿ ಗಟ್ಟಿಗರಾದವರಿಗೆ ಸಂಸ್ಕೃತಿ ಹೆಚ್ಚಿ ಮುಂಗೋಪ ಎಲ್ಲಿಂದಲೋ ಬಂದು ಅವರಲ್ಲಿ ನೆಲೆಯಾಗುತ್ತೆ. ಮುಂಗೋಪ ಇರೋರು ಮದುವೆ ಮಾಡಿಕೋಬಾರದು ಎಂತ ಎಷ್ಟೋ ಸಲ ತಿಪ್ಪಯ್ಯನವರೇ ಹೇಳಿದ್ದಾರೆ. 'ಹೆಂಡತೀನ ನೀನು ಸಾವಿರ ಒಳ್ಳೇ ಮಾತಾಡು, ಒಂದು ಸಲ ಕೋಪದಿಂದ ಬೈದು ಬಿಟ್ಟರೆ, ನೀನು ಮಾಡಿದ್ದೆಲ್ಲಾ ಹಾಳೇ!' ಎಂತ ಪದೇಪದೇ ಅವರು ಹೇಳುತ್ತಲೇ ಇರುತಿದ್ದರು. ಇದಕ್ಕೆ ಶೇಷಗಿರಿರಾಯರು ಆಗಾಗ ಪ್ರತ್ಯುತ್ತರ ಕೊಡುತ್ತಲೇ ಇರುತ್ತಿದ್ದರು–'ಸರೀ ತಿಪ್ಪೀ, ಈಗ ಬಿಟ್ಟುಬಿಡು ನಿನ್ನ ಗತಿ ನೋಡು ಆಮೇಲೆ! ರಾತ್ರಿ ಹನ್ನೊಂದು ಗಂಟೆಗೆ ಇಸ್ಪೀಟು ಮುಗಿಸಿಕೊಂಡು ನಿನ್ನ ಮನೆಗೆ ಹೋದರೆ ಬಿಸಿನೀರು ತಂಬಿಗೇಲಿ ಕಾದಿರುತ್ತೆ! ಮಾರಾಯಳಯ್ಯ, ಪುಣ್ಯಮಾಡಿದ್ದೀಯೋ ನೀನು. ಆಕೆ ಏನಾದರೂ ಗಂಡಸಾಗಿದ್ದರೆ ನಿನ್ನನ್ನು ಕಾಲಕೆಳಗೆ ದೂರೋ ಹಾಗೆ ಮಾಡಿ ನಿನಗೆ ಬುದ್ಧಿ ಕಲಿಸಿ ಬಿಡತಾಯಿದ್ದೆ!' ಇವರು ಆ ಊರಿನಲ್ಲಿ ಪ್ರೈಮರಿ ಪಾಠಶಾಲೆಯಲ್ಲಿ ಉಪಾಧ್ಯಾಯರು. ಸಂಸ್ಕೃತದಲ್ಲಿ ಗಟ್ಟಿಗರು, ಮುಂಗೋಪಿಗಳು. ಇನ್ನು ಇದಕ್ಕಿಂತ ಹೆಚ್ಚಾದವುಗಳೇನು ಬೇಕು ಚಿಕ್ಕಮಕ್ಕಳಕನ್ನ ಡ ಅ ಆ ಇ ಈ ಪಾಠಶಾಲೆಗೆ! ಇವರಿಗೂ ಇದು ಬಹಳ ಅನುಕೂಲವಾಗಿತ್ತು. ಬೆಳಗೆ ಪಾಠಶಾಲೆ ಮುಗಿದು ಹೋಗುತ್ತಾಯಿತ್ತು. ಆಮೇಲೆ ದಿನ ಬಿಟ್ಟು ದಿನ ಇವರಿಗೆ ಯಾವುದಾದರೂ ಒಂದು ಆಮಂತ್ರಣ ಬರುತ್ತಲೇ ಇತ್ತು. ವೇದದಲ್ಲಿ ಹೇಳಿದೆ, ಯಾವಾಗ ಯಾರು ಶ್ರಾದ್ಧಕ್ಕೆ ಕರೆದರೂ ಬರುವುದಿಲ್ಲವೆನ್ನಬಾರದು ಎಂತ. ಪ್ರತಿನಿತ್ಯವೂ ಹೋಗಬಾರದು. ಅದಕ್ಕಾಗಿ ತಿಪ್ಪಯ್ಯನವರು ಈ ಕೆಲಸ ಮಾಡುತ್ತಿದ್ದರು. ಅವರು ಈಗ ಇಲ್ಲ. ಪಾಪ! ಇದ್ದಿದ್ದರೆ ಇನ್ನೂ ಹತ್ತಾರು ವಿಚಾರಗಳ ಮೂಲಕ ಅವರು ಶಾಸ್ತ್ರೋಕ್ತವಾಗಿ ಹೇಗೆ ಆಚರಿಸುತ್ತಿದ್ದರು ಎಂಬುದನ್ನು ಕೇಳಿ ಹೇಳಬಹುದಾಗಿತ್ತು. ಅವರು ಆಗಾಗ

ಹೇಳುತ್ತಿದ್ದರು, ' ನಾನೇನು ಅಂತಹ ಕ್ರೂರ ಪಿಶಾಚಿಯಲ್ಲವಯ್ಯಾ. ನಾನು ರಾತ್ರಿ ಎಷ್ಟು ಹೊತ್ತಿಗೆ ಹೋದರೂ ಯಾರಿಗೂ ತೊಂದರೆಯಿಲ್ಲ. ನನಗಾಗಿ ಅವರು ಅಡಿಗೇ ಮಾಡಬೇಕಾದ್ದಿಲ್ಲ! ' ಅದಕ್ಕೆ ಶೇಷಗಿರಿರಾಯರು ತತ್ಕ್ಷಣವೇ ಹಾಡಿಬಿಡುತ್ತಿದ್ದರು.

**‘ ಕರಜಿಗೆಯು ಕಾಯಿ ಅತಿ ರಸವುದ್ದಿನೊಡೆಯು ಹಿಮ**
**ಕರನಂತೆ ರಾಜಿಸುವ ಇಡ್ಡಲಿಗೆ ಎಳ್ಳುಂಡೆ**
**ತರಣಿಮಂಡಲದಂತೆಸೆವ ಒಬ್ಬಟ್ಟು ಗಾರಗೆಯ ಚಕ್ಕುಲಿ ಸೇವಗೆ**
**ಹೊರೆಯ ಪೇಣಿಯು ಮನೋಹರದುಂಡೆ ಯರಗು ಸ**
**ಕ್ಕರೆ ಬುರುಡೆ ಹಾಲುಂಡಲಿಗೆಯು ಸ್ವಾದಿಸಲಮೃತ**
**ಸರಳಿನಿಂ ನಿರ್ಮಿಸಿದ ಲತೆಯಂತೆ ಜಿಲ್ಲಬಿಯ ಅಂಗಡಿಗಳೆಸೆದವು.**
**‘ ಪಾಯಸದ ಪರಿಗಳಂ ನೋಡಿ ಪಂಡಿತರೆ ಸವಿ**
**ಯಾಯಿತೇಯಾಯ್ತು ಪಾಧ್ಯಾಯರೇ ಕರಜಿಗೆಯ**
**ಕಾಯ ದೋಸೆಗಳ ಹಸನಂ ಪುರೋಹಿತರೆ............'**

ಇಷ್ಟಾಗೋ ಹೊತ್ತಿಗೆ ತಿಪ್ಪಯ್ಯನವರ ಮುಖಕ್ಕೆ ರಕ್ತವೇರಿ, ಕೈಲಿದ್ದ ಇಸ್ಪೀಟು ಎಲೆಗಳು ಹತ್ತುದಿಕ್ಕುಗಳಿಗೂ ಓಡಾಡುತ್ತಿದ್ದವು.

ಶೇಷಗಿರಿರಾಯರು ಸಾಮಾನ್ಯರಲ್ಲ. ಟೆನ್ನಿಸ್ ಮೊದಲು ಹಿಂದೂ ದೇಶಕ್ಕೆ ಬಂದಾಗ ಇವರು ಅದನ್ನು ಆಡುತ್ತಾ ಇದ್ದರಂತೆ. ಈಗ ತಿಪ್ಪಯ್ಯ ನವರ ಜೊತೆಯಲ್ಲಿ ಅದೇ ಪಾಠಶಾಲೆಯಲ್ಲಿ ಪಾಠ ಹೇಳುತ್ತಿದ್ದರೂ ವಿದ್ಯಾ ವ್ಯಾಸಂಗದ ಸರ್ವಾಧಿಕಾರಿಗಳಿಂದ ಮೊದಲುಗೊಂಡು ಆ ಕಚ್ಚೇರಿಯ ಅಂಚೆ-ಜವಾನನ ವರೆವಿಗೂ ಎಲ್ಲರೂ ಇವರಿಗೆ ತಿಳಿದವರೇ. ಇವರಿಗೆ ' ಇನ್ಸ್ಪೆಕ್ಷನ್ ' ಎಂದರೆ ಒಂದು ' ಸೋಷಿಯಲ್ ' ಇದ್ದಹಾಗೆ! ಯಾವ **ಸಾಹೇಬರು** ಬಂದರೂ ' ಶೇಷಗಿರಿರಾವ್, ಚೆನ್ನಾಗಿದ್ದೀರಾ? ಇಲ್ಲಿ ಹೆಡ್ಮಾಷ್ಟರ್ ಯಾರು? ' ಹೀಗೆನ್ನೋದೇ. ಆಗಿನ ಕಾಲದಲ್ಲಿ ಒಂದು ವಿಚಾರ ನೋಡಿ ಈ ಪ್ರಶ್ನೆ ಕೇಳಿದೊಡನೆಯೇ ಅಹಂಭಾವದಿಂದ ನಾನು ಎಂತ ಯಾವ ಹೆಡ್ಮಾಸ್ಟರೂ ಮುಂದೆ ಬರುತ್ತಿರಲಿಲ್ಲ. ಅಲ್ಲದೆ ತಮ್ಮ ಕೈಕೆಳಗಿದ್ದ ಉಪಾಧ್ಯಾಯರು ಬಹಳ ಗಟ್ಟಿಗರೆಂದು ತೋರಿಸಿದರೆ ಆದರಿಂದ ತಮ್ಮ ಗುಣ ಇಮ್ಮಡಿ ಎಂದು ಆಗಿನ ಕಾಲದವರು ತಿಳಿದಿದ್ದರು. ಆದುದರಿಂದ ಶೇಷಗಿರಿ ರಾಯರು ಆ ಪಾಠಶಾಲೆಯಲ್ಲಿದ್ದುದು ಆ ಹೆಡ್ಮಾಸ್ಟರಿಗೆ ಒಂದು ಗೌರವ

ವೆಂದು ಅವರು ಭಾವಿಸಿದ್ದರಾಗಲಿ, ಏನಾದರೂ ಮಾಡಿ, ತನಗಿಂತ ಮೇಲಾದ ಉಪಾಧ್ಯಾಯನನ್ನು, ಮನೆಗೆ ಕಳಿಸಿದ ಹೊರತು ತಮಗೆ ಗೌರವಕ್ಕೆ ಕಡಿಮೆ ಎಂದು ಅವರು ಅರಿತಿರಲಿಲ್ಲ.

ಶೇಷಗಿರಿರಾಯರಿಗೆ ಕೋಪ ಬಂದಾಗ ಅವರು ಎರಡು ಆಯುಧ ಗಳನ್ನು ಉಪಯೋಗಿಸುತ್ತಿದ್ದರು. ಒಂದು, ನಶ್ಯದಡಬ್ಬಿ; ಎರಡು; ಮುಲಾ ಮಿನ ಡಬ್ಬಿ. ಮುಖದಲ್ಲೆಲ್ಲಾ ಒಂದು ವಿಧವಾದ ಗುಳ್ಳೆಗಳು ಅವರಿಗೆ ತೊಂದರೆಕೊಡುತ್ತಿದ್ದವು. ಅದಕ್ಕೆ ಮುಲಾಮಿನ ಡಬ್ಬಿ. ಮೂಗಿನಲ್ಲಿ ಮತ್ತ ವಾರಣಗಳು ಓಡಾಡಿದ ಹಾಗೆ ಆಗುತ್ತಿತ್ತಂತೆ; ಅದಕ್ಕೆ ನಶ್ಯದ ಡಬ್ಬಿ.

ಎಲ್ಲರೂ ಇಸ್ಪೀಟಿನ ಆಟ ಒಳ್ಳೆ ಬುದ್ಧಿವಂತಿಕೆ ಆಟ ಅಂತಾರೆ. ಇವರ ಮತ ಹೀಗಲ್ಲ. ಆಡೋದು ಕೈಯಿ; ನೋಡೋದು ಕಣ್ಣು. ಸ್ವಲ್ಪ ಸಂಕಲನ, ವ್ಯವಕಲನ, ಇಷ್ಟು ಚುರುಕಾಗಿದ್ದರೆ ಸಾಕು. ನಾರಣಪ್ಪನವರು ನೋಡುತ್ತ ನೋಡುತ್ತ, 'ತಿಪ್ಪಯ್ಯನೋರೇ, ನಿಮ್ಮ ಎಲೆಯಲ್ಲಾ ಚೆನ್ನಾಗಿ ಶೇಷಗಿರಿ ರಾಯರು ನೋಡಿಬಿಟ್ಟರು' ಎಂಬೋದು, ಶೇಷಗಿರಿರಾಯರು 'ನಾನೇನು ನೋಡಬೇಕು ಅಂತ ನೋಡೋದಿಲ್ಲ ಏನು ಮಾಡ್ಲಿ ಹಾಳು ತಿಪ್ಪೀ, ನನ್ನ ಕಣ್ಣುಮುಂದೆ ಎಲೆ ತಂದಿಟ್ಟುಬಿಡ್ತಾನೆ!' ಎನ್ನೋದು. ಎಲ್ಲರೂ ಕಲಿಸಿದಾಗ ಎಲೆಗಳು ಸರಿಯಾಗಿರೋದು. ಶೇಷಗಿರಿರಾಯರು ಕಲಿಸಿದಾಗ ಕೊನೆಗೆ ಒಂದೆಲೆ ಹೆಚ್ಚುಕಡಿಮೆ ಬರೋದು, ಆ ಹೆಚ್ಚುಕಡಿಮೆ ಬಂದ ಎಲೆ ಹೇಗೋ ಅವರ ಎಲೆಗಳ ಮಧ್ಯದಲ್ಲಿ ಇರೋದು; ಎಲ್ಲಾರ ಒಪ್ಪಿಗೆ ಪಡೆದು ಅದನ್ನು ಹಾಗೇ ತಾವು ಇಟ್ಟುಕೊಂಡುಬಿಡೋದು.

ಗಂಡುಹುಡುಗ ಮುಂಜೀಗೆ ತಯಾರಾಗಿದ್ದ. ಈ ಕೊನೇ ಹುಡುಗಿಯ ಮದುವೆಯಲ್ಲಿ ಇದನ್ನೂ ಮಾಡಿಬಿಡೋಣವೆಂದಿದ್ದರು. ತಿಪ್ಪಯ್ಯನವರು ತಕರಾರು ಹಾಕಿಬಿಟ್ಟರು. ಶೇಷಗಿರಿರಾಯರು ಒಟ್ಟಿಗೆ ಮಾಡಿದರೂ ದಕ್ಷಿಣೆ ಬೇರೆಬೇರೆಯಾಗಿಯೇ ಕೊಡುತ್ತಾರೆಂದು ತಿಪ್ಪಯ್ಯನವರ ಮನಸ್ಸನ್ನು ಸಮಾಧಾನಪಡಿಸಿದರು. ಆದರೆ ಬೀಗರು ಒಪ್ಪಲಿಲ್ಲ. ಹೊಸ ಬೀಗರಲ್ಲ! ಹಿಂದಿನ ಹಳೇ ಐದು ಬೀಗರು—ಐದಲ್ಲ, ನಾಲ್ಕು. ಬೀಗರೊಪ್ಪದಿದ್ದ ಮೇಲೆ ಯಾವ ಕೆಲಸ ತಾನೆ ಮದುವೆಯ ಮನೆಗಳಲ್ಲಿ ನಡೆದೀತು! ಅದಕ್ಕಾಗಿ ಆ ಯೋಚನೆಗೆ ಕೈಹಾಕದೆ ಏನೋ ಇದ್ದದ್ದರಲ್ಲಿ ಮಾಡಿಬಿಟ್ಟರಾಯಿತು ಎಂದು

ಎಲ್ಲಾ ಏರ್ಪಾಟು ಮಾಡಿಕೊಂಡು ಬೀಗರನ್ನು ಎದುರುಗೊಳ್ಳುವುದಕ್ಕೆ ರೈಲ್ವೆ ಸ್ಟೇಷನ್ನಿಗೆ ಬಂದರು.

ನಾರಣಪ್ಪನವರ ಮನೆಯಲ್ಲಿ ಮದುವೆಗಳಿಗೆಲ್ಲಾ ಇವರೇ ಓಡಾಡೋರು—ಶೇಷಗಿರಿರಾಯರು, ಲೆಕ್ಕದಲ್ಲಿ ಅಪ್ರತಿಮರಾದ್ದರಿಂದ ಅವರೇ ಕಾಯಿಪಲ್ಯ ತರೋದಕ್ಕೆ ಮೊದಲುಗೊಂಡು ವಾಲಗದ ವರೆಗೆ ಏರ್ಪಾಟು ಮಾಡುವವರು. ತಿಪ್ಪಯ್ಯನವರು ಪುರೋಹಿತರು. ರಾಮಣ್ಣನವರು ಚಪ್ಪರ ಹಾಕಿಸೋದು; ಕುದುರೆ ಗಾಡಿ ಏರ್ಪಾಟು ಮಾಡೋದು; ಲಾಯರು ಗೋವಿಂದರಾಯರು ಲಗ್ನಪತ್ರಿಕೆಯ ಮುದ್ರಣ ಇತ್ಯಾದಿಗಳಿಗೆ ಅಧಿಕಾರಿಗಳು.

ರೈಲಿನಿಂದ ಇಳಿದೋರು ಆ ದಿನ ನಾಲ್ಕು ಜನ ಹೊಸ ಬೀಗರು, ಜೊತೆಗೆ ಇಬ್ಬರು ರೈತರು. ಇದನ್ನು ನೋಡಿ ಶೇಷಗಿರಿರಾಯರು ನಗುತ್ತಾ ಮಾತನಾಡಿದರು—'ನಮಗೆ ಸ್ವಲ್ಪ ಜನವಿರೋ ಬೀಗರನ್ನು ಕರೆದುಕೊಂಡು ಹೋಗಿ ಅಭ್ಯಾಸವಿಲ್ಲ. ಏನಾದರೂ ಕೊರತೆಯಿದ್ದರೆ, ಕ್ಷಮಿಸಬೇಕು.'

ಮೂರು ಮಂದಿ ಹಳೇ ಬೀಗರು ಸ್ಟೇಷನ್ನಿಗೆ ಬಂದಿದ್ದರು. ಅವರು ಹತ್ತಿರ ಬರುತ್ತಲೇ ಶೇಷಗಿರಿರಾಯರು, 'ರಾಯರೆ, ನಿಮ್ಮಲ್ಲಿ ಯಾರಾದರೂ ಇಬ್ಬರು ಸಂಜಪ್ಪನವರ ಕಡೆಗೆ ಸೇರಿಬಿಡಿರಿ. ಅವರಿಗೆ ಜನ ಇಲ್ಲ' ಎಂದರು.

'ನಾವೆಲ್ಲಾ ಅವರ ಕಡೇನೇ, ನಡೀರಿ, ನಾಳೆ ನೋಡಿ, ಸಂಜಪ್ಪನವರ ಕಡೆ ಎಷ್ಟಿರುತ್ತಾರೆ ಅಂತ!'

ಇವರು ಹೇಳಿದ್ದೇನೂ ಸುಳ್ಳಲ್ಲ. ಪ್ರತಿ ದಿನವೂ ಆ ಮದುವೆಯಲ್ಲಿ ಒಪ್ಪತ್ತಿಗೆ ಇನ್ನೂರು ಎಲೆ ಬೀಳುತಿತ್ತಾಯಿತ್ತು.

---

## ೬

ಮದುವೆಯೇನೋ ಚೆನ್ನಾಗಿಯೇ ನಡೆಯಿತು. 'ನಾಗೋಲಿ'ಯ ದಿನ ಸ್ವಲ್ಪ ಗುಸಗುಸ ಕೂಡ ಆಯಿತು. ಆದರೆ ಇದು ಸಂಜಪ್ಪನವರ ಕಡೆಯಿಂದಾಗಲಿಲ್ಲ. ಹಳೇ ಬೀಗರನ್ನು ತೃಪ್ತಿಗೊಳಿಸುವುದು ಹೊಸ ಬೀಗರನ್ನು ನೋಡಿಕೊಳ್ಳುವುದಕ್ಕಿಂತ ಬಹಳ ಕಷ್ಟವಾಯಿತು. ಖರ್ಚಿಗೇನೂ ಕಡಿಮೆ

ಯಾಗಲಿಲ್ಲ; ಓಡಾಟಕ್ಕೇನೂ ಕಡಿಮೆಯಿಲ್ಲ. ಮೇಲ್ವಿಚಾರಣೆಗೆ ಸಾಕಾದಷ್ಟು ಜನರಿದ್ದರೂ ಬೆಳಗಿನ ಊಟ ಎರಡು ಗಂಟೆ, ರಾತ್ರಿ ಊಟ ಹನ್ನೆರಡು ಗಂಟೆ. ಎಲ್ಲಾ ಒಟ್ಟು ಒಂದು ವಾರವಾಯಿತೆನ್ನಿ. ಮೂರನೆಯ ದಿನವೇ ಪ್ರಾರಂಭ ವಾಯಿತು ಆಸ್ಪತ್ರೆಗೆ ಸೀಸೆಗಳು ಹೋಗುವುದಕ್ಕೆ. ಕೊನೆಯ ದಿನವಂತೂ ಎಲ್ಲರ ಗಂಟಲೂ ಕಟ್ಟಿಬಿಟ್ಟು ಒಬ್ಬರ ಕಿವಿಯಲ್ಲಿ ಇನ್ನೊಬ್ಬರು ಕಿರಚಬೇಕಾಗಿ ಬಂತು.

ಶೀನಪ್ಪನ ಹೆಂಡತೀನ ಊರಿಗೆ ಕರೆದುಕೊಂಡು ಹೋದ ಶಾಸ್ತ್ರವೂ ಆಯಿತು. ವೈಶಾಖಮಾಸದಲ್ಲೇ ನಾರಣಪ್ಪನವರು ಅಳಿಯನನ್ನು ಮನೆಗೆ ಕರೆಸಿಕೊಂಡು ಅವನ ವಿದ್ಯಾಭ್ಯಾಸಕ್ಕೆ ಏರ್ಪಾಟು ಮಾಡಿದರು. ವಯಸ್ಸಾದ ಹುಡುಗ, ಸಣ್ಣಪುಟ್ಟ ತರಗತಿಗಳಿಗೆ ಹೇಗೆ ಸೇರಿಸೋದು ಎಂಬೋದೊಂದು ಪ್ರಶ್ನೆ ಬಂತು. ಅದನ್ನು ಶೇಷಗಿರಿರಾಯರು ನಿಗ್ರಹಿಸಿದರು. 'ಹುಡುಗ ಚೂಟಿಯಾಗಿದ್ದಾನೆ. ಇನ್ನೊಂದು ವರ್ಷದೊಳಗಾಗಿ ಅವನನ್ನು IV ಫಾರಂಗೆ ಸೇರಿಸೋ ಹಾಗೆ ಮಾಡಬಹುದು' ಆದರಂತೆಯೇ ಏರ್ಪಾಟಾಯಿತು.

ಜೇಷ್ಠಮಾಸದಲ್ಲಿ ಶೀನಪ್ಪ ಶೇಷಗಿರಿರಾಯರ ಮನೆಯಲ್ಲಿಯೇ ಇದ್ದ. ಓದೂ ಬಹಳ ಚೆನ್ನಾಗಿ ಸಾಗಿತು. ಆಗಾಗ ಸಂಜಪ್ಪನವರು ಮಾರನನ್ನು ಕಳಿಸಿಕೊಡುತ್ತಾಯಿದ್ದರು, ಶೀನಪ್ಪನ ಸಮಾಚಾರ ತಿಳಿದುಕೊಂಡು ಬರೋದಕ್ಕೆ. ಅವನಿಗಾದರೋ ಪಾಪ, ಶೀನಪ್ಪನಿಲ್ಲದೆ ಇದ್ದದ್ದು ಕಣ್ಣಿಲ್ಲದ ಹಾಗೆ ಆಗಿಬಿಟ್ಟಿತ್ತು. ಹೋಗೋವಾಗಲೆಲ್ಲಾ ಅವನು ಶೀನಪ್ಪನನ್ನು ಕೇಳುತ್ತಾಯಿದ್ದ, 'ಅಪ್ನೋರೇ, ಈ ಸಲ ಎಂಗಾಯ್ತುರಿ?' ಅವನ ಮನಸ್ಸಿನಲ್ಲಿ ತಿಂಗಳು ತಿಂಗಳಿಗೂ ಪ್ಯಾಸಾಗಿ, ಒಂದು ವರ್ಷದೊಳಗಾಗಿ ಶೀನಪ್ಪನಿಗೆ ಒಂದು ದೊಡ್ಡ ಕೆಲಸ ಸಿಕ್ಕಿಬಿಟ್ಟರೆ, ತಾನೂ ಅವರ ಸಂಗಡ ಬಂದಿರಬಹುದು ಎಂದು ಕುತೂಹಲ.

ವಯಸ್ಸಾದೋರಿಗೆ (ಅಂದರೆ ಹುಡುಗರಲ್ಲಿ) ಓದೋದರಲ್ಲಿ ಸ್ವಲ್ಪ ಕುತೂಹಲ ಹೆಚ್ಚು. ಆದರೆ ವಯಸ್ಸಾದ ಹುಡುಗರಲ್ಲಿ ಬಹಳ ಜನರಿಗೆ ತಿಳುಳು ತಲೆಯೊಳಗೆ ಸ್ವಲ್ಪ ಕಡಿಮೆಯೆಂದೇ ಹೇಳಬೇಕು. ಇದಕ್ಕೆ ಅನೇಕ ಕಾರಣಗಳೆಂಬೋಣ. ಆದರೆ ಸ್ವಲ್ಪ ಬುದ್ಧಿ ಅವರಿಗೆ ದೇವರು ಕೊಟ್ಟಿದ್ದರೆ ಸಾಕು; ಸುಲಭವಾಗಿ ತೇರ್ಗಡೆಯಾಗೋದು ಒಂದೇ ಅಲ್ಲ, ಮಿಕ್ಕ ವಿಚಾರ

ಗಳಲ್ಲಿಯೂ ಸ್ವಲ್ಪ ಚುರುಕಾಗಿಯೇ ಇರುತ್ತಾರೆ. ಶೀನಪ್ಪ ಈ ತೆರದವನು. ಸೇರಿದ ಒಂದು ತಿಂಗಳೊಳಗಾಗಿ ವಿದ್ಯಾರ್ಥಿಗಳಿಗೆಲ್ಲಾ ಬಹಳ ಬೇಕಾದವ ನಾದ. ಹುಡುಗರಿಗೆಲ್ಲಾ ಇವನ ಮೇಲೆ ಬಹಳ ವಿಶ್ವಾಸ. ಯಾಕೆಂದರೆ, ಇವನು ಯಾರ ಮೇಲೂ ಚಾಡಿ ಹೇಳುತ್ತಾ ಇರಲಿಲ್ಲ. ಅಲ್ಲದೆ ಚರಿತ್ರೆ ಪಾಠ ಹೇಳುವ ಉಪಾಧ್ಯಾಯರು ಇವನನ್ನು ಬೈದರು. ಅವರಿಗೆ ಗೊತ್ತಿಲ್ಲ ಹುಡುಗ ಬುದ್ಧಿವಂತ ಎಂತ. ಇದನ್ನು ಕೇಳಿದ ಒಬ್ಬ ಹುಡುಗ, ನರಸಿಂಗಪ್ಪ. ಅವನಿಗೆ ಬಹಳ ಕೋಪ ಬಂತು. ಅವನೂ ಸ್ವಲ್ಪ ಚುರುಕಾಗಿಯೇ ಮಾತ ನಾಡಿದ. ಇವರಿಬ್ಬರ ಮಾತಿನೊಳಗೆ ಶೀನಪ್ಪ ಸಿಕ್ಕಿ ಕಣ್ಣಲ್ಲಿ ನೀರು ಹಾಕಿಕೊಂಡ. ಇದು ಹುಡುಗರ ಮನಸ್ಸನ್ನೆಲ್ಲಾ ಅವನ ಕಡೆಗೆ ಎಳೆದು ಬಿಟ್ಟಿತು. ಇವನಿಗೂ ನರಸಿಂಗಪ್ಪನಿಗೂ ಬಹಳ ಸ್ನೇಹ ಬೆಳೆಯಿತು.

ನರಸಿಂಗಪ್ಪನೂ ಸ್ವಲ್ಪ ದೊಡ್ಡ ಹುಡುಗನೇ. ತಲೆಯ ಮೇಲೆ ಒಂದು ರುಮಾಲಿಟ್ಟುಬಿಟ್ಟರೆ ಅವನೂ ಮೇಷ್ಟ್ರು ಹಾಗೇ ಕಾಣುತ್ತಾಯಿದ್ದ. ಅವನಲ್ಲಿ ಒಂದು ದೊಡ್ಡ ಗುಣ. ತನಗೆ ತಿಳಿಯದೇ ಇದ್ದ ವಿಚಾರವನ್ನು ಅಲ್ಲೇ, ಕ್ಲಾಸಿನಲ್ಲೇ, ಆಗಲೇ ಉಪಾಧ್ಯಾಯರ ಮುಂದೆ ಹೇಳಿ, ಮುಂದಕ್ಕೆ ಪಾಠ ನಡೆಯದಂತೆ ಮಾಡಿಬಿಡುತ್ತಿದ್ದ. ಮೊದಲು ಮೊದಲು ಎಲ್ಲಾ ವಿಶದ ವಾಗಿ ಮತ್ತೊಮ್ಮೆ ಹೇಳುತ್ತಾಯಿದ್ದರು ಮೇಷ್ಟ್ರು. ಆದರೆ ಪರೀಕ್ಷೆಗೆ ಪಾಠ ಸಾಗಬೇಕಲ್ಲ. ಬಂತು ನರಸಿಂಗಪ್ಪನಿಗೂ ಉಪಾಧ್ಯಾಯರಿಗೂ ಟಗ್ ಆಫ್ ವಾರ್ (Tug-of-War). ಒಂದು ಸಲ ಕೋಪ ಒಂದು ವಿಜ್ಞಾನವನ್ನು ಹೇಳುವ ಉಪಾಧ್ಯಾಯರು ತರಗತಿ ಬಿಟ್ಟು ಆಚೆಗೆ ದಯಮಾಡಿಸಬೇಕೆಂದು ನರಸಿಂಗಪ್ಪನಿಗೆ ಹೇಳಿದರು. ನರಸಿಂಗಪ್ಪ ತನ್ನ ಸ್ಥಳದಲ್ಲೇ ಎದ್ದುನಿಂತ. 'ಸಹೋದರರೆ! ಬಂಧುಗಳೇ! ಮಿತ್ರರೆ! ಇಂತಹ ಅಪಮಾನದ ಮಾತು ಗಳನ್ನು ಕೇಳಿ ನೀವೆಲ್ಲರೂ ಸುಮ್ಮನಿರುವರಲ್ಲಾ! ನಾನಿಲ್ಲಿಗೇತಕ್ಕಾಗಿ ಬಂದಿರುವುದು? ಏತಕ್ಕಾಗಿ ಅವರಿರುವುದು?' ಇತ್ಯಾದಿಗಳನ್ನು ಮೊದಲು ಮಾಡಿದ. ಉಪಾಧ್ಯಾಯರಿಗೆ ಮತ್ತಷ್ಟು ರೇಗಿತು. ಜವಾನನ್ನು ಕರೆದು 'ಇವನನ್ನು ಆಚೆಗೆ ತಳ್ಳು' ಎಂದರು. ನರಸಿಂಗಪ್ಪ, ತಾನು ಕೂತಿದ್ದ ಬೆಂಚನ್ನು ಗಟ್ಟಿಯಾಗಿ ಹಿಡಿದುಕೊಂಡ. ಮಾಡೋದೇನು! ಇಬ್ಬರು ಜವಾನರು ಬಂದು ಎಳೆದರೂ ಸಗ್ಗಲಿಲ್ಲ; ಎಳೆದರೂ ಇಲ್ಲ, ಬೈದರೂ ಇಲ್ಲ,

ಯಾರಿಗೂ ಏನೂ ತೋಚಲಿಲ್ಲ. ಜವಾನರು ಕೈಬಿಟ್ಟು ನಿಂತರು. ನರಸಿಂಗಪ್ಪ ಸ್ಥಳ ಬಿಟ್ಟೆದ್ದು ಉಪಾಧ್ಯಾಯರಿಗೆ ಉದ್ದಕ್ಕೆ ನಮಸ್ಕಾರ ಮಾಡಿ 'ತಪ್ಪಾಯಿತು ನಮ್ಮಪ್ಪ, ಕೆನ್ನೇಗೆ ಹಾಕ್ಕೋತೇನೆ' ಎಂದ. ಉಪಾಧ್ಯಾಯರು ನಕ್ಕುಬಿಟ್ಟರು. ಮುಂದೆ ಪಾಠ ಸಾಗಿತು. ನರಸಿಂಗಪ್ಪ ಮೂರು ವರ್ಷ ಕಾಲ ಆ ಪಾಠಶಾಲೆಯೊಳಗಿದ್ದ. ಇನ್ನು ಮುನ್ನೂರು ವರ್ಷವಾದರೂ ಆ ಪಾಠಶಾಲೆ ಅವನನ್ನು ಮರೆಯುವ ಹಾಗಿಲ್ಲ. ಈಗ ಆತ ಮೇಷ್ಟ್ರಂತೆ. ಹೋಗಿ ನೋಡಬೇಕು ಅಲ್ಲಿನ ಪರಿಸ್ಥಿತಿ.

ಶೀನಪ್ಪ ನರಸಿಂಗಪ್ಪ ಇಬ್ಬರಿಗೂ ಸ್ನೇಹವು ಬೆಳೆಯಿತು. ಇಬ್ಬರೂ ಹಳ್ಳಿಯಿಂದ ಬಂದೋರು. ಇಬ್ಬರೂ ವಯಸ್ಸಾದೋರು. ಇಬ್ಬರೂ ಒಟ್ಟಿಗೆ ಓದುತ್ತಾ ಇದ್ದರು. ಇಬ್ಬರಿಗೂ ಮದುವೆಯಾಗಿತ್ತು. ಇಬ್ಬರೂ ಮಾವನ ಮನೆಯಲ್ಲಿದ್ದರು. ಇನ್ನೊಂದು ವಿಶೇಷ, ಇಬ್ಬರಿಗೂ ಕಪ್ಪು ಹೆಂಡತಿಯರು. ಹುಡುಗಿಯರ ಬಣ್ಣ ವಿಚಾರ ಮಾಡೋದು ಈಚೆಗೆ ಬಂದ ಹಾಗೆ ತೋರುತ್ತೆ. ಈಗ ಪಾಶ್ಚಿಮಾತ್ಯರ ಹಾವಳಿ ಹೆಚ್ಚಾಗಿ ಕೆಂಪು ಅಥವಾ ಬಿಳಿಯ ಬಣ್ಣಕ್ಕೆ ದೊಡ್ಡ ಸ್ಥಾನ ದೊರೆತಿದೆ. ಪೂರ್ವಕಾಲದಲ್ಲಾದರೋ ಅತ್ತೆಯರು ಕಪ್ಪು ಸೊಸೆಗಳನ್ನೇ ಮನೆಗೆ ತರುತ್ತಾ ಇದ್ದುದು. ರೂಪವತಿಯಾದ ಸೊಸೆ ಮಗನಿಗೆ ಶತ್ರು ಎಂತ ತಿಳಿದಿದ್ದರೊ ಏನೋ. ಅತ್ತೆ ಸೊಸೆ ವ್ಯಾಜ್ಯಕ್ಕೆ ಕಾರಣ ಅತ್ತೆಯೇ ಎಂತ ಸೊಸೆ, ಸೊಸೆಯೇ ಕಾರಣ ಎಂತ ಅತ್ತೆ ಹೇಳೋದುಂಟು. ನಿಜಸ್ಥಿತಿ ಸ್ವಲ್ಪ ನೋಡಬೇಕಾದ್ದೇ. ಹುಟ್ಟಿದಾಗಿನಿಂದ ಅತ್ತೆಯಾದವಳು ತನ್ನ ಮಗನನ್ನು ಪ್ರೀತಿಸುತ್ತಾ ಇರುತ್ತಾಳೆ. ತನ್ನ ಮಾತನ್ನೇ ಮಗನಾದವನು ಕೇಳುತ್ತಾ ಇರುತ್ತಾನೆ. ಮಕ್ಕಳಿಗೆ ತಾಯಿಯ ಮೇಲೆಯೇ ಹೆಚ್ಚು ಪ್ರೀತಿ. ಅದರೊಳಗಾಗಿ ಆಚೆ ತಿರಗುವ ತಂದೆಯಾದರೆ ತಾಯಿಯೇ ಸರ್ವಸ್ವ. ಹೀಗಿರೋವಾಗ ಮದುವೆಯಾಗುತ್ತೆ. ಬಹು ಸಂಭ್ರಮ, ಸೊಸೆ ಮನೆಗೆ ಬರುತಾಳೇ ಎಂತ. ಆಮೇಲೆ ಮಗ ಸ್ವಲ್ಪ ಹೆಂಡತಿಯ ಮಾತು ಕೇಳೋ ಹಾಗೆ ತೋರುತ್ತೆ. ಮಗನ ಪ್ರೇಮವೆಲ್ಲಾ ತಾಯಿಯಲ್ಲಿತ್ತು; ಈಗ ಅದಕ್ಕೆ ಭಾಗಿಯಾಗಿ ಮತ್ತೊಬ್ಬಳು ಬಂದಳು. ಸಕ್ಕರೆ ತಿಂದ ಮೇಲೆ ಕಾಫಿ ಕುಡಿದರೆ, ಆ ಕಾಫಿಗೆ ಎಷ್ಟು ಸಕ್ಕರೆ ಹಾಕಿದರೂ ಕಹಿಯೇ. ಹೀಗಾಗಿ ಮಗನಾದವನು ಎಷ್ಟು ಕೆಲಸ ಮಾಡಲಿ, ಏನು ಮಾಡಲಿ, ಪ್ರೀತಿ ಸ್ವಲ್ಪ ಆಕಡೆ ಹೋದ

ಹಾಗಿದೆ ಎಂಬೋ ಬುದ್ಧಿ ಹುಟ್ಟಿ, ಮಗನನ್ನು ಹೊಡೆಯುವಷಕ್ಕಾಗದೆ —ದೊಡ್ಡವನಾಗಿರುತ್ತಾನೆ!—ಸೊಸೆಯ ಮೇಲೆ ತಿರುಗುತ್ತೆ ಆಕ್ಕಸ. ಇದು ಯಾರ ತಪ್ಪು? ಸೊಸೆ ಕಪ್ಪಾದರೆ ಮಗ ಆ ಕಡೆ ಕೂಡ ನೋಡೋದಿಲ್ಲ ಎಂತ ಹೀಗೆ ಮಾಡುತ್ತಿದ್ದರೋ ಏನೋ!

ಶೀನಪ್ಪನ ವಿಚಾರದಲ್ಲಿ ಏನೋ ಒಂದು ಮದುವೆ ಎಂತ ಆದರೆ ಸಾಕು ಅಂದ ಹಾಗೆ ತೋರುತ್ತೆ ನಂಜಪ್ಪನವರು. ಹುಡುಗಿ ಕಪ್ಪಾಗಿದ್ದಳು. ಸ್ವಲ್ಪ ಹಲ್ಲು ಮುಂದಕ್ಕೆ ಬರೋಹಾಗಿತ್ತು. ಹತ್ತಿರ ನೋಡಿದೋರು ಸ್ವಲ್ಪ ಮೆಳ್ಳಗಣ್ಣು ಎಂತ ಹೇಳುತ್ತಾಯಿದ್ದರು. ಶೀನಪ್ಪ ಅಷ್ಟೇನು ಹತ್ತಿರ ನೋಡಿದ ಹಾಗಿಲ್ಲ. ಅವನ ದೃಷ್ಟಿಯೆಲ್ಲಾ ಓದಿನ ಮೇಲಿತ್ತು. ಎದುರು ಬದುರಿನಲ್ಲಿ ಕೂತು 'ಚನ್ನರಸ ಪನ್ನರಸ' ಹೇಳಿದ್ದರೂ ಅವನು ತನ್ನ ಹೆಂಡತಿಯನ್ನು ನೋಡಿದ ಹಾಗೇ ತೋರಲಿಲ್ಲ.

ಹತ್ತಿರ ನೋಡೋ ಕಾಲವೂ ಬಂತು. ಶೀನಪ್ಪನಿಗೆ VI ಫಾರಂಗೆ **ಪ್ರಮೋಷನ್** ಆದೊಡನೆಯೇ, ಹೆಂಡತಿ, ಸಾವಿತ್ರಿ, ರುತುಮತಿಯಾದಳು. ಹದಿನಾರು ದಿನಗಳಲ್ಲಿಯೇ ಪ್ರಸ್ಥವನ್ನೇರ್ಪಾಟು ಮಾಡಿಬಿಟ್ಟರು. ನಡೆದೂ ಹೋಯಿತು. ಪರೀಕ್ಷೆಯ ದಿನಗಳೂ ಬಂತು. ಪರೀಕ್ಷೆಗೆ ಕೂತದ್ದೂ ಆಯಿತು. ಪರೀಕ್ಷೆಯಲ್ಲಿ ತೇರ್ಗಡೆಯಾಗದಿದ್ದರೂ, ಸಾವಿತ್ರಿ ಒಂದು ಮಗುವನ್ನು ಆ ಹೊತ್ತಿಗೆ ಹೆತ್ತುಬಿಟ್ಟಳು. ತಿಪ್ಪಯ್ಯನವರು ಸಮಾಧಾನ ಹೇಳಿದರು. 'ಆ ಪರೀಕ್ಷೆ ಹೋದರೂ ಹೋಗಲಪ್ಪ, ಈ ಪರೀಕ್ಷೆ ಪ್ಯಾಸಾಗಿಬಿಟ್ಟಿದ್ದಿ! ಗಂಡುಮಗು, ನೋಡು!'

ಒಂದು ವಾರ ಸ್ವಲ್ಪ ಯೋಚನೆಯಾಗಿತ್ತು. ಆಮೇಲೆ ಶೀನಪ್ಪ ನಿರ್ಧರಿಸಿ ಬಿಟ್ಟ, ಯಾವುದಾದರೂ ಒಂದು ಕೆಲಸಕ್ಕೆ ಸೇರಿಕೊಂಡುಬಿಡೋದು ಎಂತ. ಎಲ್ಲರೂ ಬೇಡ ಅಂದರು. ಆದರೆ ಅವನು ಕೇಳಲಿಲ್ಲ; ಸೇರಿಯೇ ಬಿಟ್ಟ. ಮೊದಲು ತಿಂಗಳಿನ ಸಂಬಳ ಕೈಗೆ ಬಂತು.

* * * * * *

ರಾತ್ರಿ ಹತ್ತೂವರೆ. ಶೀನಪ್ಪ ಎಲೆಮಡಿಚಿ ಹಾಕಿಕೊಳ್ಳುತ್ತಾ ಇದ್ದಾನೆ. ಪಕ್ಕದಲ್ಲಿ ಸಾವಿತ್ರಿ ಕುಳಿತಿದ್ದಾಳೆ. ಅವಳೂ ಅರ್ಧರ್ಧ ಆಗಿಯುತ್ತಿ

ದ್ದಾಳೆ. ಏನೋ ಒಂದು ದೊಡ್ಡ ಪ್ರಸಂಗ ಒದಗಿದ ಹಾಗೆ ಕಾಣುತ್ತೆ, ಶೀನಪ್ಪನಿಗೆ.

'ಲೇ, ನಾವು ಬೇರೆ ಮನೆ ಮಾಡಿಕೊಂಡು ಹೋಗಿಬಿಡಬೇಕೆ.'

'ಯಾಕೆಂದರೆ? ಇಲ್ಲೇ ಇದ್ದರಾಯಿತು. ಇಷ್ಟು ಜನ ಇಲ್ಲವೆ! ನಮ್ಮಪ್ಪನಿಗೆ ನಮಗೆ ಹಾಕೋದು ಒಂದು ಕಷ್ಟವೆ?'

'ಹಾಗಲ್ಲ ಕಾಣೆ, ನೋಡು. ಎಂದಿದ್ದರೂ ನಾವು ಬೇರೆ ಸಂಸಾರ ಮಾಡಬೇಕು. ೨೫ ರೂಪಾಯಿನಲ್ಲಿ ಈಗ ಮೊದಲುಮಾಡಿದರೆ ನಮಗೆ ಸ್ವಲ್ಪ ತಿಳಿಯುತ್ತೆ ನೋಡು. ಇಲ್ಲಿ ಎಷ್ಟು ಜನ ಇದ್ದಾರೆ? ಒಪ್ಪೊತ್ತಿಗೆ ಮೂವತ್ತು ಎಲೆ ಬಿದ್ದರೆ, ಅವರಿಗೆ ತಾನೆ ಹೇಗೆ ಸುದಾರಿಸೋದಕ್ಕೆ ಆಗುತ್ತೆ!'

'ಅಲ್ಲ ಅಂದರೆ—ನಮ್ಮ ಸಾಕಿ ಗಂಡ ಇಲ್ಲವೆ! ಇನ್ನೂ ಓದುತ್ತಾ ಇಲ್ಲೇ ಇದ್ದಾರೆ.'

'ನಿಜ. ಅವರು ಇಂಜನಿಯರಿಂಗ್ ಪ್ಯಾಸ್ ಮಾಡುತ್ತಾರೆ. ಆಮೇಲೆ ಸಾವಿರಾರು ಸಂಪಾದಿಸುತ್ತಾರೆ. ಬೇಕಾದವರಿಗೆ ಬೇಕಾದ ಹಾಗೆ ಮಾಡೋ ದಕ್ಕೆ ಆಗ ಆಗುತ್ತೆ. ನಮಗಾದರೋ ನೋಡು, ಆಗಲೆ ರಾಮು ಹುಟ್ಟಿ ಬಿಟ್ಟ. ಇನ್ನು ಮುಂದೆ ನನಗೇನು ಹೆಚ್ಚು ಸಂಬಳ ಬರೋಹಾಗಿಲ್ಲ. ಸುಮ್ಮನೆ ಇಲ್ಲಿ ಕೂತಿರೋದಕ್ಕೆ ನನ್ನ ಕೈಲಾಗೊಲ್ಲ.'

'ಎಲ್ಲಾ ಇಲ್ಲೇ ಇರೋವಾಗ, ನಾವು ಮಟ್ಟಿಗೆ ಬೇರೆ ಮನೆ ಮಾಡಿ ದರೆ ಚೆನ್ನಾಗಿರುತ್ತೆಯೆ ಅಂದರೆ? ಮಾವನವರು ಏನಂತಾರೋ? ಹೇಗಾ ದರೂ ಆಗಲಿ, ನೀವು ಹೇಗಂದರೆ ನಾನು ಹಾಗೆಯೇ. ನಮಗೇನು ತಿಳಿಯುತ್ತೆ, ಹೆಂಗಸರಿಗೆ!'

'ಅಲ್ಲ, ಎಲ್ಲಾ ನೋಡು. ನಿನಗಿನ್ನೂ ಕಷ್ಟ ಎಂಬೋದು ಗೊತ್ತಿಲ್ಲ. ಮುಂದೆ ಕಷ್ಟಪಡಬೇಕಾಗುತ್ತೆ. ಸಂಸಾರ ಎಂಬೋದು ಕಷ್ಟ ಅಂತ ನಮ್ಮ ತಂದೆ ಆಗಾಗ ಹೇಳ್ತಾನೇ ಇದ್ದಾರೆ.'

'ಕಷ್ಟ ಎಂದರೆ ನೀವಿಲ್ಲವೆ! ನಿಮ್ಮ ಜೊತೆಯಲ್ಲಿದ್ದರೆ ಕಷ್ಟಗಿಷ್ಟ ಒಂದೂ ತಿಳಿಯೊಲ್ಲ ಅಂದರೆ. ಏನೋ, ಹಣ ಹೆಚ್ಚಾಗಿದ್ದರೆ ಒಡವೆ-ಗಿಡವೆ ಅಂತಾರೆ. ಇಲ್ಲದಿದ್ದರೆ ನಮಗೆ ಗಂಡನೇ ದೊಡ್ಡ ಒಡವೆ.'

'ಎಲೆ ಎಲೆ, ಯಾರು ಹೇಳಿಕೊಟ್ಟರೆ, ಈವಾತೆಲ್ಲ? ನಾನು ಸ್ಕೂಲಿಗೆ ಹೋಗಿದ್ದೇನೆ, ಓದಿದ್ದೇನೆ. ನನಗೇ ಕೇಳಿದರೆ ಬೆರಗಾಗುತ್ತಲ್ಲ!'

'ಎಲ್ಲಾ ಹೀಗೇ ಅಂದರೆ, ಮೊದಲು ಮೊದಲು.'

'ಮೊದಲು ಮೊದಲು' ಯಾಕೆ, 'ಯಾವಾಗಲೂ' ಎಂದು ಮನಸ್ಸಿನಲ್ಲಿ ಎಂದುಕೊಂಡರೂ ಶೀನಪ್ಪ ಬಾಯಲ್ಲಿ ಹೆಳಲಿಲ್ಲ. ಇವೆಲ್ಲಾ ಹೇಳಿದರೆ ಸ್ವಾರಸ್ಯವಿಲ್ಲ ಎಂಬೋದು ಶೀನಪ್ಪನಿಗೆ ಆಗಲೇ ಗೊತ್ತಾಗಿಬಿಟ್ಟಿತ್ತು.

'ಹಾಗಾದರೆ ನೀ ಕೇಳಿಬಿಡೆ ನಿಮ್ಮಪ್ಪನ್ನ.'

'ಸರಿ ಸರಿ, ನಾನು ಹೇಗೆ ಕೇಳಲಂದರೆ!

'ಇನ್ನಾರು ಕೇಳಬೇಕೆ? ನನ್ನ ಮನೆಯ ಯಜಮಾನಿ ನೀನು. ನಿನಗೆಲ್ಲಾ ಒಪ್ಪಿಸಿದ್ದೇನೆ.'

'ಒಳ್ಳೇ ಯಜಮಾನಿ! ಮೊದಲು ಮನೆ ಮಾಡಿ, ಆಮೇಲೆ ಯಜಮಾನಿಕೆ. ಇಂಥಾ ಯಜಮಾನಿಕೆ ಯಾರಿಗೆ ಯಾರು ಬೇಕಾದರೂ ಕೊಡಬಹುದು. ನೀವೇ ಕೇಳಿ.'

'ನಾನೇ ಕೇಳಬೇಕೆ? ಅವರೇನಂದುಕೋತಾರೋ! ಇದ್ದಕ್ಕಿದ್ದ ಹಾಗೆ ಕೇಳಿದರೆ ಮಾವನವರ ಮನಸ್ಸು ನೊಂದಿಬಿಟ್ಟಾತು. ಏನಾದರೂ ಒಂದು ಉಪಾಯ ಮಾಡಬೇಕು.'

'ಅಲ್ಲ ಅಂದರೆ, ರಾಮಣ್ಣನವರ ಕೈಲಿ ಹೇಳಿಸಿದರೆ?'

'ಸರಿ ಸರಿ, ಏನು ಬುದ್ಧಿ ನಿಂದು! ಹಾಗೇ ಮಾಡುತ್ತೇನೆ. ಆದರೆ ರಾಮಣ್ಣನವರು ಪ್ರಯೋಜನವಿಲ್ಲ.'

'ಗೋವಿಂದರಾಯರೋ?'

'ಅವರ ಕೈಗೆ ಈ ನಮ್ಮ ಕೇಸು ಕೊಟ್ಟರೆ, ನಮ್ಮನ್ನು ಮನೆಬಿಟ್ಟು ಆಚೆ ಹೋಗೋದಕ್ಕೆ ಆಗದೆ ಇರೋದಕ್ಕೆ ಎಷ್ಟು ಬೇಕೋ ಅಷ್ಟು ಮಾಡಿಬಿಡತಾರೆ ನೋಡು. ಅವರೂ ನಮಗೆ ಪ್ರಯೋಜನವಿಲ್ಲ.'

'ತಿಪ್ಪಯ್ಯನವರು?'

'ತಿಪ್ಪಯ್ಯನವರು ಬಹಳ ಗಟ್ಟಿಗರು, ಆದರೆ ಅವರಿಗೆ ಲೌಕಿಕ ತಿಳಿಯದು. ಮೊದಲು ಅವರನ್ನು ಒಪ್ಪಿಸೋದೇ ಕಷ್ಟ.'

'ಹಾಗಾದರೆ?'

' ನಮಗೆ ಶೇಷಗಿರಿರಾಯರೇ ಗತಿ. ಅವರಿಂದಲೇ ಈ ಕಾರ್ಯ ಸಾಧಿಸ ಬೇಕು. ಅವರನ್ನು ನಾಳೆ ಬೆಳಗ್ಗೆ ನೋಡುತ್ತೇನೆ. '

ಒಂದು ವಾರ ಕಳೆಯಿತು. ಪ್ರತಿನಿತ್ಯವೂ ಶೀನಪ್ಪ ಶೇಷಗಿರಿರಾಯರ ಮನೆಗೆ ಹೋಗುತ್ತಾ ಬರುತ್ತಾ ಇದ್ದ. ಶೇಷಗಿರಿರಾಯರಿಗೇನೋ ಸ್ವಲ್ಪ ಅನುಮಾನ ತಟ್ಟಿತು.

' ಏನು ಶೀನೂ, ಪ್ರತಿನಿತ್ಯ ಒರುತ್ತಾ ಇದ್ದಿ. ಏನು ಸಮಾಚಾರ ? '

' ಏನೂ ಇಲ್ಲ ಮೇಷ್ಟ್ರು, ಸುಮ್ಮನೆ. ನನಗೇನೂ ಕೆಲಸವಿಲ್ಲ. ಆಫೀಸು ಹೊತ್ತಿಗೆ ಊಟಕ್ಕೆ ಹೋದರೆ ಸರಿ, ಅಷ್ಟೆ. '

' ಇಲ್ಲವಯ್ಯಾ, ನಿನ್ನ ಮುಖ ನೋಡಿದರೆ ನನಗೆ ತಿಳಿಯದೆ ? ನಾನೂ ಸ್ವಲ್ಪ ಮಾನಸಶಾಸ್ತ್ರ ಓದಿದ್ದೇನೆ. ನಮಗೆ ಅದಿಲ್ಲದೆ ಶಿಕ್ಷಣೆಯೇ ಇಲ್ಲಪ್ಪ. ಏನೋ ಇದೆ, ಏನು ಹೇಳು ? '

' ಏನೂ ಇಲ್ಲ, ಮೇಷ್ಟ್ರು. ಎಷ್ಟು ದಿನ ಮಾವನ ಮನೆಯಲ್ಲಿರೋದು ಅಂತ ? '

'ಪಹಪ್ಪ ! ಶಿಷ್ಯ ಅಂದರೆ ಶಿಷ್ಯ ಕಾಣಯ್ಯ ನೀನು ! ನೀನು ಹೋಳೋ ದೇನೋ ನ್ಯಾಯವೇ. ಆದರೆ ಇದು ಸ್ವಲ್ಪ ಹುಷಾರಾಗಿ ಮಾಡಬೇಕಾದ ಕೆಲಸ. ಧುಡುಂಮನೆ ಹೋಗಿ ಕೇಳಬೇಡ. '

' ಅದಕ್ಕೇ ನಿಮ್ಮ ಹತ್ತಿರ ಬಂದಿದ್ದು ಮೇಷ್ಟ್ರು. ನಾನು ಕೇಳುವು ದಕ್ಕಿಂತ ನೀವು. . . .'

' ಅಯ್ಯೋ ಮಹಾರಾಯ ! ನನ್ನ ಕುತ್ತಿಗೆಗೆ ತಂದಿಟ್ಟೆಯಲ್ಲಪ್ಪ ! ನಿನ್ನ ಮನೆ ವಿಚಾರ ನೀನೇ ಹೇಳಪ್ಪ. '

' ಇಲ್ಲ ಮೇಷ್ಟ್ರು, ನಿಮ್ಮಿಂದಲೇ ಆಗಬೇಕು ಈ ಕೆಲಸ.

' ಸಾತಿ ಏನಂತಾಳೋ ? '

' ಅವಳೇನಂತಾಳೆ ! '

' ಕೇಳಿದೆಯೋ ಇಲ್ಲವೋ ? '

' ಕೇಳೋದೇನು ಮೇಷ್ಟ್ರು ! '

' ಇಲ್ಲ, ಹೇಳು. ಕೇಳಿದ್ದೀಯೋ ಇಲ್ಲವೋ ? ಅವಳದಕ್ಕೆ ಒಪ್ಪಿದ್ದಾ ಳೆಯೆ ಹೇಗೆ ? '

' ಉಂ '

' ಒಳ್ಳೇ ಪಿತೂರಿ ಕಾಣ್ಸೋ, ಇದನ್ನ ನನ್ನ ತಲೇಮೇಲೆ ಕೂಡಿಸ ಬೇಕು ಅಂತ ಬಂದಿದ್ದೀಯೋ ? '

' ಮೇಷ್ಟ್ರೇ, ನೀವೇ ಹೀಗಂದರೆ ಹ್ಯಾಗೆ ? '

' ಹ್ಯಾಗೇನು, ಮಾಡೋಣ ಹೋಗು. ದುಡುಕುತನ ಬೇಡ. ನಾನು ಅದಕ್ಕೆಲ್ಲಾ ಮಾಡ್ತೇನೆ. ಅಲ್ಲೋ ಶೀನಿ, ಮನ್ನೆ ಏನೋ ಸಾತೀಗೆ ತಂದು ಕೊಟ್ಟೆಯಲ್ಲಂತೋ ? '

' ಏನಿಲ್ಲರಿ.... '

' ಹೇಳೋ, ಕೇಳೋಣ. '

' ಏನೂ ಇಲ್ಲರಿ, ಒಂದು ಸಣ್ಣ ಲಕ್ಷ್ಮೀ ವಿಗ್ರಹ. '

' ಪೂಜೇಗೇನೋ ! ಸರಿ ಸರಿ. ನೀನೇನೂ ಯೋಚನೆ ಮಾಡಬೇಡ. ದೇವರ ದಯವೊಂದಿದ್ದರೆ, ಬೇಕಾದ್ದು ಆಗುತ್ತೆ. '

' ನಿಮ್ಮ ದಯ ಮೇಷ್ಟ್ರೇ. ನಿಮ್ಮ ಮೂಲಕ ದೇವರ ಕೃಪೆ. '

' ನಿನ್ನಂಥಾವರ ಮೇಲೆ ದೇವರು ಕೃಪೆ ಮಾಡದೆ ಮತ್ತಾರ ಮೇಲೆ ಮಾಡಬೇಕಪ್ಪ ! '

' ಎಲ್ಲಾ ನಿಮ್ಮ ವಿಶ್ವಾಸ ಮೇಷ್ಟ್ರೇ. ಯಾರು ಹೇಳಿದರೀ ವಿಚಾರ ನಿಮಗೆ ? '

' ಯಾವ ವಿಚಾರ ? '

' ನಾನು ತಂದುಕೊಟ್ಟಿದ್ದು. '

' ಓ ಅದೇ, ಇನ್ನಾರು..ರಾಮೂ. '

ಶೇಷಗಿರಿರಾಯರು ಯಾವ ವಿಚಾರ ತಗೊಂಡರೂ ಅದನ್ನು ಪೂರ್ತಿ ಯಾಗಿ ಸರಿಯಾಗಿಯೇ ಮಾಡುತ್ತಿದ್ದರು. ಶೀನಪ್ಪನ ವಿಚಾರ ಮನಸ್ಸಿಗೆ ತೆಗೆದುಕೊಂಡರು. ದಿನಕ್ರಮೇಣ ಮಾತು ಮುಂದರಿಯಿತು. ಹತ್ತು ಹದಿನೈದು ದಿನಗಳೊಳಗಾಗಿ ಎಲ್ಲಾ ಏರ್ಪಾಟು ಮಾಡಿಬಿಟ್ಟರು. ಯಾರಿಗೂ ಯಾವ ವಿಧವಾದ ಮನಸ್ತಾಪವೂ ಇಲ್ಲದ ಹಾಗೆ ಸಾತೀ ಶೀನಪ್ಪ ಇಬ್ಬರೂ ಮಗುವನ್ನು ಕರೆದುಕೊಂಡು ಹೋಗಿ ಬೇರೇ ಮನೆಯಲ್ಲಿ ನಿಂತರು. ಶೀನಪ್ಪ

ಕಷ್ಟಪಟ್ಟು ದುಡಿದುಕೊಂಡು ಬಂದು ಹಾಕಿದರೂ ಸುತ್ತುಮುತ್ತಲಿದ್ದ ಮನೆಯವರೆಲ್ಲರಿಗೂ ಅದು ಸಾತೀ ಮನೆಯೇ ಆಯಿತು.

---

೭

ಸಂಸಾರದಲ್ಲಿ ಸುಖ-ದುಃಖಗಳು ಸಂಸಾರ ಮಾಡೋರ ಮೇಲಿದೆ. ಹಣವಿಲ್ಲದೆ ಯಾವುದರಲ್ಲೂ ಸುಖವಿಲ್ಲ ಎಂಬೋರಿದ್ದಾರೆ. ಎಷ್ಟು ಹಣ ಇದ್ದರೂ ಸುಖವಿಲ್ಲದೆ ಇರೋರೂ ಇದ್ದಾರೆ. ಬಡವರ ಮನೆ ಭಾಗ್ಯ, ಭಾಗ್ಯವಂತರ ಬಡತನ, ಇವನ್ನು ಚೆನ್ನಾಗಿ ತಿಳಿಯಬೇಕಾದರೆ ಅವರವರ ಸಂಸಾರದಲ್ಲಿ ಸುಖ ಎಷ್ಟಿದೆ ಎಂಬೋದನ್ನು ನೋಡಿದರೆ ಸಾಕು.

ಬಡತನದ ಸಂಸಾರ ಸಾತೀದು. ಆದರೇನು ? ತನ್ನ ಗಂಡನೇ ಚಿನ್ನ; ರಾಮೂನೇ ಒಡವೆ. ಆನಂದಪರವಶಳಾಗಿ ದಿನವೆಲ್ಲಾ ದುಡಿಯುತ್ತಲೇ ಸುಖವಾಗಿದ್ದಳು. ಪ್ರೇಮಮಯವಾದ ಪ್ರಪಂಚದಲ್ಲಿ ಭುವಿಯು ದಿವಿಯಂತೆ ಕಾಣುತ್ತೆ. ಈ ಪ್ರಪಂಚವನ್ನು ಹುಡುಕಿಕೊಂಡು ಹೋದರೆ ಸಿಕ್ಕುವ ಹಾಗಿಲ್ಲ. ಅದೇ ಲಭಿಸಬೇಕು; ಎಂದರೆ, ಪೂರ್ವಜನ್ಮದ ಸುಕೃತ ಎನ್ನಿ.

ಆಗಾಗ ಶೇಷಗಿರಿರಾಯರು ಮನೆಗೆ ಬರುತ್ತಿದ್ದರು. ಒಂದು ಸಲ ಬಂದು ಕೂಗಿದರು, 'ರಾಮೂ, ಇದ್ದಾರೇನೋ ನಿಮ್ಮಪ್ಪ ಮನೇಲಿ ?' ಶೀನಪ್ಪ ಒಳಗಿನಿಂದ ಬಂದ. ರಾಯರನ್ನು ಒಳಗೆ ಕರೆದುಕೊಂಡು ಹೋಗಿ ಕೂಡಿಸಿದ. ಅದೂ ಇದೂ ಮಾತಾಡುತ್ತಾ ಇದ್ದರು. ರಾಮೂಗೆ ಆಗ ಎರಡು ವರ್ಷ. ಒಳಗಿನಿಂದ ರಾಮೂ ಬಂದ: 'ಅಪ್ಪ, .. ಅಮ್ಮ .. ಕೋಕೋ' ಎಂದ. ಶೀನಪ್ಪ ಒಳಕ್ಕೆ ಹೋಗಿ ಬಟ್ಟಲಿನಲ್ಲಿ ಕಾಫಿ ತೆಗೆದುಕೊಂಡು ಬಂದು, 'ಮೇಷ್ಟ್ರು, ಸ್ವಲ್ಪ ಕಾಫಿ' ಎಂದ. ಮೇಷ್ಟ್ರು ಕಾಫಿ ಕುಡಿಯುತ್ತಾ ಇದ್ದ ಹಾಗೇ ರಾಮೂ ಅಳೋದಕ್ಕೆ ಮೊದಲುಮಾಡಿದ. ತಾಯಿಯ ಸಮಾಧಾನ ಪ್ರಯೋಜನಕ್ಕೆ ಬರಲಿಲ್ಲ. 'ಯಾಕೇ ?' ಎಂತ ಶೀನಪ್ಪ ಒಳಕ್ಕೆ ಹೊರಟ. ಏನೇನೋ ಮಾಡಿದ. ಮಗೂ ಅಳೋದು ಬಿಡಲಿಲ್ಲ. ಮೇಷ್ಟ್ರು ಎದ್ದು ಒಳಕ್ಕೆ ಹೋದರು. ಇವರನ್ನು ನೋಡಿ ರಾಮು

ಮತ್ತಷ್ಟು ಅಳೋದಕ್ಕೆ ಮೊದಲುಮಾಡಿದ. ಹತ್ತಿರ ಹೋಗಿ ಕೂತು ಕೊಂಡು ' ಏನಮ್ಮ. .ಯಾಕಪ್ಪ ? ' ಅಂದರು ಮೇಷ್ಟ್ರು. ರಾಮೂ ಹಟಾ ತ್ತಾಗಿ ಮೇಷ್ಟ್ರು ಕನ್ನಡಕಕ್ಕೆ ಕೈಹಾಕಿ ತನ್ನ ವಶಮಾಡಿಕೊಂಡ. ಅಳೋ ದನ್ನ ಬಿಟ್ಟ.

' ಬೇಡ, ಕೊಟ್ಟುಬಿಡು ರಾಮೂ ' ಎಂತ ಸಾತಿ ಅಂದಳು. ' ಕೊಟ್ಟು ಬಿಡು ' ಎಂತ ಶೀನಪ್ಪ ಹೇಳಿದ. ಮೇಷ್ಟ್ರು ಸುಮ್ಮನಿದ್ದರು. ಇನ್ನೊಂದು ಸಲ ಶೀನಪ್ಪ ಗದರಿಸಿದ, ' ಕೊಟ್ಟು ಬಿಡೋ ಹುಚ್ಚುಮುಂಡೆ. ' ರಾಮೂ ಕೈಲಿದ್ದ ಕನ್ನಡಕವನ್ನು ಎತ್ತಿ ಬಿಸಾಡಿದ. ರುಬ್ಬೋಗುಂಡಿನ ಮೇಲೆ ಅದು ಬಿದ್ದು ಸಾವಿರಾರು ಚೂರಿ ಹಾಕಿತು.

ಬರುತ್ತ ಬರುತ್ತ ರಾಮೂನ ಹಟ ಕಡಿಮೆಯಾಗಲಿಲ್ಲ. ಶ್ರೀನಿವಾಸ ಪುರದಲ್ಲಿ ಒಂದು ಮದುವೆಗೆ ಎಲ್ಲರೂ ಹೋಗಿದ್ದರು. ಸಾತೀ ಚಿಕ್ಕಪ್ಪನ ಭಾವ ರಾಮೂನ ಪಕ್ಕದಲ್ಲಿ ಊಟಕ್ಕೆ ಕೂತಿದ್ದರು. ಎಲ್ಲಾ ಊಟ ಮಾಡಿ ದ್ದಾಯಿತು. ಕೊನೆಗೆ ರಾಮೂ ಮೊಸರು ಬೇಕು ಎಂದ. ಗಟ್ಟಿಯಾಗಿ ಗದರಿಸಿದರೆ ಸುಮ್ಮನಾಗಬಹುದೆಂದು ಪಕ್ಕದಲ್ಲಿ ಕೂತಿದ್ದ ಆ ಭಾವನವರು ' ಇದು ಯಾರ ಮನೆ ಅಂತಿದ್ದೀ ! ಸುಮ್ಮನೆ ತಿನ್ನುತ್ತೀಯೋ ಇಲ್ಲಾ ಕೋದಂಡಕ್ಕೆ ಹಾಕಲೋ ? ' ಎಂದರು. ರಾಮು ಮೇಲಕ್ಕೆದ್ದ. ಎಲೆ ಒಳ ಗಿದ್ದ ಅನ್ನ ತೆಗೆದು ಆತನ ತಲೆಯ ಮೇಲಿಟ್ಟ. ಕೂಟ-ಗೀಟೆಲ್ಲಾ ಕಣ್ಣು ಗಳಲ್ಲಿ ಬಿತ್ತು. ಏನು ಮಾಡೋದಕ್ಕಾಗುತ್ತೆ ! ಹೊಡೆದರೆ ಪ್ರಯೋಜನ ವೇನು ? ' ' ಏನೇ, ಸಾತೀ, ನಿನ್ನ ಮಗ ಒಳ್ಳೆ ಹಿಡಂಬಿಕಾಸುರ ಕಾಣೆ ! ಎನ್ನುತ್ತ ಭಾವನವರು ಒಚ್ಚಲಮನೆಯೊಳಕ್ಕೆ ಹೋದರು.

ಹುಡುಗರನ್ನು ತರಬೇತು ಮಾಡುವುದರಲ್ಲಿದೆ ಎಂತಾರೆ ತಿಳಿದವರು ತಿಳಿಯದವರು ಇಬ್ಬರೂ. ಒರಿಯ ತರಬೇತಿನಿಂದ ಏನು ಉಪಯೋಗ ? ಹುಟ್ಟುತಾ ಬರುವ ಕೆಲವು ಗುಣಗಳನ್ನು ತರಬೇತಿನಿಂದ ಹೆಚ್ಚಾಗಿ ಉಪ ಯೋಗಕ್ಕೆ ಒರುವ ಹಾಗೆ ಮಾಡಬಹುದಾಗಲಿ ಇಲ್ಲದೆಯಿದ್ದ ಗುಣಗಳನ್ನು ಹುಟ್ಟಿಸುವುದಕ್ಕಾಗಲಿ ಅಥವಾ ಇರೋ ಹುಟ್ಟುಗುಣ ಅಳಿಸುವುದಕ್ಕಾಗಲಿ ತರಬೇತಿಗೆ ಸಾಮರ್ಥ್ಯವೆಲ್ಲಿಂದ ಬರಬೇಕು ! ಈ ವಿಚಾರದಲ್ಲಿ ಅನೇಕ ಪ್ರಯೋಗಗಳು ಬೇರೆ ಬೇರೆ ದೇಶಗಳಲ್ಲಿ ನಡೆಯುತ್ತಿವೆ ಎಂದು ಕೇಳಿದ್ದೇವೆ.

ಇದುವರೆವಿಗೂ ಯಾರೇ ಆಗಲಿ ಹಟಮಾಡಿ ಹುಡುಗನ್ನ ತರಬೇತಿನಿಂದ ಸರಿ ಮಾಡಿದ ವಿಚಾರ ನಮಗೆ ತಿಳಿದುಬಂದಿಲ್ಲ. ಎಳೇ ಮಗುವಾಗಿದ್ದಾಗ ಯಾವುದು ಹಟ ಎನ್ನಿಸಿಕೊಳ್ಳುತ್ತೊ, ಅದೇ ಮಗು ದೊಡ್ಡದಾಗಿ ಮನುಷ್ಯ ನಾದಾಗ ಛಲ ಎನ್ನಿಸಿಕೊಳ್ಳುತ್ತೆ.

ಪಾಠಶಾಲೆ ಹತ್ತಿರದಲ್ಲೇ ಇತ್ತು. ಅಲ್ಲಿ ಬೇಕಾದವರು, ತಿಳಿದವರು, ಬಂಧುಗಳು, ಇವರೇ ಮೇಷ್ಟ್ರು. ಇದರಿಂದ ರಾಮೂನ ವಿದ್ಯಾಭ್ಯಾಸಂಗಕ್ಕೆ ಬಹಳ ಅನುಕೂಲವೇ ಆಯಿತು. ಹುಡುಗರು ಓಡಾಡದೆ ಸುಮ್ಮನೆ ಒಂದೇ ತರಗತಿಯಲ್ಲಿ ಒಂದು ಗಂಟೆಯ ಕಾಲ ಕೂತಿದ್ದರೆ ಒಳ್ಳೆಯದಲ್ಲವೆಂದು ಉಪಾಧ್ಯಾಯರು ಆಗಾಗ ಅವರನ್ನು, 'ನೀರು ತೆಗೆದುಕೊಂಡು ಬಾ' 'ಆ ಕ್ಲಾಸಿಗೆ ಹೋಗಿ ರಿಜಿಷ್ಟರು ಹೇಳಿ ತೆಗೆದುಕೊಂಡು ಬಾ' ಹೀಗೆ ಏನಾದರೂ ಒಂದು ನೆಪವಿಟ್ಟು ಓಡಾಡಿಸುವ ವಾಡಿಕೆ. ಹುಡುಗರಿಗೂ ಇದೊಂದು ವಿಧವಾದ ಸಂತೋಷದ ಕೆಲಸ. 'ಓದು' ಎನ್ನದೆ ಉಪಾಧ್ಯಾಯರು ಯಾವ ಕೆಲಸ ಹೇಳಿದರೂ ಹುಡುಗ ಅದನ್ನು ಬಹಳ ಸಂತೋಷದಿಂದ ಮಾಡುತ್ತಾನೆ. ಒಂದು ಪುಸ್ತಕ ಹೊತ್ತುಕೊಂಡು ನಾಲ್ಕು ಮೈಲಿಯಾದರೂ ತಿರುಗಲು ತಯಾರಾಗಿರುತ್ತಾರೇ ಹೊರತು, ಹುಡುಗರು ನಾಲ್ಕು ಪೇಜು ಒಂದು ಕಡೆ ಕೂತುಕೊಂಡು ಓದೋದಕ್ಕಿಲ್ಲ. ಓದುಬರಹ ಬಿಟ್ಟು, ಪುಸ್ತಕಗಳನ್ನು ಏನು ಮಾಡು ಎಂದು ಹೇಳಿದರೂ ವಿದ್ಯಾರ್ಥಿಗಳು ಮಾಡುವುದಕ್ಕೆ ಸಿದ್ಧ. ವಿದ್ಯಾರ್ಥಿಗಳೆಲ್ಲಾ ಹೀಗೆಯೇ ಇದ್ದರೆ ಸ್ಕೂಲುಗಳನ್ನು ಯಾವಾಗಲೋ ಮುಚ್ಚಿಬಿಟ್ಟು, ವಿದ್ಯಾಭ್ಯಾಸದ ಸರ್ವಾಧಿಕಾರಿಗಳಿಗೆ ಒಂದು ಸಲಾಂ ಹಾಕಿಬಿಡುತ್ತಿದ್ದರು ಸರ್ಕಾರದವರು. ಓದೋರನ್ನು ಕಂಡರೆ ಹುಡುಗರಿಗೆ ಬಹಳ ಪ್ರೀತಿ. ಅವರಿಗೆ 'ಪುಸ್ತಕದ ಹುಳ' ಗಳೆಂದು ನಾಮಕರಣ ಮಾಡುವುದು ವಾಡಿಕೆ. ಎಷ್ಟೋ ಸಲ ಈ ಪುಸ್ತಕದ ಹುಳಗಳು ಘಟಸರ್ಪಗಳಾಗಿ ಹೀಗೆ ತಮ್ಮನ್ನು ಕರೆಯುತ್ತಿದ್ದ ಹುಳಗಳ ಮೇಲೆ ತಮ್ಮ ಹೆಡೆಯನ್ನಲ್ಲಾಡಿಸುತ್ತ ನಿಂತಿರುವುದೂ ಉಂಟು.

ಎಲ್ಲಾ ಉಪಾಧ್ಯಾಯರಿಗೂ ರಾಮೂನ ಮೇಲೆ ಬಹಳ ಇಷ್ಟ. ಇದಕ್ಕಾಗಿಯೇ ಮುಖ್ಯೋಪಾಧ್ಯಾಯರಿಗೆ ಸ್ವಲ್ಪ ಅಸಮಾಧಾನ. ಆದರೆ ರಾಮೂ ಸ್ಕೂಲು ಬಿಟ್ಟ ಮೇಲೆ ಈ ಅಸಮಾಧಾನ ಮಾಯವಾಯಿತು.

ರಾಮೂನಲ್ಲಿ ಒಂದು ಗುಣವಿತ್ತು; ಇದ್ದದ್ದನ್ನ ಇದ್ದ ಹಾಗೆ ಹೇಳೋದು. ಅದಕ್ಕೇ ಏನಾದರೂ ಒಂದು ವಿಚಾರದಲ್ಲಿ ನಿಜಸ್ಥಿತಿ ಹೊರಗೆ ಬೀಳಬೇಕಾದರೆ ರಾಮೂನಿಂದಲೇ. ಮುಖ್ಯೋಪಾಧ್ಯಾಯರು ಯಾವಾಗಲೂ ರಾಮೂ ನನ್ನೇ ಕರೆಸುತ್ತಾಯಿದ್ದರು.

ಪಾಠಶಾಲೆಯ ಎದುರಿನಲ್ಲಿ ಒಂದು ಕವಾಡಗರ ಮನೆ. ಅಲ್ಲಿ ನಾಲ್ಕಾರು ಎಮ್ಮೆಗಳು, ಎರಡು ಮೂರು ಹಸುಗಳು. ಆ ಹಸುಗಳ ಸಮಾನ ಆ ಊರಿನಲ್ಲೇ ಇಲ್ಲವೆಂದು ಹೇಳಬೇಕು. ಕವಾಡಿಗ ಅಷ್ಟು ಮೇವು ಹಾಕುತ್ತಿದ್ದನೋ ಇಲ್ಲವೋ ದೇವರಿಗೇ ಗೊತ್ತು. ಆದರೆ ಹಸು ಒಡಬಡಕಲಾಗಿ ಬಂದರೂ ಒಂದು ತಿಂಗಳು ಎಂಬೋ ಹೊತ್ತಿಗೆ ಮೈ ತುಂಬಿಕೊಂಡು ಚೆನ್ನಾಗಿ ಆಗಿಬಿಡೋದೇ. ನಮ್ಮಣ್ಣ—ಅವರು ದೊಡ್ಡ ಹರಿಕತೆ ಮಾಡುತ್ತಾರೆ—ಹೇಳುತ್ತಾರೆ, ಅವನ ಕೈಲಿ ಕಾಮಧೇನು ರೇಖೆ ಇರಬೇಕು ಅಂತ. ಅವನಲ್ಲಿ ಹಸು ಎಮ್ಮೆ ಇವುಗಳನ್ನು ನೋಡಿಕೊಳ್ಳುವು ದಕ್ಕೆ ಇಬ್ಬರಿದ್ದರು. ಒಬ್ಬನಿಗೆ ವಯಸ್ಸು ಸುಮಾರು ಹದಿನೈದು ಇವನ ತಮ್ಮನಿಗೆ ರಾಮುನ ವಯಸ್ಸು. ದೊಡ್ಡೋನು ಗಿಡ್ಡ; ಅವನ ತಮ್ಮನ ಹೆಸರು ಹೋತ. ಗಿಡ್ಡ ಏನೋ ಮಾಡುತ್ತಾಯಿದ್ದ. ಬರುತ್ತ ಬರುತ್ತ ಚೆನ್ನಾಗಿ ಬಲವಂತನಾದ. ಅವನಿಗೆ ಹಸಿವು ಎಂಬ ಮಾತೇ ನಾನು ಕೇಳಿರಲಿಲ್ಲ. ಆದರೆ ಹೋತನ ವಿಚಾರ ಹಾಗಲ್ಲ. ಅವನು ಬರುತ್ತ ಬರುತ್ತ ಸೊರಗಿ ಹೋಗಿ ಮೂರು ಹೊತ್ತೂ ಹಸಿವು ಎಂದು ಬಾಯಿಬಿಡುತ್ತಿದ್ದ. ಹೇಗೋ ರಾಮೂಗೂ ಇವನಿಗೂ ಗಂಟುಬಿತ್ತು.

ಮೊದಲು ಮೊದಲು ಬೀದಿಯಲ್ಲಿ ಇಬ್ಬರೂ ಆಡುತ್ತಿದ್ದರು. ಆಮೇಲೆ ಪಾಠಶಾಲೆ ಬಿಡೋಹೊತ್ತಿಗೆ ಹೊರ ಹೋಗಿ ಕಾದಿದ್ದು ರಾಮೂನ ಪುಸ್ತಕ ಗಳನ್ನು ಹೊತ್ತುಕೊಂಡು ಬಂದು ಮನೆಯ ಮುಂದೆ ರಾಮೂನ ಕೈಗೆ ಕೊಡುತ್ತಿದ್ದ. ಆಮೇಲಾಮೇಲೆ ಬೀದಿಯ ಬಾಗಿಲವರೆಗೂ ತರುತ್ತಿದ್ದ. ಕೊನೆಗೆ ಪುಸ್ತಕಗಳನ್ನು ಹೊತ್ತುಕೊಂಡು ಒಳಕ್ಕೇ ಬಂದುಬಿಟ್ಟ. ಸಾವಿ ತ್ರಮ್ಮನಿಗೆ ಇದು ಸರಿಬೀಳಲಿಲ್ಲ. ನಾಲ್ಕಾರು ಸಲ ರಾಮೂನ ಗದರಿಸಿದಳು. ಹೋತನನ್ನು ಬೈದಳು. ರಾಮೂ ಹಟ ಹಿಡಿದು ಅಳುತ್ತಾಯಿದ್ದ. ಹೋತ ಬೀದಿಯ ಬಾಗಿಲನ್ನು ಬಿಟ್ಟು ಕದಲದೆ ಅವನೂ ಅಳುತ್ತಾ ನಿಂತಿರುತ್ತಿದ್ದ.

ಬೆಳಿಗ್ಗೆ ರಾಮೂ ಸರಿಯಾಗಿ ಊಟಮಾಡುತ್ತಿದ್ದ; ರಾತ್ರಿ ಅವನಿಗೆ ಏನೋ ಆಗಿಹೋಗುತ್ತಿತ್ತು. ಅನ್ನ ಹಾಕಿದ್ದೆಲ್ಲಾ ಬಿಸಾಡಿ ಬಿಡುತ್ತಿದ್ದ ಒಂದೊಂದು ಸಲ ಇನ್ನೂ ಹೆಚ್ಚಾಗಿ ಹಾಕು ಎಂಬೋದು, ಸ್ವಲ್ಪ ತಿಂದ ಹಾಗೆ ಮಾಡೋದು, ಮಿಕ್ಕಿದ್ದೆಲ್ಲಾ ಬಿಸಾಡಿಬಿಡೋದು. ತಾಯಿ ಬೈದು ಬಿಟ್ಟಾಳು ಎಂತ ತನ್ನ ತಟ್ಟೆ ತಾನೇ ತೆಗೆದುಕೊಂಡು ಹೋಗಿ ಆಚೆ ಹಾಕಿ ಬಿಡೋದು. ಸಾವಿತ್ರಮ್ಮನಿಗೆ ಇದು ಕಂಡು ಬಹಳ ಸಂತೋಷ. ತನಗೆ ಸ್ವಲ್ಪವಾದರೂ ಅನುಕೂಲ ಮಾಡಬೇಕು ಎನ್ನೋ ಬುದ್ಧಿ ಅವನಿಗಿದೆ ಯಲ್ಲಾ ಎಂತ. ಶೀನಪ್ಪನಿಗಿದು ಸರಿಹೋಗುತ್ತಿರಲಿಲ್ಲ. ರಾಮೂ ಆದರೋ ಹಟವಾದಿ.

ನನ್ನನ್ನೂ ಒಂವಂತದಿಂದ ಊಟಕ್ಕೆ ಕರೆದುಕೊಂಡು ಹೋಗಿದ್ದರು ಆ ದಿನ ರಾತ್ರಿ. ಎಲ್ಲಾ ಬಡಿಸಿದರು. ರಾಮೂ ಊಟ ಮಾಡಿದ. 'ಇನ್ನೂ ಹಾಕು ಎಂದ. ಅಷ್ಟಮಟ್ಟಿಗೆ ತಿಂದರೆ ಸಾಕು ಎಂದು ಹಾಕಿದಳು ಸಾತಿ. 'ಏನೋಮ್ಮ! ನನಗೆ ತೊಳಸಿಕೊಂಡು ಬರುತ್ತೆ!' ಎಂದ ರಾಮು. ಸಾತಿ 'ಅಪ್ಪ, ಎಲ್ಲಾರಿಗೂ ತೊಂದರೆಯಾದೀತು, ಮೊದಲು ಏಳು' ಎಂದಳು. ತಟ್ಟೆ ತೆಗೆದುಕೊಂಡು ಬೀದಿಯ ಬಾಗಿಲಿನ ಕಡೆ ಹೊರಟ ರಾಮು. ನನ್ನ ಊಟವೂ ಆಗಿತ್ತು. ನಾನೂ ಎದ್ದು ಅವನ ಹಿಂದೆ ಹೋದೆ. ಬೀದಿಯ ಬಾಗ ಲಿಗೆ ಹೋಗುವ ಹೊತ್ತಿಗೆ ಇವನ ಮಾತು ಕೇಳಿಸಿತು.

'ತಿನ್ನೋ, ಯಾರೂ ಬರೋಲ್ಲ. ಪರವಾಯಿಲ್ಲ.'

'ರಾಮಣ್ಣ, ನೋಡಿದ್ರೆ ಕೊಲ್ಲತಾರೋ!'

ಈಚೆಗೆ ಬಂದು ನೋಡಿದೆ. ಹೋತ ಕಲ್ಲಿನ ಮೇಲಿದ್ದ ಅನ್ನವನ್ನು ನುಂಗುತ್ತಾಯಿದ್ದ. 'ಲೇ!' ಎಂದೆ. ರಾಮೂ ಹತ್ತಿರಕ್ಕೆ ಬಂದು, 'ನೋಡಪ್ಪ, ಅವನಿಗೆ ಬೆಳಗಿನಿಂದ ಅನ್ನ ಇಲ್ಲ. ರಾತ್ರಿ ನಾನು ಹಾಕೋದೇ ಅನ್ನ, ಹೊಡೀಬ್ಯಾಡ' ಎಂದ. ಸುಮ್ಮನಾದೆ. ಕೈತೊಳದುಕೊಂಡು ಒಳಗೆ ಬಂದೆ. ಶೀನಪ್ಪನಿಗೆ ತಿಳಿಯದ ಹಾಗೆ ಸಾತೀಗೆ ಈ ಸಮಾಚಾರ ಹೇಳಿದೆ; 'ಬೈಬೇಡಮ್ಮ, ನಾನು ಹೇಳಿದೆ ಎಂತ ಹೇಳಬೇಡ' ಎಂದೆ. ಆಕೆ ಅಂದಳು— 'ನಾನ್ಯಾಕೆ ಬೈಲಪ್ಪ. ಅವನ ಪಾಲು ಅನ್ನದಲ್ಲಿ ಅವನು ಆ ಮುಗೂಗಿಡ ತಾನಲ್ಲ. ದೇವರು ಎಲ್ಲಾದರೂ ಚೆನ್ನಾಗಿಡಲಪ್ಪ.'

ನಂಜಪ್ಪನವರಿಗೆ ಮಗ ಸರ್ಕಾರದ ನೌಕರಿ ಸೇರಿದ್ದು ಮೊದಲು ಮೊದಲು ಸರಿಹೋಗಲಿಲ್ಲ. ಆದರೆ ನಾಲ್ಕು ವರ್ಷಗಳಾದ ಮೇಲೆ ಮಗನಿಗೆ ಐವತ್ತು ರೂಪಾಯಿ ಸಂಬಳವಾದ ಕೂಡಲೆ ಅವರ ಮನಸ್ಸಿಗೆ ಸ್ವಲ್ಪ ನೆಮ್ಮದಿ ಯಾದಂತೆ ತೋರುತ್ತೆ. ಆಗಾಗ ಮಗುವನ್ನು ನೋಡುವುದಕ್ಕೆ ಬರುತ್ತಿದ್ದರು. ಹಳ್ಳಿಯಿಂದ ಬಂದರೆ ಬರಿಯ ಕೈಯಲ್ಲಿ ಬರೋದುಂಟೆ? ಏನಾದರೂ ತರೋದು. ರಾಮೂಗೆ ಎರಡರ ಮೇಲೆ ಬಹಳ ವಿಶ್ವಾಸ, ನೆಲೆಗಡಲೆ ಮತ್ತು ಬೆಲ್ಲ. ತಾತ ಹಳ್ಳಿಯಿಂದ ಬಂದ ಅಂದರೆ ಇವೆರಡೂ ಅವನ ಮುಂದೆ ಬಿದ್ದೇ ಬಿಡಬೇಕು. ಸಿಕ್ಕಿದ ಹಾಗೆ ತಿಂಬೋದು; ಆಮೇಲೆ ವಾಂತಿ ಮಾಡಿಕೊಂಡು ಕೂತುಕೊಳ್ಳೋದು. ಮನೆಯಲ್ಲಿ ಒಂದೇ ಮಗು. ಅದೂ ಹಟವಾದಿ. ಏನು ಮಾಡೋದಕ್ಕಾಗುತ್ತೆ, ತಾತನ ಎದುರಿನಲ್ಲಿ ಮಗುವಿನ ಮೇಲೆ ಒಂದು ಪೆಟ್ಟು ಬೀಳೋದಕ್ಕುಂಟೆ!

ಪ್ರತಿಯೊಂದು ಹಬ್ಬಕ್ಕೂ ರಾಮೂಗೆ ಏನಾದರೂ ಒಂದು ಆಗಲೇ ಬೇಕು. ತಾತಂದಿರು ಇವನನ್ನು ಕರೆದುಕೊಂಡು ಹೋಗಿ ಅಂಗಿಯಾಗಲಿ, ಷರಟಾಗಲಿ, ಹೊಲಿಸಲೇಬೇಕು ಒಂದು ದೀಪಾವಳಿ ಬಂದುಬಿಟ್ಟರಂತೂ, ಪೇಟೆಯೊಳಗಿರೋ ಪಟಾಕಿಗಳೆಲ್ಲಾ ರಾಮೂನ ಪಾಲೇ. ಸ್ವಲ್ಪ ಹೆಚ್ಚು ಕಡಿಮೆ ಸರಿವಯಸ್ಸಿನವರು ನಾವು. ಆದಕ್ಕೆ ರಾಮೂನ ಜೊತೆಯಲ್ಲಿ ನಾನೂ ಹೋಗೋದು. ನಂಜಪ್ಪನವರು ಅವನನ್ನು ಕೇಳಿದರೆ 'ಇದು ಬೇಕೇನೋ, ಈ ಮತ್ತಾಪು?' ನಾನು ಮೆಲ್ಲನೆ ಅವನನ್ನು ಜಿಗುಟಿ 'ಉಂ' ಎನ್ನಿಸೋದು. ಹೀಗೊಂದು ಸಲ ಇಪ್ಪತ್ತೈದು ಚೇಳುಬಾಣ ಮನೆಗೆ ತಂದುಬಿಟ್ಟೆವು. ಸಾತಿ ಅದನ್ನು ನೋಡಿ 'ಏನೋ ರಾಮೂ, ಇದನ್ಯಾಕೆ ತಂದೆಯೋ!' ಎಂದಳು. 'ಅಮ್ಮ, ಚೇಳುಬಾಣ ಬಿಟ್ಟರೆ ಒಳ್ಳೆ ಧೈರ್ಯ ಬರುತ್ತಂತೆ ಕಾಣೆ. ಅದಕ್ಕೆ; ಇವನಂದ, ನಾನು ತಂದೆ.' ಸಾತಿ ನನ್ನ ಕಡೆ ನೋಡಿದಳು. ಬೈದಿದ್ದರೆ ನಾನು ಜವಾಬು ಕೊಡುತ್ತಿದ್ದೆ. ಆ ನೋಟ ನನ್ನನ್ನು ಚಾಟಿಯಿಂದ ಹೊಡೆದದ್ದಕ್ಕಿಂತ ಹೆಚ್ಚಾಯಿತು. ನಾನು ತಲೆ ತಗ್ಗಿಸಿಕೊಂಡು ಸುಮ್ಮನೆ ನಿಂತೆ.

ಅವತ್ತು ಯಾವಾಗ ಸಾಯಂಕಾಲವಾಗುತ್ತೋ ಎಂದು ಕಾದಿದ್ದೆವು. ಬೆಳಕಿದ್ದಾಗ ಹಚ್ಚಿದರೆ ಚೇಳುಬಾಣ ಚೆನ್ನಾಗಿ ಕಾಣೊಲ್ಲ. ಆದಕ್ಕೆ ಕತ್ತಲು

ಆದರೇನೇ ಒಳ್ಳೇದು. ಬಹಳ ಕತ್ತಲಾಗೋವರಿವಿಗೂ ಕಾಯುವಷ್ಟು ತಾಳ್ಮೆ ನಮ್ಮಲ್ಲಿರಲಿಲ್ಲ. ಸಂಜೆಯಾಯಿತು. ಚೇಳುಬಾಣದ ಬುಟ್ಟಿ ರಾಮೂ ತಂದ. ಅದರೊಳಗೆ ಒಳ್ಳೆಯದನ್ನು ಆರಿಸಿದೆವು. ಸಣ್ಣಗೆ ಉದ್ದವಾಗಿದ್ದರೆ ಬಹಳ ಒಳ್ಳೆಯದು; ದೊಡ್ಡದಾಗಿ ಗಿಡ್ಡದಾಗಿದ್ದರೆ ಪ್ರಯೋಜನವಿಲ್ಲ. ಸಣ್ಣದಾಗಿ ಉದ್ದವಾಗಿರುವವನ್ನು ತೆಗೆದುಕೊಂಡು ಎಂಟು ದಿಕ್ಕುಗಳಿಗೂ ಎಂಟಿಟ್ಟೆವು. ಒಂದೊಂದು ದಿಕ್ಕಿಗೆ ಒಂದೊಂದು ಹೋದರೆ ಒಂದು ದೊಡ್ಡ ಕಮಲ ಮಾಡಿದ ಹಾಗಾಗುತ್ತೆ ಎಂಬೋ ಉದ್ದೇಶ ನಮ್ಮದು. ಎಂಟನ್ನೂ ಒಂದೇ ಸಲ ಹಚ್ಚಬೇಕಲ್ಲ! ಅದಕ್ಕೆ ಒಂದು ಮತಾಪನ್ನು ಹಚ್ಚಿಸಿದೆವು. ನಾನೂ ರಾಮೂ ಇಬ್ಬರೂ ಒಬ್ಬರ ಪಕ್ಕದಲ್ಲಿ ಒಬ್ಬರು ನಿಂತುಕೊಂಡು ಆ ಉರಿಯುತ್ತಿದ್ದ ಮತಾಪನ್ನು ಆ ಎಂಟು ಬಾಣಗಳಿಗೂ ಸರಿಯಾಗಿ ಉರಿ ತಗಲುವಂತೆ ಮಧ್ಯಪ್ರಾಂತ್ಯದಲ್ಲಿಟ್ಟೆವು. ನಮ್ಮ ದೃಷ್ಟಿಯೆಲ್ಲಾ ಮತಾಪಿನ ಮೇಲೆ. ಬುಸ್ಸೆಂತು. ಒಂದು ನಿಮಿಷದೊಳಗಾಗಿ ಸುತ್ತಮುತ್ತಲಿದ್ದವರು 'ಅಯ್ಯೋ, ಅಯ್ಯೋ!' ಎಂದರು. ಚೇಳುಬಾಣಗಳು ನಮ್ಮನ್ನು ಸುತ್ತಿಕೊಂಡುಬಿಟ್ಟವು. ರಾಮೂನ ಜರತಾರಿ ಪಂಚೆ ಸುಟ್ಟುಹೋಯಿತು ತೊಡೆಗೆ ಸ್ವಲ್ಪ ಶಾಖವು ತಟ್ಟಿತು. ನನಗೆ ಒಂದು ಚೇಳುಬಾಣ ಎಡಗಾಲಿನಿಂದ ಮೇಲಕ್ಕೆ ಹರಿದು ಬಟ್ಟೆಯನ್ನು ಸುಟ್ಟಿದ್ದಲ್ಲದೆ ಚರ್ಮವನ್ನೂ ಸುಟ್ಟಿತು. ಈ ಗಲಭೆಯಲ್ಲಿ ನಮ್ಮ ತಾಯಿ ಈಚೆಗೆ ಬಂದು, ಒಂದು ಕೊಡ ತಣ್ಣೀರನ್ನು ತೆಗೆದುಕೊಂಡು ಬಂದು ನನ್ನ ತಲೆಯ ಮೇಲೆ ಸುರಿದುಬಿಟ್ಟಳು. ಈ ಅಭಿಷೇಕವಾದ ಮೇಲೆ ರಾತ್ರಿ ನನಗೆ ಸಹಸ್ರನಾಮಾರ್ಚನೆಯೂ ಆಯಿತು.

---

೮

ಯಾರೋ ವೈಸರಾಯಿ ಬಂದರು. ಅವರ ಹೆಸರು ನನಗೆ ಈಗ ಚೆನ್ನಾಗಿ ಜ್ಞಾಪಕವಿಲ್ಲ. ಆಗ ಎಲ್ಲೆಲ್ಲಿಯೂ ಅಲಂಕಾರಗಳು. ಅವುಗಳನ್ನು ನೋಡೋದಕ್ಕೂ ವೈಸರಾಯಿಗಳನ್ನು ಭೆಟ್ಟಿಯಾಗಲಿಕ್ಕೂ,ನಮ್ಮನ್ನು ಕರೆದುಕೊಂಡು ಹೋಗಿದ್ದರು. ನಮಗಾದರೂ ಇದು ಒಂದೂರಿಂದ ಮತ್ತೊಂದೂರಿಗೆ ನಡೆದುಕೊಂಡು ಹೋದ ಹಾಗೇ. ಎಲ್ಲಿಗೋ ಇಂಗ್ಲೆಂಡಿಗೋ ಅಮೇರಿಕಾ

ದೇಶಕ್ಕೋ ಹೋದ ಹಾಗೇ ! ನಮಗೇನೋ ಉಪಾಧ್ಯಾಯರೆಲ್ಲಾ ಹೇಳಿ ಬಿಟ್ಟಿದ್ದರು, ಮೈಸರಾಯರು ನಿಮ್ಮನ್ನು ನೋಡುತ್ತಾರೆ, ನೀವು ಅವರಿಗೆ 'ಸಲಾಂ' ಮಾಡಬೇಕು ಎಂತ. ನನಗೇನೋ ಮನಸ್ಸಿನಲ್ಲಿ ದೊಡ್ಡ ಸಂಶಯ; ಇಷ್ಟು ಜನ ಹುಡುಗರು ಹೋಗುತ್ತಾರಲ್ಲ, ಎಲ್ಲಾರನ್ನೂ ಒಟ್ಟಿಗೆ ಹೇಗೆ ನೋಡುತಾರೆ ಅವರು ತಾನೆ ಎಂತ.

ನಮ್ಮ ಗುಂಪನ್ನು ಕರೆದುಕೊಂಡು ಹೋಗಿ ಎಲ್ಲೋ ನಿಲ್ಲಿಸಿದ್ದರು. ನಾನು ರಾಮೂ ಇಬ್ಬರೂ ಹಿಡಿದಿದ್ದೆವು ಪಾಠಶಾಲೆಯ ಬಾವುಟ. ಅದರ ಮೇಲೆ ಸುನೇರಿಯಲ್ಲಿ ಬರೆದಿದ್ದರು ನಮ್ಮ ಪಾಠಶಾಲೆಯ ಹೆಸರನ್ನು. ಪಕ್ಕದಲ್ಲೇ ಸಣ್ಣ ಹುಡುಗಿಯರು ಗುಂಪು ಗುಂಪಾಗಿ ನಿಂತಿದ್ದರು. ತರತರದ ಸೀರೆ ಪಾವುಡಗಳು; ಕಪ್ಪು ಕೆಂಪು ಊದು ಬಣ್ಣದ ಮುಖಗಳು. ಬೆಳಿ ಬಿಸಲಿಗೆ ಬಿಡಲಾರದ ಕಣ್ಣುಗಳು. ಎಂದೂ ಇಷ್ಟು ದೂರ ನಡೆಯದೆ ತಪ್ಪು ತಪ್ಪು ಹೆಜ್ಜೆಗಳನ್ನಿಟ್ಟುಕೊಂಡು ಬಂದವರು. ಒಬ್ಬರ ಕೈ ಒಬ್ಬರು ಹಿಡಿದು ಕೊಂಡು ಸುತ್ತಲೂ ನೋಡುತ್ತಾ ನಿಂತೆವು. 'ಬಂದರು, ಬಂದರು!' ಎಂದರು. ಎಲ್ಲರೂ ಚಟುನ್ಮನೆ ನಿಂತೆವು. ಯಾರೋ ಕೆಂಪು ಸಿಪಾಯಿಗಳು ಬಂದರು. ನಾಲ್ಕಾರು ಮೋಟಾರು ಗಾಡಿಗಳು ಬಂದವು. 'ಅವರೇ, ಅವರೇ!' ಎಂದರು. ಎಲ್ಲರೂ ಸಲಾಂ ಮಾಡಿದರು. ನಮ್ಮಿಬ್ಬರ ಕೈಲಿ ಬಾವುಟವಿತ್ತು. ಇಬ್ಬರೂ ಸ್ವಲ್ಪ ಮೇಲಕ್ಕೆತ್ತಿದೆವು. ಆ ಮೋಟಾರಿನಲ್ಲಿ ಮೂವರಿದ್ದರು. ಒಬ್ಬೊಬ್ಬರೂ ಒಬ್ಬೊಬ್ಬರನ್ನು ಮೈಸರಾಯಿ ಎಂದು ತಿಳಿದು ಕೊಂಡೆವು. ಬರುತ್ತ ದಾರಿಯಲ್ಲಿ ನಮ್ಮ ಮೇಷ್ಟ್ರರನ್ನು ಕೇಳಿದರೆ, ಅವರು 'ಮೂವರೂ ಅಲ್ಲ' ಅಂದುಬಿಟ್ಟರು. ಹಾಗಾದರೆ ಮೈಸರಾಯಿ ಎಲ್ಲಿದ್ದರು ?

೧ನೆಯ ಮೇಷ್ಟ್ರು:—ಹಿಂದಿನ ಗಾಡಿಯೊಳಗೆ ಒಬ್ಬರೇ ಕೂತಿದ್ದರು ನೋಡು, ಬಿಳೀ ಟೋಪಿ ಹಾಕ್ಕೊಂಡು.

೨ನೆಯ ಮೇಷ್ಟ್ರು:—ಅವರಲ್ಲ! ಆ ಗಾಡೀಗೂ ಮೂವರು ಕೂತಿದ್ದ ಗಾಡಿಗೂ ಮಧ್ಯ ಒಂದು ಹೋಯಿತು ನೋಡಿ, ಅದರಲ್ಲಿ ಮುಂದುಗಡೆ, ಭಂಗಾರದ ಸರಪಣಿಗಳನ್ನು ಹಾಕಿಕೊಂಡಿದ್ದವ ಕೂತಿದ್ದನಲ್ಲ ಅದು!

೩ನೆಯ ಮೇಷ್ಟ್ರು:—ಛೆ, ಛೆ, ಕುದುರೆ ಸವಾರರಾಗುತ್ತ ಅವರ

ಹಿಂದೆ ಬಂತು ನೋಡು, ಆ ಗಾಡಿಯಲ್ಲಿದ್ದರು. ಅವರ ಫೋಟೋ ನೋಡಿರ ಲಿಲ್ಲವೆ? ಮನ್ನೇ ತಾನೇ ಬಂದಿತ್ತು.

ಹೀಗೆ ಒಬ್ಬೊಬ್ಬರು ಒಂದೊಂದನ್ನು ಹೇಳುತ್ತಾಯಿದ್ದರು. ನಮ ಗೇನೋ, ಯಾರೋ ಬಂದಿದ್ದರು. ಅವರು ವೈಸರಾಯಿಯಂತೆ, ಇಷ್ಟು ಗೊತ್ತಾಯಿತಾಗಲಿ, ಅವರು ಹೇಗಿದ್ದರು, ಎಲ್ಲಿದ್ದರು ಎಂಬೋ ವಿಚಾರ ತಿಳಿಯಲಿಲ್ಲ.

ಎಲ್ಲರೂ ಮನೆ ಕಡೆಗೆ ತಿರುಗಿದೆವು. ಆಗ ನಾನು ತಲೆಯ ಮೇಲೆ ಕೈಯಿಟ್ಟುಕೊಂಡೆ. ನನ್ನ ಟೋಪಿ ಮಾಯವಾಗಿತ್ತು. 'ಅಯ್ಯೋ, ಇನ್ನೇನು ಗತಿ!' ಎಂದಂದುಕೊಂಡೆ. ರಾಮೂ ಕೇಳಿದ 'ಏನೋ, ಯಾಕೆ?'

'ನನ್ನ ಟೋಪಿ ಹೋಗಿಬಿಟ್ಟಿತು. ಇನ್ನು ಮನೇಲಿ ಆಗುತ್ತೆ ನನಗೆ ಪೂಜೆ!'

'ಹೊಸಾ ಟೋಪಿಯಲ್ಲೋ!'

'ಅದೇ ನೋಡೋ ರಾಮು. ನಮ್ಮಪ್ಪ ನನ್ನ ಕೊಂದೇ ಹಾಕಿ ಬಿಡುತ್ತಾನೆ ಮನೇಲಿ ಮುದುಕಿ ಹೇಳಿದಳು ಹಾಕ್ಕೊಂಡು ಹೋಗಬೇಡ ಅಂತ ನಾನು ಕೇಳಲಿಲ್ಲ. ಹಾಕ್ಕೊಂಡೇ ಬಂದೆ!'

ನನ್ನ ಕಣ್ಣಿನಲ್ಲಿ ನೀರು ಬಂತು. ಇದನ್ನು ರಾಮು ನೋಡಿದ. 'ಇರಲೊ. ಇಗೋ ನನ್ನ ಟೋಪಿ ನೋಡು. ಇದೂ ಅದರ ಹಾಗೇ ಇದೆ. ಇದನ್ನ ನೀನು ತಲೇ ಮೇಲಿಟ್ಟುಕೊಂಡು ಹೋಗಿಬಿಡು. ಸಂದು ಹೋಯಿತು ಅಂಬಿಡುತ್ತೇನೆ ನಮ್ಮನೇಲಿ ಏನೂ ಅಂಬೋದಿಲ್ಲ.'

'ಬೇಡೋ ರಾಮು, ಆದದ್ದಾಗಲಿ!'

'ತಗೋತಿಯೋ ಇಲ್ಲೋ? ತಗೊಳ್ಳದೆಯಿದ್ದರೆ ನಿನ್ನ ಜೊತೇಲಿ ಮಾತು ಕೂಡ ಆಡೊಲ್ಲ ನೋಡು.'

ನಾನು ಏನು ಹೇಳಿದರೂ ಕೇಳಲಿಲ್ಲ. ಟೋಪಿಯನ್ನು ತೆಗೆದು ನನ್ನ ತಲೆಯ ಮೇಲಿಟ್ಟುಬಿಟ್ಟ. ನನಗೆ ಒಂದು ಮಾದರಿಯಾಯಿತು. ಅದನ್ನು ಹೇಳೋದಕ್ಕೆ ಬಾರದು. ಮನೆಗೆ ಸೇರಿದೆವು. ನಾನು ಮೆಲ್ಲನೆ ಒಳಕ್ಕೆ ಹೋಗಿ ನನ್ನ ಅಂಗಿ ಟೋಪಿ ಒಳಗಿಟ್ಟು ರಾಮೂನ ನೋಡೋಕೆ ಅವರ ಮನೆಗೆ ಹೋದೆ. ಅವನು ಒಂದು ಮೂಲೇಲಿ ಕೂತಿದ್ದ. ಅತ್ತಹಾಗಿತ್ತು

ಕಣ್ಣು ಕೆಂಪಗಾಗಿತ್ತು. ಅವನ ತಾಯಿ ನನ್ನನ್ನು ನೋಡಿ ಅಂದಳು— 'ನೀನೇನು ಕಳಕೊಂಡೆಯೋ?' ನನ್ನ ಪಂಚಪ್ರಾಣಗಳೇ ಹಾರಿ ಹೋದ ಹಾಗಾಯಿತು. 'ನೋಡೋ ಇವನು! ಅವರು ಎರಡೂ ಕಾಲು ರೂಪಾಯಿ ಕೊಟ್ಟು ಮನ್ನೇ ತಾನೇ ಚಂದ್ಕು ಟೋಪಿ ತಕ್ಕೊಟ್ಟಿದ್ದರೆ ಕಳಕೊಂಡು ಬಂದುಬಿಟ್ಟಿದ್ದಾನೆ. ಅವರೇ ಮನೆಯೊಳಗಿದ್ದರು ಇವನು ಬಂದಾಗ. ಟೋಪಿ ಕಳಕೊಂಡಿದ್ದು ನೋಡಿ ಒಂದು ಹಾಕಿದರು ಕೆನ್ನೇಗೆ.'

ಹತ್ತಿರ ಹೋಗಿ ನೋಡಿದೆ. ಬಲಗೆನ್ನೆಯ ಮೇಲೆ ನಾಲ್ಕು ಬರೆಗಳಿತ್ತು. ಶೀನಪ್ಪ ಎಡಗೈಯಲ್ಲಿ ಹೊಡೆದಿದ್ದ, ಆದರೂ ಸಾಕಾದಷ್ಟು ಚುರುಕು ಮುಟ್ಟಿತ್ತು. ನಿಜಸ್ಥಿತಿ ಹೇಳೋಣ ಎಂತ ಬಾಯಿಬಿಟ್ಟೆ. ರಾಮೂ ಮೆಲ್ಲನೆ, 'ಸುಮ್ಮನಿರೋ' ಎಂದ. ನನ್ನ ಅವಸ್ಥೆ ಬಟ್ಟೆ ಒಗೆದು ಹಿಂಡಿದ ಹಾಗಾಯಿತು. ಕಣ್ಣುಗಳಲ್ಲಿ ಫಳಫಳ ನೀರು ಕಿತ್ತುಕೊಂಡಿತು. ಇದನ್ನು ನೋಡುತ್ತಿದ್ದ ಸಾತಿ 'ಬಾಮ್ಮ, ಇನ್ನುಮೇಲೆ ಜೋಪಾನ ಮಾಡಮ್ಮ' ಎಂತ ರಾಮೂನ ತಬ್ಬಿಕೊಂಡು, 'ಸುಮ್ಮನಿರೊ ಅಳಬೇಡ' ಎಂತ ನನ್ನ ತಲೆ ಸವರಿದಳು.

ಅದೇ ಮೊದಲು ಎಂತ ತೋರುತ್ತೆ ನನಗೂ ರಾಮೂಗೂ ಒಂದು ವಿಧವಾದ ಸ್ನೇಹ ಬೆಳೆಯೋದಕ್ಕೆ. ಅವನಿಗೇನಾದರೂ ತೊಂದರೆಯಾದರೆ ನನಗೆ ಕಷ್ಟ ಒಂದದ್ದಕ್ಕಿಂತ ಹೆಚ್ಚೆ. ವಯಸ್ಸಾಗುತ್ತ ಆಗುತ್ತ ಸಾಮಾನ್ಯವಾಗಿ ಹೊಟ್ಟೇಕಿಚ್ಚೇ ಹೆಚ್ಚಾಗೋದು. ಮೇಷ್ಟ್ರು ಯಾರಿಗಾದರೂ ನಂಬರು (ಇದನ್ನು ಗುಣ ಎಂಬೋದೂ ಉಂಟು) ಹೆಚ್ಚು ಹಾಕಿದರೆ ಅವನನ್ನು ಕಂಡರೆ ಹೊಟ್ಟೆ ಉರಿಯೋದು ಬಹಳ ಜನಕ್ಕುಂಟು. ಆದರೆ ರಾಮೂನ ವಿಚಾರದಲ್ಲಿ ನನಗೆ ಹಾಗಿರಲಿಲ್ಲ. ಅವನಿಗೆ ಹೆಚ್ಚಾಗಿ ಬಂದರೆ ನನಗೆ ಬಂದದ್ದಕ್ಕಿಂತ ಹೆಚ್ಚೇ. ಅವನು ಸುಖವಾಗಿದ್ದರೆ ನನಗೆ ಇಮ್ಮಡಿ ಸುಖ. ಅವನು ನನ್ನ ಜೊತೆಯಲ್ಲಿದ್ದರೇನೆ ನನಗೆ ಚೈತನ್ಯ ಪ್ರಾಣಗಳಿರೋದು. ಹೀಗಾಗಿ, ಎಲ್ಲಿಗೆ ಹೋಗಲಿ, ಯಾತಕ್ಕೆ ಹೋಗಲಿ, ಇಬ್ಬರೂ ಒಟ್ಟಿಗೆ ಹೋಗೋದೇ.

ಮನೆಯ ಹತ್ತಿರದಲ್ಲಿದ್ದ ಪಾಠಶಾಲೆಯಲ್ಲಿ ಇಂಗ್ಲಿಷು ಎರಡನೆಯ ತರಗತಿಯ ವರೆಗಿತ್ತು. ಅಲ್ಲಿಯವರಿವಿಗೂ ನಾವಿಬ್ಬರೂ ಅಲ್ಲೇ ಓದುತ್ತಿ

ದ್ದೆವು. ಒಂದು ದಿನ ಒಬ್ಬ ಹುಡುಗ, ಪಾಪ, ಅವನು ಈಗ ಇಲ್ಲ, ರಾಮೂನ್ನ 'ಬಿಳಿಯ' ಅಂದ. ರಾಮೂ ಅವನಿಗೆ ಪ್ರತ್ಯುತ್ತರ ಕೊಡುವುದಕ್ಕೆ ಮುಂಚೆ ನಾನು ಅವನ ಮೇಲೆ ಬಿದ್ದೆ. ಒಂದು ಟಾಂಗ್ ಹಾಕಿ ಉರುಳಿಸಿ ಅವನ ಬೆನ್ನಿನ ಮೇಲೆ ಕೂತು ಗುದ್ದುತ್ತಾಯಿದ್ದೆ. ಮೇಷ್ಟ್ರುಬ್ಬರು ಮನೆಯ ಕಡೆ ಹೋಗುತ್ತಿದ್ದೋರು, ಅಲ್ಲಿಂದ ಕೂಗಿದರು 'ಲೇ, ಬಿಡೋ ಬಿಡೋ ಮುಡೆಯ!' ನನಗೂ ರೇಗಿತು. ನಾನೇನಂತೇನೆ ಎಂಬೋ ವಿಚಾರ ನನಗೇ ಗೊತ್ತಾಗಲಿಲ್ಲ. 'ಹೋಗೋ, ಕುರುಡಪ್ಪಚ್ಚಿ!' ಎಂದೆ. ಆತ ಹೊರಟು ಹೋದ.

ಆ ಹೆಸರು ಅವರಿಗೆ ಯಾರಿಟ್ಟರೋ ಗೊತ್ತಿಲ್ಲ. ಆತನಿಗೆ ಪಾಪ, ಕಣ್ಣುಗಳು ಎರಡೂ ಕಾಣುತ್ತಿರಲಿಲ್ಲ ಎಂದು ತೋರುತ್ತೆ. ಬಹಳ ದಪ್ಪವಾದ ಕನ್ನಡಕ ಹಾಕಿಕೊಂಡು ಪುಸ್ತಕವನ್ನು ಹತ್ತಿರದಲ್ಲಿಟ್ಟುಕೊಂಡು ಒಂದೊಂದಕ್ಷರವಾಗಿ ಓದಬೇಕು; ಹಾಗೇ ಪಾಠ ಹೇಳಬೇಕವರು. ಅವರ ನಿಜವಾದ ಹೆಸರು ಯಾವ ಹುಡುಗನಿಗೂ ಗೊತ್ತಿಲ್ಲ. ಒಂದು ದಿನ ಶೀನಪ್ಪನವರು ರಾಮೂನ್ನ ಕೇಳಿದರು, 'ನಿಮ್ಮ ಮೇಷ್ಟ್ರು ಯಾರು?' ಇವರೇ ಅವರೇ ಎಂತ ಇರೋರ ಹೆಸರನ್ನೆಲ್ಲಾ ಹೇಳಿದರು. ನಾನೂ ಅಲ್ಲಿಯೇ ಇದ್ದೆ. ಯಾರೂ ಅಲ್ಲ ಅಂದೆವು. ಹಾಗಾದರೆ ನಿಮ್ಮ ಮೇಷ್ಟ್ರು ಯಾರು ಎಂದರೆ—'ಕುರುಡಪ್ಪಚ್ಚಿ.' ಶೀನಪ್ಪನೋರು ಬೆಚ್ಚಬಿದ್ದರು. ಕೊನೆಗೆ ಈ ಹೆಸರು ಯಾರಿಗಿತ್ತೆಂಬುದು ಅವರಿಗೆ ಅರ್ಥವಾದ ಹಾಗೆ ತೋರುತ್ತೆ. ನಮ್ಮನ್ನು ಚೆನ್ನಾಗಿ ಬೈದು, ಇನ್ನುಮೇಲೆ ಹಾಗೆಲ್ಲಾ ಕೂಗಬಾರದು ಎಂತ ಹೇಳಿದರು. ಇಲ್ಲ ಎಂತ ನಾನು ಹೇಳಿದ್ದರೂ ನನ್ನ ಕೋಪದಲ್ಲಿ ಅದೆಲ್ಲಾ ಮರೆತು ಬಿಟ್ಟು, ಅವರನ್ನು ಬೈದೇಬಿಟ್ಟೆ!

ಮೂರನೆಯ ದಿನ ಪಾಠಶಾಲೆಗೆ ಹೋಗುತ್ತಲೇ ನಮ್ಮ ತರಗತಿಯ ಉಪಾಧ್ಯಾಯರು ನರಸಿಂಹಯ್ಯನವರು ನನ್ನನ್ನು ತರಾಟೀಗೆ ತೆಗೆದುಕೊಂಡರು. ಇವರ ಹೆಸರು ಬೇರೆಯಲ್ಲ, ಇವರು ಕಣ್ಣು ಬಿಡುತ್ತಿದ್ದುದು ಬೇರೆಯಲ್ಲ, ಮನಸ್ಸೇನೋ ಮೇಣದಂತೆ ಮೃದು ಎಂತ ಎಲ್ಲರೂ ಆಡಿಕೊಳ್ಳುತ್ತಿದ್ದರು. ಆದರೆ ಅವರನ್ನು ಕಂಡರೆ ನಮಗೆಲ್ಲಾ ನಡುಕ ಹುಟ್ಟುತ್ತಾ ಇತ್ತು. ಎಲ್ಲಾದರೂ 'ಧ್ಯಾಂ' ಎಂಬೋ ಶಬ್ದ ಕಿವಿಗೆ ಬಿದ್ದರೆ ಸಾಕು,

ಪಾಠಶಾಲೆಯಲ್ಲಾ ನಿಶ್ಶಬ್ದ. ನಮ್ಮನ್ನು ಬಹಳ ಬೆದರಿಸುತ್ತಾ ಇದ್ದರೂ ಪಾಠಶಾಲೆಯ ಹುಡುಗರನ್ನು ಕಂಡರೆ ಬಹಳ ಪ್ರೀತಿ. ಅದರೊಳಗಾಗಿ ಅವರ ತರಗತಿಯ ಹುಡುಗರೆಂದರೆ ಮಿಕ್ಕವರು ಅವರಿಗೆ ಬಹಳ ಭಯಪಡು ತ್ತಿದ್ದರು ಸ್ಕೂಲಿನಲ್ಲಿ ಯಾವ ಕೆಲಸಕ್ಕಾದರೂ ಈ ನರಸಿಂಹಯ್ಯನವರ ಹುಡುಗರೇ ಮುಂದೆ ಬರುತ್ತಿದ್ದರು. ಇಂಥವರಿಗೂ ನಾಮಕರಣ ತಪ್ಪಲಿಲ್ಲ. ಇವರಿಗೆ ಹುಡುಗರೆಲ್ಲಾ 'ಉಗ್ರಪ್ಪ' ಎಂತ ಹೆಸರಿಟ್ಟುಬಿಟ್ಟಿದ್ದರು. ಆ ದಿನ ನನ್ನನ್ನು ಬೆಂಚಿನ ಮೇಲೆ ನಿಲ್ಲಿಸಿದ್ದರು. ಪಕ್ಕದ ತರಗತಿಯ ಹುಡುಗರು ನನ್ನ ನೋಡಿ ನಗುತ್ತಾ ಇದ್ದರು; ನಾನೂ ಅವರಿಗೆ ಸನ್ನೆಯಿಂದ ಸಾಯಂ ಕಾಲ ನನ್ನ ಕೈಗೆ ಸಿಕ್ಕರೆ ನಾನೇನು ಮಾಡುತ್ತೇನೆ ಎಂಬೋದನ್ನು ತೋರಿಸುತ್ತಾಯಿದ್ದೆ. ಇದು 'ಉಗ್ರಪ್ಪ'ನವರ ಕಣ್ಣಿಗೆ ಬಿತ್ತು. ಏನೋ ಬಂತು ಅಂದುಕೊಂಡೆ. ಅವರು ಹತ್ತಿರಕ್ಕೆ ಬಂದು 'ಥ್ಯಾಂ! ಕೂತುಕೋ' ಎಂದರು; ಕೂತುಕೊಂಡೆ.

ಹೀಗೇ ಮುಂದಕ್ಕೆ ಕೋಟೆಯಲ್ಲಿದ್ದ ಪಾಠಶಾಲೆಗೆ ಹೋದೆವು. ಶೀನಪ್ಪ ನಮ್ಮಿಬ್ಬರನ್ನೂ ಒಂದೇ ತರಗತಿಗೇರಿಸಬೇಕೆಂದು ಆ ಪಾಠಶಾಲೆಯ ರೈಟರನೊಡನೆ ಹೇಳಿ ಸೇರಿಸಿದರು. ಅವರ ಜೊತೆಯಲ್ಲಿ ಓದುತ್ತಾ ಇದ್ದರಂತೆ ಆ ರೈಟರು; ಅವರು ಎಲ್ಲಾ ಅನುಕೂಲ ಮಾಡಿ ಕೊಟ್ಟರು ಒಂದು ವಾರದ ವರೆಗೆ ನಮ್ಮ ತರಗತಿಗೆ ಯಾವ ಮೇಷ್ಟ್ರು ಗೊತ್ತಾಗಿರಲಿಲ್ಲ. ಹುಡುಗರನ್ನು ಸುಮ್ಮನೆ ಬಿಡುವುದಕ್ಕೆ ಮನಸ್ಸಿಲ್ಲದೆ, ರೈಟರನನ್ನೇ ನಮಗೆ ಪಾಠ ಹೇಳಲು ಕಳಿಸಿಕೊಟ್ಟರು. ಆತನ ನಿಜವಾದ ಹೆಸರು ಇದುವರಿವಿಗೂ ನಮಗೆ ತಿಳಿಯದು. ಆತ ತರಗತಿಯಲ್ಲಿ ಕಾಲಿಟ್ಟ ಕೂಡಲೇ ಒಬ್ಬ ಹುಡುಗ 'ಕೆ. ಕೆ. ಗೋಟ್' ಎಂದ. ಅದೇ ಅವರಿಗೆ ನಾಮಕರಣವಾಯಿತು ಇದಕ್ಕೆ ಕಾರಣ ಆತನ ಗಡ್ಡ. ಅದು ಹೋತನ ಗಡ್ಡದ ಹಾಗಿತ್ತು. ನಾವು ಈ ಹೆಸರಿಟ್ಟೆವೆಂದು ಬಹಳ ಅಹಂಭಾವದಿಂದ ಮೇಲಿನ ತರಗತಿಯ ಒಬ್ಬ ಹುಡುಗನಿಗೆ ಹೇಳಿದೆವು. ಅವನು ನಕ್ಕ. 'ಲೆ, ಲೆ, ಲೆ! ಇದು ಜನ್ಮಾಂತರ ದಿಂದ ಬಂದಿದ್ದೋ. ನಮ್ಮಣ್ಣ ಸುಂದರನ ಕಾಲದಿಂದ ಬಂದಿದ್ದೋ ಈ ಹೆಸರು!' ಸುಂದರನನ್ನು ನಾನು ನೋಡಿದ್ದೆ. ನಮಗಿಂತ ಬಹಳ ದೊಡ್ಡವ. ಹಾಸ್ಯಗಾರ. ಒಂದು ದಿನ 'ಸ್ಕೂಲ್ ಡೇ'ನಲ್ಲಿ, ಒಂದು ಕಾಲಿಗೆ ಬಿಳೀ

ಷರಾಯಿ ಮತ್ತೊಂದು ಕಾಲಿಗೆ ಕರೀದು ಹಾಕಿಕೊಂಡು ಬಂದಿದ್ದ. ಹೇಗೆ ಮಾಡಿಕೊಂಡಿದ್ದನೋ ತಿಳಿಯದು.

ಗೋಟಿನ ತರುವಾಯ ಬಿ. ಪಿ. ಸಾರ್ ಬಂದರು. ಇವರನ್ನು ನಾನು ರಾಮು, ನಾವಿಬ್ಬರೂ ಚೆನ್ನಾಗಿ ಬಲ್ಲೆವು. ಇವರಿಗೆ ರಾಮು ಬಿ. ಪಿ. ಸಾರ್ ಎಂದು ಹೆಸರಿಟ್ಟ. ಅವರು ಒಳ್ಳೆ ಮಾತನಾಡತಕ್ಕವರು. ಬಹು ಹಾಸ್ಯ ಮಾಡುತ್ತಿದ್ದರು, ಅಲ್ಲದೆ, ಹಾಸ್ಯಪ್ರಿಯರು. ಅವರು ' ಸಂದನಕ 'ನ ಪಾರ್ಟು ಮಾಡೋದೆಂದರೆ, ಹಾಗೂ ಹೀಗೂ ಅಲ್ಲ. ವರದಾಚಾರ್ಯರ ಕೃಷ್ಣಮೂರ್ತಿ ಬಿಟ್ಟರೆ, ಇವರೇ, ಎಂದು ನಾವೆಲ್ಲಾ ಕೇಳಿದ್ದೇವೆ. ಇವರು ನಾವು ಮಾಡುತ್ತಿದ್ದ ಒಂದೊಂದು ತಪ್ಪಿಗೂ ಒಂದೊಂದು ಕಥೆ ಹೇಳುತ್ತಾ ಇದ್ದರು. ಒಂದು ಮಟ್ಟಿಗೆ ಈಗಲೂ ನನ್ನ ಮನಸ್ಸಿನಲ್ಲಿ ನಿಂತುಹೋಗಿದೆ. ಒಂದು ಸಲ ರಾಮೂ ಅರ್ಥವನ್ನು ಬರೆದುಕೊಳ್ಳುತ್ತಾ ಅಲ್ಲಲ್ಲಿ ಕೆಲವು ಸೊಟ್ಟ ಸೊಟ್ಟ ಗುರುತುಗಳನ್ನು ಹಾಕಿಕೊಂಡು ಏನೋ ಅರ್ಥವಿಲ್ಲದ್ದನ್ನು ಬರೆದುಕೊಂಡಿದ್ದ. ಇದನ್ನು ನೋಡಿ ಬಿ. ಪಿ. ಸಾರ್ ಒಂದು ವಿಚಾರ ಹೇಳಿದರು—' ದೊಡ್ಡಬಳ್ಳಾಪುರದ ಸುಬ್ಬಾಭಟ್ಟರ ಮಗ ' ಎಂಬೋದು ಬಹಳ ದೊಡ್ಡದಾಗುತ್ತೆ ಅಣ್ಣಯ್ಯ, ಅದನ್ನು ಸಂಗ್ರಹಿಸಿ ಬರೆದುಕೊಳ್ಳಬೇಕಾದರೆ–ದೊಡ್ಡಬ್ಯಾಳ್ಳೇ ಮಗ— ಎಂತ ಬರೆದುಕೊಂಡುಬಿಡಪ್ಪ ! '

ಭಾಷಾಂತರ ಪಾಠವನ್ನು ಕಲಿಯಬೇಕಾದರೆ ಇವರಲ್ಲಿ ಕಲಿಯಬೇಕು. ಮೊದಲನೆಯ ದಿನ ಎಲ್ಲರೂ ಏನು ಹೇಳುತ್ತಾರೋ ನೋಡೋಣವೆಂದು ಕಾದಿದ್ದೆವು. ಪಾಠ ಪ್ರಾರಂಭವಾಗುತ್ತಲೇ ' ಬರೆದುಕೊಳ್ಳಿ ' ಎಂದರು. ನಾವು ಪುಸ್ತಕಗಳನ್ನು ತೆಗೆದು ಬರೆದುಕೊಳ್ಳಲು ಸಿದ್ಧರಾದೆವು. ಹೇಳುವುದಕ್ಕೆ ಮೊದಲುಮಾಡಿದರು " ಮೊದಲನೆಯ ಪಾಠ—ಚನ್ನಬಸಪ್ಪ—ವೆಲ್ ಬುಲ್ ಫಾದರ್. ಯಾರು ಬರಕೊಂಡಿರೋರು ಕೈಯೆತ್ತಿ " ಎಲ್ಲರೂ ಕೈಯೆತ್ತಿದೆವು. " ಈ ತರಗತಿಯಲ್ಲಿ ಬುದ್ಧಿವಂತನಾದ ಹುಡುಗ ಒಬ್ಬನೂ ಇಲ್ಲ! ಎಲ್ಲರೂ ನನ್ನಹಾಗೆ ದಡ್ಡಮುಂಡೇವು ! "

ಈ ಪಾಠಶಾಲೆಯಲ್ಲಿ ನಾವಿದ್ದುದು ಒಂದೇ ವರ್ಷ. ಆಮೇಲೆ ಬೇರೆ ಪಾಠಶಾಲೆಗೆ ನಮ್ಮನ್ನು ಸೇರಿಸಿದರು. ಮಿಷನ್ ಸ್ಕೂಲಿನ ವಾತಾವರಣ ನನಗೆ ಸರಿಹೋಗಲಿಲ್ಲ; ಆರು ತಿಂಗಳ ಹೊತ್ತಿಗೆ ಬಿಟ್ಟುಬಿಟ್ಟೆ. ಇದಕ್ಕೆ

ಕಾರಣ ಆ ಸ್ಕೂಲಿನ ದೊರೆ. ಆಗ ತಾನೆ ಇಂಗ್ಲೆಂಡಿನಿಂದ ಬಂದಿದ್ದ. ಅಷ್ಟೇನೂ ಭಾರಿ ಆಳಲ್ಲ. ಆದರೆ ನಮ್ಮನ್ನು ನೋಡಿದರೆ ಸಾಕು, ನಮಗೆ ಬಾಯಿ ನಿಂತುಹೋಗುತ್ತಿತ್ತು. ಎರಡು ನಿಮಿಷ ಹೊತ್ತಾಗಿ ಬಂದರೆ, ಆಯಿತು; ಅವತ್ತೆಲ್ಲಾ ಬೆಂಚಿನ ಮೇಲೆ ನಿಂತಿರಬೇಕಾದ್ದೇ. ಏನೋ ಪಾದರಿಗಳು ಬಹಳ ಒಳ್ಳೆಯವರು ಅಂತಿದ್ದರೆ, ಒಂದು ಸಣ್ಣ ತಪ್ಪಾದರೆ ಸಾಕು, ನಮ್ಮ ಕೆಲಸ ಮುಗಿದುಹೋಗುತ್ತಿತ್ತು. ಇದನೆಲ್ಲಾ ತಡೆಯಲಾರದೆ ನಾನು ಸರ್ಕಾರಿ ಸ್ಕೂಲಿಗೆ ಹೋಗಿ ಸೇರಿದೆ. ಅಲ್ಲಿಂದಾಚೆಗೆ ಐದಾರು ವರ್ಷ ನನಗೂ ರಾಮೂನಿಗೂ ಸ್ವಲ್ಪ ದೂರವಾಯಿತು. ಅಲ್ಲದೆ ಮಿಷನ್ ಸ್ಕೂಲ್ ವಾತಾವರಣದಿಂದ ರಾಮೂನ ಮನಸ್ಸು ಕೂಡ ಒಂದು ವಿಧವಾಗಿ ಮಾರ್ಪಾಟು ಆಯಿತು.

—

# ಕಾರಣ

೧

ಇದ್ದಕ್ಕಿದ್ದ ಹಾಗೆಯೇ ಗೋವಿಂದರಾಯರು ನನ್ನನ್ನು ಕರೆಕಳಿಸಿದರು. ಎಂದೂ ಇಲ್ಲದೆ ಇದಾಗಬೇಕಾಗಿದ್ದರೆ ಏನೋ ಒಂದು ಮಹತ್ತರವಾದ ವಿಚಾರವೇ ಆಗಿರಬೇಕೆಂದಂದುಕೊಂಡು ಅವರ ಮನೆಗೆ ಹೋದೆ. ಬಾಗಿಲ ಹತ್ತಿರ ಹೋಗುವ ಹೊತ್ತಿಗೆ ಒಳಗಡೆ ಯಾರೋ ಮಾತನಾಡುತ್ತಿದ್ದಂತೆ ಕಂಡುಬಂದಿತು ನನ್ನ ಕಿವಿಗೂ ಸ್ವಲ್ಪ ಸ್ಪಷ್ಟವಾಗಿ ಕೇಳಿಸುತ್ತಲೇ ಇತ್ತು. ಇನ್ನೇನು ಒಳಗಡೆ ಕಾಲಿಡುವ ಹೊತ್ತಿಗೆ ಪಕ್ಕದಲ್ಲಿದ್ದ ಬಾಗಿಲಿನಿಂದ ಸುಬ್ಬು ಈಚೆಗೆಬಂ ದು ಪಿಸುಮಾತಿನಲ್ಲಿ ' ಹೀಗೆ ಬಾಪ್ಪ ' ಎಂದಳು.

ಸುಬ್ಬು ಯಾರೊ ಎಂತ ನೀವೇನು ಬೆದರಬೇಕಾದ್ದಿಲ್ಲ. ಅವಳು ರಾಮೂಗೆ ಮೂರುವರ್ಷ ಚಿಕ್ಕವಳು ಎನ್ನಿ. ಆದಾಗ್ಯೂ ಅವಳ ಗ್ರಹಚಾರ ಮುದುಕನ ಕೈಹಿಡಿಯಬೇಕಾಗಿ ಬಂತು. ಮದುವೆಯಾದ ಆರು ತಿಂಗಳಿಗೆ, ವರ ವೈಕುಂಠಯಾತ್ರೆ ಮಾಡಿಬಿಟ್ಟ. ಇನ್ನೂ ಸಣ್ಣವಳು; ಕೂದಲು ತೆಗೆಸಿರಲಿಲ್ಲ. ಹಿಂದೆ ಯಾವಾಗಲೊ ಮಾತಿತ್ತು, ಸುಬ್ಬುವನ ರಾಮೂಗೆ ಕೊಟ್ಟು ಮದುವೆ ಮಾಡಿದ್ದರೆ ಚೆನ್ನಾಗಿತ್ತು ಎಂತ; ಗೋವಿಂದರಾಯರು ಅದಕ್ಕೆ ಒಪ್ಪಲಿಲ್ಲ. ಹುಡುಗರಲ್ಲಿ ನಾನು ರಾಮೂ ಹೇಗೆ ಏಕದೇಹನ್ಯಾಯ ಎನ್ನಬಹುದೋ ಹಾಗೇ ಸುಬ್ಬು ಸಹ.

ಪಕ್ಕದ ಬಾಗಿಲಿನಿಂದ ಒಳಕ್ಕೆ ಹೋಗಿ ಕೋಣೆಯಲ್ಲಿ ಕೂತೆ. ಸುಬ್ಬು ಚಾಪೆಯ ಮೇಲೆ ಕೂತುಕೊಂಡು ಸನ್ನೆಯಿಂದ ಅಲ್ಲಿ ಆಡುವ ಮಾತುಗಳನ್ನು ಕೇಳಬೇಕೆಂದು ಸೂಚಿಸಿದಳು. ಗೋವಿಂದರಾಯರು ಶಾಸ್ತ್ರಿಗಳು ಇಬ್ಬರೂ ಮಾತನಾಡುತ್ತಿದ್ದರು.

**ಗೋ:**—ಇವತ್ತು ಮನಸ್ಸಿಗೇಕೋ ಬಹಳ ತೊಂದರೆಯಾಗಿದೆ.

**ಶಾ:**—ಸುಖದುಃಖಗಳು ಅಕ್ಕತಂಗಿಯರು ರಾಯರೆ. ಜನನ ಮರಣ

ಗಳಿದ್ದ ಹಾಗೆ! ಆದರೆ ನಮ್ಮ ಕರ್ತವ್ಯ ಹೇಗಿರಬೇಕೆಂದರೆ 'ಸಮದುಃಖ ಸುಖಂ ಧೀರಂ....'

**ಗೋ:**—ಶಾಸ್ತ್ರಿಗಳೆ, ತಾವು ಜ್ಞಾನಿಗಳು. ಬಹಳ ಸುಲಭವಾಗಿ ಅಪ್ಪಣೆ ಕೊಡಿಸೋಣವಾಗಿದೆ. ಹೇಳೋದು ಸುಲಭ; ಅನುಭವಿಸೋದಿದೆ ಯಲ್ಲಾ, ಅದೇ ಬಹಳ ಕಷ್ಟ. ಮನೇಲಿ ದಾರಿತಪ್ಪಿ ಕೆಲಸ ನಡೆದರೆ....

**ಶಾ:**—ದಾರಿತಪ್ಪಿ ನಡೆಯೋದು, ಇದು ಪ್ರಪಂಚದ ಧರ್ಮ!

**ಗೋ:**—ಸ್ವಲ್ಪ ವಿಚಾರ ಮಾಡೋಣಾಗಲಿ, ಶಾಸ್ತ್ರಿಗಳೆ. ಇಂದ್ರಿಯ ನಿಗ್ರಹ ಎಂಬೋದು ಸಾಮಾನ್ಯವೆ? ಎಲ್ಲಾರಿಂದ ಅದು ಸಾಧ್ಯವೆ?

**ಶಾ:**—ಆಹಾ, ಎಂಥಾ ಭಂಗಾರದಂತ ಮಾತು! ಗೀತೆಯಲ್ಲಿ ಅಂದಿ ದ್ದಾನೆ, ಯಾರು, ಕೃಷ್ಣಪರಮಾತ್ಮ—'ನಹಿ ಪ್ರಪಶ್ಯಾಮಿ ಮಮಾಪನು ದ್ಯಾತ್ ಯಚ್ಛೋಕ ಮುಚ್ಛೋಷಣಮಿಂದ್ರಿಯಾಣಾಂ' ರಾಯರೆ!

**ಗೋ:**—ಮಾತಿಗೆ ಕೇಳ್ತೀನೆ, ಶಾಸ್ತ್ರಿಗಳೆ. ಸ್ವಲ್ಪ ವಿಚಾರ ಮಾಡಿ ನೋಡೋಣಾಗಲಿ, ಯಾವ ಸಂದರ್ಭದಲ್ಲಾದರೂ ವಿಧವಾವಿವಾಹ ಸರಿ ಎಂದು ನಿಮಗೆ ತೋರೀತೆ?

**ಶಾ:**—ರಾಮ, ರಾಮ! ವಿಧವಾವಿವಾಹ! ಏನು ರಾಯರೆ, ಇದೆಂ ತಹ ಮಾತು! ಇಂಥಾ ಅವಾಚ್ಯ ತಮ್ಮಂಥಾವರಿಂದ!

**ಗೋ:**—ಇಲ್ಲ, ಶಾಸ್ತ್ರಿಗಳೆ, ಉಭಯಸಂಕಟದಲ್ಲಿ ಸಿಕ್ಕಿಬಿದ್ದಿದ್ದೇನೆ.

**ಶಾ:**—ಅಂಥಾದ್ದೇನ್ರೀ ಬಂದಿರೋದು?

**ಗೋ:**—ರಾಮ, ನಮ್ಮ ಸುಬ್ಬ್ಯಾನ ಮದುವೆ ಮಾಡಿಕೋಬೇಕು ಎಂತ ಕೂತಿದ್ದಾನೆ.

**ಶಾ:**—ಉಂಟೆ, ರಾಯರೆ! ಇದು ಮನೆ ಹಾಳ ಕೆಲಸ! ಎಂತಹ ಸದ್ವಂಶ ರಾಯರೆ ನಿಮ್ಮದು! ಹಾಳು, ಇಂಗ್ಲೀಷು ವಾಸನೆ ಬಂದರೆ ಹೀಗೇ ನೋಡಿ ವಂಶ ಹಾಳಾಗೋದು!

**ಗೋ:**—ಸಂದರ್ಭ ಹಾಗಿದೆ, ಶಾಸ್ತ್ರಿಗಳೇ.

**ಶಾ:**—ಅಂಥಾದ್ದೇನ್ರೀ!

**ಗೋ:**—ಅಯ್ಯೋ, ಶಾಸ್ತ್ರಿಗಳೆ, ಇನ್ನೂ ಅರ್ಥವಾಗಲಿಲ್ಲವಲ್ಲ ನಿಮಗೆ; ಹೌದು ಶಾಸ್ತ್ರಿಗಳೆ, ಕೈಮೀರಿ ಹೋಗಿದೆ......

ನಾನು ಸುಬ್ಬುವಿನ ಮುಖವನ್ನು ನೋಡಿದೆ. ಇನ್ನು ಸ್ವಲ್ಪವಿದ್ದರೆ ತನ್ನ ಕಣ್ಣಿನಲ್ಲಿ ನೀರು ಬರುತ್ತೆ ಎಂಬುವ ಹೊತ್ತಿಗೆ, ನನ್ನ ಮುಖವನ್ನು ನೋಡು ತ್ತಿದ್ದ ಸುಬ್ಬು, ಎದ್ದು ಒಳಕ್ಕೆ ಹೋದಳು. ನಾನು ಏಳಲಾರದೆ ಅಲ್ಲಿಯೇ ಕೂತೆ. ಸ್ವಲ್ಪ ಹೊತ್ತಾದ ಮೇಲೆ ನಾನು ಅಲ್ಲಿಂದೆದ್ದು ಒಳಕ್ಕೆ ಹೋದೆ. ಇನ್ನೂ ಶಾಸ್ತ್ರಿಗಳು ಗೋವಿಂದರಾಯರು ಇಬ್ಬರೂ ಮಾತನಾಡುತ್ತಲೇ ಇದ್ದರು.

**ಗೋ** —ಬಾಪ್ಪ, ನಿನಗಾಗಿಯೇ ಕಾದಿದ್ದೇವೆ. ಕೂತುಕೋ.

**ನಾ.**—ಶಾಸ್ತ್ರಿಗಳಿದ್ದಾರೆ, ಆಮೇಲೆ ಬರಲೇನ್ರೀ?

**ಗೋ** —ಪರವಾಯಿಲ್ಲಪ್ಪ. ನೀನೂ ಶಾಸ್ತ್ರಿಗಳೂ ನಮಗೆ ಸಹಾಯ ಮಾಡಬೇಕಪ್ಪ.

**ಶಾ** —ಧರ್ಮವನ್ನು ಕಾಯುವುದಕ್ಕಾಗಿ ಏನು ಮಾಡಿದಾಗ್ಯೂ ಪುಣ್ಯವೇ. ನಮ್ಮ ಹಿರಿಯರು ಎಂತಹ ಸೌಭಾಗ್ಯಶಾಲಿಗಳು! ನಮ್ಮ ಧರ್ಮ ಎಂತಹ ಧರ್ಮ! ಇಂತಹುದನ್ನು ಉಳಿಸಿಕೊಳ್ಳುವುದಕ್ಕೆ ಕೂಡ ನಮ್ಮ ಕೈಲಾಗದಲ್ಲ!

**ಗೋ:**—ಶಾಸ್ತ್ರಿಗಳೇ, ದೊಡ್ಡ ಧರ್ಮಸಂಕಟದಲ್ಲಿ ನನ್ನನ್ನು ಸಿಕ್ಕಿಸಿ ಬಿಟ್ಟಿರಿ. ಇಬ್ಬರೂ ನನಗೆ ಬೇಕಾದವರೇ. ಪ್ರಪಂಚದಲ್ಲಿ ಎಷ್ಟೋ ಹೀಗಾ ಗುತ್ತವೆ. ಏನಾದರೂ ಮಾಡಬಹುದಾಗಲಿ ನಾನು ಅವರನ್ನು ಹೊರಗೆ ಹಾಕುವುದು ನನ್ನಿಂದಾಗದಲ್ಲ!

**ಶಾ:**— ಇದೇ ರಾಯರೆ, ಗೀತೆಯಲ್ಲಿ ಹೇಳಿರುವುದು. ಯಾವ ಹತ್ಯೆ ವನ್ನಾದರೂ ಮಾಡಬಹುದಾಗಲಿ ಧರ್ಮಹತ್ಯವಾಗಬಾರದು.

**ನಾ.**—ಬಹಿರಂಗವಾಗಿ ಹೀಗಾಗದಿದ್ದರೂ ರಹಸ್ಯವಾಗಿ ಇಂತಹ ಸಾಂಪ್ರದಾಯವಿಲ್ಲವೆ? ಶಾಸ್ತ್ರಿಗಳೇ, ಅವರ ಮೇಲೆ ಇಷ್ಟೇಕೆ?

**ಶಾ:**—ಇಷ್ಟೇಕೆ! ರಾಯರೆ, ಇಂತಹ ಹಸುಮಕ್ಕಳಿಗೆ ಶಾಸ್ತ್ರ ಸುಲಭವಾಗಿ ಅರ್ಥವಾಗಿಬಿಟ್ಟ ಮೇಲೆ ಇನ್ನೇನಿದೆ ಎಂದರೆ! ನೀವೇನಾ ದರೂ ಹೇಳಿ, ಇದು ನಮಗೆ ಧರ್ಮವಿರುದ್ಧ. ಬಹಳ ಹೊತ್ತಾಯಿತು. ಪುನಃ ನಾಳೆ ತಮ್ಮ ದರ್ಶನ ತೆಗೆದುಕೊಳ್ಳುತ್ತೇನೆ.

ಶಾಸ್ತ್ರಿಗಳು ಹೊರಟುಹೋದರು. ರಾಯರು ಏನೋ ಯೋಚನೆ ಮಾಡುತ್ತ ಕುಳಿತರು. ಸ್ವಲ್ಪ ಹೊತ್ತಿನ ಮೇಲೆ ನನ್ನನ್ನು ಕುರಿತು ಹೀಗೆ ಅಂದರು—' ನೋಡು ಮಗೂ, ಇಬ್ಬರೂ ನಿನಗೆ ಸ್ನೇಹಿತರು. ನನಗಾದರೋ ವಂಶಕ್ಕೆ ಅಪಕೀರ್ತಿ ಬಂದುಬಿಟ್ಟಿದೆ, ಏನಾದರೂ ಮಾಡಿ ಇಬ್ಬರನ್ನೂ ಬೇರೆ ಮಾಡಿಬಿಡು. ಇವಳನ್ನೆಲ್ಲಾದರೋ ಕಾಶಿಗೋ ರಾಮೇಶ್ವರಕ್ಕೋ ಕಳಿಸಿ ಬಿಡುತ್ತೇನೆ. ಅವನಿಗೆ ಬೇಕಾದ ಸಹಾಯ ಮಾಡುತ್ತೇನೆ. ನನಗೂ ಗೊತ್ತು, ಇದರಲ್ಲಿ ನನ್ನ ತಪ್ಪೆಷ್ಟಿದೆ ಎಂತ. '

' ರಾಯರೆ, ನನ್ನ ಕೈಲಾದ್ದು ನಾನು ಮಾಡ್ತೇನೆ. ಆದರೆ ನನ್ನ ಮೇಲೆ ಅಪನಂಬಿಕೆ ಮಾತ್ರ ಬೇಡ. '

' ನಾನು ಹೆಚ್ಚು ಹೇಳಲಾರೆನಪ್ಪ. ನಿನ್ನ ಮಾತೆಂದರೆ ರಾಮೂ ತೆಗೆದು ಹಾಕೊಲ್ಲ. ಇಷ್ಟರ ಮೇಲೆ ದೈವಚಿತ್ತ ! '

—

೨

ರಾತ್ರಿ ಎಂಟು ಗಂಟೆ. ಸಾತಿ ಶೀನಪ್ಪನಿಗೆ ಬಡಿಸುತ್ತಾ ಇದ್ದಳು. ರಾಮೂ ತನ್ನ ಎಸ್. ಎಸ್. ಎಲ್. ಸಿ. ಪರೀಕ್ಷೆ ವಿಚಾರ ತಿಳಿದುಕೊಳ್ಳೋ ದಕ್ಕೆ ಹೋದವನು ಇನ್ನೂ ಬಂದಿರಲಿಲ್ಲ.

' ಏಕೆಂದರೆ—ಇವತ್ತು ಊಟ ಸರಿಯಾಗಿ ಮಾಡ್ತಾ ಇಲ್ಲವಲ್ಲ ? ಅಡಿಗೆ ಸರಿಯಾಗಿಲ್ಲವೇನೋ ? '

' ಇಲ್ಲ, ಇಲ್ಲ, ಏನೋ ಇಳಿಯೋದಿಲ್ಲ. '

' ಇಲ್ಲ, ಏನೋ ಇರಬೇಕು. '

' ಇದ್ದೇ ಇರುತ್ತೆ. ರಾಮೂನ ವಿಚಾರ ಯೋಚನೆಯಾಗಿದೆ. ಅವನನ್ನೆ ಏನು ಮನೆಯಲ್ಲಿಟ್ಟಿರಬೇಕೆ. . . .'

' ಅಷ್ಟು ದೂರ ಯೋಚನೆ. . . .'

' ಅದು ಹಾಗಾಗಿಬಿಟ್ಟಿದೆ. ನಾವೇನೋ ಕಿವಿಯ ಮೇಲೆ ಹಾಕಿ ಕೊಂಡು ಹಾಕಿಕೊಳ್ಳದ ಹಾಗಿದ್ದರೂ, ಗೋವಿಂದರಾಯರು ಸರಿಯಾಗಿ ಹೇಳೇಬಿಟ್ಟರು. '

'ಏನು ?'

'ನಡೆದ ವಿಚಾರ.'

'ಮನೆಗೆ ಅವನು ಬರೋ ಹೊತ್ತು ಅಂದರೆ'

'ಹೌದು. ಅವನ ಮನಸ್ಸೋ ಮೋಣದ ಹಾಗೆ. ಸ್ವಲ್ಪ ತಿಳಿದರೆ ಸಾಕು. ಅವನು ಕೈಗೆ ಸಿಗುವ ಹಾಗಿಲ್ಲ. ನಮ್ಮದೂ ತಪ್ಪೇ ಅಲ್ಲವೇನೆ ? ಗಂಡಹೆಂಡತಿ ಅಂತ ನಾವೇಕೆ ಮಾತಾಡಿಕೋಬೇಕು ಅವರನ್ನ ?'

'ಸರಿ, ಆದರೆ ಇವೆಲ್ಲಾ ನನಗೇನು ತಿಳಿಯುತ್ತೆ ? ನೀವು ಹೇಗೆ ಹೇಳಿದರೆ ಹಾಗೆ.'

'ಇಲ್ಲ ನಾತಿ, ನಿನಗೆ ನಿಜವಾದ ಸಂಗತಿ ತಿಳಿಯಬೇಕು. ಇದೇನು, ಸುಬ್ಬನ ತಪ್ಪೇ, ರಾಮೂನ ತಪ್ಪೇ ?'

'ನಾನೇನು ಹೇಳಲಿ ಅಂದರೆ. ನಾನೇನು ಓದಿದ್ದೇನೆಯೆ ? ನನಗೇನು ಗೊತ್ತು !'

'ಓದಿನಲ್ಲೇನಿದೆ ! ಹೃದಯಕ್ಕೆ ಗೋಚರವಾಗುವ ಹಾಗೆ ನಿಜ ಮೆದುಳಿಗೆ ತಿಳಿಯೋಲ್ಲ, ಹೇಳು.'

'ಸರಿ, ಇದೆಲ್ಲಾ ಸುಬ್ಬಾ ಅಪ್ಪನ ತಪ್ಪು'

'ಹಾಗೇ ನಮ್ಮದೆಲ್ಲಾ ಸ್ವಲ್ಪ ಸ್ವಲ್ಪ ತಪ್ಪೇ. ಆದರೆ ಈಗೇನು ಮಾಡೋದು ?'

'ಮಾಡೋದೇನು ? ಗೋವಿಂದರಾಯರು ಏನು ಮಾಡ್ತಾರೋ ನೋಡೋಣ. ಆಮೇಲೆ ನಮ್ಮ ಮಾತು.'

'ಈ ಸಮಸ್ಯೆ ಪೂರ್ತಿಮಾಡುವುದಕ್ಕೆ ನನ್ನ ಕೈಲಾಗದು. ಇರಲಿ ಮುಂದೆ ಹೇಗೆ ಬರುತ್ತೊ ನೋಡೋಣ.'

'ಹೇಗಾದರೂ ಆಗಲಿ, ಎಲ್ಲದಕ್ಕೂ ಅವನೇ ಕಾರಣ.'

---

## ೩

ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾದ ವಿಚಾರವನ್ನು ನನಗೆ ತಿಳಿಸಲು ರಾಮು ನಮ್ಮ ಮನೆಗೆ ಬಂದ. ನಾನೂ ಅದೇ

ಯಾತ್ರೆ ಮಾಡಿ ಬಂದಿನ್ದೆ. 'ಏನೋ, ಎಲ್ಲಿ ಹುಡುಕಿದರೂ ಸಿಕ್ಕಲಿಲ್ಲ?' ಎಂದೆ.

'ಪ್ಯಾಸಾಯಿತು ಎಂದರು. ಮನೆಗೆ ಬಂದೆ. ನಿಂದೂ ಆಯಿತಂತೆ.'

'ಭೇಷಪ್ಪ–ಬಹಳ ಸಂತೋಷ.'

'ಇರಲಿ, ಇನ್ನೊಂದು ದೊಡ್ಡ ಪ್ಯಾಸಾಗಬೇಕು. ಅದಕ್ಕೆ ನಿನ್ನ ಹತ್ತಿರ ಬಂದೆ.'

'ಪ್ಯಾಸು ಮಾಡೋದರಲ್ಲಿ ನೀನೇ ಗಟ್ಟಿಗನಪ್ಪ.'

'ಆದರೆ ಇದು ನನಗೆ ಗಿಟ್ಟೋದಲ್ಲ. ಬಾ, ಒಳಗೆ ಹೋಗೋಣ.'

'ನಾನು ಊಟಾ ಮಾಡ್ತೇನೆ, ನೀನೂ ಕುತುಕೋತಿಯೋ?'

'ಇಲ್ಲ, ನಮ್ಮಮ್ಮ ಕಾದಿರತಾಳೆ. ನಾನು ಊಟ ಮಾಡ್ತಾಯಿರ ತೇನೆ. ನೀನೂ ಊಟ ಮಾಡಿ, ಬಾ.'

'ಆಗಲಿ.'

ಊಟ ಮುಗಿಸಿ ರಾಮೂನ ಮನೇಗೆ ಹೋದೆ. ಶೀನಪ್ಪನವರು ಮಲಗಿ ದ್ದರು. ರಾಮೂ ಮಜ್ಜಿಗೆ ಅನ್ನವನ್ನು ತಿನ್ನುತ್ತಲಿದ್ದ. ಆಯಿತು. ಆಮೇಲೆ ಸಾತೀಗೆ ಹೇಳಿ ನಾವಿಬ್ಬರೂ ಈಚೆಗೆ ಹೊರಟೆವು.

'ಗೊತ್ತೇನೋ?' ಎಂದು ರಾಮೂ ಕೇಳಿದ.

'ಏನು?' ಎಂದು ನಾನು ಕೇಳಿದೆ.

'ಸುಬ್ಬು. . . .' ಎಂದು ನನ್ನ ಮುಖವನ್ನು ನೋಡಿದ. ನಾನೂ ಅವನ ಮುಖ ನೋಡುತ್ತ 'ಗೋವಿಂದರಾಯರು ಎಲ್ಲಾ ಹೇಳಿದರು' ಎಂದೆ.

'ಹೇಗಾಯಿತೊ ಅದು, ರಾಮೂ?' ಎಂದೆ.

'ಹೇಳಿ ಏನು ಪ್ರಯೋಜನ! ನಾನೂ ಸುಬ್ಬು ಮಾತನಾಡುತ್ತಾ ಕುಳಿತಿದ್ದೆವು. ಅವಳ ಮನಸ್ಸಿನಲ್ಲಿದ್ದುದನ್ನೆಲ್ಲಾ ಅವಳು ಹೇಳುತ್ತ ಬಂದಳು. ನನಗೆ ಒಂದು ಹೊಸ ಪ್ರಪಂಚ ಗೋಚರವಾದಂತಾಯಿತು. ಆಮೇಲೆ ಏನಾಯಿತೋ ನನಗೆ ತಿಳಿಯದು. ಎಚ್ಚರಿಕೆ ಬಂದ ಮೇಲೆ ನಾನು ಮಾಡಿದ ಅಪರಾಧ ನನಗೆ ತಿಳಿಯಿತು. ಇದರಿಂದ ಪಾರಾಗಲು ಒಂದೇ ದಾರಿ.' ರಾಮೂ ಉತ್ತರಕೊಟ್ಟ.

' ಯಾವ ದಾರಿ ? '

' ಅವಳನ್ನು ಮದುವೆ ಮಾಡಿಕೊಳ್ಳುವುದು. '

' ನಿನಗೇನು ಸುಖ ? ಅವಳಿಗೇನು ಸುಖ ! ನಿಮ್ಮನ್ನು ಯಾರೂ ಸೇರಿಸುವುದಿಲ್ಲ. ತಂದೆ ತಾಯಿಗಳು ಕೂಡ ನಿಮ್ಮ ಹತ್ತಿರ ಇರುವಂತಿಲ್ಲ. ನಿಮಗೆ ದೇಶವಿಲ್ಲ. ಸರ್ವಶೂನ್ಯವಾದ ಪ್ರಪಂಚದಲ್ಲಿ ನೀವಿಬ್ಬರೇ ಮಾಡುವುದೇನು ? '

' ಮಾಡುವದೇ ! ಮಾಡಿದ ಪಾಪಕೃತ್ಯವನ್ನು ಕಳೆದುಕೊಳ್ಳಲು ತಪಸ್ಸು ! '

' ಅಯ್ಯೋ, ಹುಚ್ಚಪ್ಪ, ಇವೆಲ್ಲಾ ಮರೆತುಬಿಡು. ಗೋವಿಂದರಾಯರು ಸುಬ್ಬೂನ ಎಲ್ಲಾದರೂ ಕಳಿಸಿಬಿಡತಾರೆ. ನೀನೂ ಮರೆತುಬಿಡು ಅವಳನ್ನ. ನಿನಗೆ ಬೇಕಾದ ಸಹಾಯವನ್ನು ಅವರು ಮಾಡುತಾರೆ.'

' ಆಮೇಲೆ ? '

' ಆಮೇಲೇನು ? ನೀನು ಕಾಲೇಜಿಗೆ ಹೋಗಬಹುದು. ಬೇಕಾದ ನೌಕರಿ ಮಾಡಬಹುದು. ಅನುಕೂಲವಾದ ಹೆಂಡತಿ ಮಕ್ಕಳೊಡನೆ ಸುಖವಾಗಿ ಬಾಳಬಹುದು. '

' ಸುಬ್ಬೂ ? '

' ಅವಳೋ, ಸನ್ಯಾಸಿಯಂತೆ ಕಾಶಿಯಲ್ಲಿ ವಿಶ್ವನಾಥಧ್ಯಾನದಿಂದ ಪವಿತ್ರಳಾಗಿ ಪರಮಪದವಿಯನ್ನು ಪಡೆಯಬಹುದು. '

' ನೀನು ? '

' ನಾನು ! ನನಗೇನು ? '

' ಅದೇ ನೋಡು ! ನನಗೇನು ! ನಮ್ಮ ಹೃದಯಗಳ ಸ್ಥಿತಿ ನಿನಗೆ ಹೇಗೆ ತಿಳಿಯಬೇಕು ! ಪರಮ ಪದವಿ ! ಎಲ್ಲಿ ಕಲಿತೆಯೋ ಈ ಮಾತೆಲ್ಲಾ ! ಏನು, ಗೋವಿಂದರಾಯರ ತರಬೇತೋ ! ಅಥವಾ ನೀನೇ ಕಲ್ಪಿಸಿಕೊಂಡಿಯೋ ? ಅಲ್ಲ, ನಾನೊಂದು ಪ್ರಶ್ನೆ ಕೇಳ್ತೀನೆ, ನೀನು ಕೋಪಿಸಿಕೊಳ್ಳದೆ ಇದ್ದರೆ. '

' ಕೇಳು. '

' ಕೇಳಲೆ ? '

'ಉಂ ಕೇಳು.'

'ಆ ಸುಬ್ಬಿ, ಒಂದು ವೇಳೆ ನಿನ್ನ ತಂಗಿಯೇ ಆಗಿದ್ದರೆ?'

'ಆಗಿದ್ದರೆ....'

'ಆಗಿದ್ದರೆ ಏನು?'

'ಮನೆಯಿಂದಾಚೆಗೆ ಅಟ್ಟಿ ಧರ್ಮವನ್ನು ಉದ್ಧಾರ ಮಾಡುತ್ತಿದ್ದೆ.'

'ಹೌದು, ಮನೆಯಿಂದಾಚೆಗೆ ಅಟ್ಟಿ, ಸ್ಥಳವಿಲ್ಲದಂತೆ ಮಾಡಿ, ತನ್ನ ಜೀವನಕ್ಕಾಗಿ ಪಾಪಕೃತ್ಯಗಳನ್ನು ಮಾಡುವಂತೆ ಮಾಡಿ, ಇಲ್ಲವೆ ಆತ್ಮಹತ್ಯಕ್ಕೆ ಅನುಕೂಲ ಮಾಡಿಕೊಡುತ್ತಿದ್ದೆಯಲ್ಲವೇ? ನಿನ್ನ ತಂಗಿಯೇ ಎಂದುಕೋ, ಈಗ ಹೇಳು.'

'ಏನು ಹೇಳಲಪ್ಪ, ಧರ್ಮಸಂಕಟ!'

'ಇನ್ನೂ ಸ್ವಲ್ಪ ಯೋಚನೆ ಮಾಡು. ತಪ್ಪು ನನ್ನದೆಂದುಕೋ. ಅವಳು ಅದಕ್ಕೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕೆ? ನನ್ನ ತಪ್ಪಿಗೆ ನಿನ್ನನ್ನು ಗುರಿಮಾಡುವುದು ಯಾವ ನ್ಯಾಯ?'

'ಸ್ವಲ್ಪ ಯೋಚನೆ ಮಾಡಿ ಹೇಳುತ್ತೇನಪ್ಪ. ಒಂದು ದಿನ ಸ್ವಲ್ಪ ಪುರುಸೊತ್ತು ಕೊಟ್ಟರೆ, ಯೋಚನೆಮಾಡಿ ಹೇಳ್ತೇನೆ.'

'ನೀನು ಹೇಳೋದೇನು! ನಾನು ಸ್ಥಿರಬುದ್ಧಿಯಿಂದ ಒಂದೇ ದಾರಿ ಹಿಡಿದಿದ್ದೇನೆ. ಆದರೆ ಬೇರೊಂದು ಇದಕ್ಕಿಂತ ಒಳ್ಳೆಯದಾದರೆ ಅದನ್ನೇ ಹಿಡಿಯುತ್ತೇನೆ.'

—

## ೪

ಶ್ರೀಧರಶಾಸ್ತ್ರಿಗಳು ಬಹಳ ಬಡವರು. ಆದರೆ ಆ ಊರಿನಲ್ಲಿ ಅವರು ಎಲ್ಲರಿಗೂ ಗೊತ್ತೇ. ಶ್ರೀಧರಶಾಸ್ತ್ರಿಗಳು ಎಂದರೆ ಹುಡುಗರಿಗೆ ಗೊತ್ತಾಗದಿದ್ದರೂ, ಮಾರ್ಜಾಲಶಾಸ್ತ್ರಿಗಳು ಎಂದರೆ, ಹುಡುಗರಿಗೂ ಗೊತ್ತೇ. ಇವರು ಬೆಕ್ಕಿನಂತೆಯೇ ಕೆಲಸ ಮಾಡೋದು. ಎಲ್ಲಿ ಏನು ಸಿಕ್ಕರೂ ಬೆಕ್ಕಿನ ಹಾಗೆಯೇ

ಎಗರಿಸಿಬಿಡೋದು. ಏನೂ ಸಿಕ್ಕದೆ ಇದ್ದ ಕಡೆ ಮಂತ್ರಗಳನ್ನಾದರೂ ಎಗರಿಸಿ ಬಿಡೋದೇ! ಇವರಿಗೆ ರಾಮೂನ ಮೇಲೆ ಕಣ್ಣಿತ್ತು; ಎಂದರೆ ತಮ್ಮ ಮಗಳನ್ನು ಅವನಿಗೆ ಗಂಟು ಹಾಕಿ ತಮ್ಮ ಳಿಯನನ್ನು ಮಾಡಿಕೊಂಡು, ಅವನನ್ನು ಮನೆಯಲ್ಲಿಯೇ ಇಟ್ಟುಕೊಂಡು, ಬೆಳೆಸಬೇಕೆಂಬಾಸೆ ಬಹಳವಾಗಿತ್ತು. ರಾಮೂನ ತಾತಂದಿರು ಒಪ್ಪಿದರು. ಆದರೆ ಶೀನಪ್ಪ ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ. ಮಗಳನ್ನು ಕೊಡೋದಕ್ಕೆ ಮನೆಗೆ ಬಂದವರನ್ನು ಹೀಗೆ ನಿರಾಕರಿಸಿದರೆಂದು ಮಾರ್ಜಾಲಶಾಸ್ತ್ರಿಗಳಿಗೆ ಬಹಳ ಕೋಪ. ಏನಾದರೂ ಮಾಡಿ ಶೀನಪ್ಪನಿಗೆ ಬುದ್ಧಿ ಕಲಿಸಬೇಕೆಂದು ಯೋಚನೆ ಮಾಡಿದರು.

ಹೇಗೋ ವೀರರಾಘವಶಾಸ್ತ್ರಿಗಳು ರಾಮೂನ ಮೇಲೆ ಕೋಪ ಮಾಡಿಕೊಂಡಿದ್ದಾರೆಂದು ತಿಳಿದು ಅವರ ಮೂಲಕ ತಮ್ಮ ಸೇಡು ತೀರಿಸಿಕೊಳ್ಳಬಹುದೆಂದು ಅವರ ದರ್ಶನಾರ್ಥವಾಗಿ ಹೊರಟರು. ವೀರರಾಘವಶಾಸ್ತ್ರಿಗಳೇನೋ ಬಹಳ ಒಳ್ಳೆಯವರೇ. ಆದರೆ ದುಡ್ಡಿನ ವಿಚಾರದಲ್ಲಿ ಅವರಿಗೆ ಸ್ವಲ್ಪ ಪಕ್ಷಪಾತ. ಯಾವ ಕೆಲಸ ಮಾಡಿದರೂ ದುಡ್ಡಿಗಾಗಿಯೇ ಅಲ್ಲವೆ? ಕೆಲಸಕ್ಕೆ ಪ್ರಾಶಸ್ತ್ಯವನ್ನು ಕೊಟ್ಟು ದುಡ್ಡಿಗೆ ದೃಷ್ಟಿ ಕೊಡದಿರುವುದು ಬಹಳ ತಪ್ಪು ಎಂಬುದನ್ನು ಬಹಳ ಕಡೆ ಸಾರಿದ್ದರು. ಒಂದು ದಿನ ಅವರು ನಮ್ಮ ಮನೆಗೆ ಬಂದಾಗ ಅದೂ ಇದೂ ಮಾತನಾಡುತ್ತ ತಮ್ಮ ಮನೆಯವರು (ತನ್ನ ಹೆಂಡತಿ) ಹೇಳಿದ ವಿಚಾರವನ್ನು ಬಹಳ ಸ್ವಾರಸ್ಯವಾಗಿ ವರ್ಣಿಸಿದರು.

ಅವರ ಸಲವತ್ತೈದನೆಯ ವಯಸ್ಸಿನಲ್ಲಿ ಅವರಿಗೆ ಯಜ್ಞ ಮಾಡಬೇಕೆಂಬ ಬುದ್ಧಿ ಹುಟ್ಟಿತಂತೆ. ಅದಕ್ಕಾಗಿ ಅವರು ದೇಶದೇಶಗಳನ್ನು ತಿರುಗಬೇಕೆಂದು ಸಂಕಲ್ಪ ಮಾಡಿ, ಯಾವ ವಿಚಾರವನ್ನೂ ತನ್ನ ಅರ್ಧಾಂಗಿಯೊಡನೆ ಯೋಚಿಸಿ ನಿಶ್ಚಯಿಸಬೇಕೆಂಬ ಕುತೂಹಲದಿಂದ ಒಂದು ದಿನ ಸಾಯಂಕಾಲ ಎಲೆ ಅಡಿಕೆಯನ್ನು ಅಗಿಯುತ್ತಾ ತಮ್ಮವರನ್ನು (ತನ್ನ ಹೆಂಡತಿಯನ್ನು) ಕರೆದರಂತೆ. 'ಎಲೆ ಲೇ, ಏನ್ಮಾಡ್ತಾಯಿದ್ದೀಯೆ? ಸ್ವಲ್ಪ ಹೀಗೆ ಬಾರೆ.' ಇದಕ್ಕೆ ಪ್ರತ್ಯುತ್ತರ ಒಳಗಡೆಯಿಂದಲೇ ಬಂತಂತೆ. 'ಆಸಿಸಿ, ಏನಂದರೆ ಹಾಗೆ ಬೀದೀಲಿ ಕೂತುಕೊಂಡು ಕೂಗುತಾಯಿದ್ದೀರಿ.'

'ಅಲ್ಲೇ, ಲೇ, ಸ್ವಲ್ಪ ಹೀಗೆ ಬಾ. ನಿನ್ನ ಮುದ್ದುಮುಖ, ಸ್ವಲ್ಪ ತೋರಿಸೆ. ಒಳಗಿನಿಂದ ಮಾತಾಡುತೀಯಲ್ಲೇ!'

'ಅಯ್ಯೋ, ನಿಮ್ಮದಿರೋದೆ. ವಯಸ್ಸಾಗುತ ಆಗುತ ಇದೇನೋ ವಿಪರೀತವಾದ ಹಾಗೆ ಕಾಣುತ್ತೆ. ಈ ಚಕ್ಕಂದಕ್ಕೆ ಬೀದೀಲಿ ಏಕಂದರೆ?'

'ಅಲ್ಲೇ, ನಾನು ಒಂದು ದೊಡ್ಡ ಯಾಗ ಮಾಡಬೇಕು ಅಂತ ಆಲೋಚನೆ ಮಾಡತಾ ಇದ್ದೇನೆ. ನೀನು ಏನು ಹೇಳುತೀಯೋ ಎಂತ?'

'ಯಾಗ! ಯಾಗ ಎಂದರೇನ್ರೀ ಈಗ! ಚೆನ್ನಾಯಿತು. ಬೆಳಿಗ್ಗಿನಿಂದ ಸಾಯಂಕಾಲದ ವರೆಗೂ ಈಗ ಒಲೆ ಮುಂದೆ ಕೂತು ಸಾಯುತಿರೋದು ಸಾಲದೆ! ಇನ್ನೂ ದೊಡ್ಡ ಬೆಂಕಿ ಮುಂದೆ ಕೂಡಿಸಿ ನನ್ನ ಸಜೀವವಾಗಿ ಸುಡಬೇಕು ಅಂತ ಮಾಡೀರೇನು?'

'ಸಾವಧಾನವಾಗಿ ಕೇಳಿ, ಆಮೇಲೆ ನಿನ್ನ ಪ್ರಶಂಸೆ ನಡೆಯಲಿ. ಅಲ್ಲೇ, ಯಾಗ, ಯಜ್ಞ, ಎಂದರೆ ಯಾರಾದರೂ ದುಡ್ಡು ಬಿಚ್ಚತಾರೆ. ಒಂದು ಹತ್ತು ಸಾವಿರ ಸಂಪಾದನೆಯಾಗುತ್ತೆ!'

'ಹತ್ತು ಸಾವಿರ ಸಂಪಾದನೆ, ಇಪ್ಪತ್ತು ಸಾವಿರ ಖರ್ಚು. ಮಿಕ್ಕದ್ದು ನಾನು ಬೆಂಕಿ ಮುಂದೆ ಕೂತದ್ದು, ಅವರಿವರ ಕೈಲಿ ಅನ್ನಿಸಿಕೊಂಡದ್ದು, ನನಗೆ ಲಾಭ!'

'ಏನೆ, ಹೀಗಂತೀಯಲ್ಲೆ. ಬಂದ ಹಣ ಎಲ್ಲಾ ಖರ್ಚು ಮಾಡೋಕೇನು ನಾನು ಯಾಗ, ಯಜ್ಞ, ಎಂದದ್ದು. ಬಂದದ್ದರಲ್ಲಿ ಕಾಲುಭಾಗವನ್ನೇ ಖರ್ಚು ಮಾಡೋದು; ಮುಕ್ಕಾಲು ಭಾಗ ನಮಗೇ.'

'ನನಗೆ ಎನ್ನಿ. ನಮಗೆ ಎಂತ ಯಾಕಂತೀರಿ! ನಿಮಗೆ ಬಂದಾಗಲೆಲ್ಲಾ ನನಗೇನು ಕೊಟ್ಟೀರಿ? ಯಾರಾದರೂ ಏನಾದರೂ ದಕ್ಷಿಣೆ ತಂದು ಕೊಟ್ಟರೆ, ತಾಂಬೂಲ ತಂದು ಕೊಟ್ಟರೆ, ಆ ದಕ್ಷಿಣೆಯೆಲ್ಲಾ ಸೊಂಟಕ್ಕೆ ಸಿಕ್ಕೊಂಬೋದು, —ಎಲೇ, ಇದು ಒಳಗಿಡು—ಎಂಬೋದು. ಕೇಳಿದೋರು, ಪಾಪ, ಏನು ಮನುಷ್ಯರಪ್ಪ! ಎಲ್ಲಾ ಹೆಂಡತೀ ಕೈಲೇ! ಎಂದುಕೊಳ್ಳೋ ಹಾಗೆ. ಆಗಲಿ, ಹತ್ತು ಸಾವಿರ ರೂಪಾಯಿ ನೀವು ತರಬೇಕಾದರೆ ಎಷ್ಟು ವರ್ಷ ಆಚೆ ತಿರುಗಾಡಬೇಕು? ಅದುವರಿವಿಗೂ ನಾನಿಲ್ಲಿ ಏನು ಮಾಡಬೇಕು?'

'ಎಲೆ, ಲೆ, ಒಂದು ವರ್ಷ—ಅಷ್ಟೇ, ನೋಡು. ಈಗ ಜೇಷ್ಠ, ಕಳೆಯಿತು ಎನ್ನು. ಬರುವ ವರ್ಷ ಶ್ರಾವಣಮಾಸಕ್ಕೆ ಎಲ್ಲಾ ಸರಬರಾಯಿ.'

'ಅಲ್ಲ ಅಂದರೆ, ಹೇಳಿದರೆ ಸಿಟ್ಟಾಗತೀರಿ. ನನಗೆ ಊಟಕ್ಕೇನು? ಮನೆಯಲ್ಲಿ ಅಕ್ಕೀಕಾಳಿಲ್ಲ.'

'ಅಯ್ಯೋ ಅಯ್ಯೋ, ಅದೇ ನೋಡು ಇರೋದು ಸ್ವಾರಸ್ಯ. ನಾನು ಸಾಲ ಕೇಳಿದರೆ ಯಾರೂ ಕೊಡೋದಿಲ್ಲ. ಆದರೆ ಈ ನೆಪ ಇಟ್ಕೊಂಡು ನಮ್ಮ ಶೆಟ್ಟರನ್ನ ಕೇಳಿದರೆ ಅವರು ವರ್ಷಕ್ಕಾಗೋಷ್ಟು ಅಕ್ಕಿ ಬೇಳೆ ಎಲ್ಲಾ ತಂದ್ಹಾಕ್ತಾರೆ. ಆದರೆ ನೀನಿಷ್ಟು ಮಾಡಬೇಕು. ಒಂದು ಗೊಬ್ಬು ಅನ್ನ ಮಾಡಿಕೊಂಡು ಮಿಕ್ಕಿದ್ದನ್ನೆಲ್ಲಾ ಕಾಸು ಮಾಡಿಕೋಬೇಕು.'

'ಇದಕ್ಕಿಷ್ಟಾತೆಂದರೆ, ನಾನು ನಾಯಿಯ ಹಾಗೆ ಈ ಮನೇಲಿರೋಕೆ ನೀವು ಯಾಗ ಏಕೆ ಮಾಡಬೇಕು?'

'ಅಲ್ಲೇ, ನೋಡು, ಇದರಿಂದ ಯಾಗದ ಕಾಲದಲ್ಲಿ ಇಹಕ್ಕೂ ಸುಖ, ಪರಕ್ಕೂ ಸುಖ. ಬಂದೋರು ಹೋದೋರು ನಿನಗೆ ಸೀರೆ-ಗೀರೆ ಎಲ್ಲಾ ಕೊಡತಾರೆ. ನನಗೆ ಬೇಕಾದ ಹಾಗೆ ಬರುತ್ತೆ. ಅಲ್ಲದೆ ಪರಲೋಕದಲ್ಲಿ ನನಗೆ ರಂಭಾದಿ ಅಪ್ಸರ ಸ್ತ್ರೀಯರ ಆದರ ದೊರೆಯುತ್ತೆ. ಆ ಪುಣ್ಯದಲ್ಲಿ ನಿನಗೂ ಅರ್ಧ ಭಾಗ!'

'ಅಲ್ಲ ಅಂದರೆ, ನಿಮಗೇನೋ ರಂಭಾದಿ ಅಪ್ಸರ ಸ್ತ್ರೀಯರ ಆದರ ಸಿಗುತ್ತೆ! ನಾನು ಸ್ವರ್ಗಕ್ಕೆ ಹೋದರೆ, ನನಗೇನು ಆದರ ಬೇಡವೆ? ಎಲ್ಲಾ ನಿಮಗೇ ಏನೋ!'

ಈ ಮಾತಿನಿಂದ ರಾಘವಯ್ಯನವರಿಗೆ ಜ್ಞಾನೋದಯವಾಯಿತು. ಅಂದಿನಿಂದಾಚೆಗೆ ಅವರು ಯಾಗ ಯಜ್ಞದ ಮಾತಿನ ಗೋಜಿಗೆ ಹೋಗುತ್ತಿರಲಿಲ್ಲ. ಈ ವಿಚಾರವನ್ನು ಯಾವ ಮದುವೆಯಾದ ಹೊಸ ಯುವಕನು ಇವರ ಕಣ್ಣಿಗೆ ಬಿದ್ದರೂ ಇವರು ಹೇಳದೆ ಬಿಡುತ್ತಿರಲಿಲ್ಲ.

ಇಂತಹ ವ್ಯಕ್ತಿಗಳ ಮನೆಗೆ ಶ್ರೀಧರಶಾಸ್ತ್ರಿಗಳು ಹೊರಟರು. ಮುಹೂರ್ತ ಬಹಳ ಚೆನ್ನಾಗಿತ್ತು ಎಂತ ತೋರುತ್ತೆ. ಬಾಗಲಲ್ಲೇ ರಾಘವ ಶಾಸ್ತ್ರಿಗಳು ತಕಳಿ ತಿರುವುತ್ತ ಕುಳಿತಿದ್ದರು. ಬೀದಿಯಿಂದಲೇ ಮಾರ್ಜಾಲ ಶಾಸ್ತ್ರಿಗಳು ಕೈಜೋಡಿಸಿಕೊಂಡು ಪ್ರಾರಂಭಿಸಿದರು.

'ನಮೋನಮಃ. ನನ್ನ ಪುಣ್ಯವೇ ಪುಣ್ಯ!......ಏನೋ ವಿಚಾರ ಯೋಚನೆ ಮಾಡೋ ಹಾಗೆ ತೋರುತ್ತೆ?'

'ಏನೂ ಇಲ್ಲ ಬನ್ನಿ. ಕೂತುಕೊಳ್ಳಿ. ಬಹಳ ಅಪುರೂಪ! ನೋಡಿ, ಈಗ ನೀವು ಕೂತುಕೊಂಡಿರಿ. ನಾನು ಕೂತುಕೊಳ್ಳಿ ಎಂದೆ. ನಮ್ಮಿಬ್ಬರ ಮಾನಕ್ಕೆ ಏನು ಕಡಿಮೆಯಾಯಿತು? ಅಲ್ಲ ಶಾಸ್ತ್ರಿಗಳೆ, ಆ ಶೀನಪ್ಪನಿಗೆ ನಿಮ್ಮ ವಿಚಾರದಲ್ಲಿ ಇಷ್ಟಾದರೂ ಇಲ್ಲವಾಯಿತಲ್ಲ!'

'ಏನೋ ತಾಪತ್ರಯ, ಪಾಪ.'

'ನೀವು ಬಹಳ ಮೃದು ಸ್ವಭಾವದವರು ಹಾಗಂತೀರಿ. ಆದರೆ ನನಗೇನೊ ತೋರಲಿಲ್ಲ, ಏನು ಕಷ್ಟ, ಏನು ತಾಪತ್ರಯ?'

'ಹೌದು ಶಾಸ್ತ್ರಿಗಳೆ, ಎಲ್ಲರಿಗೂ ಹಾಗೇ. ನಾಯಿ ಮುಟ್ಟಿದ ಗಡಿಗೆ ಯನ್ನು ಏನು ಮಾಡುತ್ತೀರಿ?'

'ಮಾಡೋದೇನು, ಹೊರಗೆ ಬಿಸಾಡೋದು.'

'ಆದರೆ, ಅದು ಮನೆಯ ಮಗುವಾದರೆ?'

'ಅದೇ ಧರ್ಮಸಂಕಟ! ಒಂದು ಧರ್ಮಸೂಕ್ಷ್ಮ ನೋಡಿ. ನಿಮಗೆ ಅದನ್ನೆಲ್ಲಾ ಹೇಳಬೇಕಾಗಿದೆಯೆ! ಆದರೂ ಕಿಂಚಿತ್......'

'ಹೇಳಿ, ಹೇಳಿ, ಪರವಾಯಿಲ್ಲ.'

'ಅನ್ಯಥಾ ಭಾವಿಸಬಾರದು. ನಮ್ಮ ಬ್ರಾಹ್ಮಣ್ಯವು ಕೇವಲ ಸಾಂಪ್ರ ದಾಯದ ಮೇಲೆ ನಿಂತಿದೆ. ಅದರಲ್ಲಿ ಬಹಿರಂಗ ಸಾಂಪ್ರದಾಯ, ಗುಪ್ತ ಸಾಂಪ್ರದಾಯ. ಗುಪ್ತವಾಗಿ ರಹಸ್ಯಗಳನ್ನು ನರಿಪಡಿಸಿಕೊಳ್ಳದಿದ್ದರೆ ಬಹಿರಂಗ ಸಾಂಪ್ರದಾಯವು, ಬ್ರಾಹ್ಮಣ್ಯವು, ಹೇಗೆ ತಾನೆ ಉಳಿದೀತು?'

'ಅಂದರೆ?'

'ಅಂದರೆ, ಆಪದ್ಧರ್ಮಗಳು ಕೆಲವುಂಟು. ಅವುಗಳನ್ನು ಮಾಡುವು ದಕ್ಕೂ ಬಿಡುವುದಕ್ಕೂ ನಮಗೆ, ಬ್ರಾಹ್ಮಣರಿಗೆ, ಸರ್ವ ಸ್ವಾತಂತ್ರ್ಯವುಂಟು.'

'ಹಾಗಾದರೆ ಪಾಪ ಪುಣ್ಯಗಳಿಲ್ಲವೆ?'

'ಉಂಟು. ಆದರೆ ಅವು ಯಾರಿಗೆ? ನಮ್ಮ ನಿಮ್ಮಂತಹ ಜ್ಞಾನಿಗಳಿಗಲ್ಲ. ಜ್ಞಾನಿಗಳಿಗೆ ಇವೆಲ್ಲವೂ ಕೇವಲ ಚಿತ್ತವೃತ್ತಿಗಳು. ಪ್ರಕೃತೇಃ ಕ್ರಿಯ ಮಾಣಾನಿ..ಏನು ಶಾಸ್ತ್ರಿಗಳೇ, ಗೀತಾವಾಕ್ಯ! ಒಳ್ಳೆದಾಗಲಿ, ಕೆಟ್ಟದ್ದಾಗಲಿ, ಪಾಪವಾಗಲಿ, ಪುಣ್ಯವಾಗಲಿ ನಾನು ಮಾಡ್ತೇನೆ ಎಂತ ಹೇಳೋದು

ಕೇವಲ ಅಹಂಕಾರ. ' ಯಾ ತದಭಿಮಾನಂ ಕಾರಯತಿ ಸಾ ಹ್ಯಾವಿದ್ಯಾ. ಸೋಽಭಿಮಾನೋ ಯಯಾ ನಿವರ್ತತೇ ಸಾ ವಿದ್ಯಾ.'

' ಸನಾತನ ಧರ್ಮ ರಕ್ಷಿಸಬೇಕು. '

' ಹೌದು ಶಾಸ್ತ್ರಿಗಳೆ, ರಕ್ಷಿಸಬೇಕು. ಆದರೆ ಸಂಸಾರವು ದೊಡ್ಡ ಸಾಗರ. ಇದರಲ್ಲಿ ಅನಾಹುತಗಳೆಷ್ಟೋ ! ಅವುಗಳನ್ನೆಲಾ ಬಹಿರಂಗಪಡಿಸಿದಲ್ಲಿ ನಮ್ಮ ಸಮಾಜಕ್ಕೇ, ನಮ್ಮ ಸನಾತನ ಧರ್ಮಕ್ಕೇ ಮಸಿ ಬಳೆದ ಹಾಗೆ ! ಅಂತಹ ಧರ್ಮರಾಯ ಸುಳ್ಳಾಡತಕ್ಕವನೇ ? '

' ಜನರ ಕಿವಿಯ ಮೇಲೆ ಬಿದ್ದರೆ ಆಗ....'

' ಅದೇ ಶಾಸ್ತ್ರಿಗಳೇ, ಅವರ ಕಿವೀ ಮೇಲೆ ಮಟ್ಟಿಗೆ ಬೀಳದಂತೆ ನೋಡಿಕೊಳ್ಳಬೇಕು. ನಮ್ಮಲ್ಲಿ ಯಾರು ತಾನೇ ತಪ್ಪೆಣಿಸುವರು ! ನಿಮಗೆ ಏನು ಕೊರತೆ ! ಬೆಳಿಗ್ಗೆ ಎದ್ದು ಸ್ನಾನ ಸಂಧ್ಯಾವಂದನೆ ಮಾಡುತ್ತೀರಿ. ವ್ರತಗಳನ್ನೆಲ್ಲಾ ಇಟ್ಟುಕೊಂಡಿದ್ದೀರಿ. ಎಲ್ಲಕ್ಕೂ ಮೇಲಾಗಿ ವೇದಾಧ್ಯಯನ ! ' ಯಸ್ತ್ವಧೀತೇವಾ ಸರ್ವಪಾತಕೇಭ್ಯಃ ಪೂತೋ ಭವತಿ, ಪಾಪ ಬುದ್ಧಿಸ್ತಸ್ಯ ನಜಾಯತೇ, ಸಸರ್ವೇಷು ತೀರ್ಥೇಷು ಸ್ನಾತೋ ಭವತಿ, ಸಸರ್ವೈರ್ಯಜ್ಞೈ ರಾಜಿತೋ ಭವತಿ, ಸಸರ್ವೈರ್ದೇವೈಃ ಪೂಜ್ಯೋ ಭವತಿ ನೋಡೋದಕ್ಕೆಲ್ಲಾ ಮೇಲೆ ಚೆನ್ನಾಗಿದ್ದರೆ ಸರಿ. ಆನೆಗೆ ದಂತಗಳಿದ್ದಂತೆ– ತಿನ್ನೋಕೆ ಬೇರೆ, ತೋರಿಸೋಕೆ ಬೇರೆ. '

' ಏನಯ್ಯಾ, ಏನೋನೋ ಮಾತಾಡುತಾಯಿದ್ದೀ ! '

' ರಹಸ್ಯವಾಗಿ ಎಲ್ಲವನ್ನೂ ಮುಗಿಸಿಕೊಂಡು ಬಿಡಿ. '

' ಏನು ರಹಸ್ಯ ! ನಿನ್ನ ತಲೆ ! ನಾನೇನೊ ಗೋವಿಂದರಾಯರ ವಿಚಾರ ಸಂಶಯ ಪರಿಹರಿಸೋಣ ಎಂತ ಮಾತಾಡಿದರೆ ನನಗೇ ನೀರು ಕುಡಿಸ್ತಾಯಿದ್ದೀ ! '

ಶಾಸ್ತ್ರಿಗಳೇ, ಮಹಾಪರಾಧದ ವಿಚಾರ ತಿಳಿಯಲಿಲ್ಲ. ಏನು ಗೋವಿಂದರಾಯರ ಮನೆ ವಿಚಾರ ? ಅವರ ಮಗಳು ಸುಬ್ಬಮ್ಮ ಚೆನ್ನಾಗಿದ್ದಾಳಲ್ಲ ? '

' ಅದೇಸಯ್ಯಾ ಬಂದಿರೋದು ! '

' ಅಂಥಾ ವಿಚಾರವೇನು ಬಂದಿದೆ ಶಾಸ್ತ್ರಿಗಳೇ ? '

' ಏನೂ ಇಲ್ಲ. ಸುಬ್ಬೂ ರಾಮೂ, ಅಷ್ಟೇ....'

'ಏನು ಸುಬ್ಬೂ–ರಾಮೂ ? ನನಗೊಂದೂ ಅರ್ಥವಾಗಲಿಲ್ಲಪ್ಪ.'

'ಅವರಿಬ್ಬರೂ ಮದುವೆ ಮಾಡಿಕೋಬೇಕೆಂದಿದ್ದಾರೆ.'

'ರಾಮ, ರಾಮ ! ಶಾಸ್ತ್ರೀಗಳೇ, ಮೊದಲೇ ಹೇಳಬಾರದಿತ್ತೆ ! ಇದು ಬ್ರಾಹ್ಮಣ್ಯಕ್ಕೆ ಎಂತಹ ಅಪವಾದ ! ನಮ್ಮ ಹಿಂದೂಧರ್ಮಕ್ಕೇ ಮೋಸ. ಏನಾದರೂ ಮಾಡಿ ಇದನ್ನು ನಿಲ್ಲಿಸಿಯೇ ಬಿಡಬೇಕು.'

'ಏನು ಶಾಸ್ತ್ರಿಗಳೇ, ಆಗೇನೋ ಬಹಳ ಗೀತೆಯ ಉಪದೇಶ ಮಾಡುತ್ತಾ ಇದ್ದಿರಲ್ಲ !'

'ಶಾಸ್ತ್ರಿಗಳೆ, ಇಲ್ಲಿ ನೋಡಿ. ಗೀತೆಯಲ್ಲಿ ಹೇಳಿರುವುದೇನು ? ಬೇಕಾದ್ದಾಗಲಿ ಮಾಡುವ ಕೆಲಸವನ್ನು ಮಾಡಿಯೇಬಿಡಬೇಕು. ತನ್ನವರನ್ನೆಲ್ಲಾ ಕೊಂದು ರಾಜ್ಯಭಾರ ಮಾಡುವುದಕ್ಕೆ ಬದಲು ತಾನೇ ಸಾಯುವುದು ಮೇಲಂದಾಗಲಿಲ್ಲವೆ ಕೃಷ್ಣಪರಮಾತ್ಮ ಹೇಳಿದ್ದು ? ಮಾಡುವವರಾರು, ಮಾಡಿಸುವವರಾರು ! ಎಲ್ಲಾ ನಾನೇ, ಎಲ್ಲವೂ ನನಗೆ ಸೇರಿದ್ದೇ !— ತತ್ಕುರುಷ್ವ–ಮದರ್ಪಣಂ—ಶಾಸ್ತ್ರೀಗಳೇ, ಹಿಂತೆಗೆಯಬೇಡಿರಿ. ಮಾಡೇ ಮಾಡಿ. ಒಂದು ವೇಳೆ ಕೇಡೇನಾದರೂ ಬಂದರೆ, ಸನಾತನಧರ್ಮಕ್ಕಾಗಿ ನಾನು ತಲೆ ಕೊಡುವೆ. ನನ್ನ ತಲೆಯ ಮೇಲಿಡಿ.'

'ಉಂಟೆ? ಇದು ಬ್ರಾಹ್ಮಣರ ಕೆಲಸ. ಆಗಲಿ ಯೋಚನೆ ಮಾಡೋಣ.'

'ನಿಮ್ಮಂಥಾವರು ಮಾಡಿದರೆ, ಅದು ನಡಿಯದೆ ಹೋಗೋಣ ಎಂದರೇನು ! ಬನ್ನಿ, ಮಾಡೇಬಿಡಬೇಕಂದರೆ‥ ಇಲ್ಲದಿದ್ದರೆ ನಮ್ಮಿಬ್ಬರಿಗೂ ಅತಿ ಘೋರವಾದ ನರಕ !'

—

೫

ಗೋವಿಂದರಾಯರಿಗೆ ರಾತ್ರಿ ನಿದ್ದೆಯಿಲ್ಲ. ಮನಸ್ಸಿನಲ್ಲೇ ಕೊರಗುತ್ತ, ಪ್ರಶ್ನೆಗಳನ್ನು ಹಾಕಿಕೊಂಡು ಅವುಗಳಿಗೆ ತಾವೇ ಉತ್ತರಗಳನ್ನು ಕೊಟ್ಟು ಕೊಳ್ಳುತ್ತಿದ್ದರು. 'ಕಾಽವಿದ್ಯಾ? ಯಾತದಭಿಮಾನಂ ಕಾರಯತಿ ಸಾಹ್ಯಾ ವಿದ್ಯಾ' ಅಭಿಮಾನವನ್ನುಂಟುಮಾಡುವುದು ಅವಿದ್ಯೆ ಎಂದರು. ಇಲ್ಲ, ನನಗೆ 'ಅಭಿಮಾನವು ಹೆಚ್ಚು ಎನ್ನಬೇಕು.' ಸೋಽಭಿಮಾನೋ ಯಯಾ ನಿವರ್ತತೆ

ಸಾ ವಿದ್ಯಾ.' ಹೋಗಬೇಕು! ನಾನು ಇದನ್ನೆಲ್ಲ ಬಿಟ್ಟುಬಿಡಬೇಕು. ಆದರೆ ಬ್ರಾಹ್ಮಣ್ಯ? 'ಕೋವಾ ಬ್ರಾಹ್ಮಣೋ ನಾಮ? ಯಃ ಕಶ್ಚಿದಾತ್ಮಾನಂ ಅದ್ವಿತೀಯಂ ಇತ್ಯಾದಿ..' ಛೆ! ಛೆ! ಇನ್ನು ಮುಂದಕ್ಕೆ ಹೋದರೆ ನನಗೆ ಬ್ರಹ್ಮಹತ್ಯ ದೋಷವೇ ಬರುತ್ತೆ! ಇಲ್ಲ, ಇಲ್ಲ, ಶಾಸ್ತ್ರಿಗಳು ಹೇಳೋದೇ ಸರಿ. ನಮ್ಮ ಧರ್ಮವನ್ನು ರಕ್ಷಿಸುವುದಕ್ಕೆ ಎಲ್ಲಾ ಬಿಡಬೇಕಾದ್ದೇ. 'ಗುರುಭಕ್ತಿಃ, ತತ್ವ ಮಾರ್ಗಾನುರಕ್ತಿಃ, ಸುಖಾನುಗತ ವಸ್ತ್ವನುಭವಶ್ಚ, ತದ್ವಸ್ತ್ವನುಭವೇನ ತುಷ್ಟಿಃ, ನಿಸ್ಸಂಗತಾ, ಏಕಾಂತವಾಸೇನ ಮನೋ ನಿವೃತ್ತಿಃ, ಫಲಾನಭಿಲಾಷೋ, ವೈರಾಗ್ಯಭಾವಶ್ಚ ನಿಯಮಾಃ..'

ಹೀಗೆಯೇ ಯೋಚನೆಮಾಡುತ್ತ ರಾತ್ರಿಯನ್ನು ಕಳೆದು ಬೆಳಗ್ಗೆ ಮಗಳೊಡನೆ ಮಾತನಾಡಲು ಪ್ರಾರಂಭಿಸಿದರು. ಎಂದಿನಂತೆ ಸುಬ್ಬೊ 'ನಾನೇನು ಮಾಡಬೇಕು ಎಂತೀಯಪ್ಪಾ? ನೀನು ಹೇಳಿದ್ದನ್ನ ಮಾಡ್ತೇನೆ. ಆದರೆ....' ಎಂದಳು.

'ಏನೂ ಇಲ್ಲ. ನಮ್ಮ ಶ್ರೀಧರಶಾಸ್ತ್ರಿಗಳು ಹೇಳಿದಂತೆ ಮಾಡಬೇಕು.'

'ಏನು ಆ ಮಾರ್ಜಾಲಶಾಸ್ತ್ರಿಗಳು ಹೇಳಿದ್ದು?'

'ಏನೂ ಇಲ್ಲ. ಹೇಗೋ ಹಾಗೆ ಇದನ್ನ ಪರಿಹರಿಸಿಕೊಂಡುಬಿಟ್ರೆ..'

'ಹರಿಸಿಕೊಳ್ಳೋದು ಎಂದರೆ ಏನು?'

'ಏನೇ, ಮುಗಿಸಿಬಿಡೋದು.'

'ಏನಪ್ಪ, ಹತ್ಯ!'

'ರಹಸ್ಯವಾಗಿ ಹತ್ಯಮಾಡಿಕೊಂಡುಬಿಡು. ನಿನ್ನ ಮಾತೇ ನಿನಗೆ ಫಲಿಸಲಿ!'

'ಫಲಿಸುತ್ತಪ್ಪ!'

'ನನಗಷ್ಟೇ ಬೇಕಾದದ್ದು. ನಿನ್ನ ಕರ್ಮದ ಫಲ ನೀನು ಅನುಭವಿಸಬೇಕು. ನನ್ನ ಕಣ್ಣ ಮುಂದಿರದಂತಾದರೆ ಸಾಕು!'

'ಹಾಗೇ ಆಗಲಪ್ಪ!'

—

ಶೇಷಗಿರಿರಾಯರು ತಮ್ಮ ಕೆಲಸದಿಂದ ನಿವೃತ್ತರಾದರು. ಆದಾಗ್ಯೂ ಹುಡುಗರಿಗೆ ಪಾಠ ಹೇಳುವದನ್ನೇನೋ ಬಿಡಲಿಲ್ಲ. ಮಧ್ಯಾಹ್ನ ಅವರಿಗೆ ಬಿಡುವು. ಊಟ ಮಾಡಿದ ಮೇಲೆ ಒಂದು ಗಂಟೆ ಹೊತ್ತು ಹಾಗೆ ಮಲಗಿ ಆಮೇಲೆ ' ವಾಕಿಂಗ ' ಹೊರಡೋದು. ಹೀಗೆ ವಾಕಿಂಗ್ ಹೊರಡೋದಕ್ಕೆ ಮುಂಚೆ ನಾನು ಅವರ ಮನೆಗೆ ಹೋದೆ.

ಎದ್ದು ಕೂತಿದ್ದರು. ಇನ್ನೂ ಬಾಗಿಲಲ್ಲಿ ನಿಂತ ಹಾಗೇ, 'ಏನೋ ಮಗೂ, ಬಂದುಬಿಟ್ಟೆ? ರಾಮೂ ಎಲ್ಲೋ ? ' ಎಂದರು.

' ಅದೇ ವಿಚಾರಕ್ಕೇ ಬಂದೆ. '

' ಸರಿ, ಕೂತಕೋ. ಏನು ಸಮಾಚಾರ ? '

' ನಿಮಗೆಲ್ಲಾ ತಿಳಿದೇ ಇದೆ. ಇವತ್ತು ಸುಬ್ಬಗೆ ಅವರ ತಂದೆ ಹೇಳಿ ಬಿಟ್ಟರು, ಕಣ್ಣು ಮುಂದಿರದಿದ್ದರಾಯಿತು ಎಂತ. '

' ಏನೋ ಹಾಗಂದರೆ ? '

' ಕಣ್ಣು ಮುಂದಿರದಿದ್ದರಾಯಿತು, ಎಂತ ! '

' ಯಾರು ? ಯಾವುದು ? ಏನು ಕಥೆ ಇದು ?

' ಅದನ್ನೇ ಹೇಳೋಣ ಎಂತ ಬಂದೆ ಮೇಷ್ಟ್ರು. ನೀವು ಅವರಿಗೆ ಬಹಳ ಬೇಕಾದೋರು. ನೀವು ಏನು ಹೇಳಿದರೂ ಅವರ ಮನೇಲೆಲ್ಲಾರು ಕೇಳ ತಾರೆ. ಏನಾದರೂ ಮಾಡಿ ಉಳಿಸಿಕೊಳ್ಳಬೇಕು. '

' ನಾನೇನು ಮಾಡಲಪ್ಪ ? ಅವರವರ ಕರ್ಮ ಅವರನ್ನ ಬಿಡೋ ಹಾಗಿಲ್ಲ. ಏನೋ ನನ್ನ ಕೈಲಾದ್ದು ಮಾಡ್ತೇನೆ. ಆದರೆ ಗೋವಿಂದ ರಾಯರ ಮನೆಗೆ ಯಾರು ಯಾರು ಹೋಗಿಬರತಾರೆ ಎಂಬೋದನ್ನ ಮಟ್ಟಿಗೆ ನನ್ನ ಕಿವೀಲಿ ಹಾಕ್ತಾಯಿರು. '

' ಆಗಲಿ, ಮೇಷ್ಟ್ರು. '

' ರಾಮೂ ಹ್ಯಾಗಿದ್ದಾನೋ ?

' ಒಂದು ಮಾದರಿಯಾಗಿದ್ದಾನೆ. ನನ್ನ ಜೊತೇಲೂ ಮಾತಾಡ್ತಾಯಿಲ್ಲ ಊಟ ಬಿಟ್ಟು ಬಿಟ್ಟ ಹಾಗೇ. ಅವರಮ್ಮ ಕೂಡ ಹಾಸಿಗೆ ಹತ್ತಿಬಿಟ್ಟಿದ್ದಾಳೆ.'

' ಒಳ್ಳೇ ಮನೆತನ, ಪಾಪ ! ಮನುಷ್ಯ ಯುಗಧರ್ಮಕ್ಕೆ ಮುಂದಿದ್ದರೆ ಇದೇ ಗತಿ ನೋಡು ಅವನಿಗೆ. ಇವತ್ತು ಸಾತೀನ ನೋಡಿಕೊಂಡು ಬರತೇನೆ.'

* * * * * *

ಸಾತೀಗೆ ಖಾಯಿಲೆ ಹೆಚ್ಚಾಗುತ್ತಾ ಬಂತು. ಮನೋರೋಗಕ್ಕೆ ಯಾವ ಔಷಧಿ ತಾನೆ ಹಿಡದೀತು ! ರಾಮು ಹಗಲು ರಾತ್ರಿ ಎನ್ನದೆ ಕೆಲಸ ಮಾಡುತ್ತಾ, ಕೈಲಾದಮಟ್ಟಿಗೆ ತಂದೆಗೆ ಸಹಾಯ ಮಾಡುತ್ತಿದ್ದ. ಕೊನೆ ಕೊನೆಗೆ ಸಾತೀಗೆ ಉಸಿರಾಡುವುದೇ ಕಷ್ಟವಾಯಿತು. ನಾನು ವೈದ್ಯರನ್ನು ಕರೆಯಲು ಈಚೆಗೆ ಬಂದೆ. ರಾಮೂ ಮೆಲ್ಲನೆ ನನ್ನ ಬಳಿ ಬಂದು ' ವೈದ್ಯ ರನ್ನು ಕಳಿಸಿ, ನೀನು ಮೇಷ್ಟ್ರು ಮನೆಗೆ ಹೋಗಿ ಬಾ, ' ಎಂದ.

ವೈದ್ಯರ ಮನೆಗೆ ಹೋದೆ. ಅವರು ಆಗ ತಾನೆ ಊಟ ಮಾಡಿ ಎದ್ದಿದ್ದರು. ಕರೆದೆ. 'ಆಗಲಪ್ಪ, ಬಂದುಬಿಟ್ಟೆ; ಪಾಪ, ನೀನಪ್ಪನಿಗೆ ಗ್ರಹಚಾರ! ' ಎಂದರವರು. ಅಲ್ಲಿಂದ ಬೀದಿಗೆ ಬಂದ ಕೂಡಲೇ ನನ್ನೆದುರಿಗೇ ಮೇಷ್ಟ್ರು ಬಂದರು. ನಾನು ಬಾಯಿ ಬಿಡುವುದಕ್ಕೆ ಮುಂಚೆ ಅವರು ಮೆಲ್ಲನೆ, ' ಕೂಗ ಬೇಡ, ಮಗೂ. ನನ್ನ ಹಿಂದೆ ಬಾ, ' ಎಂದರು.

ಕತ್ತಲು. ಕೈಯಲ್ಲಿ ದೀಪವಿಲ್ಲ. ಕಾಲಲ್ಲಿ ಚಪ್ಪಲಿಯಿಲ್ಲ. ಎಂದೂ ಈ ವಿಧವಾಗಿ ಅವರು ಮನೆಬಿಟ್ಟು ಬಂದಿದ್ದಿಲ್ಲ. ಅವರ ಹಿಂದೆಯೇ ಹೊರಟೆ. ಸ್ವಲ್ಪ ಹೊತ್ತಿನಲ್ಲಿಯೇ ತಿಳಿಯಿತು. ನಮ್ಮ ಮುಂದೆ ಯಾವುದೋ ವ್ಯಕ್ತಿಯು ಹೋಗುತ್ತಿತ್ತು. ನಡಿಗೆಯಿಂದಲೇ ಗುರ್ತು ತಿಳಿಯಿತು. 'ರಾಮು, ರಾಮು!' ಎಂದೆ. ಮೆಲ್ಲನೆ ಮೇಷ್ಟ್ರು ' ಸುಮ್ಮನಿರು ! ' ಎಂದರು.

ಹಾಗೇ ಹಿಂದೆ ಹೊರಟೆವು. ಚೌಕವನ್ನು ದಾಟಿ ಮುಂದೆ ಬಂತು. ನಾವೂ ಹಿಂದೆಯೇ ಇದ್ದೆವು. ಅಲ್ಲಿಂದ ಪ್ರಾಣದೇವರ ಗುಡಿಯೊಳಕ್ಕೆ ಹೋಯಿತು. ನಾವು ಬಾಗಿಲ ಹತ್ತಿರ ಹೋಗುವ ಹೊತ್ತಿಗೆ ಅದು ಆ ಗುಡಿಯ ಹಿಂದುಗಡೆ ಕಲ್ಯಾಣಿಯ ಮೆಟ್ಟಲನ್ನು ಇಳಿಯಲು ಮೊದಲು ಮಾಡಿತು. ನಾನು ಓಡಲು ಪ್ರಯತ್ನಪಟ್ಟೆ. ಮೇಷ್ಟ್ರು ನನ್ನನ್ನು ಗಟ್ಟಿಯಾಗಿ ಹಿಡಿದುಕೊಂಡು ' ಭಯವಿಲ್ಲ, ಹೋಗೋಣ. ಸ್ವಲ್ಪ ತಾಳ್ಮೆಯಿರಲಿ' ಎಂದರು. ನಾನು ಕಲ್ಯಾಣಿಯ ಮೆಟ್ಟಿಲನ್ನು ಇಳಿಯಲು ಹೊರಟೆ.

' ಬೇಡ, ನಾನು ಮೊದಲು ಹೋಗುತ್ತೇನೆ. '

ಮೇಷ್ಟ್ರು ಮೆಲ್ಲನೆ ಇಣಿಕಿ ನೋಡಿದರು. ಆಮೇಲೆ ಹಟಾತ್ತಾಗಿ 'ಸುಬ್ಬೂ, ಏನಿದು!' ಎಂದು ಕೂಗಿ, ಸರಸರನೆ ಇಳಿದರು.

'ಅಯ್ಯೋ, ಇದಕ್ಕೂ ಮಾರ್ಗವಿಲ್ಲವೇ!'

'ಏನಿದು ಸುಬ್ಬು! ಇಂತಹ ಹುಚ್ಚುಂಟೆ!'

'ಏತಕ್ಕಾಗಿ ನಾನಿನ್ನು ಬದುಕಿರಬೇಕು?'

'ಏತಕ್ಕಾಗಿ ಸಾಯಬೇಕು?'

'ನನ್ನಂಥಾವರಿಂದ ಎಲ್ಲರಿಗೂ ತೊಂದರೆಯೇ!'

'ಪ್ರಪಂಚದಲ್ಲಿ ಪರೋಪಕಾರಿಗಳೆಷ್ಟಿದ್ದಾರೆ?'

'ಎಲ್ಲಾದರೂ ಉಂಟೆ! ಕರ್ಮದ ಫಲ ಅನುಭವಿಸದೇ ತೀರದು. ಈ ಜನ್ಮದಲ್ಲಿ ಹೀಗೆ ಕಳೆದುಕೊಂಡರೂ ಮುಂದೆ ಅದು ಸಿದ್ಧ.'

ನಾನು ಅಲ್ಲಿಂದ ಇಳಿದು ಬಂದು 'ಸುಬ್ಬೂ, ಈಗ ರಾಮೂಗಿರುವ ಸಂಕಟ ಸಾಲದೆ? ನೀನೂ, ಅವನಿಗೆ ಸಂಕಟಕೊಡಬೇಕೆ?' ಎಂದೆ.

'ಸಂಕಟ! ನಾನು ಸತ್ತರೆ ಅವನು ಸುಖವಾಗಿರುತ್ತಾನೆ. ನನ್ನಿಂದಲೇ ಅವನಿಗೆ ಕಷ್ಟ.'

'ಹಾಗೆಂದಿಗೂ ಅಲ್ಲ ಸುಬ್ಬೂ, ನನ್ನ ಮಾತು ಕೇಳು. ನೀನು ಹೀಗೆ ಸತ್ತರೆ, ರಾಮೂ ಬಹಳ ದಿನ ಬದುಕಲಾರ!' 'ಬಾಮ್ಮ, ಸುಬ್ಬೂ. ನಮ್ಮನೇಗೆ ಬಾ. ನನಗೇನೂ ಭಯವಿಲ್ಲ. ಯಾರೇನು ಮಾಡ್ತಾರೋ, ನೋಡೋಣ'

ಅವತ್ತು ನಾವು ಮೂವರೂ ಮೇಷ್ಟ್ರಮನೆಗೆ ಹೋದುದನ್ನು ನೆನಸಿಕೊಂಡರೆ ಈಗಲೂ ಹೊಟ್ಟೆ ಹಿಸಿಕಿಕೊಳ್ಳುವಂತಾಗುತ್ತೆ. ಸುಬ್ಬೂನ ಸ್ಥಿತಿ ಹೇಗಿತ್ತೋ ದೇವರೇ ಬಲ್ಲ. ರಾಮೂಗೆ ಈ ಸಮಾಚಾರ ಹೇಳಬೇಡ ಎಂತ ಮೇಷ್ಟ್ರು ಹೇಳಿದ್ದರು. ನಾನೂ ಹೇಳಲಿಲ್ಲ. ಅವನಿಗೆ ಯಾರೂ ಹೇಳಲಿಲ್ಲ. ಸುಬ್ಬೂನೇ ಹೇಳಲೆಂದು ನಾವು ಸುಮ್ಮನಾದೆವು.

'ಸಕಾಲಕ್ಕೇ ಬಂದ ಹಾಗಾಯಿತು. ಶಾಸ್ತ್ರಿಗಳೇ ಬನ್ನಿ, ಕೂತುಕೊಳ್ಳಿ.'

'ವೀರರಾಘವಶಾಸ್ತ್ರಿಗಳ ಮನೆಗೆ ಯಾವಾಗ ಬಂದರೂ ಸಕಾಲವೇ. ಏನೋ ಒಳಗೆ ಒಗ್ಗರಣೆವಾಸನೆ ಬರುತ್ತಿದ್ದ ಹಾಗಿದೆ?'

'ಏನೂಯಿಲ್ಲ, ಶಾಸ್ತ್ರಿಗಳೇ, ದ್ವಾದಶಿ. ಸ್ವಲ್ಪ ಹೆಸರುಬೇಳೆ, ಪಾನಕ ಆಗಲಿ ಅಂತ!'

'ಹಾಗೋ....ಸರಿ, ಸರಿ.'

'ಅಲ್ಲ, ಏನೋ ಸತ್ಯಾಗ್ರಹ ಪ್ರಾರಂಭವಾಗಿದೆ ಅಂತಾರೆ—ಏನೋ, ಉಪ್ಪಿಗೇನು ವ್ಯಾಜ್ಯ ಶಾಸ್ತ್ರಿಗಳೆ?'

'ಹೌದಂದರೆ, ನೋಡಿ. ಉಪ್ಪಿಗೆ ವ್ಯಾಜ್ಯವಾಡೋದುಂಟೆ? ಉಪ್ಪಿಗೆ ವ್ಯಾಪಾರದಲ್ಲಿ ಕೂಡ ಹೇಳೋದು ಕೇಳೋದು ಇಲ್ಲ. ಉಪ್ಪು ದಾನ ತೆಗೆದುಕೊಂಡ ಹಾಗೆ ದಕ್ಷಿಣೆಯಿಲ್ಲದೆ! ಉಪ್ಪಿನ ಮೇಲೆ ಈ ಹೊಡೆದಾಟಕ್ಕೆ ನಿಂತರೆ, ನಮ್ಮ ಬ್ರಾಹ್ಮಣಿಕೆ ಉಳಿಯೋದುಂಟೆ?'

'ಅದೇನೋ, ನನಗೊಂದೂ ಅರ್ಥವಾಗಲಿಲ್ಲ ನೋಡಿ. ಮೊನ್ನೆ ನನ್ನ ತಂಗೀ ಮಗ ಬಂದಿದ್ದ. ಬಟ್ಟೆ ಕೊಡಿಸೋಣ ಎಂತ ಹೋದೆ. ಅಂಗಡೀಲಿ ಖದ್ದರ್ ಕೊಣಕೊಬೇಕು ಎಂತ ಅವನಿಗೆ ನಮ್ಮ ಶೀನಪ್ಪನ ಮಗ ರಾಮೂ ಬೋಧಿಸಿಬಿಟ್ಟ! ಅವನು ಹೇಳಿದ ಮಾತೇ ಇವನಿಗೆ ವೇದಮಂತ್ರ.'

'ಅದೇನೋ ನೋಡಿ, ಈ ಕಾಲಕ್ಕೆ ಈ ಹುಡುಗರು ಹೀಗಾಗಿಬಿಟ್ಟರು. ಅದರೊಳಗೂ ಶೀನಪ್ಪನ ಮಗ ಇದ್ದಾನಲ್ಲ, ಪ್ರಚಂಡ. ಅವನ್ನ ಕೇಳಿ, ಹೇಳ್ತಾನೆ. ನಮ್ಮ ಪಟ್ಟಣಗಳಲ್ಲಿ ಮೂರುಸಾವಿರ ವರ್ಷದ ಹಿಂದೆ ಮೂವತ್ತೆರಡು ವಿಧ ಬಟ್ಟೆ ತಯಾರು ಮಾಡ್ತಾಯಿದ್ದರಂತೆ! ಇವೆಲ್ಲಾ ಆ ಗಾಂಧಿಯಿದ್ದಾನಲ್ಲ, ಅವನ ಶಿಷ್ಯರ ಮಾತು.'

'ಅವನ್ನ ಮಹಾತ್ಮ ಎಂತಾರಲ್ಲ ಶಾಸ್ತ್ರಿಗಳೆ?'

'ಹೆಸರು ಮಹಾತ್ಮ ಮಾಡೋದು ವರ್ಣಸಂಕರ, ಚಂಡಾಲಸ್ಪರ್ಶ. ಎಲ್ಲಿ ನೋಡಿದರೂ ಗಾಂಧೀಕಿ ಜೈ!'

'ಅಲ್ಲಿ, ನೋಡಿ, ಶಾಸ್ತ್ರಿಗಳೆ, ಆತನೇನಾದರೂ ಹೇಳಿಕೊಂಡನೇ ತಾನು ಮಹಾತ್ಮ ಎಂತ! ಇವರು ಸುಮ್ಮನೆ ಹಾಗೆ ಮಾಡ್ತಾರೆ.'

'ಆತನೇ ಹೇಳಿಕೊಂಡನೋ, ಇವರೇ ಕರೆದರೋ, ಹ್ಯಾಗೋ! ಹೆಸರಂತೂ ಇದೆಯಲ್ಲ, ಮಹಾತ್ಮ ಎಂತ. ಏನು ಒಂದು ವ್ರತವೆ! ಒಂದು ಗುಡಿ ಗೋಪುರಗಳೆ? ಬ್ರಾಹ್ಮಣರಿಗೆ ಸಂತರ್ಪಣೆಯೆ! ಒಂದು ವ್ರತ ಮಾಡಿ ನಮ್ಮಂಥಾ ಸದ್ಬ್ರಾಹ್ಮಣರಿಗೆ ದಕ್ಷಿಣೆ ಕೊಟ್ಟಿದ್ದಾನೆಯೋ! ಏನಿದೆ ಎಂತ ಮಹಾತ್ಮ ಎಂತೀನೆ! ಅಲ್ಲ, ಕಾಲ ಹೀಗೆ ಕೆಡಬಾರದು, 'ವಾಸನಾದ್ವಾಸ ದೇವಸ್ಯ......'ಎಂದಬಿಟ್ಟ ಮಾತ್ರಕ್ಕೇ ಬಾಹ್ಮಣ, ಶೂದ್ರ; ಗಂಡಸು, ಹೆಂಗಸು; ಹಿಂದೂ, ಮುಸಲ್ಮಾನ; ಎಲ್ಲಾ ಒಂದೇ ಆಗಿಬಿಟ್ಟರೆ! ನಾವು ಸುಮ್ಮನೆ ಕೈ ಕಟ್ಟಿಕೊಂಡು ಕೂಡಬೇಕಾಗಿದೆ!'

'ನಾವೇನು ಮಾಡೋದು?'

'ಏನು ಮಾಡೋದೇ? ತಕ್ಕ ಬುದ್ಧಿ ಕಲಿಸಿಬಿಡೋದು! ಶೀನಪ್ಪ ನಂಥಾವರಿಗೆ ಕಲಿಸಲೇಬೇಕು. ನನ್ನ ಮಾತು ಕೇಳಿ—ಅವನ ಗತಿ ಏನಾಗುತ್ತೋ ಆಮೇಲೆ ನೋಡಿ.'

'ಶೀನಪ್ಪ ಏನು ಮಾಡಿದ?'

'ಅವನಲ್ಲ, ಅವನ ಮಗ. ನಮಗೆ ಯಾರಾದರೇನು? ಅವನ ವಂಶವೇ ಹಾಗೆ!'

'ಏನು ಮಾಡಬೇಕು, ಅಂತೀರಿ?'

'ಏನೇ! ಇಲ್ಲಿ ಕೇಳಿ.'

ಪಿಸಿಪಿಸಿ ಕಿವಿಯಲ್ಲಿ ಹೇಳಿ ಕೈಗಳನ್ನು ತಿರುವಿ ತೋರಿಸುವುದಕ್ಕೆ ಮೊದಲುಮಾಡಿದರು ಶ್ರೀಧರಶಾಸ್ತ್ರಿಗಳು. 'ಹೀಗೆ ಮಾಡಿಬಿಟ್ಟರೆ ಹಾಗಾಗಿ ಬೀಡುತ್ತೆ. ಆಗ ಎಲ್ಲಾರ ಗತೀನೂ ಗೊತ್ತಾಗುತ್ತೆ! ಸನಾತನಧರ್ಮಕ್ಕೆ ಎದುರು ಮಾಡಿದವರಿಗೆ ಯಾವ ಗತಿ ಎಂಬೋದು ಗೊತ್ತಾಗುತ್ತೆ!'

'ಪಾಪ. ತಪ್ಪಿಲ್ಲದೆಯಿದ್ದವರನ್ನು ಗಲ್ಲಿಗೆ ಹಾಕೋದು ಯಾವ ನ್ಯಾಯ?'

'ಹೌದು ಶಾಸ್ತ್ರಿಗಳೇ. ಶ್ರೀಕೃಷ್ಣ ಪರಮಾತ್ಮ ಸೈಂಧವನನ್ನು

ಕೊಲ್ಲೋದಕ್ಕೆ ಏನು ಮಾಡಿದ? ಶ್ರೀರಾಮ ವಾಲಿಯನ್ನ ಸಂಹಾರ ಮಾಡೋದಕ್ಕೆ ಏನು ಮಾಡಿದ? ವಿಷ್ಣು ಭಸ್ಮಾಸುರನನ್ನ ಕೊಲ್ಲೋದಕ್ಕೆ ಏನು ಮಾಡಿದ?'

'ಶಾಸ್ತ್ರಿಗಳೇ, ಅವರೆಲ್ಲಾ ಅವತಾರಪುರುಷರು, ನಾವು....'

'ಶಾಸ್ತ್ರಿಗಳೇ, ನಾವೇ ಹೀಗೆಂದರೆ ಹ್ಯಾಗೆ? ದೈವಂ ಮಾನುಷ ರೂಪೇಣ ಪ್ರಹ್ಲಾದನ ರೂಪವಾಗಿ ಹಿರಣ್ಯಕಶ್ಯಪನನ್ನು ಕೊಂದಂತೆ ನಮ್ಮ ರೂಪವಾಗಿ ಈ ಅಧರ್ಮವನ್ನೇತಕ್ಕೆ ಕೊಲ್ಲಬಾರದು?'

'ನನಗೆ ತರ್ಕ ಸರಿ ಎಂತ ತೋರಿದರೂ ಮನಸ್ಸು ಮುಟ್ಟಿಗೆ ಸರಿಯಲ್ಲ ಅಂತ ಹೇಳ್ತಾಯಿದೆ. ಇದೊಂದೂ ನನಗೆ ಅರ್ಥವಾಗದಪ್ಪ!'

'ಹೌದು ಅರ್ಥವಾಗುವುದಿಲ್ಲ. ಉಪನಿಷತ್ತುಗಳಲ್ಲಿ ಹೀಗಿದೆ. ..

ತಾವದೇವ ನಿರೋದ್ಧವ್ಯಂ ಯಾವದ್ಧೃದಿಗತಂ ಕ್ಷಯಂ
ಏತಜ್ಞಾನಂ ಚ ಧ್ಯಾನಂ ಚ ಶೇಷೋನ್ಯಾಯಶ್ಚ ವಿಸ್ತರಃ
ನೈವಂ ಚಿನ್ತ್ಯಂ ನಚಾ ಚಿನ್ತ್ಯಂ ನಚಿನ್ತ್ಯಂ ಚಿನ್ತ್ಯಮೇವತತ್,
ಪಕ್ಷಪಾತ ವಿನಿರ್ಮುಕ್ತಂ ಬ್ರಹ್ಮಸಮ್ಪದ್ಯತೇತದಾ.

ನನಗರ್ಥವಾಗಿ ನಾನು ಮಾಡಿದರೆ ತಮ್ಮ ಬೆಂಬಲವುಂಟು ತಾನೆ? ಇನ್ನೇನೂ ಮಾಡಬೇಡಿ, ಸುಮ್ಮನೆ ನಿಮ್ಮ ಬೆಂಬಲ ಕೊಡಿ, ಸಾಕು. ನನ್ನ ಕೈ ನಾನು ತೋರಿಸುತ್ತೇನೆ. ಆ ವರಸೆಯಾದರೂ ಸ್ವಲ್ಪ ನೋಡಿ!'

ಇಷ್ಟು ಹೊತ್ತಿಗೆ ಒಳಗಿನಿಂದ 'ಕೈಕಾಲು ತೊಳೆದುಕೊಳ್ಳಿ' ಎಂಬೋ ಶಬ್ದ ಬಂತು. ಮಾರ್ಜಾಲಶಾಸ್ತ್ರಿಗಳೂ ಪರಮಾನಂದದಿಂದ ಅಲ್ಲೇ ತಮ್ಮ ಫಲಹಾರವನ್ನು ತೀರಿಸಿಕೊಂಡು ಗೋವಿಂದರಾಯರ ಮನೆಯ ಕಡೆ ತಮ್ಮ ಪಾದವನ್ನು ಬೆಳೆಸಿದರು.

—

೮

'ಬದುಕಿದ್ದು ಬೇರೆ ಇದ್ದರೆ ನಮ್ಮ ಸಮಾಜಕ್ಕೆ. ನಮ್ಮ ಸನಾತನ ಧರ್ಮಕ್ಕೇನು ಶಾಸ್ತ್ರಿಗಳೆ?'

'ಅದೇ, ಗೋವಿಂದರಾಯರೆ, ಧರ್ಮಸೂಕ್ಷ್ಮ. ನಮಗೆ ಎಲ್ಲಾ

ದಕ್ಕೂ ಆಧಾರಗಳಾವುವು—ಒಂದು ವೇದ, ಉಪನಿಷತ್ತುಗಳು, ಗೀತ; ಅಲ್ಲಿಂದ ಪುರಾಣಗಳು. ಈಗ ತಗೊಳ್ಳಿ. ಪರಶುರಾಮ ವಿದ್ಯಾವಂತ ಅಂತೀರೋ ಅಲ್ಲವೋ ? ಅವನ ತಂದೆ ಏನು ಮಹರ್ಷಿಯಲ್ಲವೆ ? ಹೀಗಿದ್ದೂ ತಾಯಿಯನ್ನೇ ಕಡಿದು ಹಾಕುವ ಸಂದರ್ಭ ಎಂದರೆ, ಇನ್ನು ಚಿಕ್ಕವರ ಮಾತೇನು ? ಹೀಗಿರುವಲ್ಲಿ ರಾಯರಂಥಾವರು, ಮಗಳ ಮೇಲೆ ಇಷ್ಟು ಮೋಹ ಇಟ್ಟುಕೊಳ್ಳಬಾರದು. ' ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ । ಬಂಧಾಯ ವಿಷಯಾಸಕ್ತಂ ಮುಕ್ತ್ಯೈ ನಿರ್ವಿಷ ಯಗ್ ಸ್ಮೃತಂ '

' ತಾವು ಹೇಳೋದೇನೊ ನಿಜ ಶಾಸ್ತ್ರಿಗಳೆ, ಆದರೆ ' ನಾಹಂ ಕರ್ತಾ ನೈವ ಭೋಕ್ತಾ ಪ್ರಕೃತೇ ಸಾಕ್ಷಿ ರೂಪಕಃ । ಮತ್ಸಾನ್ನಿಧ್ಯಾತ್ಪ್ರವರ್ತಂತೇ ದೇಹಾದ್ಯಾ ಅಜಡಾ ಇವ ' ಎಂದ ಮೇಲೆ, ಇದರ ತಪ್ಪನ್ನು ಯಾರ ಮೇಲೆ ಹೊರಿಸಬೇಕು ?. . ' ಪೂರ್ವಕರ್ಮಾನುರೂಪಂ ' ಎಂಬ ವಾಕ್ಯಕ್ಕೆ ಅರ್ಥ ವೇನು ? ಇದರಲ್ಲಿ ಎಲ್ಲೋ ತಪ್ಪಿದೆ, ನನಗದು ಸರಿಯಾಗಿ ಸಿಕ್ಕದೆಯಿದೆ. '

' ಸರಿ, ನಾನು ಹೇಳುವುದು ಸರಿಯಲ್ಲದಿದ್ದರೆ, ತಪ್ಪನ್ನು ತೋರಿಸಿ. ಅದಕ್ಕೇನು ಎಲ್ಲಿ ಸತ್ಯವಿರುವುದೋ ಅಲ್ಲೇ ಬ್ರಾಹ್ಮಣಿಕೆ. '

' ಅಲ್ಲೇ ನನಗೆ ಮೊದಲು ಸಾಲದೆ ಇರುವುದು. ಮನಸ್ಸು ಹೇಳ್ತಾ ಇದೆ, ನೀವು ಹೇಳೋದು ಸರಿಯಲ್ಲ ಎಂತ. '

' ಮನಸ್ಸು ! ರಾಯರೆ ಮನಸ್ಸಿಗೆ ಪ್ರಾಧಾನ್ಯ ಕೊಟ್ಟರೆ, ಇಂದ್ರಿಯ ನಿಗ್ರಹ ಎಂಬೋದೇನು ! ಮನಸ್ಸು ಮನಸ್ಸು ಎಂತೀರಲ್ಲ, ಆ ಮನಸ್ಸಿಗೆ ಮೋಸಹೋಗೇ ರಾವಣ ಕೆಟ್ಟಿದ್ದು. ಜ್ಞಾನ ಮುಖ್ಯ ಸ್ವಾಮಿ. ಆ ಮನಸ್ಸೇ ಕೈಕೇಯೀನ ಕೆಡಿಸಿದ್ದು. 'ಅನಾತ್ಮಾ ಮೂಲಂ ಮಾಯಾ' ಎಂದಿದೆ ಉಪನಿಷತ್ ವಾಕ್ಯ. '

' ಶಾಸ್ತ್ರಿಗಳೆ, ಆ ಮನಸ್ಸಿನಿಂದಲೇ ಅಲ್ಲವೆ ವಿಭೀಷಣನಿಗೆ ಮೋಕ್ಷ ಸಿಕ್ಕಿದ್ದು ? '

' ಅಲ್ಲ ರಾಯರೆ, ವಿಭೀಷಣನ ಬುದ್ಧಿ ಅವನಿಗೆ ಹೇಳಿತು, ರಾವಣ ಮಾಡಿದ ಕೆಲಸ ಸರಿಯಲ್ಲ ಅಂತ ಬುದ್ಧಿಗೆ ಪ್ರಾಧಾನ್ಯ ಕೊಟ್ಟ; ರಾವಣ ನನ್ನು ಬಿಟ್ಟ, ಶ್ರೀರಾಮನನ್ನು ಸೇರಿದ. ಅದೇ ಕುಂಭಕರ್ಣ ನೋಡಿ, ಆ

ಕೆಲಸ ಮಾಡಲಿಲ್ಲ. ಹೃದಯಕ್ಕೆ, ಮನಸ್ಸಿಗೆ, ಆಸ್ಪದ ಕೊಟ್ಟ. ಅಣ್ಣಾ, ಅಣ್ಣಾ, ಎಂತ ಯುದ್ಧಭೂಮಿಯಲ್ಲಿ ಪ್ರಾಣ ಬಿಟ್ಟ. ಸನಾತನ ಧರ್ಮಕ್ಕಾಗಿ ತಮ್ಮ ಸಕಲವನ್ನೂ ಸಮರ್ಪಣ ಮಾಡಿದವರಿಗೇ ಮೋಕ್ಷ.'

'ಸನಾತನ ಧರ್ಮ, ಸನಾತನ ಧರ್ಮ ಎಂತೀರಿ. ವಿಧವಿಧವಾದ ವಿಚಾರ ಮಾತಾಡುತೀರಿ. ಏನಾದರೂ ವಾದಿಸೋದಕ್ಕೆ ಹೋದರೆ ನಮ್ಮನ್ನು ಒಂದು ತೊಂದರೆಯಲ್ಲಿ ಹಿಗ್ಗಟ್ಟು ಮುಗ್ಗಟ್ಟು ಕಟ್ಟುತ್ತೀರಿ. ನನಗೆ ಬುದ್ಧಿ ಮಂಕಾಗಿಹೋಗಿದೆ. ಏನೂ ಬೇಕಾದರು ಮಾಡಿ ಶಾಸ್ತ್ರಿಗಳೆ, ನೀವು ಹೇಗೆ ಹೇಳಿದರೆ ನಾನು ಹಾಗೆ ಮಾಡ್ತೇನೆ. ಇನ್ನೇನು?'

'ಇದು ನಿಜವಾದ ಭಕ್ತಿ, ಇದು ಸರಿಯಾದ ವೈದಿಕ ಧರ್ಮ.'

—

## ೯

ಬಡತನ ಬಹಳ ಕೆಟ್ಟದ್ದು. ಹುಟ್ಟಿದಾಗಿನಿಂದ ಬಡತನದಲ್ಲೇ ಇದ್ದು ಬಡತನದ ಜೊತೆಯಲ್ಲಿಯೇ ಬಡತನ ಬೆಳೆದರೆ ಅದರ ಕಾಠಿಣ್ಯ ಅಷ್ಟು ತೋರೋದಿಲ್ಲ. ಬಡವನಾಗಿದ್ದು ಐಶ್ವರ್ಯವಂತನೆನಿಸಿಕೊಳ್ಳಬೇಕೆನ್ನುವವನಿಗೂ ಅದರ ಹೊಡೆತ ಚೆನ್ನಾಗಿ ಮಂದಟ್ಟಾಗುವುದು. ಮಾನವತ್ವಕ್ಕೆ ಇರುವ ಸಹಜವಾದ ಗೌರವವು ಹಣದಿಂದುಂಟಾಗುವುದೆಂದು, ಎಂದು ಯಾವ ಮಾನವನಿಗೆ ಗೋಚರವಾಗುವುದೋ ಅಂದೇ ಆ ಮಾನವನ ಉತ್ತಮವು ಜೀವನಕ್ಕೆ ಅವನು ತಿಲಾಂಜಲಿ ಕೊಟ್ಟಹಾಗೆ. ಮಹಾತ್ಮರು ಯಾವ ವಿಷಯಕ್ಕೂ ಸಗ್ಗುವುದಿಲ್ಲ. ಅವರು ಇದನ್ನು ಚೆನ್ನಾಗಿ ಅರಿತಾಗ್ಯೂ ಮಿಕ್ಕ ಸಾಮಾನ್ಯರಂತೆ ಅದರ ಹಿಡಿತಕ್ಕೆ ಸಿಗುವುದಿಲ್ಲ.

ಹಣವು ವಿಶ್ವಾಸವನ್ನು ಕೊಂಡುಕೊಳ್ಳಲಾರದೆಂದು ಎಲ್ಲರಿಗೂ ತಿಳಿದಿದೆ. ಆದರೆ ವಿಶ್ವಾಸವು ಹಣವನ್ನು ಕೊಡಲಾರದೆಂಬ ಭೀತಿಯಿಂದ ವಿಶ್ವಾಸಕ್ಕೆ ಸಂಕಲೆಗಳನ್ನೇರಿಸಿ ತಮ್ಮ ನಿಜ ಆತ್ಮದ ಒಂದು ಗುಣಕ್ಕೇ ಸಮಾಧಿಯನ್ನು ಏರ್ಪಡಿಸುತ್ತಾರೆ. ಸಾಮಾನ್ಯ ಮಾನವನಿಗೆ ತನ್ನ ನಿಜ ಸ್ವರೂಪವು ಗೋಚರವಾಗುವುದು ಕಷ್ಟ. ಏನೂ ಇಲ್ಲದ, ಬುದ್ಧಿಯಿಲ್ಲದ

ಮಾನವನಿಗೆ ಹೃದಯವೇ ಸಾಕ್ಷಿ. ತಾತ-ಮುತ್ತಾತಂದರ ಆಚರಣೆಯೇ ವೇದಪ್ರಮಾಣ. ನಾಲ್ಕಾರು ಜನ ಹೇಳಿದರೆ ಅದೇ ಜನಾರ್ದನ ವಾಕ್ಯ. ಹೆಚ್ಚು ಬುದ್ಧಿವಂತರಾದವರಿಗೆ ಅನೇಕ ಸಂದರ್ಭಗಳಲ್ಲಿ ಗೋಚರವಾಗದೆ ಕೊನೆಗೆ ನಿಜಸ್ಥಿತಿಯು ಗೋಚರವಾಗಿ ಸಾಯುವ ಕಾಲದಲ್ಲಿ ಬಡತನವನ್ನೇ ಆಲಿಂಗಿಸುವರು. ಈ ತಿಳಿದೂ ತಿಳಿಯದವರ ಪಾಡಿದೆಯಲ್ಲ, ಅತಿ ಸುಲಭ, ಅತಿ ಕಷ್ಟ! ಜೀವಮಾನಗಳಲ್ಲಿ ಅಹೋರಾತ್ರಿಗಳಿದ್ದಂತೆ, ಅಂತರಂಗ ಜೀವನ, ಬಹಿರಂಗ ಜೀವನ. ನಾಟಕದವರಿದ್ದಂತೆ, ಪ್ರಪಂಚದಲ್ಲಿ ತಾನಾಡುವುದೆಲ್ಲಾ ಒಂದು ದೊಡ್ಡ ನಾಟಕ. ಮನೆಯಲ್ಲಿ ಹೆಂಡತಿ ಮಕ್ಕಳಿಗೆ ಕೂಡ ತಮ್ಮ ನಿಜಸ್ಥಿತಿ ತಿಳಿದಿರಬಾರದು. ಬಲಗೈ ಮಾಡುವುದನ್ನು ಎಡಗೈನೋಡಬಾರದು. ಈ ವಿಧವಾಗಿ ತಮ್ಮ ಅಂತರಂಗದ ಜೀವನವನ್ನು ಬಚ್ಚಿಟ್ಟು ಬಹಿರಂಗವಾಗಿ ಘನಜೀವನವನ್ನು ನಡೆಸಲು ಪ್ರಯತ್ನ. ನಾಟಕದಲ್ಲಿದ್ದಂತೆಯೇ ಅವರವರ ನಟನೆಗಳ ಮೇಲೆ ಅವರವರ ಯೋಗ್ಯತೆಯು ಅಳೆಯಲಾಗುವುದು. ಆದರೆ ಒರೆಯಿಟ್ಟು ನೋಡಿದಲ್ಲಿ, ಒಳಗೆಲ್ಲಾ ಬೂರಗದ ಮರದಂತೆ ಟೊಳ್ಳೆಂದು ಅವರಿಗೇ ಗೊತ್ತು. ಅದಕ್ಕಾಗಿ ಅವರಿಗೆ ಅಂತರ್ವಿಮರ್ಶೆ ಬಹಳ ಕಡಿಮೆ.

ಲೋಕದಲ್ಲಿ ಇಲ್ಲದ ವಸ್ತುವಿನಲ್ಲಿ, ಆಗದ ಕಾರ್ಯದಲ್ಲಿ, ಬಹಳ ರುಚಿ. ನೋಡುವುದಕ್ಕೆ ಚೆನ್ನಾಗಿಲ್ಲ, ಅವಳ ಹೆಸರಾದರೂ ಚೆನ್ನಾಗಿರಲಿ ಎಂತ ಸುಂದರಿ ಎಂದು ಹೆಸರಿಡೋದು; ಆ ಹೊತ್ತಿಗೆ ಹಿಟ್ಟಿಗಿಲ್ಲದೆ, ಅನ್ನಪೂರ್ಣೆ, ಹೀಗೇ. ಅಂತರಂಗದಲ್ಲಿ ತಮ್ಮ ಜೀವನವನ್ನು ತಾವೇ ವಿಮರ್ಶೆ ಮಾಡಿಕೊಳ್ಳದಿರುವವರಿಗೆ ಮಾಡಿಕೊಂಡಂತೆ ನಟಿಸಬೇಕೆಂಬುದು ಬಹಳ ಆಸೆ. ನಿಜವಾಗಿ ಹಣವಿಲ್ಲದವನಿಗೆ ಹಣವಿದ್ದಂತೆ ನಟಿಸಬೇಕೆಂದರೆ ಬಹಳ ಆಸೆ; ಹಣವಿರುವವನಿಗಾದರೂ ಕೇವಲ ಬಡವನಂತೆ ಇರಬೇಕೆಂಬ ಇಷ್ಟ ಸೂಕ್ಷ್ಮದೃಷ್ಟಿಯುಳ್ಳವರಿಗೆ ಈ ವಿಕಟವೇಷಗಳು ಕಾಣುತ್ತವೆ. ಸಾಮಾನ್ಯ ಮಾನವರು ಈ ನಟನೆಯೇ ನಿಜಸ್ಥಿತಿ ಎಂದು ತಿಳಿಯುತ್ತಾರೆ. ಧರ್ಮರಾಯನಿಗೆ ಆಶ್ಚರ್ಯವನ್ನುಂಟುಮಾಡಿದ್ದು — ನಿತ್ಯವೂ ಜನರು ಸಾಯುತ್ತಿದ್ದಾಗ್ಯೂ, ತಾನು ಶಾಶ್ವತವೆಂದು ಮಾನವನು ನಂಬುವುದಲ್ಲಾ—ನಮಗೂ ಆಶ್ಚರ್ಯವನ್ನುಂಟುಮಾಡಿದರೂ, ನಾವು ಸಹ ನಟನೆಗೆ ಬೆರಗಾಗಿ ನಿಜಸ್ಥಿತಿಯನ್ನು ಮರೆತು, ನಟನೆಯನ್ನೇ ನಂಬುತ್ತೇವೆ. ಹೀಗಿರು

ವ್ವದರಿಂದ ಮಾರ್ಜಾಲಶಾಸ್ತ್ರಿಗಳಲ್ಲಿ ಬಹಳವಾಗಿ ಊರಿನವರ ನಂಬಿಕೆಯಿದ್ದು ದೇನೂ ಆಶ್ಚರ್ಯವಲ್ಲ.

*          *          *          *          *

ಮಾರ್ಜಾಲಶಾಸ್ತ್ರಿಗಳು ತಮ್ಮ ಕೈತೊಳೆಸಿಬಿಟ್ಟರು. ಕಾನ್ಸ್ಟೇಬಲ್ ಮಾದಪ್ಪ, ಗೋವಿಂದರಾಯರನ್ನು ಪೋಲಿಸ ಸ್ಟೇಷನ್ನಿಗೆ ಕರೆದುಕೊಂಡು ಹೋಗಲು ಬಂದಿದ್ದಾನೆ. ಅದೇ ಸ್ಥಳದಲ್ಲೇ ಮಾರ್ಜಾಲ ಶಾಸ್ತ್ರಿಗಳು ಮುಂದಿನ ಕರ್ತವ್ಯವನ್ನು ನೆರವೇರಿಸಲು ಕಾದಿದ್ದಾರೆ

'ಏನು ಮಾದಪ್ಪ, ಇನ್ನೆಷ್ಟುದಿನ ಇದೆ ನಿನಗೆ ಸರ್ವಿಸು?' ಶಾಸ್ತ್ರಿಗಳು ಸಪಿಯಾಗಿ ಕೇಳಿದರು.

'ಇನ್ನೆಲ್ಲಾ, ಏನ್ಸಾಮೀ—ಐದುವರ್ಷ, ಅಟ್ಟೇ' ಮಾದಪ್ಪ ಉತ್ತರ ಕೊಟ್ಟ.

'ಏನು, ಎಷ್ಟು ಮಾತ್ರ ಮಾಡಿಕೊಂಡಿದ್ದೀ?'

'ಈ ಕಾಲದಾಗೆ ಏನು ಮಾಡಕೊಂಬೋದು ಸಾಮಿ? ಈಗಿರೋ ದೊಡ್ಡ ದೊಡ್ಡೋರಿಕೇ ಸಾಕಾಕೊಕಿಲ್ಲ, ನಮ್ಕೇನು ಸಿಕ್ತೈತೆ! ದೊರೆಗಳು ಕೂಡ ಅಂತಾವ್ರೇ ಬತ್ತಾರೆ. ಏನೋ ದೊಡ್ಡ ಕೇಸು-ಗೀಸು ಬಂದರೆ, ಏನೋ ಅಲ್ಪಸಲ್ಪ ಸಿಕ್ಕೈತ್ರೀ.'

'ಇದೇನಯ್ಯಾ, ದೊಡ್ಡ ಕೇಸೇ. ಸ್ವಲ್ಪ ರಾಯರು ಹೇಳಿದ ಹಾಗೆ ಕೇಳಿದರೆ ಎಲ್ಲಾ ಸರಿಹೋಗುತ್ತೆ.'

'ಅಂಕೇ ಕಾಣ್ತೈತ್ರೆ ಬುದ್ದೀ! ಆಕಿರೋಬೀಕ ಆಕಿದಂಕೇ ಏತ್ರಿ, ಮಾಲು ಮಟ್ಟಿಗೆ ಮಾಯವಾಕ್ಯೆತೆ. ಯಾರೋ ಚೆನ್ನಾಗಿ ತಿಳಿದಿರೋರೇ ಆಕಬೇಕು, ಅಂತ ನನ್ನ ಬುದ್ಧೀಕೆ ತೋರತೈತೆ.'

'ಹೌದಯ್ಯಾ, ಆ ಹಳೇಕಾಲದ ಮನುಷ್ಯ ನೀನು. ನಿನಗಿರೋ ಬುದ್ಧಿ, ಆ ನಿಮ್ಮ ಅಧಿಕಾರಿಗಿಲ್ಲ—ಇದೆಲ್ಲಾ ಆ ಶೀ....ಪ್ಪನದೇನಯ್ಯಾ? ಅಲ್ಲ, ಏನಂತೀ, ತಿಳಿದಿರೋರೇ ಮಾಡಿರಬೇಕು ಈ ಕೆಲಸಾನ?'

'ಸಾಮಿ, ನಿಜ ಹೇಳಿ. ನಿಮ್ಮ ಮನಸ್ಸಿಗೆ ಎಂಕೆ ಕಾಣ್ತೈತೆ?'

'ದಾರಿದ್ರ್ಯದುಃಖೇನ ಕರೋತಿ ಪಾಪಂ.' ಶಾಸ್ತ್ರಿಗಳು ಪಾಂಡಿತ್ಯ ತೋರಿಸಿದರು.

‘ ಏನೋ ಆತನ ಎಂಡ್ರು ತುಂಬಾ ಸೀಕ್ ಅಂತ ಕೇಳಿದೆ. ’

‘ ಬರುವ ಸಂಬಳ ಸ್ವಲ್ಪ. . ’ ಗೋವಿಂದರಾಯರು ಎಂದರು.

‘ ಮನೇಲಿ ಅವರದೇ ಓಡಾಟ ಎಲ್ಲಾ. ಸಂಬಿಕಸ್ಥ, ಮನೇಲಿ ಮನೆಯ ಮಗೂ ಹಾಗೆ ನೋಡಿಕೋತಿದ್ದರು ರಾಯರು. ಮಾದಪ್ಪ, ನಮ್ಮ ರಾಯರನ ಹೊಗಳಬಾರದು, ಅವರ ಮುಂದೆ. ಒಬ್ಬರನ ನೋಯಿಸೋ ಪ್ರಾಣಿ ಅಲ್ಲ, ಇದು ’ ಶಾಸ್ತ್ರಿಗಳು ಹೊಗಳಿದರು.

‘ ನಮ್ಮ ಇನ್ಸ್ಪೆಕ್ಟರ್ ತಾವ ಎಲ್ಲಾ ಏಳ್ತೀನಿ. ’ ಮಾದಪ್ಪನೆಂದ.

‘ ಅಯ್ಯೋ ಬೇಡಪ್ಪ. ಈ ಶಾಸ್ತ್ರಿ ಹೇಳಿದ ಮಾತು ನಿಜ ಅಂತ ನಂಬಿಕೋ ಬೇಡ. ’ ಗೋವಿಂದರಾಯರು ತಡೆದರು.

‘ ಸಾಮಿ. . . . ಈ ಸಾಮಿ ಮಾತು ಇದೆಯಲ್ಲ, ತುಂಬ ನಿಜ. ಅವರು ನಮ್ಮ ಡಿಪಾರ್ಟಿಮೆಂಟೇಲಿ ಇರಬೇಕಿತ್ತು ಅಂತಾರ ಸಾಮಿ. ’ ಮಾದಪ್ಪ ನುಡಿದ.

‘ ಅವನಿಗೆ ತೊಂದರೆ ಕೊಡಲು ಇದು ಸಮಯವಲ್ಲ. ’ ಗೋವಿಂದ ರಾಯರೆಂದರು.

‘ಪೋಲೀಸಿನವರಿಗೆ ಹೇಗೋ ವಿಚಾರಗಳೆಲ್ಲಾ ಗೊತ್ತಾಗುತ್ತೆ. ಅವರು ಹೇಗೆ ತಿಳೀತು ಎಂಬೋದನ್ನ ಮಟ್ಟಿಗೆ ಯಾವಾಗಲೂ ತಿಳಿಸಬಾರದು. ಅದು ಶಾಸ್ತ್ರ. ’ ಶಾಸ್ತ್ರಿಗಳ ಚಾಣಿಕ್ಯ ನೀತಿ ಹೊರಬಿತ್ತು.

‘ ಔದು ಸಾಮಿ. ಇಂತಾ ತಿಳಿದೋರು ನಮ್ಮ ಡಿಪಾರ್ಟ್ಮೆಂಟಾಕೇ ಇಲ್ಲ ನೋಡಿ. ಏನೋ ಶಾಸ್ತ್ರಿ ಆಗಿಬಿಟ್ರಿ. ಕಳ್ಳ-ಗಿಳ್ಳ ಆಕಿ ಬಿಟ್ಟಿದ್ದರೆ, ನಮ್ಮ ಡಿಪಾರ್ಟಿಮೆಂಟನ್ನೇ ಬಾಳೇ ಅಣ್ಣು ಸುಳಿದು ಬಾಯಲ್ಲಿ ಆಕ್ಕೋ ಅಂಗೆ, ಆಕ್ಕೊಂಬಿಡುತ್ತಿದ್ದಿರಿ, ದೇವ್ರು- ’ ಮಾದಪ್ಪ ಮಾತಿನೇಟು ಕೊಟ್ಟ.

‘ ವಿಚಾರ ತಿಳಿದ ಮೇಲೆ ಗುಮಾನೀ ಮೇಲೆ ಅವರ ಮನೆ ತನಿಖಿ ಮಾಡಬಹುದಲ್ಲ ? ’ ಶಾಸ್ತ್ರಿಗಳು ವಿಚಾರಿಸಿದರು.

‘ ಶಾಸ್ತ್ರಿಗಳೆ, ಇಂಥಾದಕ್ಕೆ ಇದು ಸಮಯವೆ ! ಸಾತೀ ಸಾಯೋ ಹಾಗಿದ್ದಾಳೆ. ರಾಮ, ರಾಮ ! ’ ಗೋವಿಂದರಾಯರು ಮರುಕಗೊಂಡು ನುಡಿದರು.

‘ ರಾಯರೆ, ನಿಮ್ಮ ಹೃದಯ ಬೆಣ್ಣೆ ಅಂತಾದ್ದು. ಆದರೆ ಪೋಲೀಸರು

ಅವರ ಡ್ಯೂಟಿ ಮಾಡಬೇಕಾದ್ದೇ.' ಶಾಸ್ತ್ರಿಗಳು ಕರ್ತವ್ಯಬುದ್ಧಿಯನ್ನು ಜಾಗೃತಗೊಳಿಸಿದರು.

'ಎಂಥಾ ಪಿರಂಗಿ ಅಂತ ಮನುಷ್ಯನಪ್ಪ ಇವ! ಸ್ವಾಮಿ, ನಾನು ಹೋಗಿ ಡ್ಯೂಟಿ ನೋಡ್ತೀನಿ. ತಾವು ಬೇಗ ಬರಬೇಕು. ಇನ್ಸ್ಪೆಕ್ಟರು ಕಾದಿದ್ದಾರೆ.' ಮಾದಪ್ಪನೆಂದ.

ಮಾದಪ್ಪ ಹೋದ ಮೇಲೆ, 'ಸತ್ಯಮೇವ ಜಯತೆ, ರಾಯರೆ, ನೋಡಿದರೋ ಹೇಗಾಯಿತು' ಎಂದರು ಶಾಸ್ತ್ರಿಗಳು.

'ಬೀಜ ನೆಟ್ಟುಬಿಟ್ಟೆಯಲ್ಲ, ಅಲ್ಲಿ ಅವರಿಗೆ ಜಡೆಬಂಗಾರ ಸಿಕ್ಕೋದು ಹೇಗೆ ಎಂತೀನೆ?'

'ಅದು ನನಗಿರಲಿ. ಮಹಾಸ್ವಾಮಿ, ಈ ಧರ್ಮಯುದ್ಧದಲ್ಲಿ ಆದ ಅಪರಾಧವೆಲ್ಲವೂ ನನ್ನ ಮೇಲಿರಲಿ. ತಾವು ನಿಶ್ಚಿಂತರಾಗಿರಿ.'

* * * * * *

ಇತ್ತಲಾಗಿ ಶೀನಪ್ಪನ ಮನೆಯಲ್ಲಿ ಸಾತಿ ಈಗಲೋ ಆಗಲೋ ಎಂಬೋ ಸ್ಥಿತಿಯಲ್ಲಿದ್ದಾಳೆ. ಅವಳಿಗೆ ಮಾತು ನಿಂತುಹೋಗಿದೆ. ಸನ್ನೆಗಳಿಂದ 'ಸುಬ್ಬೂನ ಕರೆದುಕೊಂಡು ಬಾ' ಎಂದು ಹೇಳಿ ಕರೆಸಿದ್ದಾಳೆ. ರಾಮು ಸುಬ್ಬು ಇಬ್ಬರೂ ಎದುರಿಗಿದ್ದಾರೆ. ವೈದ್ಯರು ನಾಡಿಯನ್ನು ನೋಡಿ, ಯಾವ ಮಾತನ್ನೂ ಹೇಳದೆ ಸುಮ್ಮನಿದ್ದಾರೆ. ಅಷ್ಟರಲ್ಲಿ ಬಾಗಲಲ್ಲಿ ಬೂಟ್ಸಿನ ಶಬ್ದ. ಶೀನಪ್ಪ ತಲೆ ಎತ್ತಿ ನೋಡಿದ; ಕಾನ್ಸ್ಟೇಬಲ್ ಮಾದಯ್ಯ, ಪೋಲೀಸ ಅಧಿಕಾರಿ, ಇಬ್ಬರೂ ಒಳಕ್ಕೆ ಬಂದರು.

'ಏನು ಸ್ವಾಮಿ, ಇಂಥಾ ಸಮಯದಲ್ಲಿ?'

ಮಾದಪ್ಪ ಉತ್ತರ ಕೊಟ್ಟ: 'ಇಲ್ಲಿ ನಮಗೆ ಡ್ಯೂಟಿ ಇದೆ.'

ಏನಿದು? ನನಗೇನೂ ಅರ್ಥವಾಗದಲ್ಲ!'

'ನಿಮ್ಮ ಮೇಲೆ ಗುಮಾನಿ ಇದೆ. ಗೋವಿಂದರಾಯರ ಮನೆಯ ಜಡೆ ಬಂಗಾರ ಮಾಯವಾಗಿದೆ. ಅವರ ಹುಡುಗೀನ ಜಡೆಬಂಗಾರನ ನೀವೇ ತಂದಿದ್ದೀರಿ, ಎಂತ ನಮಗೆ ಗುಮಾನಿ.'

'ಗುಮಾನಿ ಇರಬಹುದು! ಆದರೆ ಇದು ಸಮಯವೆ?'

'ಸರ್ಕಾರಿ ಉಪ್ಪು ತಿಂಬೋರು ನಾವು. ಡೂಟಿ ಮಾಡಬೇಕು.

ಗೋವಿಂದರಾಯರ ಮಗಳು ಇಲ್ಲೇ ಅಂದ್ರೆ ಅರ್ಥ ಸಿಕ್ಕಂಗೇ. ಶಾಸ್ತ್ರಿಗಳೇ ಈಕ ಬನ್ನಿ. ನಿಮ್ಮ ಬುದ್ಧಿ ಕೀಕ ಕೊಡಬೇಕು ನೋಡಿ ರಾಯರಿಗೂ ಕರೀರಿ.

ಗೋವಿಂದರಾಯರು ಒಳಕ್ಕೆ ಬಂದರು. ತಮ್ಮ ಮಗಳ ಮುಖವನ್ನು ನೋಡಿದರು. ತಕ್ಷಣವೇ ಮುಖವನ್ನು ಮೇಲಕ್ಕೆತ್ತಲಾರದೆ ಶಾಸ್ತ್ರಿಗಳ ಸಂಗಡ ಪಿಸುಪಿಸು ಮಾತಾಡುತ್ತಾ ಅವರ ಪಕ್ಕದಲ್ಲೇ ನಿಂತರು.

'ಅಮ್ಮಾ ಎಲ್ಲಾ ಆಚೆಕೆ ಓಗಬೇಕು. ನೀವೆಲ್ಲಿರೋದು ರೂಲ್ಸಿಕೆ ವಿರುದ್ಧ' ಮಾದಪ್ಪ ಕೇಳಿಕೊಂಡ.

'ನಿನ್ನ ರೂಲ್ಸು ಬೆಂಕಿಗೆ ಹಾಕು! ಎಂತಾ ಸಮಯಲ್ಲಿ ಬಂದೆಯಪ್ಪ! ಅಪ್ಪ, ಈ ಪಿಶಾಚೀನ ಎಷ್ಟು ದಿನದಿಂದ ಬಚ್ಚಿಟ್ಟಿದ್ದೆ! ನಾನು ಇಲ್ಲಿಂದ ಕದಲೊಲ್ಲ. ಆ ಶಾಸ್ತ್ರೀಗೇನು ಕೆಲಸ?' ಸುಬ್ಬಾ ಕಿಡಿನುಡಿದಳು.

'ಹೌದಮ್ಮ, ನನಗೇನು ಕೆಲಸ? ನಾನು ಹೋಗ್ತೀನಿನ್ನ' ಶಾಸ್ತ್ರಿಗಳು ತಡವರಿಸಿದರು.

'ಸ್ವಾಮಿ, ತಾವು ಇಲ್ಲೇ ಇರಬೇಕು. ತಾವು ಪಂಚಾಯಿತಿ' ಮಾದಪ್ಪ ಶಾಸ್ತ್ರಿಗಳನ್ನು ತಡೆದ.

'ಬೇಡಮ್ಮ, ಸುಬ್ಬಾ, ರಾಮೂ, ಎಲ್ಲರೂ ಬಂದುಬಿಡಿರಿ. ಸ್ವಾತಿ ಸುಖವಾಗಿ ಹೋಗಲಿ' ಶೀನಪ್ಪ ನುಡಿದನು.

'ಎಲ್ಲಾ ಸರಿಹೋಯಿತು. ಸ್ವಾತೀ ಸಾಯುವ ಕಾಲದಲ್ಲೂ ನಿನಗೆ ಸುಖವಿಲ್ಲದಂತೆ ಆಯಿತೇ! ಅಪ್ಪ, ನನ್ನ ತಪ್ಪಿಗೆ ಸ್ವಾತೀನ ನರಕಕ್ಕೆ ಹಾಕಿದೆಯಲ್ಲಪ್ಪ!' ಸುಬ್ಬಾ ಗೋಳಿಟ್ಟಳು.

'ಸುಬ್ಬಾ, ಸ್ವಾತಿಯಲ್ಲ ನಾವು, ಈ ನರಕದಲ್ಲಿರೋರು. ನರಕದಲ್ಲೂ ನಮ್ಮಿಬ್ಬರನ್ನು ಒಟ್ಟಿಗೆ ನೋಡಲಿ. ಶಾಸ್ತ್ರಿಗಳೆ, ತಮ್ಮ ದರ್ಬಾರು ನಡೆಯಲಿ!' ರಾಮೂ ಹೇಳಿದ.

ಎಲ್ಲರೂ ಆಚೆ ಹೋದರು. ಸ್ವಲ್ಪ ಹೊತ್ತಿನಲ್ಲೇ ಶಾಸ್ತ್ರಿಗಳು 'ಸಿಕ್ಕಿತು! ಸಿಕ್ಕಿತು!' ಎಂದು ಕೂಗಿದರು. ಪೋಲಿಸಿನವರು ಶೀನಪ್ಪನನ್ನು ದಸ್ತಗಿರಿ ಮಾಡಿದರು. ರಾಮು ಸುಬ್ಬಾ ಇಬ್ಬರೂ ಸ್ವಾತಿಯ ಬಳಿ ಹೋಗಿ ನೋಡಿದರು. ಸ್ವಾತಿಯು ಸದ್ದಿಲ್ಲದೆ ಹೊರಟುಹೋಗಿದ್ದಳು.

—

ಊರಲ್ಲೆಲ್ಲಾ ಗಲಭೆ ಎದ್ದುಬಿಟ್ಟಿತು. ಎಲ್ಲರೂ ಗೋವಿಂದರಾಯನ ಮೇಲೂ ಶಾಸ್ತ್ರಿಗಳ ಮೇಲೂ ವಿಷಕಾರುವುದಕ್ಕೆ ಮೊದಲುಮಾಡಿದರು. ಆಗುವುದೇನು! ಶೀನಪ್ಪನನ್ನು ನ್ಯಾಯಾಸ್ಥಾನಕ್ಕೆ ಎಳೆದುಕೊಂಡು ಹೋದರು. ಅಕ್ಕಪಕ್ಕದ ಮನೆಯವರಾರೂ ನಮ್ಮನ್ನು—ಎಂದರೆ, ರಾಮು, ಸುಬ್ಬು, ನಾನು–ಮಾತನಾಡಿಸುತ್ತಿರಲಿಲ್ಲ. ಆದರೆ ಬೈಯುತ್ತಲೂ ಇರಲಿಲ್ಲ.

ವಿಚಾರಣೆಯ ಹೊತ್ತಿಗೆ ರಾಮು ಸುಬ್ಬು ಇಬ್ಬರನ್ನೂ ಮನೆಯಲ್ಲಿ ಬಿಟ್ಟು ನಾನೊಬ್ಬನೇ ನ್ಯಾಯಾಸ್ಥಾನಕ್ಕೆ ಹೋದೆ. ನ್ಯಾಯಾಧಿಪತಿಗಳು ತಮ್ಮ ಆಸನದಲ್ಲಿದ್ದರು. ಶಾಸ್ತ್ರಿಗಳು ಒಳಕ್ಕೆ ಬಂದರು.

'ಆ ಬೆತ್ತ ಕೆಳಗಿಡಿ. ಆ ಕಟಿಕಟೆಯೊಳಕ್ಕೆ ಹೋಗಿ ನಿಲ್ಲಿ.' ಕಾರಕೂನ ಆಜ್ಞಾಪಿಸಿದ.

ಶಾಸ್ತ್ರಿಗಳು ಹೋಗಿ ನಿಂತರು. ಭಾಷೆ ಮುಂತಾದವುಗಳನ್ನು ಹೇಳಿಸಿದ ಮೇಲೆ ಪ್ರಾಸಿಕ್ಯೂಟಿಂಗ್ ಇನ್ಸ್ಪೆಕ್ಟರವರು ಶಾಸ್ತ್ರಿಗಳನ್ನು ಕೇಳಿದರು. 'ಶಾಸ್ತ್ರಿಗಳೇ ಈ ಅಪರಾಧಿ ತಮಗೆ ತಿಳಿದವನೇ?'

'ಓಹೋ! ನನಗೆ ಬಹಳ ಚೆನ್ನಾಗಿ ಗೊತ್ತು.'

'ನಿಮಗೆ ಹೇಗೆ ಗೊತ್ತು?'

'ನಾನು ನಮ್ಮ ರಾಘವಶಾಸ್ತ್ರಿಗಳ ಮಗಳನ್ನು ಈತನ ಮಗನಿಗೆ ಕೊಡಬೇಕೆಂದು ಅವರ ಮನೆಗೆ ಹೋಗಿದ್ದೆ. ದೇವರ ದಯೆ....'

'ಬಾಯಿ ಮುಚ್ಚಿ! ಕೇಳಿದ್ದಕ್ಕೆ ಉತ್ತರ ಹೇಳಿ.' ನ್ಯಾಯಾಧೀಶರು ನಡುವೆ ತಡೆಹಾಕಿದರು.

'ಆಜ್ಞೆ, ಮಹಾಸ್ವಾಮಿ. ಕಂಡೋರ ಗುಣವರ್ಣನೆ ನಮಗ್ಯಾತಕ್ಕೆ! ಶ್ರೀ ವ್ಯಾಸರಾಯರು ಹೇಳಿದ್ದಾರಲ್ಲಾ, ಜ್ಞಾನ ದೊಡ್ಡದು, ಕರ್ಮ ಬಂಧವ ಬಿಟ್ಟು....'

'ತಮಗೀಗ ಮೌನವು ಬೇಕು. ಕೇಳಿದ್ದಕ್ಕೆ ಹೇಳಿ.'

'ತಾವು ೧೩ನೆಯ ತಾರೀಖು ಭಾನುವಾರ ಅವರ ಮನೆಗೆ ಹೋಗಿದ್ದಿರಾ?' ಪ್ರಾಸಿಕ್ಯೂಟಿಂಗ್ ಇನ್ಸ್ಪೆಕ್ಟರು ಮುಂದರಿಸಿದರು.

'ಹೀಗೇ ಹೋಗಬೇಕಾಗಿ ಬಂತು. ಮಾಮೂಲಾಗಿ ನಾನು ಅವರ ಮನೆಗೆ ಹೋಗುವುದೇ ಇಲ್ಲ.'

' ಏತಕ್ಕೆ ? ಅವರೇನು ಬ್ರಾಹ್ಮಣರಲ್ಲವೇ ? ' ನ್ಯಾಯಾದೀಶರ ಪ್ರಶ್ನೆ ಇದು.

' ಹಾಗುಂಟೆ, ಮಹಾಸ್ವಾಮಿ! ನನಗೆ ಸ್ವಲ್ಪ ಮಡಿ ಮೈಲಿಗೆ ಹೆಚ್ಚು. ಪೂಜೆ ಪುನಸ್ಕಾರಗಳಿಲ್ಲದ ಮನೆಗೆ ಹೋಗುವುದು ನನಗೆ ಸ್ವಲ್ಪ ಕಷ್ಟ. ಅಲ್ಲದೆ, ' ಪಿಡಿಯೊಳ್ಳುಂಜಿರೆ ಪಂಕ ಪೋಲದಂ ತೊಳೆಯಲ್ಕಾ ಶುದ್ಧಮೋ ? ಮಾಡುತ ಕಡು ಪಾಪಂಗಳ. . . . '

' ಸದ್ದು, ಸದ್ದು ' ದಫೇದಾರನು ಗದರಿಸಿದ.

' ಶಾಸ್ತ್ರಿಗಳೇ, ಇದು ಪುರಾಣದ ಕಟ್ಟೆಯಲ್ಲ ಆ ಭಾನವಾರ ನೀವು ಅಲ್ಲಿಗೆ ಏತಕ್ಕಾಗಿ ಹೋಗಿದ್ದಿರಿ ? ' ನ್ಯಾಯಾಧೀಶರೇ ಕೇಳಿದರು.

' ಹೆಂಡತಿ ಸಾಯುತ್ತಾ ಇದ್ದಳು. ಕೊನೆಯ ಪ್ರಾಯಶ್ಚಿತ್ತವನ್ನಾದರೂ ಮಾಡಿಸೋಣ ಎಂತ—ಸ್ವಲ್ಪ ಆತ್ಮಶುದ್ಧಿಯನ್ನಾದರೂ ಮಾಡಿಸುವ ಸದುದ್ದೇಶ. . . . '

' ನಿಮ್ಮನ್ನು ಯಾರಾದರೂ ಕರೆದಿದ್ದರೇ ? '

' ಇಲ್ಲ ಮಹಾಸ್ವಾಮಿ. ನಾನೇ ಸಹಾಯ ಮಾಡಲು ಹೋಗಿದ್ದೆ. ನಾನು ಒಬ್ಬರು ಕರೆದರೂ ಹೋಗುವವನಲ್ಲ ಮಹಾಸ್ವಾಮಿ. ಮಹಾಸ್ವಾಮಿಯವರಿಗೆ ನನ್ನ ಸಮಾಚಾರ ಅಷ್ಟು ಗೊತ್ತಿಲ್ಲ. ತಮ್ಮ ತಂದೆಯವರಿಗೆ ನನ್ನಲ್ಲಿ ಅತ್ಯಂತ ವಿಶ್ವಾಸ. ಅವರ ಬ್ರಾಹ್ಮಣ ಭಕ್ತಿ, ಅವರ ಸದಾಚಾರ, ಅವರ ದೈವಭಕ್ತಿ, ಅವರ ಯುಕ್ತಿ ಶಕ್ತಿಗಳು ಅಹಹ . . . '

' ನಿಲ್ಲಿಸಿರಿ. ಕೇಳಿದ ಪ್ರಶ್ನೆಗೆ ಉತ್ತರ ಕೊಟ್ಟರೆ ಸಾಕು. '

' ಆಗಲಿ, ಮಹಾಸ್ವಾಮಿ ! ತಮ್ಮ ಕೀರ್ತಿ ಯಶಸ್ಸು. . . . ರವಿಯಾಕಾಶಕೆ ಭೂಷಣಂ. . . . '

' ಶಾಸ್ತ್ರಿಗಳೇ, ತಮ್ಮಲ್ಲಿ ಒಳ್ಳೇ ಮಾತು ಕೆಲಸಕ್ಕೆ ಬರುವಂತಿಲ್ಲ, ಹೆಚ್ಚು ಮಾತನಾಡಿದರೆ ತೊಂದರೆಯಾದೀತು ! '

' ತಿಳಿಯದೆ ಮಹಾಸ್ವಾಮಿ ! ಸರ್ಕಾರದ ಹುಕ್ಕುಂ ಎಂದರೆ ಸಾಮಾನ್ಯವೆ ! ಸುಗ್ರೀವಾಜ್ಞೆ ! ಸುಗ್ರೀವಾಜ್ಞೆ !! '

' ಹೇಳಿರಿ. ಆ ದಿನ ಅಲ್ಲಿ ಏನು ನಡೆಯಿತು ? ' ಪ್ರಾಸಿಕ್ಯೂಟಿಂಗ್ ಇನ್ಸ್ಪೆಕ್ಟರರು ಪ್ರಶ್ನೆ ಹಾಕಿದರು.

' ಹೇಳ್ತೀನೆ ಮಹಾಸ್ವಾಮಿ. ತಮ್ಮಲ್ಲಲ್ಲದೆ ಮತ್ತಾರಲ್ಲಿ ಹೇಳಿಕೊಳ್ಳಬೇಕು! ಧರ್ಮಪ್ರಭುಗಳು ಸಾವಧಾನದಿಂದ ಕೇಳಬೇಕು. ಕೇಳುವವರಿರಬೇಕು, ಆಗಲೇ ಮಹಾಸ್ವಾಮಿ, ಧರ್ಮಯುಗ! ' ತಿಳಿವರ್ಗೆ ಮತ್ಸರಂ ಪಿರಿದು, ಇಳೆಯೊಣ್ಮರ್ ಅಖರ್ವ ಗರ್ವ ಭೂಷಿತ ಹೃದಯರ್....'

' ಪುರಾಣ ಸಾಕುಮಾಡಿ. ನಡೆದದ್ದನ್ನು ಹೇಳಿ. ' ನ್ಯಾಯಾಧೀಶರು ಲಗಾಮನ್ನು ಜಗ್ಗಿದರು.

' ಆಗಲಿ ಮಹಾಸ್ವಾಮಿ. ಗೋವಿಂದರಾಯರೂ ನನ್ನ ಜೊತೆಯಲ್ಲಿ ಬಂದಿದ್ದರು. ಹೋಗುತ್ತಾ ದಾರಿಯಲ್ಲಿ ಸ್ವಲ್ಪ ಜ್ಞಾನಚೂರ್ಣ—ತುಂಬಿಸಿಕೊಂಡು ಅವರ ಮನೆಗೆ ಹೋಗಿ....'

' ಯಾರ ಮನೆ ? '

' ಶೀನಪ್ಪನ ಮನೆ '

' ಮುಂದೆ....? '

' ಮುಂದೆ. ಅಂ, ' ಗುರುಭಕ್ತಿಃ ತತ್ವಮಾರ್ಗಾನುರಕ್ತಿಃ ಸುಖಾನುಗತ ವಸ್ತ್ವನುಭವಶ್ಚ, ತದ್ವಸ್ತ್ವನುಭವೇನ ತುಷ್ಟಿಃ ' ಇತ್ಯಾದಿಗಳಿಂದ, ಅವರಿಗೆ ಪ್ರಾಯಶ್ಚಿತ್ತದ ವಿಚಾರ ಎಷ್ಟೋ ಉಪದೇಶ ಮಾಡಿದೆ. ಅವರು ಬ್ರಾಹ್ಮಣರಿಲ್ಲದೆಯೇ ಕೆಲಸ ಮುಗಿಸುವುದರಲ್ಲಿದ್ದರು. ಅದು ಅಧರ್ಮವೆಂದು ಹೇಳಿದೆ. ಏನೋ ಯಥಾಶಕ್ತಿ ದಕ್ಷಿಣೆಯಿಲ್ಲದೆ ಕೆಲಸ ನಡೆಯುತ್ತಿದೆಯೆ? ಅದಕ್ಕೇ ಇವರ ತಿರಸ್ಕಾರ! ಅದಕ್ಕೇ ನೋಡಿ ಬ್ರಾಹ್ಮಣ್ಯ ಹಾಳಾಗಿ ಹೋಗಿಬಿಟ್ಟಿದೆ ದೇಶದಲ್ಲೆಲ್ಲಾ ಕ್ಷಾಮ! ಘೋರ ಯುದ್ಧ! ನಿಮ್ಮ ತಂದೆಗಳ ಕಾಲ, ಈ ಕಾಲ! ' ಕಲಿಯುಗದ ಮಹಿಮೆಯು ಕಾಣಬಂತೀಗ!'

' ಎರಡನೆಯ ಸಲ ಎಚ್ಚರಿಕೆ! ಮತ್ತೊಂದು ಸಲ ಹೀಗಾದರೆ ಕಾರಾಗೃಹ ಪ್ರಾಪ್ತಿ. ' ನ್ಯಾಯಾಧೀಶರ ಗರ್ಜನೆಯಾಯಿತು.

' ತಪ್ಪಾಯಿತು ಮಹಾಸ್ವಾಮಿ, ಕ್ಷಮಿಸಬೇಕು. '

' ಇನ್ನೇನು ಜರುಗಿತು ? ' ಪ್ರಾಸಿಕ್ಯೂಟಿಂಗ ಇನ್ಸ್ಪೆಕ್ಟರು ಕೇಳಿದರು.

' ಪೋಲೀಸು ಮಾದಪ್ಪ ಬಂದರು. ಅವರ ಜೊತೆಯಲ್ಲಿ ಪೋಲೀಸ್ ಅಧಿಕಾರಿಗಳೂ ಬಂದರು. ನಾನು ಸತ್ಯವಾಗಿ ಹೇಳುತ್ತೇನೆ. ಇದು ಧರ್ಮಸ್ಥಾನ, ನ್ಯಾಯಾಸ್ಥಾನ, ತಾವು ಕೇವಲ ಧರ್ಮಾವತಾರ....'

'ಮೂರನೆಯ ಎಚ್ಚರಿಕೆ ಸಮೀಪಕ್ಕೆ ಬಂದಿದೆ.' ನ್ಯಾಯಾಧೀಶರು ಎಚ್ಚರಿಸಿದರು.

'ಮಹಾಸ್ವಾಮಿಗಳು ಮಾತಿಗೆ ಕೂಡ ಹೀಗೆ ಅಡ್ಡಿ ಮಾಡಿದರೆ ಬ್ರಾಹ್ಮಣರ ಗತಿಯೇನು? ಇಲ್ಲ ಮಹಾಸ್ವಾಮಿ, ಒಂದು ನಿಮಿಷದಲ್ಲಿ ಎಲ್ಲಾ ಹೇಳಿ ಮುಗಿಸಿಬಿಡುತ್ತೇನೆ. ಮಾದಪ್ಪನವರು ಬಲವಂತದಿಂದ ನನ್ನನ್ನು ಪಂಚಾಯಿತಿದಾರನಾಗಿ ಮಾಡಿಕೊಂಡರು. ಮನೆಯಲ್ಲಾ ಹುಡಿಕಿದರು. ಮೂಲೆಯಲ್ಲಿ ಮೂರು ಮಡಿಕೆಯಿತ್ತು. ನಾನು ಆ ಮಡಿಕೆಗಳ ಬಳಿ ಹೋದಾಗ......ಶೀನಪ್ಪ ಸ್ವಲ್ಪ ಆಕ್ಷೇಪಿಸಿದರು. (ಕೆಮ್ಮುತ್ತಾ) ಆದರೆ ಸರ್ಕಾರೀ ಕೆಲಸ, ಮೇಲೆರಡು ಮಡಿಕೆ ತೆಗೆದ ಮೇಲೆ ಕೆಳಗಿನ ಮಡಿಕೆಯಲ್ಲಿ ಇತ್ತು ಜಡೆಬಂಗಾರ. ಮಾದಪ್ಪನವರು ಅದನ್ನು ತಮ್ಮ ಸ್ವಾಧೀನಪಡಿಸಿ ಕೊಂಡರು.'

'ಇದೇನೇ ನೋಡಿ' ಪ್ರಾಸಿಕ್ಯೂಟಿಂಗ್ ಇನ್ಸ್ಪೆಕ್ಟರು ಕೇಳಿದರು.

'ಹೌದು ಸ್ವಾಮಿ, ಇದೇ. ಆ ಗೋವಿಂದರಾಯರ ಮನೆಯ ಜಡೆ ಬಂಗಾರ.'

'ಇದು ಗೋವಿಂದರಾಯರದೆಂದು ನಿಮಗೆ ಹೇಗೆ ಗೊತ್ತು? ಮುಂಚಿತವಾಗಿ ನೀವಿದನ್ನು ನೋಡಿದ್ದಿರಾ?' ನ್ಯಾಯಾಧೀಶರು ಕೇಳಿದರು.

'ಇಲ್ಲ. ಮಹಾಸ್ವಾಮಿ. ಇದುವರಿವಿಗೂ ನಾನಿದನ್ನು ನೋಡಿದ್ದೇ ಇಲ್ಲ.'

'ನಿಮಗಿದು ಗೊತ್ತಾದ ಬಗೆ?'

'ಅಲ್ಲಿ ಹೇಳಿದರು ಸ್ವಾಮಿ.'

'ಹೇಳಿದವರು ಯಾರು? ಗೋವಿಂದರಾಯರೆ?'

'ಯಾರೂ ಹೇಳಲಿಲ್ಲ. ಎಲ್ಲೋ ಸ್ವಲ್ಪ ಪ್ರಮಾದವಾಗಿದೆ.'

'ಪ್ರಮಾದ?'

'ಹೌದು, ಮಹಾಸ್ವಾಮಿ. ಪ್ರಮಾದೋಧೀಮತಾಮಪಿ! ಇದಕ್ಕೇ ಪ್ರಮಾದ ಎಂಬೋದು!'

'ಪುನಃ ಹೇಳಿ. ಇದು ಗೋವಿಂದರಾಯರದೆಂದು ನಿಮಗೆ ಗೊತ್ತಾದ ಬಗೆ ಹೇಗೆ?'

'ಆದರ ಹಿಂಭಾಗದಲ್ಲಿ 'ಜಿ' ಇದೆ.'

'ಶಾಸ್ತ್ರಿಗಳೇ, ನಿಮಗೆ ಇಂಗ್ಲಿಷು ಬರುತ್ತೇನು?'

'ಅಯ್ಯೋ, ನಾನು ಕೇವಲ ವೈದಿಕ ಬ್ರಾಹ್ಮಣ! ನಿಮ್ಮ ತೀರ್ಥರೂಪರವರಿಗೆ ನನ್ನ ಮೇಲೆಷ್ಟು ಮಮತೆ! ಎಷ್ಟು ವಿಶ್ವಾಸ! ಎಷ್ಟು ಭಕ್ತಿ!'

'ನನ್ನ ಭಕ್ತಿ ವಿಶ್ವಾಸಗಳೂ ನಿಮ್ಮ ಕಡೆಗೇ ಬರುತಾ್ತ ಇವೆ. ಈ ಇಂಗ್ಲಿಷು ಅಕ್ಷರ ನಿಮಗೆ ಗೊತ್ತಾದುದು ಹೇಗೆ?'

'ಮಾದಪ್ಪ ಓದಿ ಹೇಳಿದಹಾಗಿತ್ತು. ಪೋಲೀಸರಿಗೆ ಏನು ಹಿಡಿದಿದೆ ಸ್ವಾಮಿ, ತಪ್ಪು ಕೇಸು ಮಾಡೋದಕ್ಕೆ? ಈ ಕೇಸು ಬಹಳ ಸತ್ಯ ಸ್ವಾಮಿ.'

'ನನಗೂ ಹಾಗೇ ಕಾಣುತ್ತಿದೆ.'

'ಧರ್ಮ ಪ್ರಭುಗಳು! ಎಂಥಾವರಾದರೇನು ಸ್ವಾಮಿ? ಜ್ಞಾನ, ಮಹಾಸ್ವಾಮಿ, ಜ್ಞಾನ! ಪಂಚನಾಮಾ ಆಯಿತು. ಗೋವಿಂದರಾಯರೇ ಇದನ್ನು ಗುರ್ತಿಸಿದರು. ಆಮೇಲೆ ಶೀನಪ್ಪನನ್ನು ಹಿಡಿದರು—ಆದರೆ ಒಂದು ಮಾತು ಮಹಾಸ್ವಾಮಿ, ಎಷ್ಟಾಗರೂ, ಬ್ರಾಹ್ಮಣ ಮಹಾಸ್ವಾಮಿ.'

'ಇದೇನೋ ಆ ಪಂಚನಾಮಾ?' ಪ್ರಾಸಿಕ್ಯೂಟಿಂಗ್ ಇನ್ಸ್ಪೆಕ್ಟರ ಸವಾಲು.

'ಹೌದು ಮಹಾಸ್ವಾಮಿ. ನಾನು ರುಜು ಹಾಕಿದ್ದೇನೆ.

'ಸರಿ. ಇದರಲ್ಲಿ ಜಡೆಬಂಗಾರ ಮೇಲಿನ ಮಡಿಕೆಯಲ್ಲಿದ್ದಂತೆ ಬರೆದಿದೆಯಲ್ಲಾ!' ನ್ಯಾಯಾಧೀಶರೆಂದರು.

'ಮಹಾಸ್ವಾಮಿ, ನಾನೇನಾದರೂ ಸುಳ್ಳಾಡುವವನೇ! 'ಸತ್ಯಂ ವದ ಧರ್ಮಂ ಚರ' ಎಂತ ಹೇಳಿದ್ದಾರೆ. ಮಹಾಸ್ವಾಮಿ, ಪೋಲೀಸಿನವರ ವ್ಯತ್ಯಾಸದಿಂದ ಹೀಗಾಗಿದ್ದರೂ ಆಗಿರಬಹುದು.'

'ನೀವೇನಾದರೂ ಕೇಳೋದಿದೆಯೋ?' ಶೀನಪ್ಪನ ಕಡೆ ನೋಡಿ ನ್ಯಾಯಾಧೀಶರು ಕೇಳಿದರು.

'ಬಹಳವಿಲ್ಲ, ಮಹಾಸ್ವಾಮಿ. ಒಂದು ಪ್ರಶ್ನೆ. ಶಾಸ್ತ್ರಿಗಳೆ, ನೀವು ಮಡಿಕೆಗಳ ಬಳಿ ಹೋದಾಗ ನಾನೆಲ್ಲಿದ್ದೆ?' ಶೀನಪ್ಪ ಕೇಳಿದ.

' ನೀನೇ ? ನೀನು ಕೊಠಡಿಯ ಆಚೆ ಇದ್ದೆ—ಇಲ್ಲ—ಇಲ್ಲ—ಒಳಗೇ ಇದ್ದೆ. '

' ಪ್ರಮಾಣಪೂರ್ವಕವಾಗಿ ಹೇಳಿ. '

' ನಾನು ಪ್ರಮಾಣ ಮಾಡಬೇಕೆ ? ನಿನ್ನ ಹಾಗೆ ಸುಳ್ಳಾಡತಕ್ಕವನೆಂದು ನನ್ನನ್ನು ತಿಳಿದಿರುವೆಯಾ ? ಪುರುಷಸೂಕ್ತ ಹೇಳಿದ ಬಾಯಿಂದ ಪ್ರಮಾಣ! ಮಹಾಸ್ವಾಮಿಯವರು ಇದನ್ನು ಗಮನಿಸಬೇಕು. ನಿಮ್ಮ ಮಾತೋಶ್ರೀಯವರಿಗೂ ನನ್ನ ಮೇಲೆ ಎಷ್ಟು ವಿಶ್ವಾಸ, ಎಷ್ಟು ಮಮತೆ, ಎಷ್ಟು ಭಕ್ತಿ!'

' ಸಾಕು. ನಿಲ್ಲಿಸಿ. ಇಲ್ಲಿ ಅಪರಾಧಿಯು ಅಡ್ಡಿಮಾಡಿದನೆಂದು ಬರೆದಿಲ್ಲವಲ್ಲಾ ? ' ನ್ಯಾಯಾಧೀಶರು ಮತ್ತೆ ತಡೆಹಿಡಿದರು.

' ಮಹಾಸ್ವಾಮಿ, ಇಂತಹ ದೊಡ್ಡ ರಿಕಾರ್ಡ್ ಬರೆಯುವಾಗ ಪೋಲೀಸಿನವರಿಗೆ ಎಷ್ಟು ಅಂತ ಜ್ಞಾಪಕ ಇರುತ್ತೆ ! '

' ಸರಿ, ಶಾಸ್ತ್ರಿಗಳೇ, ನೀವು ಆ ಮನೆಯಲ್ಲಿ ಎಷ್ಟು ಹೊತ್ತಿದ್ದಿರಿ ? '

' ಎಲ್ಲೋ ಸ್ವಲ್ಪ ಹೊತ್ತು ಮಹಾಸ್ವಾಮಿ ! ಇರುವಷ್ಟು ಕಾಲವೂ ಗೋವಿಂದರಾಯರ ಮಗ್ಗುಲಲ್ಲೇ ಇದ್ದೆ. ನಾನೇನೂ ಆ ಮಡಿಕೆಗಳ ಸಮೀಪಕ್ಕೆ ಕೂಡ ಹೋಗಲಿಲ್ಲ. '

' ಓಹೋ ! ಹಾಗೋ ! ಕಳವಿನ ವಿಚಾರ ನಿಮಗೆ ತಿಳಿದಿದ್ದು ಯಾವಾಗ ? '

' ಯಾವಾಗಲೇ ! ಗೋವಿಂದರಾಯರು. . . . ಇಲ್ಲ, ಇಲ್ಲ, ಮಾದಪ್ಪ ಬಂದಾಗ. '

' ಅಪರಾಧಿಯ ಮನೆಗೆ ಹೋಗುವುದಕ್ಕಿಂತ ಮುಂಚೆ ಅವನ ಮನೆ ಶೋಧನೆಯಾಗುತ್ತೆಂಬ ವಿಚಾರ ನಿಮಗೆ ತಿಳಿದಿರಲಿಲ್ಲವೆ ? '

' ಇಲ್ಲ, ಮಹಾಸ್ವಾಮಿ, ಇಲ್ಲ. '

' ಅಪರಾಧಿಯ ಮನೆಯನ್ನು ಶೋಧನೆ ಮಾಡಬೇಕೆಂದು ನೀವೇನಾದರೂ ಪೋಲೀಸಿನವರಿಗೆ ಹೇಳಿದಿರಾ ? '

' ಹೆಡ್ ಕಾನಸ್ಟೇಬಲ್‌ರವರು ಈ ಸಮಾಚಾರವನ್ನು ಅವರ ಡಯರಿಯಲ್ಲಿ ಏನಾದರೂ ಬರೆದಿದ್ದಾರೋ ಹೇಗೆ ? '

'ಇರಲಿ. ನಿಮಗೂ ಕಾನಸ್ಟೇಬಲ್ಲಿಗೂ ನಡೆದ ಮಾತಿನ ವಿಚಾರ ಸ್ವಲ್ಪ ಹೇಳಿ.'

'ಮಾದಪ್ಪನವರಿಗೆ ನಮ್ಮ ಶುದ್ಧ ಕನ್ನಡ ಅಷ್ಟು ಪರಿಚಯವಿಲ್ಲ. ನಾನಾಡಿದ ಮಾತು ಅವರಿಗೆ ಅರ್ಥವಾಯಿತೋ ಇಲ್ಲವೋ! ಶೀನಪ್ಪ, ಬಡವ; ಹೆಂಡತಿ ಖಾಯಿಲೆ. ತಾಪತ್ರಯ ಹೆಚ್ಚು. ಹೆಚ್ಚು ಕಾಠಿಣ್ಯ ಬೇಡ. ಇಷ್ಟೆಂದೆ, ಮಹಾಸ್ವಾಮಿ.'

'ಇದೆಲ್ಲಾ, ನೀವು ಶೀನಪ್ಪನ ಮನೆಗೆ ಹೋಗೋದಕ್ಕೆ ಮುಂಚಿತವಾಗಿ, ಅಲ್ಲವೆ? ಸತ್ಯ ಹೇಳಿ'

'ಸತ್ಯ! ಮಹಾಸ್ವಾಮಿ, 'ನ ಚಕ್ಷುಷಾ ಗೃಹ್ಯತೇ ನಾಪಿ, ವಾಚಾ ನಾನ್ಯೈರ್ದೇವೈಸ್ತಪಸಾ ಕರ್ಮಣಾವಾ। ಜ್ಞಾನಪ್ರಸಾದೇನ' ಎಂಬೋ ಉಪನಿಷದ್ವಾಕ್ಯವೇ ಇದೆಯಲ್ಲಾ ಮಹಾಸ್ವಾಮಿ! ಸತ್ಯಂ ವದ ಧರ್ಮಂ ಚರ—ಎಂತ ಹೇಳೇ ಇದ್ದಾರೆ ನಿಮ್ಮ ಮಾತಾಪಿತೃಗಳಿಗೆ ನನ್ನ ಮೇಲೆ...'

'ಸಾಕು ನಿಲ್ಲಿಸಿ, ಸತ್ಯಂ ವಧ!'

'ಅಯ್ಯಯ್ಯೋ ಮಹಾಸ್ವಾಮಿ! 'ಸತ್ಯಮೇವ ಜಯತಿ ನಾನೃತಂ, ಸತ್ಯೇನ ಪಂಥಾ ವಿತತೋ ದೇವಯಾನಃ' ಮಹಾಸ್ವಾಮಿ, ನನ್ನ ಮಾತಾಮಹರ ತಮ್ಮಂದಿರು ಸಂಸ್ಕೃತದಲ್ಲಿರುವ ಚಂಡಕೌಶಿಕ ನಾಟಕವನ್ನು ಶುದ್ಧ ಶೈಲಿಯಲ್ಲಿ ಸತ್ಯ ಹರಿಶ್ಚಂದ್ರ ನಾಟಕವನ್ನಾಗಿ ಒರೆದರು. ತಪಸಾ ಚೀಯತೇ ಬ್ರಹ್ಮ ತತೋಽನ್ನಮಭಿಜಾಯತೇ। ಅನ್ನಾತ್ಪ್ರಾಣೋ ಮನಃ ಸತ್ಯಂ ಲೋಕಾಃ ಕರ್ಮಸು ಚಾಮೃತಂ' — ಮುಂಡಕೋಪನಿಷತ್ತಿನ ವಾಕ್ಯ ಮಹಾಸ್ವಾಮಿ! ಇಂತಹ ವಂಶ ನಮ್ಮದು! ನಮ್ಮ ತಂದೆಯವರು ಪಂಚ— ಐದು—ಯಜ್ಞಗಳನ್ನು ಮಾಡಿ ಕೈಲಾಸವಾಸಿಗಳಾದರು. ಬಹಳ ದೊಡ್ಡವರು ಮಹಾಸ್ವಾಮಿ. ಇನ್ನು ನನ್ನ ವಿಚಾರ, ನನಗೆ ಬಂದಿರುವ ಬಿರುದುಗಳು....'

'ಸಾಕು, ನಿಲ್ಲಿಸಿ, ನಿಮ್ಮ ಸಾಕ್ಷ್ಯ. ಇವತ್ತು ಇಷ್ಟಕ್ಕೇ ಸಾಕು.'

'ಬರಲೆ, ಮಹಾಸ್ವಾಮಿ ನಿಮ್ಮ ತಂದೆಯವರಿಗೆ ನನ್ನ ಮೇಲೆಷ್ಟು ಅಭಿಮಾನ! ನೀವೆಂತಹ ಧರ್ಮಪ್ರಭುಗಳು! ಸಕಲೈಶ್ವರ್ಯಾಭಿವೃದ್ಧಿರಸ್ತು!'

ಇದಾದ ಮೇಲೆ ಹೆಡ್ಕಾನ್‌ಸ್ಟೇಬಲ್ ಮಾದಪ್ಪನವರ ವಿಚಾರಣೆಯು ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರಿಂದ ಪ್ರಾರಂಭವಾಯಿತು.

'ಹೋದ ತಿಂಗಳು ೧೦ನೆಯ ತಾರೀಖು ಶುಕ್ರವಾರ ಗೋವಿಂದ ರಾಯರ ಮನೆಯಲ್ಲಿ ಜಡೆಬಂಗಾರ ಹೋದ ರಿಪೋರ್ಟು ಇದೇನೆ?'

'ಇದೇ ಸಾರ್.'

'ಇದರ ಮೇಲೆ ವಿಚಾರಣೆ ನಡೆಸಿದರೋ?'

'ಹೌದು ಸಾರ್.'

'ಅಪರಾಧಿ, ಶೀನಪ್ಪನ ಮನೆಯ ಶೋಧನೆ ಮಾಡಿದರೇನು?'

'ಹೌದು ಸಾರ್.'

'ಯಾವತ್ತು? ೧೨ನೆಯ ತಾರೀಖು ಭಾನುವಾರವೋ?'

'೧೨ನೆಯ ತಾರೀಖು ಭಾನುವಾರ, ಸಾರ್.'

'ನೀವೇ ಖುದ್ದು ಮಾಡಿದರೇನು?'

'ಹೌದು ಸಾರ್.'

'ಪಂಚಾಯಿತಿದಾರರು ಎದುರಿಗಿದ್ದರೇನು?'

'ಹೌದು, ಆಜರಿದ್ದರು ಸಾರ್.'

'ಅವರ ಪೈಕಿ ಸಾಕ್ಷಿಯಾಗಿ ಯಾರಾದರೂ ಬಂದಿದ್ದಾರೆಯೆ?'

'ಶ್ರೀಧರಶಾಸ್ತ್ರಿ ಅಯ್ಯಾ ಅವರು ಬಂದವ್ರೆ.'

'ಶೋಧನೆಯಲ್ಲಿ ಏನಾದರೂ ಸಿಕ್ಕಿತೆ?'

'ಜಡೆಬಂಗಾರ, ಒಂದು ಸಿಕ್ಕೈತೆ, ಸಾರ್.'

'ಇದೇನೇ?' ಜಡೆಬಂಗಾರ ತೋರಿಸಿ ಕೇಳಿದರು.

'ಹೌದು ಸಾರ್.' ಅದನ್ನು ನೋಡಿ ಮಾದಪ್ಪ ಹೇಳಿದ.

ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರು ಏನನ್ನೋ ಬರೆದುಕೊಳ್ಳುತ್ತಿದ್ದ ಕಾಲದಲ್ಲಿ ನ್ಯಾಯಾಧಿಪತಿಗಳು ಶೀನಪ್ಪನ ಕಡೆ ತಿರುಗಿ, 'ನೀವೇನಾದರೂ ಕೇಳುವಿರಾ?' ಎಂದರು.

'ನೀವು ಶೋಧನೆ ಮಾಡುವಾಗ ನಾನೆಲ್ಲಿದ್ದೆ?' ಶೀನಪ್ಪ ಅದೇ ಪ್ರಶ್ನೆ ಕೇಳಿದ.

'ನೀವು ಆಚೆ ಇದ್ದಿರಿ.' ಮಾದನೆಂದ.

'ನಾನೇನಾದರೂ ನಿಮಗೆ ಅಡ್ಡ ಬಂದೆನೆ?'

'ಇಲ್ಲ ಸಾರ್.'

'ಈ ಜಡೆಬಂಗಾರ ಎಲ್ಲಿ ಸಿಕ್ಕಿತು?' ನ್ಯಾಯಾಧೀಶರು ಕೇಳಿದರು.

'ಒಂದು ಪುಟ್ಟ ಪೆಟ್ಟಿಗೆ ಮಡಿಕೆಗಳಿತ್ತು, ಮೇಗಿನ ಮಡಿಕೇಲಿ ಇತ್ತು, ಸಾರ್.'

'ಅದಕ್ಕೆ ಮುಚ್ಚಳ ಇತ್ತೆ?'

'ಇಲ್ಲ ಸಾರ್.'

'ಅದರಲ್ಲಿ ಇನ್ನೇನಿತ್ತು?'

'ಉತ್ತಿನಬೇಳೆ, ಎರಡು ಮೆಣಸಿನಕಾಯಿ ಸಾರ್.'

'ಈ ಜಡೆಬಂಗಾರ ಮೇಲೆ ಕಾಣುವಂತಿತ್ತೆ?'

'ಗ್ನ್ಯಾಪಕ ನಂಕಿಲ್ಲ, ಸಾರ್.'

'ಇದನ್ನು ಮೊದಲು ಹುಡುಕಿದೋರು ಯಾರು?'

'ಮೊದಲು ಶಾಸ್ತ್ರಿ ಅಯ್ಯಾ ಅವರು ಹಿಡಿದೆತ್ತಿದ್ದು, ಸಾರ್.'

'ಸರಿ, ಇದರ ಹಿಂದೆ 'ಜಿ' ಎಂಬೋ ಅಕ್ಷರವಿದೆ ಎಂತ ಗೋವಿಂದ ರಾಯರು ಬರೆಸಿರುವರೆ?'

'ಇಲ್ಲ ಸಾರ್.'

'ಅಪರಾಧಿ ಮನೆ ಶೋಧನೆ ಮಾಡಬೇಕು ಎಂತ ನಿನಗೆ ಮೊದಲು ಸಲಹೆ ಕೊಟ್ಟಿದ್ದು ಯಾರು?'

'ಡಯರೀಲಿ ಇನ್‌ಫಾರ್ಮೇಷನ್ನು ಇದೆ ಸಾರ್.'

'ಇಲ್ಲೇ ಹೇಳಬೇಕು.'

'ಆ ಶಾಸ್ತ್ರಿ ಅಯ್ಯಾಗಳೇ—ಬೇಗ ಓಗಬೇಕು; ಇಲ್ಲಕಿದ್ದರೆ ಮಾಲು ಪರಾರಿಯಾತಾತು—ಅಂತ ಕೂಡ ಹೇಲಿದರು, ಸಾರ್.'

'ಶೀನಪ್ಪ, ನೀನು ಏನು ಹೇಳುವೆ?' ನ್ಯಾಯಾಧೀಶರು ಕೇಳಿದರು.

'ನಾನೇನು ಹೇಳಲಿ ಮಹಾಸ್ವಾಮಿ! ನನಗೊಂದೂ ತಿಳಿಯದು. ನನ್ನ ಹೆಂಡತಿ ಮೃತ್ಯುಶಯ್ಯೆಯೊಳಗಿದ್ದಳು. ನಾನೂ ನನ್ನ ಮಗನೂ ಅವಳನ್ನು ಪಚರಿಸುತ್ತಾ ಇದ್ದೆವು. ಇಷ್ಟೇ ನನಗೆ ಗೊತ್ತಿರೋದು. ಎಲ್ಲಾ ದೇವರಿಗೆ ಗೊತ್ತು' ಶೀನಪ್ಪ ಉತ್ತರ ಕೊಟ್ಟ.

ಸುಳ್ಳು ಹೇಳಿ, ವಂಶ ನಾಶಮಾಡಿದ ನಿಮಗೆ ಯಮರಾಯ ಯಾವ ನರಕ ವನ್ನು ನಿರ್ಮಿಸಿದ್ದಾನೋ ಕಾಣೆ!'

'ಎಲ್ಲಾ ತಿಳಿದ ನೀವೂ ಹೀಗೆ ಹೇಳಬಹುದೆ?'

'ಎಲ್ಲಾ ತಿಳಿದಿದ್ದರಿಂದಲೇ ನಿಮ್ಮಲ್ಲಿಗೆ ಬಂದಿರೋದು. ಪ್ರತಿನಿತ್ಯವೂ —ಶನ್ನೋ ಮಿತ್ರಸ್ಯ—ಹೇಳಿದ್ದೂ ಹೇಳಿದ್ದೇ. ಅದರ ಅರ್ಥ ನಿಮಗೆ ತಿಳಿದಿದ್ದರೆ ಈಗ ಸತ್ಯವನ್ನು ಹೇಳಿ.'

'ನಾನೇನು ಮಾಡಿದೆ? ಎಲ್ಲಾ ಆ ಮಾರ್ಜಾಲಶಾಸ್ತ್ರಿ!'

'ಅದೇ ಅವನ ಸಂಗಡ ಮಾತಾಡಿ, ಅವನಿಗೆ ಬೆಂಬಲವಾಗಿ, ಸುಮ್ಮನೆ ಇರುವ ತಮಗೂ ಅದರ ಪ್ರಭಾವ ತೋರಿಸದೇ ಬಿಡುವಂತಿಲ್ಲ. ಸನ್ಯಾಸ ಎಂದರೆ ಹೀಗಿರಬೇಕು! ವಿರಕ್ತಿ ಎಂದರೆ ಇಂತಿರಬೇಕು!'

'ನನ್ನ ಕೈಯಿಲ್ಲ, ನನಗದು ಗೊತ್ತು, ಇಷ್ಟೇ.'

'ಹೌದು, ಶಾಸ್ತ್ರಿಗಳೆ. ರೋಗಿ ಸಾಯುತ್ತಿದ್ದಾನೆ ಇನ್ನಿ. ಅವನಿಗೆ ಔಷಧ ಹಾಕಿದರೆ ಬದುಕಿಕೊಳ್ಳುತ್ತಾನೆ. ಆ ಔಷಧಿ ನಿಮ್ಮಲ್ಲಿದೆ. ನೀವು ಹಾಕದೆ ಸುಮ್ಮನೆ ನೋಡಿಕೊಂಡಿದ್ದರೆ, ನಿಮಗೆ ಪಾಪ ಅಲ್ಲವೆ? ಒಂದು ವೇಳೆ ನೀವೇ ಆ ಶೀನಪ್ಪನ ಸ್ಥಿತಿಯಲ್ಲಿದ್ದರೆ? ಸ್ವಲ್ಪ ಯೋಚನೆ ಮಾಡಿ. ಕೈಮೀರಿದ ಮೇಲೆ ಪಶ್ಚಾತ್ತಾಪಪಡುವುದಕ್ಕಿಂತ ಮುಂಚಿತವಾಗಿಯೇ ಮಾಡುವುದು ಲೇಸಲ್ಲವೆ?'

'ಹೌದು, ಏನು ಮಾಡು ಅಂತೀರಿ, ನನ್ನ?'

'ಏನೂಯಿಲ್ಲ, ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರವರ ಮನೆಗೆ ಬನ್ನಿ. ಸಮಾಚಾರ ಹೇಳಿಬಿಡಿ. ಆಮೇಲೆ ವಿಚಾರಣೆಯಲ್ಲಿ ಏನಾದರೂ ಆಗಲಿ. ಆ ಪಾಪ ನಿಮಗಿಲ್ಲ.'

ಆದರಂತೆಯೇ ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರವರ ಮನೆಗೆ ಇಬ್ಬರೂ ಹೋಗಿ ಹೇಳಿದರು ನಡೆದ ಸಮಾಚಾರವನ್ನು; ಅವರ ಸಲಹೆ ತೆಗೆದುಕೊಂಡು ತಮ್ಮ ಮುಂದಿನ ಕಾರ್ಯವನ್ನು ನೆರವೇರಿಸಲು ಹೊರಟರು.

—

ಅವತ್ತು ನ್ಯಾಯಾಸ್ಥಾನದಲ್ಲಿ ಗೋವಿಂದರಾಯರ ವಿಚಾರಣೆಯು ಆಯಿತು. ಮೊದಲು ಮೊದಲು ಬಹಳ ಅಸುಮಾನದಿಂದ ಮಾತನಾಡಿದರು. ಆದರೆ ಶೇಷಗಿರಿರಾಯರ ಮಾತೂ, ವೀರರಾಘವಶಾಸ್ತ್ರಿಗಳು ಹೇಳಿದ್ದೂ ಜ್ಞಾಪಕವಿತ್ತಾದ್ದರಿಂದ ನಿಜಸ್ಥಿತಿಯು ಹೊರಬಿತ್ತು.

'ನಿಮ್ಮ ಜಡೆಬಂಗಾರ ಯಾವತ್ತು ನಿಮ್ಮ ಪೆಟ್ಟಿಗೆಯಲ್ಲಿಟ್ಟು ಬೀಗ ಹಾಕಿದಿರಿ?' ನ್ಯಾಯಾಧೀಶರು ಪ್ರಾರಂಭಿಸಿದರು.

'ಮಹಾಸ್ವಾಮಿ, ೯ನೆಯ ತಾರೀಖಿನ ದಿನ.' ಗೋವಿಂದರಾಯರು ತಡೆತಡೆದು ಉಗುಳು ನುಂಗಿ ಉತ್ತರ ಕೊಟ್ಟರು.

'ಎಷ್ಟು ಹೊತ್ತಿನಲ್ಲಿ ಎಂದು ಹೇಳಲಾದೀತೆ?'

'ಸುಮಾರು, ಸಾಯಂಕಾಲ ನಾಲ್ಕುಗಂಟೆ, ಸ್ವಾಮಿ.'

'ಅಲ್ಲಿಂದಾಚೆಗೆ ಅದನ್ನು ತೆಗೆಯಲಿಲ್ಲವಲ್ಲ?'

'ಇಲ್ಲ, ಮಹಾಸ್ವಾಮಿ.'

'ಬೀಗದ ಕೈ ನಿಮ್ಮ ಹತ್ತಿರ ಇತ್ತೆ, ಅಥವಾ ಎಲ್ಲಾದರೂ ಇಟ್ಟಿದ್ದಿರಾ?'

'ನನ್ನ ಹತ್ತಿರಲೇ ಇತ್ತು, ಮಹಾಸ್ವಾಮಿ.'

'ನೀವು ಆ ದಿನ ಪೆಟ್ಟಿಗೆಯನ್ನು ತೆಗೆಯಲು ಏನಾದರೂ ಕಾರಣವಿತ್ತೆ?'

'ಇತ್ತು, ಮಹಾಸ್ವಾಮಿ. ಶ್ರೀಧರಶಾಸ್ತ್ರಿಗಳು ತಾವು ಅದರಂತೆಯೇ ಒಂದು ಮಾಡಿಸಬೇಕೆಂದು ಅದನ್ನು ನೋಡಬೇಕೆಂದರು.'

'ಅದನ್ನು ಆಮೇಲೆ ಪೆಟ್ಟಿಗೆಯೊಳಗೇ ಇಟ್ಟಿರೇನು?'

'ಶ್ರೀಧರಶಾಸ್ತ್ರಿಗಳೇ ಕೈಗೆ ತೆಗೆದುಕೊಂಡು ನೋಡಿ, ಆ ಭರಣಿಯನ್ನು ಅವರೇ ಇಟ್ಟರು.'

'ಆ ಭರಣಿಯೊಳಗೆ ಜಡೆಭಂಗಾರ ಇತ್ತೆಂದು ನಿಮಗೆ ಖಂಡಿತವಾಗಿ ಗೊತ್ತೇ?'

'ಭರಣಿಯೊಳಗೆ, ಮುಚ್ಚಳ ತೆಗೆದು, ನಾನು ನೋಡಲಿಲ್ಲ ಮಹಾಸ್ವಾಮಿ. ಶಾಸ್ತ್ರಿಗಳೇ ಒಳಗಿಟ್ಟರು. ನಾನು ಬೀಗ ಹಾಕಿದೆ.' ಪುನಃ

ಮಾಜರ್ಾಲಶಾಸ್ತ್ರಿಗಳನ್ನು ಸಾಕ್ಷಿಸ್ಥಾನದಲ್ಲಿ ನಿಲ್ಲಿಸಿದರು. ಪ್ರಾಸಿಕ್ಯೂಟಿಂಗ್ ಇನ್ಸ್ಪೆಕ್ಟರು ಅವರನ್ನು ಎದುರಿಸಿದರು.

'ನೀವು ಜಡೆಬಂಗಾರವನ್ನು ಹಿಂದೆ ನೋಡಿರಲಿಲ್ಲವೆಂದು ಹೇಳಿದಿರಲ್ಲ?'

'ಮಹಾಸ್ವಾಮಿ, ದೊಡ್ಡಮನುಷ್ಯರ ಮನೆಯ ವಿಚಾರಗಳನ್ನು ಬಹಿರಂಗವಾಗಿ ಕೋರ್ಟಿನಲ್ಲಿ ಹೇಗೆ ಹೇಳಲಾಗುತ್ತೆ ಮಹಾಸ್ವಾಮಿ? 'ನಚ ಚಕ್ಷುಷಾಗೃಹ್ಯತೇನಾಪಿ!'

'ಶಾಸ್ತ್ರಿಗಳೆ, ನೀವು ಗೋವಿಂದರಾಯರ ಮನೆಯಲ್ಲಿ ಜಡೆಬಂಗಾರವನ್ನು ನೋಡಲು ತೆಗೆಸಿದಿರಾ?' ನ್ಯಾಯಾಧೀಶರು ಕೇಳಿದರು.

'ಇಲ್ಲ, ಮಹಾಸ್ವಾಮಿ. ನನಗೇತಕ್ಕೆ ಆ ಜಡೆಬಂಗಾರ. ಏನೋ ಗೃಹಕೃತ್ಯದ ವಿಚಾರದಲ್ಲಿ ರಾಯರಿಗೆ ತೊಂದರೆ. ಅದನ್ನು ಸರಿಮಾಡಿದರೆ ಈ ಜಡೆಬಂಗಾರವನ್ನಾದರೂ ಕೊಡುತ್ತೇನೆಂದು ಅವರೇ ನನ್ನ ಕೈಗೆ ಅದನ್ನು ಕೊಟ್ಟರು. ಮಹಾಸ್ವಾಮಿ, ಏನೋ ಬಡವ. ಆದರೂ ಕಂಡವರ ಹೊನ್ನನ್ನು ತೃಣವಾಗಿ ನೋಡಬೇಕೆಂದು ನಮ್ಮ ಯಜಮಾನರು ಹೇಳಿ ಹೋಗಿರುವರು. ಪಿತೃವಾಕ್ಯಪರಿಪಾಲನೆ ಎಂಬೋದು ಮಹಾಶ್ರೇಷ್ಠ. ಪಿತೃವಾಕ್ಯಪರಿಪಾಲನೆಗಾಗಿಯೇ ಆ ಶ್ರೀರಾಮನೆ ತನ್ನ ರಾಜ್ಯಕೋಶಗಳನ್ನು ಬಿಟ್ಟು, ಅಡವಿಯಲ್ಲಿ......'

'ಸಾಕು, ನಿಲ್ಲಿಸಿ, ನೀವು ಈ ಮಾಲನ್ನು ಮುಂಚೆಯೇ ನೋಡಿದ್ದಿರಿ, ಅಲ್ಲವೆ?'

'ಹೌದು, ಮಹಾಸ್ವಾಮಿ. ತಾವು ಸತ್ಯಪ್ರಿಯರು. ತಮಗೆ ಸತ್ಯವು ಸಾಕ್ಷಾತ್ಕಾರ! ತಮ್ಮಂಥಾವರಲ್ಲಿ ಸುಳ್ಳು ಹೇಳಿ ನಾನು ನರಕಕ್ಕೆ..

'ಶಾಸ್ತ್ರಿಗಳೇ, ಇದರಲ್ಲಿ ನಿಮ್ಮ ಕೈವಾಡವೇನೂ ಇಲ್ಲವಷ್ಟೆ?'

'ಮಹಾಸ್ವಾಮಿ, ನನಗರ್ಥವಾಗಲಿಲ್ಲ'

'ನೀವು ಜಡೆಬಂಗಾರದ ಭರಣಿಯನ್ನು ನಿಮ್ಮ ಕೈಗೆ ತೆಗೆದುಕೊಂಡಿದ್ದಿರಾ?'

'ನಾನು ತೆಗೆದುಕೊಳ್ಳಲಿಲ್ಲ. ರಾಯರೇ ನನ್ನ ಮೇಲೆ ಬಹಳ ಕೃಪೆ ಮಾಡಿ ನನ್ನ ಕೈಗೆ ಕೊಟ್ಟರು. ಆಗ ನಾನು ಕೇಳಿದೆ—ಮಹಾಸ್ವಾಮಿ,

ತಾವೇನೋ ಕೊಟ್ಟಿರುವಿರಿ. ಆದರೆ ಮಾಲು ಕಳವಾದದ್ದೆಂದು ನನ್ನ ಮೇಲೆ ಬಂದರೆ ಆಗ ನಾನೇನು ಮಾಡಲಿ?—ಎಂತ. ಅದಕ್ಕೆ ಅವರು ಹೇಳಿದರು—ಅದರ ಹಿಂದುಗಡೆ 'ಜಿ' ಎಂದಿದೆ. ನಾನು ಕೊಟ್ಟಮೇಲೆ ಅದನ್ನು ಕೇಳುವವರು ಯಾರು? ಎಂತ ಆದಾಗ್ಯೂ ಕಲಿಗಾಲ ಮಹಾಸ್ವಾಮಿ, ನನಗೇತಕ್ಕೆ ಇವೆಲ್ಲಾ! ಶಂಕರಾಚಾರ್ಯರೇ ಹೇಳಿದ್ದಾರೆ—ನಾಸ್ಥಾ ಧರ್ಮೇ ನಸಸುಸಿಚಯೆ....'

'ಸಾಕು, ನಿಮ್ಮ ಹರಿಕಥೆ! ನನಗೇನೋ ನಿಮ್ಮ ಮೇಲೆ ಬಹಳ ಅನುಮಾನವಿದೆ.'

'ಆದುದರಿಂದಲೇ ಮಹಾಸ್ವಾಮಿ! ಎಲ್ಲಾದರೂ ಉಂಟೆ! ಅನುಮಾನ ಮಹಾಸ್ವಾಮಿ, ದೈವಭಕ್ತಿಗೆ ಮೂಲ. ಹಿರಣ್ಯಕಶಿಪುಸಂಥಾವನಿಗೆ ಅನುಮಾನ ಸುತ್ತಿಕೊಂಡು ಪ್ರಹ್ಲಾದನ್ನ ಕೇಳಿದ, ಇಲ್ಲಿದ್ದಾನೆಯೆ—ಈ ಕಂಭದಲ್ಲಿದ್ದಾನೆಯೆ? ಎಂತ ಅನುಮಾನವಿಲ್ಲದಿದ್ದರೆ ಸತ್ಯವು ಪ್ರಚಾರಕ್ಕೆ ಬರುವಂತೆಯೇ ಇಲ್ಲ, ಮಹಾಸ್ವಾಮಿ. ಆದಕ್ಕಾಗಿಯೇ 'ಅನುಮಾನಾನುಮಾನಾಂಚ' ಎಂದು ನುಡಿದಿದ್ದಾರೆ. ಅಲ್ಲ, ಮಹಾಸ್ವಾಮಿಗಳಿಗೆ ಅನುಮಾನವಾದರೆ ಪರಿಹರಿಸುವಂತಹ ಧೀರರು ಯಾರು?'

'ಸಾಕು. ಇನ್ನು ಮಾತನಾಡಿದರೆ ನಿಮಗೆ ತಕ್ಕ ಶಿಕ್ಷೆಯಾದೀತು.'

ಪ್ರಾಸಿಕ್ಯೂಟಿಂಗ್ ಇನ್ಸ್ಪೆಕ್ಟರ ನ್ಯಾಯಾಧಿಪತಿಗಳಿಗೆ ಏನೋ ಹೇಳಿದರು. ಅವರು ಅದನ್ನು ಕೇಳಿ 'ವಿಚಾರಣೆಯನ್ನು ಬರುವ ವಾರಕ್ಕೆ ಹಾಕಿದ್ದೇವೆ.' ಎಂದು ಹೇಳಿದರು. ಶೀನಪ್ಪನನ್ನು ಶೇಷಗಿರಿರಾಯರು ಬಿಡಿಸಿಕೊಂಡು ಬಂದರು. ಒಂದು ವಾರದ ನಂತರದಲ್ಲಿ ಈ ತೊಡಕು ಬಿಟ್ಟುಹೋಯಿತು. ಶೀನಪ್ಪನು ತಪ್ಪಿತಸ್ಥನಲ್ಲವೆಂದಾಯಿತು. ಶಾಸ್ತ್ರಿಗಳಿಗೆ ಬೇಕಾದ ಶಾಂತಿಯನ್ನು ಶೀನಪ್ಪನು ಮಾಡಿಸಬಹುದೆಂದು ಇನ್ಸ್ಪೆಕ್ಟರವರು ಹೇಳಿದರು. ಆದರೆ ಶೀನಪ್ಪ 'ಇದೆಲ್ಲಾ ನಮ್ಮ ಕರ್ಮ, ಅವರದೇನೂ ತಪ್ಪಿಲ್ಲ.' ಎಂದು ಹೇಳಿ ಸುಮ್ಮನಾದ.

ಈ ಗಲಭೆಯಲ್ಲಿ ಸುಬ್ಬು ಮಾಯವಾದಳು. ಎಲ್ಲೆಲ್ಲೋ ಹುಡುಕಿದರು. ಅವಳು ಸಿಕ್ಕಲಿಲ್ಲ. ಮೂರು ದಿವಸಗಳಾದ ಮೇಲೆ ಶೇಷಗಿರಿರಾಯರಿಗೆ ಪೋಲೀಸಿನವನು ಬಂದು ಹೇಳಿದ, 'ಛತ್ರದ ಭಾವಿಯ ಹತ್ತಿರ ಯಾವುದೋ

'ಲಾಕ್ಷಿ ಬಿದ್ದಿದೆ' ಎಂತ. ಎಲ್ಲರೂ ಹೋದೆವು. ರಾಮು ಗಡುವಿನ ಜ್ವರದಿಂದ ಆಸ್ಪತ್ರಿಯಲ್ಲಿಯೇ ಇದ್ದ. ನೋಡಿದ ತಕ್ಷಣವೇ ಸನ್ನೆದೆ ಒಡೆದು ಹೋಗೋಹಾಗಾಯಿತು. ವೈದ್ಯರು 'ನಿತ್ರಾಣದಿಂದ ಸಾವು' ಎಂದು ಹೇಳಿದರು. ಮಾಡುವುದೇನು? ದೈವಸಂಕಲ್ಪ!

ಎಲ್ಲರೂ ಹೇಳಿದರು, ರಾಮೂಗೆ ಈ ಸಮಾಚಾರ ತಿಳಿಯಬಾರದು ಎಂತ. ಸಲವತ್ತೆರಡು ದಿನ ಜ್ವರ ಕಾಡಿಸಿತು. ಆಮೇಲೆ ಜ್ವರ ಬಿಟ್ಟಿತು. ಹತ್ತಾರು ದಿನಗಳನಂತರ ಏನೋ ಮಾತುಕತೆ ಬಂತು.

'ಸಮಸ್ಯೆ ಪೂರ್ತಿ ಮಾಡೋದು ಮಹಾಕಷ್ಟ.' ರಾಮೂ ಉಸುರಿದ.

'ಹೌದು ರಾಮು ಅವರಿಗೆ ಸಂಘವಿಲ್ಲ. ಯಾರೂ ಅವರೊಡನೆ ಸೇರುವುದಿಲ್ಲ. ಮನಸಿನಲ್ಲಿ ಮರುಕವಿದ್ದರೂ ಅದನ್ನು ಈಚೆ ತೋರಿಸಲು ಹೆದರಿಕೆ.'

'ಅಂತಹ ಹೆದರಿಕೆ ಏನು?'

'ನಿನಗಿನ್ನೂ ತಿಳೀದು ರಾಮೂ. ಒಂದು ತಿಥಿಯಾದರೆ ಅವರ ಮನೆಗೆ ಬ್ರಾಹ್ಮಣರು ಬರುವದಿಲ್ಲ. ನಿತ್ಯಕರ್ಮಗಳನ್ನು ಮಾಡುವದಕ್ಕೂ ಬರುವುದಿಲ್ಲ. ಹಿಂದಿನ ದಾರಿ ಹೋಗಿದೆ; ಮುಂದಿನ ದಾರಿ ಇನ್ನೂ ತಿಳಿದಿಲ್ಲ.'

'ವಿಶ್ವಾಮಿತ್ರ ಸ್ವರ್ಗ! ನಮ್ಮ ದೇಶದ ಗತಿ ಏನು?'

'ಎಲ್ಲವೂ ಆ ಪರಮಾತ್ಮನ ಕೈಲಿದೆ. ಅವನ ಲೀಲೆಯನ್ನು ತಿಳಿಯಲು ಅಸಾಧ್ಯ. ಒಂದು ವೇಳೆ ಮರಣವೇ ಇಹಲೋಕದ ತೊಂದರೆಗೆ ಔಷಧವೆಂದು ಅದನ್ನು ಕೊಟ್ಟರೂ ಕೊಡಬಹುದು!'

'ಮರಣ ಎಂದರೆ?....ಹೌದು. ಗಂಡಸು ಎಂತಹ ಕಾರ್ಯ ಮಾಡಿದರೂ ಅವನಿಗೆ ಪ್ರಾಯಶ್ಚಿತ್ತ. ಹೆಂಗಸಿಗೆ....ಪ್ರಾಯಶ್ಚಿತ್ತವಿಲ್ಲ; ಹೆಂಗಸಿಗೆ........ಮರಣ!'

'ಹೌದು, ರಾಮೂ, ಒಂದು ವೇಳೆ ಹಾಗಾದರೆ?'

'ಹಾಗಾದರೆ? ಆದರೆ! ಹೌದು ಆದರೆ ಆಗಬಹುದು. ಹೆಂಗಸಿಗೆ ಅದೇ ಲೇಸಿರಬಹುದು!'

'ರಾಮೂ!' ಎಂದು ಕೈಯ್ಯನ್ನು ಗಟ್ಟಿಯಾಗಿ ಹಿಡಿದುಕೊಂಡೆ. ರಾಮು ನನ್ನ ಮುಖವನ್ನು ನೋಡಿ 'ಏನು! ಏನು! ಮರಣವೇ?'

ಎಂದ. ನಾನು ಮೆಲ್ಲನೆ 'ಉಂ' ಎಂದೆ. ತುಟಿ ಕಚ್ಚಿಕೊಂಡು ಕಣ್ಣು ಮುಚ್ಚಿಕೊಂಡು ಮಲಗಿದ. ಅವನು ಅತ್ತಿದ್ದರೆ, ಕೂಗಾಡಿದ್ದರೆ, ನನಗಷ್ಟು ಸಂಕಟವಾಗುತ್ತಿರಲಿಲ್ಲ. ಮೇಲಕ್ಕೇಳುವನೋ ಇಲ್ಲವೋ ಹಾಗೆಯೇ..ಎಂಬೋ ಸಂಶಯವೂ ಬಂತು. ನಾಲ್ಕು ನಿಮಿಷಗಳು ನನಗೆ ನಾಲ್ಕು ಯುಗಗಳಾದವು. ಕಣ್ಣು ಬಿಟ್ಟ. ಕಣ್ಣಿನಲ್ಲಿ ಒಂದು ತೊಟ್ಟು ನೀರಿಲ್ಲ. ಆದರೆ ಆ ಕಣ್ಣುಗಳು ಬೇರೆಯಾಗಿದ್ದವು. ಹಿಂದಿನ ದೃಷ್ಟಿಯಿಲ್ಲ. ಜಗತ್ತಿನ ನಗು ಅಲ್ಲಿ ಇರಲಿಲ್ಲ. ನನ್ನ ತಲೆಯನ್ನು ತೂರಿಕೊಂಡು ಹೋಗುವುದೊ ಎಂಬಂತೆ ಅತಿ ಗಂಭೀರವಾದ ಭಯಂಕರವಾದ ನೋಟ.

'ರಾಮೂ....!' ಎಂದೆ.

'ಅಣ್ಣಾ, ನನ್ನ ಸರ್ವಸ್ವವೂ ನಿನಗೆ ಧಾರೆಯೆರೆಯುತ್ತೇನೆ. ದೇವರಿಗೆ ನಿನ್ನ ಮೇಲಾದರೂ ದಯ ಬರಲಿ.' ರಾಮೂ ಹೇಳಿದ.

'ಬೇಡ, ರಾಮೂ....'

'ಇಲ್ಲಣ್ಣಾ, ನನಗೆ ಸಂಕಟವಿಲ್ಲ, ಸಂಕಟದಿಂದ ಹೇಳುತ್ತಿಲ್ಲ. ನನಗೆ ಯಾವುದೂ ಬೇಕಾಗಿಲ್ಲ.' ರಾಮೂ ಮುಗುಳುನಗೆಯಿಂದ ಮಾತನಾಡಿದ.

'ಹೀಗೆ ನೀನು ಮಾತಾಡಿದರೆ ಬಹಳ ಕಷ್ಟ. ಖಾಯಿಲೆ....'

'ಏನೂ ಇಲ್ಲ. ಈ ಖಾಯಿಲೆ ನನ್ನೇನು ಮಾಡುತ್ತೆ! ಇದುವರೆವಿಗೂ ನನಗಿತ್ತು ಭಯ.'

ಮೇಷ್ಟ್ರು ಗೋವಿಂದರಾಯರು ಇಬ್ಬರೂ ಬಹಳ ಹೊತ್ತು ವಿಚಾರ ಮಾಡಿ ಕೊನೆಗೆ ರಾಮೂನ ಬಹಳ ದೂರವಾದ ಒಂದು ಸ್ಥಳಕ್ಕೆ ಕಳಿಸಿ ಕೊಡಬೇಕೆಂದು ನಿರ್ಧರಿಸಿದರು. ಆದರೆ ಶೀನಪ್ಪ ಮಟ್ಟಿಗೆ ಕಾಶೀಗೆ ಹೋಗಿ ಬಿಡುತೇನೆ ಎಂದ. ಯಾರು ಏನು ಹೇಳಿದರೂ ಕೇಳಲಿಲ್ಲ. ಯಾರಿಂದಲೂ ಒಂದು ಬಿಡಿಕಾಸೂ ಮುಟ್ಟಲಿಲ್ಲ. ಆದರೆ ಗೋವಿಂದರಾಯರು 'ಶೀನಪ್ಪ, ನಾನು ಮಾಡಿದ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತ ಮಾಡಿಕೊಳ್ಳಲು ನನಗೆ ಅವಕಾಶ ಕೊಡು,' ಎಂದ ಮೇಲೂ, ಶೇಷಗಿರಿರಾಯರು ಶೀನಪ್ಪನಿಗೆ ಬಹಳ ಒತ್ತಿ ಹೇಳಿದ್ದರಿಂದಲೂ ಶೀನಪ್ಪನು ಕಾಶೀಗೆ ಹೋಗೋದಕ್ಕೆ ಮಟ್ಟಿಗೆ ಅವರಿಂದ ಹಣ ತೆಗೆದುಕೊಂಡ. ರಾಮೂ ಆಸ್ಪತ್ರೆಯನ್ನು ಬಿಟ್ಟು ಮನೆಗೆ ಬರೋದರೊಳಗಾಗಿ ಶೀನಪ್ಪ ಕಾಶೀಗೆ ಹೊರಟುಹೋದ.

ಶೇಷಗಿರಿರಾಯರು ಗೋವಿಂದರಾಯರು ಇಬ್ಬರೂ ಹಟ ಹಿಡಿದು, ನಮ್ಮ ಯಜಮಾನರನ್ನು ಒಪ್ಪಿಸಿ, ನನ್ನ ರಾಮೂನ್ನ ಇಬ್ಬರನ್ನೂ ಕಲ್ಕತ್ತೆಗೆ ಕಳಿಸಿಕೊಟ್ಟರು. ಮುಂದೆ ನಮ್ಮಿಬ್ಬರನ್ನೂ ಅಲ್ಲೇ ಕಾಲೇಜಿಗೆ ಸೇರಿಸ ಬೇಕೆಂದು ಅವರ ಉದ್ದೇಶ.

ಪ್ರಪಂಚದಲ್ಲಿ ಉದ್ದೇಶಗಳಿಗೇನೂ ಕಡಿಮೆಯಿಲ್ಲ ಅವು ಫಲಿತವಾಗು ವುದರಲ್ಲೇ ಎಲ್ಲಾ ತೊಂದರೆಗಳೂ ಒದಗುವುದು. ಬೀಜ ನೆಡುವುದು ನಮ್ಮ ಕೈಯಲ್ಲಿದ್ದರೂ ಫಲ ಬೆಳೆಯುವುದು ದೈವದ ಕೈಲಿದೆ. ಅದಕ್ಕೇ ದಾಸರು ಹಾಡಿದ್ದು: ' ಉಳುವ ತಾ ಇಂದ್ರ, ಬೆಳೆವ ತಾ ಚಂದ್ರ, ಕಳೆಯಕೀಳುವಾತ ಯಮರಾಯನಯ್ಯಾ. '

—

## ಉಪಸಂಹಾರ

' ಹೋದೋರು ಹೊಗಲಿಕ್ಕಾಗಿ ಇದ್ದೋರು ಉಸಿರಾಡುತಾನೇ ಇದ್ದಾರೆ ' ಇರೋರು ಹೋದೋರನ್ನು ಆಗಗ ನೆನೆಯುತ್ತಲೇ ಇರುತ್ತಾರೆ.

ಬಹಳ ವ್ಯಾಕುಲ ಬಂದಾಗಲೆಲ್ಲಾ ಈಗಲೂ ಮಾರ್ಜಾಲಶಾಸ್ತ್ರಿಗಳು ನಮಗೆ ಹೇಳುತ್ತಲೇ ಇರುತ್ತಾರೆ.

' ಗತಾಃ ಕಲಾಃ ಪಞ್ಚದಶ ಪ್ರತಿಷ್ಠಾ ದೇವಾಶ್ಚ ಸರ್ವೇ ಪ್ರತಿದೇವತಾ ಸು ।
ಕರ್ಮಾಣಿ ವಿಜ್ಞಾನಮಯಶ್ಚ ಆತ್ಮಾ ಪರೇಽವ್ಯಯೇ ಸರ್ವ ಏಕೀ ಭವನ್ತಿ ॥ '

—

## ಮನೋಹರ ಗ್ರಂಥಮಾಲೆಯಲ್ಲಿ ಇದುವರೆಗೆ ಅರಳಿದ ಕುಸುಮಗಳು.

| | | | |
|---|---|---|---|
| ೧ | ಸುದರ್ಶನ | ಆನಂದಕಂದ ( ೨ನೇ ಆವೃತ್ತಿ ) | ೦-೧೪-೦ |
| ೨ | ಸವಿಲುಗರಿ* | ಬೇರೆಬೇರೆಯವರು | ೦-೧೨-೦ |
| ೩ | ತ್ರಿಪುರದಹನ* | ಮ. ಆ. ದೊರೆಸ್ವಾಮಿ ಐಯ್ಯಂಗಾರ್ | ೦-೧೨-೦ |
| ೪ | ಬಾಳುರಿ* | ರಂ. ಶ್ರೀ. ಮುಗಳಿ | ೦-೧೨-೦ |
| ೫ | ಬ್ರಾಹ್ಮಣರ ಹುಡುಗಿ* | ಆರ್. ವ್ಯಾಸರಾವ | ೦-೧೧-೦ |
| ೬-೭ | ವಿಶ್ವಾಮಿತ್ರನ ಸೃಷ್ಟಿ* | ಶ್ರೀರಂಗ | ೧-೧೨-೦ |
| ೮ | ಜೀವನ* | ಕೃಷ್ಣಕುಮಾರ | ೦-೧೨-೦ |
| ೯ | ಕಾಳರಾತ್ರಿ* | ಮಧುರಚೆನ್ನ | ೦-೧೨-೦ |
| ೧೦ | ಧರ್ಮಶಿರೆ* | ಜಡಭರತ | ೦-೧೪-೦ |
| ೧೧ | ರಾಜಯೋಗಿ | ಆನಂದಕಂದ ( ೨ನೆ ಆವೃತ್ತಿ ) | ೧- ೦-೦ |
| ೧೨ | ಕೋಲ್ಮಿಂಚು* | ಬೇರೆ ಬೇರೆಯವರು | ೧- ೦-೦ |
| ೧೩-೧೪ | ಇಜ್ಜೋಡು* | ವಿ. ಕೃ. ಗೋಕಾಕ | ೧- ೮-೦ |
| ೧೫ | ಕುರಿಹಿಂಡು* | ಜಲಧರ | ೧- ೦-೦ |
| ೧೬ | ಧೂಮಕೇತು* | ಕಡೆಂಗೋಡ್ಲು ಶಂಕರಭಟ್ಟ | ೦-೧೪-೦ |
| ೧೭ | ದರ್ಮಜ್ಯೋತಿ* | ಮ. ಆ. ದೊರೆಸ್ವಾಮಿ ಐಯ್ಯಂಗಾರ | ೧- ೪-೦ |
| ೧೮ | ಸೇವಾಪ್ರದೀಪ* | ರಂ. ಶ್ರೀ. ಮುಗಳಿ | ೦-೧೨-೦ |
| ೧೯ | ದಿಲ್ಲೀಶ್ವರನ ದಿನಚರಿ* | ನಾ. ಕಸ್ತೂರಿ | ೦-೧೨-೦ |
| ೨೦ | ಪುಷ್ಪಮಾಲೆ* | ಶ್ರೀಸ್ವಾಮಿ | ೦-೧೨-೦ |
| ೨೧ | ಸೋಲೋ ಗೆಲುವೋ | ದೇವುಡು | ೦-೧೨-೦ |
| ೨೨ | ಹಳ್ಳಿಯ ಸಮಾಜ* | ಆರ್. ವ್ಯಾಸರಾವ್ | ೦-೧೪-೦ |
| ೨೩ | ಪಾವನಪಾವಕ | ರಂ. ಶ್ರೀ. ಮುಗಳಿ | ೦- ೮-೦ |
| ೨೪ | ಸಮುದ್ರದಾಚೆಯಿಂದ | ವಿ. ಕೃ. ಗೋಕಾಕ | ೧- ೦-೦ |
| ೨೫ | ಸರಸಮ್ಮನ ಸಮಾಧಿ* | ಶಿವರಾಮ ಕಾರಂತ | ೦-೧೨-೦ |
| ೨೬-೨೭ | ಎರಡು ಧ್ರುವ | ವ್ಹಿ. ಎಂ. ಇನಾಮದಾರ | ೨- ೦-೦ |
| ೨೮ | ಸಮುದ್ರದಾಚೆಯಿಂದ | ವಿ. ಕೃ. ಗೋಕಾಕ | ೧- ೦-೦ |
| ೨೯ | ಹೂಬಾಣಗಳು* | ಪ. ರಮಾನಂದ | ೧- ೮-೦ |

| | | | |
|---|---|---|---|
| ೩೦ | ಮಹಾಪೂರ | ಎಸ್. ಬಿ. ಕುಲಕರ್ಣಿ | ೦-೧೨-೦ |
| ೩೧ | ಸಂಧ್ಯಾರಾಗ* | ಅ. ನ. ಕೃಷ್ಣರಾಯ (೨ನೇ ಆ) | ೧- ೦-೦ |
| ೩೨-೩೩ | ಪ್ರೇಮಾಹುತಿ | ಗುರುರಾಜ ಜೋಶಿ | ೧- ೮-೦ |
| ೩೪ | ಜನನಾಯಕ | ವಿ. ಕೃ. ಗೋಕಾಕ | ೦-೧೪-೦ |
| ೩೫ | ಸುಳುವು ಹೊಳವು | ಬೇರೆಬೇರೆಯವರು (೨ನೇ ಆ.) | ೧- ೪-೦ |
| ೩೬ | ಕಾರಣಪುರುಷ | ರಂ. ಶ್ರೀ. ಮುಗಳಿ (೨ನೇ ಆ.) | ೧- ೦-೦ |
| ೩೭ | ಹತ್ತುವರುಷ* | ಟಿ. ಪಿ. ರಾಜರತ್ನಂ | ೧- ೦-೦ |
| ೩೮ | ತುಟಿಸೋರಿದುದು* | ರಾ. ಶಿ. | ೦-೧೪-೦ |
| ೩೯-೪೦ | ಭಾರತಮಾರ್ಗ | ಗುರುರಾಜ ಜೋಶಿ | ೨- ೮-೦ |
| ೪೧ | ಗ್ರಾಮಪಂಚಾನನ | ಬಾ. ಕೃ. ಲಕ್ಷ್ಮೀಶ್ವರ | ೦-೧೨-೦ |
| ೪೨ | ಮಾರ್ಗದರ್ಶಕ* | ಎಂ. ವಿ. ಸೀತಾರಾಮಯ್ಯ | ೦-೧೪-೦ |
| ೪೩ | ಗಾಳಿಗೋಪುರ* | ನಾ. ಕಸ್ತೂರಿ | ೧- ೪-೦ |
| ೪೪-೪೫ | ಮಂಗಳಸೂತ್ರ* | ಅ. ನ. ಕೃಷ್ಣರಾಯ | ೧- ೮-೦ |
| ೪೬ | ಜಡುಗಡೆಯ ಬೆಲೆ | ವಿ. ಅಶ್ವತ್ಥನಾರಾಯಣರಾವ್ | ೦-೧೪-೦ |
| ೪೭-೪೮ | ಸೈಯ್ಯಾರಿ | ಗೊರೂರು ರಾಮಸ್ವಾಮಿ ಐಯ್ಯಂಗಾರ್ | ೧-೧೨-೦ |
| ೪೯-೫೦-೫೧-೫೨ | ಮರಳಿ ಮಣ್ಣಿಗೆ | ಶಿವರಾಮ ಕಾರಂತ | ೩- ೮-೦ |
| ೫೩ | ಭರಮಪ್ಪನ ಭೂತ | ಶ್ರೀರಂಗ | ೦-೧೪-೦ |
| ೫೪ | ಜಯಶ್ರೀ | ಚಿ. ಸದಾಶಿವಯ್ಯ | ೧-೧೨-೦ |
| ೫೫ | ಪಚ್ಚೇಉಂಗುರ | ಎಂ. ಜಿ. ವೆಂಕಟೇಶಯ್ಯ | ೧- ೦-೦ |

## ಬಿಡಿಮುತ್ತುಗಳು

| | | | |
|---|---|---|---|
| ೧ | ಸಖೀಗೀತ | ದ. ರಾ. ಬೇಂದ್ರೆ. | ೧-೦-೦ |
| ೨ | ಸಾಹಿತ್ಯಸಂಶೋಧನ | ,, ,, | ೨-೦-೦ |
| ೩ | ಸಿರಾಭರಣ ಸುಂದರಿ | ,, ,, | ೧-೦-೦ |
| ೪ | ಬಾಸಿಗ | ರಂ. ಶ್ರೀ. ಮುಗಳಿ | ೧-೦-೦ |
| ೫ | ಸಮುದ್ರಗೀತಗಳು | ವಿ. ಕೃ. ಗೋಕಾಕ | ೧-೦-೦ |

* ಈ ಗುರುತಿನ ಪುಸ್ತಕಗಳು ತೀರಿವೆ.